ಮಾನವಿಕ ಕರ್ಣಾಟಕ

ಸಂಪುಟ ೧೮ ; ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೮

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೮; ಸಂಚಿಕೆ ೪

೭೨

ಅಕ್ಟೋಬರ್ ೧೯೮೮ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೮೮

MANAVIKA KARNATAKA, Kannada Quarterly of the *University of Mysore*, Volume 18, Number 4, October 1988, Edited by Dr. M. V. Srinivas and M. N. Nanjundaraje Urs.

ಪ್ರಧಾನ ಸಂಪಾದಕರು

ಡಾ. ಜೀ. ಶಂ. ಪರಮಶಿವಯ್ಯ

ಸಂಪಾದಕರು

ಡಾ|| ಎಂ. ವಿ. ಶ್ರೀನಿವಾಸ್

ಎಂ. ಎನ್. ನಂಜುಂಡರಾಜೇ ಅರಸ್

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦ ೦೦೬

ಮುದ್ರಕರು

ಎನ್. ಹನುಮಯ್ಯ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೫೭೦ ೦೦೬

ವಿಷಯ ಸೂಚಿ

ಲೇಖಕರ ಸೂಚಿ

೧.	ಪುರುಷೋತ್ತಮ ಬಿಳಿಮಲೆ	ಕನ್ನಡ ಉಪನ್ಯಾಸಕರು, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು–೫೭೪ ೧೯೯
೨.	ಡಾ. ಆರ್. ಆರ್. ಕುಲಕರ್ಣಿ	ಪ್ರವಾಚಕರು, ರಾಜ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು ಶಿವಮೊಗ್ಗ–೫೭೭ ೨೦೩
೩.	ಯಮುನಾಬಾಯಿ ಆರ್. ರಾವ್	'ಶ್ರೀ', ೪೮೯, ೧೨ನೆಯ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು
೪.	ಡಿ. ಆರ್. ಸರ್ವಮಂಗಳ	ಉಪನ್ಯಾಸಕರು, ಶಿಕ್ಷಣ ವಿಭಾಗ, ಮಾನಸಗಂಗೋತ್ರಿ, ಮೈಸೂರು
೫.	ಡಾ. ಎನ್. ಸರಸ್ವತಿ	ಸಂಶೋಧಕಿ, ಇತಿಹಾಸ ವಿಭಾಗ, ಮಾನಸಗಂಗೋತ್ರಿ, ಮೈಸೂರು
೬.	ಎಂ. ಎಸ್. ಚಂದ್ರಶೇಖರಪ್ಪ	ಉಪನ್ಯಾಸಕರು, ಸಮಾಜಕಾರ್ಯ ವಿಭಾಗ, ಮಾನಸಗಂಗೋತ್ರಿ, ಮೈಸೂರು
೭.	ವೈ. ಸಿ. ಭಾನುಮತಿ	ಸಂಶೋಧನ ಸಹಾಯಕಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೮.	ದೇವಕಿ ಹೆಚ್. ಪಿ.	ಉಪನ್ಯಾಸಕರು, ಸಂಸ್ಕೃತ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಡಾ. ಪುರುಷೋತ್ತಮ ಬಿಳಿಮಲೆ

ಕಂಬುಲ : ಆಟವೋ ? ಆಚರಣೆಯೋ ?

೧

ಕರಾವಳಿ ಕರ್ನಾಟಕದ ದಕ್ಷಿಣಭಾಗದಲ್ಲಿ ನಡೆಯುವ ಓಟದ ಕೋಣಗಳ ಸ್ಪರ್ಧೆಯನ್ನು 'ಕಂಬುಲ' ಎನ್ನುತಾರೆ. 'ಕಂಬಳ-ಕಂಬುಳ' ಎಂದೂ ಜನರು ಇದನ್ನು ಕರೆಯುತ್ತಾರೆ. ಕುಂದಾಪುರದಿಂದ ಕಾಸರಗೋಡಿನವರೆಗೆ ಪಸರಿಸಿರುವ ತುಳುನಾಡಿನಲ್ಲಿ ಕಂಬುಲವು ಅಪಾರವಾದ ಜನಪ್ರಿಯತೆಯನ್ನು ಪಡೆದಿದೆ. ಕಾಲದ ದೃಷ್ಟಿಯಿಂದ ಕಂಬುಲಗಳು, ದೀಪಾವಳಿಯ ಅನಂತರ ಆರಂಭವಾಗಿ ಶಿವರಾತ್ರಿಯ ಹೊತ್ತಿಗೆ ಮುಕ್ತಾಯವಾಗುತ್ತವೆ. ತುಳುವಿನ ಕಾಲಮಾನ ಪದ್ಧತಿಯಲ್ಲಾದರೆ ಜಾರ್ದೆ ತಿಂಗಳಿನಿಂದ ಸುಗ್ಗಿ ತಿಂಗಳ ಮಧ್ಯ ಇವು ಜರಗುತ್ತವೆ. ಭತ್ತದ ಕೃಷಿಯನ್ನು ಗಮನದಲ್ಲಿರಿಸಿಕೊಂಡರೆ ಮೊದಲ ಎಣೆಲ್ ಬೆಳೆ ಮುಗಿದು ಎರಡನೆಯದಾದ ಸುಗ್ಗಿ ಬೆಳೆಗೆ ಕೆಲಸ ಆರಂಭಮಾಡುವ ಕಾಲಘಟ್ಟವದು. ಹೀಗೆ ನಡೆಯುವ ಕಂಬುಲಗಳ ಒಟ್ಟು ಸಂಖೆಯನ್ನು ನಿರ್ದಿಷ್ಟವಾಗಿ ಹೇಳಲು ಅಸಾಧ್ಯವಾದರೂ, ಅವುಗಳ ಸಂಖ್ಯೆ ಸುಮಾರು 300ನ್ನು ಮೀರಬಹುದೆಂದು ಊಹಿಸಬಹುದು. ತುಳುನಾಡಿನ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಇವುಗಳ ಸಂಖ್ಯೆ ಹೆಚ್ಚು. ಪೂರ್ವಭಾಗದಲ್ಲಿ ಕಡಮೆ. ಈ ಕೆಳಗಿನ ಕಂಬುಲಗಳು ಚಾರಿತ್ರಿಕವಾಗಿ ಮಹತ್ತ್ವದವು, ವರ್ತಮಾನದಲ್ಲಿಯೂ ಅವು ತುಂಬ ಜನಪ್ರಿಯವಾಗಿವೆ.

1. ಮೂಲ್ಕಿ ಅರಸು ಕಂಬುಲ
2. ವಂಡಾರು ಅರಸು ಕಂಬುಲ
3. ಎಮರ್ಾಳು ಬೂಡು ಕಂಬುಲ
4. ಕದರಿ ದೇವರ ಕಂಬುಲ
5. ಬಜಗೋಳಿ ಕಂಬುಲ
6. ಮೂಡಬಿದಿರೆ ಕಂಬುಲ
7. ಬಳ್ಳಮಂಜ ಕಂಬುಲ

8. ಸುರತ್ಕಲ್ಲು ಕಂಬುಲ
9. ಕಾರ್ನಾಡು ಕಂಬುಲ
10. ವೇಣೂರು ಕಂಬುಲ
11. ತಲಪಾಡಿ ಕಂಬುಲ
12. ಮಂಜೇಶ್ವರ ಕಂಬುಲ
13. ಒಕ್ಕಾಡಿ ಗೋಳಿ ಕಂಬುಲ
14. ಕಳತ್ತ ಮಜಲು ಕಂಬುಲ
15. ಅಳದಂಗಡಿ ಕಂಬುಲ
16. ಮರವೂರು ಕಂಬುಲ
17. ಉಪ್ಪಿನಂಗಡಿ ಕಂಬುಲ
18. ಬೊಳಂತೂರು ಕಂಬುಲ
19. ಮಿಜಾರು ಕಂಬುಲ
20. ಪಡುಬಿದ್ರಿ ಕಂಬುಲ
21. ಕಟಪಾಡಿ ಕಂಬುಲ
22. ಐಕಳಬಾವಾ ಕಂಬುಲ
23. ಶಿಮಂತೂರು ಕಂಬುಲ
24. ಪುತ್ತೂರು ಕಂಬುಲ
25. ಪಾಣೆ ಮಂಗಳೂರು ಕಂಬುಲ
26. ಆರಿಬೈಲು ಕಂಬುಲ
27. ಕಾಂತಮಂಗಳ ಕಂಬುಲ

ಈ ಹೆಸರಿನ ಪೂರ್ವಪದವೆಲ್ಲವೂ ಒಂದು ಸ್ಥಳವನ್ನು ಸಂಕೇತಿಸುತ್ತದೆ. ಈ ಸ್ಥಳಗಳಲ್ಲಿ ನಡೆಯುವ ಓಟದ ಕೋಣಗಳ ಸ್ಪರ್ಧೆಯನ್ನು ಸಾವಿರಾರು ಜನ ವೀಕ್ಷಿಸುತ್ತಾರೆ.

ಪ್ರಕೃತ ಪ್ರಬಂಧದ ವಿಶ್ಲೇಷಣೆಯ ಸಂದರ್ಭದಲ್ಲಿ ಮೇಲೆ ಹೇಳಿದ ಎಲ್ಲ ಕಂಬುಲಗಳನ್ನು ಪರಿಗಣಿಸಿಲ್ಲ, ಬದಲು ಕೇವಲ ಮೂರು ಕಂಬುಲಗಳನ್ನು ಮಾತ್ರ ಗಮನದಲ್ಲಿರಿಸಿಕೊಂಡಿದ್ದೇನೆ. ಅವುಗಳೆಂದರೆ

1. ಕದರಿ ದೇವರ ಕಂಬುಲ
2. ಮೂಲ್ಕಿ ಅರಸು ಕಂಬುಲ ಮತ್ತು
3. ವಂಡಾರು ಅರಸು ಕಂಬುಲ

ಇವರಲ್ಲಿ ಮೊದಲನೆಯದಾದ ಕದರಿ ದೇವರ ಕಂಬುಲವನ್ನು ನಿರಂತರವಾಗಿ ನಾಲ್ಕುವರ್ಷವೂ ನೋಡಿ (1987, 1988, 1989, 1990) ವಿಷಯಗಳನ್ನು ಸಂಗ್ರಹಿಸಿದ್ದೇನೆ. ನಾಲ್ಕು ವರ್ಷಗಳಲ್ಲಿ ಆ ಕಂಬುಲದಲ್ಲಾದ ವ್ಯತ್ಯಾಸಗಳನ್ನು

ದಾಖಲಿಸಿಕೊಂಡಿದ್ದೇನೆ. ಉಳಿದ ಎರಡು ಕಂಬುಲಗಳನ್ನು ಎರಡು ಸಲ ನೋಡಿ (1988, 1989) ಕ್ಷೇತ್ರಕಾರ್ಯದ ಟಿಪ್ಪಣಿಗಳನ್ನು ಖಚಿತ ಪಡಿಸಿಕೊಂಡಿದ್ದೇನೆ, ಕೆಲವುಸಲ ಪರಿಷ್ಕರಿಸಿಕೊಂಡಿದ್ದೇನೆ.

ನನ್ನ ಅಧ್ಯಯನಕ್ಕೆ ಮೇಲಿನದೇ ಮೂರು ಕಂಬುಲಗಳನ್ನು ಆಯ್ದು ಕೊಳ್ಳುವುದಕ್ಕೆ ನಿರ್ದಿಷ್ಟ ಕಾರಣಗಳಿವೆ. ಆ ಕಾರಣಗಳನ್ನು ಸ್ಥಳ, ಆಶಯ ಮತ್ತು ಭಾಷೆ ಎಂದು ಸಂಕ್ಷೇಪಿಸಿ ಹೇಳಬಹುದು. ಮೊದಲನೆಯದಾದ ಸ್ಥಳದ ಹಿನ್ನೆಲೆಯಲ್ಲಿ ಈ ಮೂರು ಕಂಬುಲಗಳೂ ತುಳುನಾಡಿನ ವಿಭಿನ್ನ ಪ್ರದೇಶಗಳನ್ನು ಪ್ರತಿನಿಧಿಸುತ್ತವೆ. ಕದರಿ ತುಳುನಾಡಿನ ದಕ್ಷಿಣ ಭಾಗದಲ್ಲಿದ್ದರೆ, ವಂಡಾರು ತುಳುನಾಡಿನ ಉತ್ತರ ಭಾಗದಲ್ಲಿದೆ. ಮೂಲ್ಕಿ ತುಳುನಾಡಿನ ಹೃದಯಸ್ಥಾನದಲ್ಲಿದೆ. ಈ ಸ್ಥಳ ವ್ಯತ್ಯಾಸವು ಪ್ರಾದೇಶಿಕ ಭಿನ್ನತೆಯನ್ನು, ಭಿನ್ನತೆಯನ್ನು ಮೀರಿದ ಸಾಮಾನ್ಯತ್ವವನ್ನು ಪ್ರತಿನಿಧಿಸಬಲ್ಲುದೆಂದು ಪೂರ್ವಭಾವಿಯಾಗಿ ತರ್ಕಿಸಲಾಗಿದೆ. ಎರಡನೆಯದಾದ ಆಶಯದ ದೃಷ್ಟಿಯಿಂದ ನೋಡಿದರೆ, ಕದರಿಯದ್ದು 'ದೇವರ ಕಂಬುಲ' ಎಂಬ ಹೆಸರಿನಲ್ಲಿ ಧಾರ್ಮಿಕ ಆಶಯವನ್ನು ಹೊಂದಿದೆ. ಮೂಲ್ಕಿಯದ್ದು. 'ಅರಸು ಕಂಬುಲ' ಎಂಬ ಹೆಸರಿನಲ್ಲಿ ರಾಜಕೀಯ ಆಶಯವನ್ನು ಹೊಂದಿದೆ. ವಂಡಾರಿನದ್ದು ಅರಸು ಕಂಬುಲವೇ ಆದರೂ ಅಲ್ಲಿ ಇತರೆಡೆಗಳಲ್ಲಿರುವಂತೆ ಓಟದ ಕೋಣಗಳ ಸ್ಪರ್ಧೆ ಇಲ್ಲ. ಬದಲು ಅಲ್ಲಿ ಕೋಣಗಳನ್ನು ಹರಕೆಗಾಗಿ ಗದ್ದೆಗಿಳಿಸಿ ಓಡಿಸುತ್ತಾರೆ. ಮೂರನೆಯದಾದ ಭಾಷೆಯ ದೃಷ್ಟಿಯಿಂದ ನೋಡಿದರೆ ಮೊದಲಿನೆರಡು ಕಂಬುಲಗಳು ತುಳುಮಾತಾಡುವ ಪರಿಸರದಲ್ಲೂ, ಕೊನೆಯದಾದ ವಂಡಾರು ಅರಸು ಕಂಬುಲವು 'ಕುಂದಾಪುರ ಕನ್ನಡ'ದ (ಕನ್ನಡದ ಒಂದು ಉಪಭಾಷೆ) ಪರಿಸರದಲ್ಲೂ ನಡೆಯುತ್ತದೆ. ಭಾಷಿಕ ವ್ಯತ್ಯಾಸ ಸಾಂಸ್ಕೃತಿಕ ವ್ಯತ್ಯಾಸವನ್ನು ಸಂಕೇತಿಸುವುದಾದರೆ, ಈ ವ್ಯತ್ಯಾಸಗಳು ಅಧ್ಯಯನದ ದೃಷ್ಟಿಯಿಂದ ಮಹತ್ತ್ವದ್ದಾಗುತ್ತವೆ. ಇವೆಲ್ಲವುಗಳ ಜೊತೆಗೆ ಕದರಿ ದೇವರ ಕಂಬುಲವು ಮಂಗಳೂರು ಮಹಾನಗರದ ಮಧ್ಯದಲ್ಲಿ ನಡೆದರೆ, ವಂಡಾರು ಕಂಬುಲವು ಕುಂದಾಪುರ ಪರಿಸರದ ಒಂದು ಹಳ್ಳಿಯಲ್ಲಿ ನಡೆಯುತ್ತದೆ. ಮೂಲ್ಕಿಯು ಅತ್ತ ನಗರವೂ ಅಲ್ಲದ, ಇತ್ತ ಹಳ್ಳಿಯೂ ಅಲ್ಲದ ಮಧ್ಯಮ ತರಗತಿಯ ಊರು. ಈ ಎಲ್ಲಾ ಕಾರಣಗಳಿಂದ ಕದರಿ, ಮೂಲ್ಕಿ ಮತ್ತು ವಂಡಾರಿನಲ್ಲಿ ನಡೆಯುವ ಕಂಬುಲಗಳನ್ನು ನಾನು ಅಧ್ಯಯನದ ಸಂದರ್ಭದಲ್ಲಿ ವಿಶೇಷವಾಗಿ ಗಮನಿಸಿಕೊಂಡಿದ್ದೇನೆ ಮತ್ತು ಈ ಕಂಬುಲಗಳ ಆಧಾರದಿಂದ ನಾನು ತರ್ಕಿಸುವ ವಿಚಾರಗಳು, ಇತರ ಕಂಬುಲಗಳನ್ನು ಸಾಮಾನ್ಯವಾಗಿ ಅನ್ವಯವಾದೀತೆಂದು ಭಾವಿಸಿದ್ದೇನೆ.

ಇಷ್ಟಿದ್ದರೂ ಪ್ರಬಂಧದ ಉದ್ದೇಶ ಕಂಬುಲಗಳ ತೌಲನಿಕ ಅಧ್ಯಯನ ಅಲ್ಲ. ಬದಲಾಗಿ ಕಂಬುಲದ ಒಟ್ಟು ರೂಪವನ್ನು ವಿವರಿಸುವುದು ಮತ್ತು ಆ ವಿವರಗಳ ಅರ್ಥವನ್ನು ತುಳುನಾಡಿನ ಹಿನ್ನೆಲೆಯಲ್ಲಿ ಗ್ರಹಿಸುವುದು. ಯಾಕೆಂದರೆ ಕಂಬುಲದ ಬಗ್ಗೆ ಇದುವರೆಗೆ ನಡೆದ ಅಧ್ಯಯನಗಳು, ಅದರ ಒಟ್ಟು ರೂಪವನ್ನೇ ಪ್ರಕಟಪಡಿಸಿಲ್ಲ. ಈ

ಕಾರಣಕ್ಕೇನೇ ವಿದ್ವಾಂಸರು ಮಾಡಿದ ವ್ಯಾಖ್ಯಾನಗಳು ಬಹಳ ಸೀಮಿತವಾದ ಅರ್ಥ ವನ್ನು ಪ್ರಕಟಿಸಿವೆ. ಕಂಬುಲದ ಪ್ರದರ್ಶನಗಳಲ್ಲಿ ಕಂಡುಬರುವ ವ್ಯತ್ಯಾಸಗಳು ಮತ್ತು ಕಂಬುಲದ ಕಾರ್ಯವನ್ನು ಕುರಿತು ಪ್ರತ್ಯೇಕವಾದ ಅಧ್ಯಯನವೇ ನಡೆಯಬೇಕು.

೨

ಕಂಬುಲ ನಡೆಯಬೇಕಾದ ದಿನವನ್ನು ಊರಿನ ಹಿರಿಯರು ಮತ್ತು ಮುಖ್ಯಸ್ಥರು ಜೊತೆಸೇರಿ, ಚರ್ಚಿಸಿ ನಿರ್ಧರಿಸುತ್ತಾರೆ. ಕಂಬುಲವು ಯಾರ ಗದ್ದೆಯಲ್ಲಿ ನಡೆಯು ತ್ತದೆಯೋ, ಆ ಗದ್ದೆಯ ಯಜಮಾನನದ್ದು ಸಾಮಾನ್ಯವಾಗಿ ಈ ನಿಟ್ಟಿನಲ್ಲಿ ಅಂತಿಮ ಮಾತು. ಪರಂಪರಾಗತವಾಗಿ ಬಂದಿರುವ ಕೆಲವು ಕಂಬುಲಗಳಲ್ಲಿ ದಿನವೂ ಪರಂಪರಾನು ಗತವಾಗಿಯೇ ನಿರ್ಧರಿಸಲ್ಪಟ್ಟಿರುತ್ತದೆ. ಉದಾಹರಣೆಗೆ ಕದರಿ ಕಂಬುಲವು ಜಾರ್ದೆ ತಿಂಗಳಿನಲ್ಲಿ ಬರುವ ಹುಣ್ಣಿಮೆಯಂದು [ದಶಂಬರ ಮೊದಲವಾರದಲ್ಲಿ] ನಡೆಯುತ್ತದೆ. ಇಂಥದ್ದನ್ನು ಜನರು ಸಾಮಾನ್ಯವಾಗಿ ಅನುಭವದಿಂದಲೇ ತಿಳಿದುಕೊಂಡಿರುತ್ತಾರೆ. ಆದರೆ, ಕರಪತ್ರಗಳನ್ನು ಮುದ್ರಿಸಿ ಹಂಚಲಾಗುತ್ತದೆ. ಪತ್ರಿಕೆಗಳಲ್ಲಿ ಪ್ರಕಟನೆಗಳನ್ನು ನೀಡಲಾಗುತ್ತದೆ. ಊರಿನ ಕೆಲವು ಗಣ್ಯರಿಗೆ ಅಡಿಕೆ ಮತ್ತು 5 ವೀಳ್ಯದೆಲೆಯನ್ನು ಕೊಟ್ಟು 'ಹೇಳಿಕೆ' ಮಾಡಲಾಗುತ್ತದೆ. ತುಳುನಾಡಿನ ಹೆಚ್ಚಿನ ಜನರಿಗೆ ಕಂಬುಲಗಳು ಎಲ್ಲೆಲ್ಲಿ ಯಾವಾಗ ನಡೆಯುತ್ತವೆ ಎಂಬುದರ ಬಗ್ಗೆ ಸರಿಯಾದ ಜ್ಞಾನವಿರುತ್ತದೆ. ಬಸ್ ನಿಲ್ದಾಣಗಳಲ್ಲಿ, ತರಕಾರಿ ಮಾರು ಕಟ್ಟೆಗಳಲ್ಲಿ, ಶರಾಬು ಅಂಗಡಿಗಳಲ್ಲಿ, ಕೋಳಿ ಕಟ್ಟಗಳಲ್ಲಿ ಊರಿನ ಜಾತ್ರೆಗಳಲ್ಲಿ, ಯಕ್ಷಗಾನ ಪ್ರದರ್ಶನಗಳು ನಡೆಯುವಲ್ಲಿ ಮತ್ತು ಸಾಮಾನ್ಯವಾಗಿ ಜನರು ಒಟ್ಟು ಸೇರುವಲ್ಲಿ ಕೆಲವರಾದರೂ ಕಂಬುಲದ ಬಗ್ಗೆ ಮಾತಾಡುತ್ತಿರುತ್ತಾರೆ. ಕಂಬುಲ ನಡೆವ ಸ್ಥಳ, ಕಂಬುಲ ನಡೆಸುವ ಯಜಮಾನರು, ಅಲ್ಲಿಗೆ ಯಾರ್ಯಾರ ಕೋಣಗಳು ಬರುತ್ತವೆ, ಅಲ್ಲಿನ ವ್ಯವಸ್ಥೆ ಹೇಗೆ ? ಎಂಬಿತ್ಯಾದಿ ವಿಚಾರಗಳ ಬಗೆಗೆ ಜನರು ಬಹಳ ಮುಕ್ತವಾಗಿ ಮಾತಾಡುತ್ತಿರುತ್ತಾರೆ. ಪ್ರಸಕ್ತ ವರ್ಷದ ಕಂಬುಲಗಳು ನಡೆಯುವಾಗ ಅದಕ್ಕಿಂತ ಹಿಂದಿನ ವರ್ಷನಡೆದ ಕಂಬುಲಗಳ ಬಗ್ಗೆ ಚರ್ಚೆ ನಡೆಯುತ್ತಿರುತ್ತದೆ. ಇಂಥ ಕಡೆ ಜನರು, ಕಂಬುಲದ ಕೋಣಗಳು ಅಭೇದ್ಯವಾಗಿ, ಒಂದಾಗಿ ಬಿಡುತ್ತವೆ. ಹೀಗೆ ಕಂಬುಲದ ಸುದ್ದಿ ಜನರಿಂದ ಜನರಿಗೆ ಮೌಖಿಕವಾಗಿ ಪ್ರಸಾರವಾಗುತ್ತಿರುತ್ತದೆ.

ಕಂಬುಲ—ಅಂದರೆ ಕೋಣಗಳ ಓಟಕ್ಕೆ ನಿಗದಿಯಾದ ಹಿಂದಿನ ದಿನ, ಕಂಬುಲ ನಡೆಯುವ ಸ್ಥಳಕ್ಕೆ ಸೇರಿದ ಕೊರಗರು ಕಂಬುಲದ ಸುದ್ದಿಯನ್ನು ಊರಿನವರಿಗೆ ತಿಳಿಸಲೋಸುಗ ಊರಿಡೀ ಸುತ್ತುತ್ತಾರೆ.[1] ಅವರನ್ನು ಜನರು 'ದೋಲ ನಲಿಕೆತಕುಲು' [ಕನ್ನಡ : ಡೋಲಿನ ಕುಣಿತದವರು] ಎಂದು ಕರೆಯುತ್ತಾರೆ. ಈ ಕೊರಗರು ಕಂಬುಲದ ಮುನ್ನಾದಿನ ಬೆಳಗ್ಗೆ ಬೇಗನೆ ಎದ್ದು, ಸ್ನಾನ ಇತ್ಯಾದಿಗಳನ್ನು ಮಾಡಿ, ಶುಚಿರ್ಭೂತರಾಗಿ, ತಮ್ಮ ಕುಲದೈವವಾದ ಕೊರಗತನಿಯ[2] ಭೂತಕ್ಕೆ ಕೈ ಮುಗಿದು

ಒಳಿತಾಗಲೆಂದು ಪ್ರಾರ್ಥಿಸಿ, ಡೋಲು ಬಾರಿಸುತ್ತಾ ಊರಿಡೀ ಸುತ್ತುತ್ತಾರೆ. ಪ್ರತಿ ಮನೆಗೆ ಹೋಗಿ ಕಂಬುಲದ ಸುದ್ದಿ ಮುಟ್ಟಿಸಿ, ಕಂಬುಲಕ್ಕೆ ಬರುವಂತೆ ಆಮಂತ್ರಣ ನೀಡುತ್ತಾರೆ. ಇಂಥ ಕಡೆ ಕಂಬುಲ ನಡೆಸುವ ಯಜಮಾನನ ಕುಟುಂಬದವರಿಗೆ ಕೊರಗರು ಆದ್ಯತೆ ನೀಡುತ್ತಾರೆ. ಉದಾಹರಣೆಗೆ ವಂಡಾರು ಕಂಬುಲದಲ್ಲಿ ಕೊರಗರು, ಕೊರಗತನಿಯು, ಹ್ಯಾಗುಳಿ ಮತ್ತು ನೀರೋಣಿಯು ನಂದಿ ದೇವರನ್ನು ಪ್ರಾರ್ಥಿಸಿ ಭೋಜರಾಜ ಶೆಟ್ಟಿ, ಸಂಕದ ಬಾಗಿಲು ಸೀತಾರಾಮ ಶೆಟ್ಟಿ, ಕೋಟೆ ಮನೆ ಶೇಷು ಶೆಟ್ಟಿ, ಶೀನಪ್ಪ ಶೆಟ್ಟಿ, ಮೂಕಾಂಬಿಕ ಶೆಡ್ತಿ, ಐತು ಶೆಟ್ಟಿ, ತುಂಗಮ್ಮ ಶೆಡ್ತಿ, ಮತ್ತು ಅಂತು ಶೆಟ್ಟಿಯವರ ಮನೆಗೆತೆರಳಿ ಕಂಬುಲದ ಸುದ್ದಿ ಮುಟ್ಟಿಸಿ ಸಾಯಂಕಾಲ 7 ಗಂಟೆಯ ಹೊತ್ತಿಗೆ ಕಂಬುಲದ ಗದ್ದೆಯ ಹತ್ತಿರ ಬರುತ್ತಾರೆ. ಮೇಲೆ ಹೇಳಿದ ಮುಖ್ಯರೆಲ್ಲರೂ ಸಾಮಾಜಿಕವಾಗಿ ಪ್ರತಿಷ್ಠಿತರು, ಭೂಮಾಲಕರು ಮತ್ತು ಒಂದಲ್ಲ ಒಂದು ರೀತಿಯಿಂದ ಕಂಬುಲದ ಯಜಮಾನರ ಬಂಧುವರ್ಗಕ್ಕೆ ಸೇರಿದವರು.

ಹೀಗೆ ಊರಿಗೆಲ್ಲ ಸುದ್ದಿ ತಿಳಿಸಿ ಕಂಬುಲದ ಗದ್ದೆಯ ಸಮೀಪಕ್ಕೆ ಬರುವ ಕೊರಗರು, ಕಂಬುಲದ ಯಜಮಾನನ ಮನೆ ಮತ್ತು ಕಂಬುಲದ ಗದ್ದೆಯ ಮಧ್ಯದಲ್ಲಿ ಕುಳಿತುಕೊಳ್ಳುತ್ತಾರೆ. ಊರಿಗೆ ಸುದ್ದಿ ಕೊಡಲು ಹೋದ ಕೊರಗರಲ್ಲದೆ ಇತರ ಕೊರಗರೂ ಈ ಹೊತ್ತಿನಲ್ಲಿ ಅಲ್ಲಿಗೆ ಬಂದು ಸೇರುತ್ತಾರೆ. ಅವರಲ್ಲಿ ಗಂಡಸರು, ಹೆಂಗಸರು, ಮಕ್ಕಳು, ಯುವಕರು—ಹೀಗೆ ಎಲ್ಲರೂ ಇರುತ್ತಾರೆ. ಹೀಗೆ ಸೇರುವ ಕೊರಗರ ಸಂಖ್ಯೆ ಸುಮಾರು 40 ರಷ್ಟು ಇರುತ್ತದೆ. ಡೋಲು ಬಾರಿಸುತ್ತ ಇವರು, ಮಧ್ಯೆ ಬೆಂಕಿ ಉರಿಸುತ್ತ, ನಿಧಾನವಾಗಿ ಕುಣಿಯಲು ಆರಂಭಿಸುತ್ತಾರೆ. ಕೊರಗರ ಮುಖಂಡನಾದ ಒಬ್ಬನು ಇಡೀ ಕೊರಗರ ಗುಂಪನ್ನು ನಿಯಂತ್ರಿಸುತ್ತಿರುತ್ತಾನೆ. ಆ ಮುಖಂಡನನ್ನು 'ಮುಕಾರಿ' ಎಂದು ಕರೆಯುತ್ತಾರೆ. ಮುಕಾರಿಯ ಒಪ್ಪಿಗೆ ಪಡೆದ ಕೊರಗರ ಗುಂಪು ರಾತ್ರಿಯಾಗುತ್ತಲೇ 'ಕಳ್ಳು' [ಶೇಂದಿ] ಕುಡಿಯುತ್ತಾರೆ. ತಿನ್ನಲು 'ಕಂಡೆಲ್ ತಡ್ಯೆ' ಯನ್ನು ಬಳಸುತ್ತಾರೆ.[3] ರಾತ್ರಿ ಹೆಚ್ಚಾಗುತ್ತಲೇ ಕುಣಿತದ ವೇಗ ಹೆಚ್ಚುತ್ತದೆ ಮತ್ತು ನಿಧಾನವಾಗಿ ಲೈಂಗಿಕ ಚಟುವಟಿಕೆಗಳು ಆರಂಭವಾಗುತ್ತವೆ. ಆದರ ಮೊದಲ ಹಂತವಾಗಿ ಪರಸ್ಪರ ಅಪ್ಪಿಕೊಳ್ಳುತ್ತಾರೆ. ಅನಂತರ ಬೇರೆಯವರ ಬಟ್ಟೆಗಳನ್ನು ಎಳೆದು ಹಾಕಿ ಬತ್ತಲೆಯಾಗಿಸಲು ಪ್ರಯತ್ನಿಸುತ್ತಾರೆ. ಈ ಹಂತದಲ್ಲಿ ಅನೇಕರು ಪೂರ್ತಿ ನಗ್ನರಾಗುತ್ತಾರೆ. ಕೆಲವರು ಕನಿಷ್ಠ ತಮ್ಮ ಉಡುಪನ್ನು (ಉದಾ: ಕಾಚ ಮಾತ್ರ) ಧರಿಸಿರುತ್ತಾರೆ. ನಾನು ನೋಡಿದ ಕಡೆಗಳಲ್ಲಿ ಕೊರಗ ಹೆಂಗಸರು ಗಂಡಸರ ಈ ಚಟುವಟಿಕೆಗೆ ಪ್ರೇಕ್ಷಕರಾಗಿದ್ದರೇ ವಿನಾ ಅವರು ಅವುಗಳಲ್ಲಿ ಭಾಗಿಯಾಗಿರಲಿಲ್ಲ. ಇಡೀ ಗುಂಪಿನ ನರ್ತನವೂ, ನರ್ತನದ ಚಲನೆಯೂ ಲೈಂಗಿಕ ಸಂಭೋಗವನ್ನೇ ಅನುಕರಿಸುವಂತಿರುತ್ತದೆ. ಕಂಬುಲದ ಯಜಮಾನರ ಮನೆಕಡೆ ತಿರುಗಿ, ಕಂಬುಲದ ಗದ್ದೆಯ ಕಡೆ ತಿರುಗಿ 'ಉರಲ್'ಗಳನ್ನೂ ಹೇಳುತ್ತಾರೆ.[4] ಕತ್ತಲಾಗುವಾಗ ಆರಂಭವಾಗುವ ಈ ಅಂಶಗಳು ಬೆಳಗಿನ ಜಾವದವರೆಗೂ ಮುಂದು

ವರೆಯುತ್ತದೆ. ಇದಕ್ಕೆ ಪ್ರೇಕ್ಷಕರು ಯಾರೂ ಇರುವುದಿಲ್ಲ. ಮೂಲ್ಕಿಯಲ್ಲಿ ಈ ವಿವರಗಳನ್ನು ದಾಖಲು ಮಾಡುವಾಗ, ನಾನೊಬ್ಬನೇ ನನ್ನ ಉಪಕರಣಗಳ ಸಹಿತ ಇದ್ದೆ. ಮಂಡಾರಿನಲ್ಲಿ ಇನ್ನಿಬ್ಬರು ಇದ್ದರೂ ಮಧ್ಯರಾತ್ರಿಯ ಅನಂತರ ಅವರು ನಿದ್ರಿಸಿದರು. ನೀರವ ರಾತ್ರಿಯಲ್ಲಿ ಪ್ರೇಕ್ಷಕರೇ ಇಲ್ಲದೆ ಇಷ್ಟು ಕ್ರಿಯೆ ನಡೆಯುತ್ತದೆ.[5]

ಕಂಬುಲ ನಡೆಯುವ ದಿನ ಬೆಳಗಾಗುತ್ತಲೇ ಕೊರಗರು ತಮ್ಮ ಕುಣಿತವನ್ನು ಕಡಿಮೆ ಮಾಡುತ್ತಾರೆ. ಅವರಲ್ಲಿ ಕೆಲವರು ಕಂಬುಲದ ಗದ್ದೆಗೆ ಇಳಿಯುತ್ತಾರೆ. ಮೂರು ಮೂರು ಜನರ ಗುಂಪಾಗುತ್ತಾರೆ. ಆ ಮೂರು ಜನರಲ್ಲಿ ಇಬ್ಬರು ಕೋಣಗಳಂತೆ ಮುಂಡಿಯೂರಿ ನಿಲ್ಲುತ್ತಾರೆ. ಇನ್ನೊಬ್ಬ ಕೋಣಗಳ ಕೊರಳಿಗೆ ಹಗ್ಗ ಬಿಗಿಯುವಂತೆ ಬಿಗಿದು, ತಾನು ಕೋಣ ಓಡಿಸುವವನಾಗುತ್ತಾನೆ. ಅನಂತರ ಈ ಅಣಕು ಕೋಣಗಳನ್ನು ಕಂಬುಲದ ಗದ್ದೆಯಲ್ಲಿ ಓಡಿಸಲಾಗುತ್ತದೆ. ಆ ದಿನ ಹಗಲಿನಲ್ಲಿ ನಿಜವಾದ ಕೋಣಗಳನ್ನು ಓಡಿಸುವ ಮಾದರಿಯಲ್ಲೇ ಈ ಅಣಕು ಕಂಬುಲವೂ ನಡೆಯುತ್ತದೆ ಕೋಣ ಓಡಿಸುವವನ ಬೊಬ್ಬೆ, ಈಚೆಬದಿಯಲ್ಲಿ ನಿಂತು ಕೋಣಗಳನ್ನು ಕರೆಯುವುದು, ಓಡಿಬಂದ ಕೋಣಗಳು ಮಂಜೊಟ್ಟಿಯನ್ನು ಏರಿ ಬುಸುಗುಟ್ಟುವುದು, ಸುತ್ತ ನಿಂತವರಿಗೆ ಕೋಡುಗಳಿಂದ ತಿವಿಯುವುದು, ಕೋಣಗಳಿಗೆ ಕೋಲಿನಿಂದ ಬಾರಿಸುವುದು—ಇವೆಲ್ಲವೂ ಯಥಾಪ್ರಕಾರ ನಡೆಯುತ್ತದೆ. ಕೆಲವು 'ಕೋಣಗಳು' ಗದ್ದೆಯಲ್ಲಿ ಬಿದ್ದು ಹೊರಳಾಡುತ್ತವೆ. ಆಗ ಕೆಲವರು ಅದನ್ನು ಎಬ್ಬಿಸುತ್ತಾರೆ. ಇಷ್ಟು ಹೊತ್ತಿಗೆ ಚೆನ್ನಾಗಿ ಬೆಳಗಾಗಿರುವುದರಿಂದ ಕೊರಗರ ಈ ಓಟವನ್ನು ನೋಡಲು ಹತ್ತಾರು ಜನ ಸೇರಿರುತ್ತಾರೆ. ಕಂಬುಲದ ಗದ್ದೆಯಲ್ಲಿ ಸುಮಾರು ಒಂದು ಗಂಟೆ ನಡೆಯುವ ಇದನ್ನು ಕಂಬುಲದ ಒಂದು ಪ್ರಾಮುಖ್ಯ ಭಾಗವೆಂದು ಇದುವರೆಗೆ ಪರಿಗಣಿಸಲಾಗಿಲ್ಲ.

ಹೀಗೆ ತಾವು ಕೋಣಗಳಂತೆ ಅಭಿನಯಿಸಿದ ಅನಂತರ ಕೊರಗರು ಕಂಬುಲದ ಗದ್ದೆಯಿಂದ ಮೇಲೆ ಬಂದು, ತಮ್ಮ ಡೋಲಿನ ಸದ್ದನ್ನು ನಿಲ್ಲಿಸುತ್ತಾರೆ. ರಾತ್ರಿಯಿಡೀ ಮಾಡಿದ ಕೆಲಸದಿಂದ ಆಯಾಸಗೊಂಡಿರುವ ಅವರು ಈಗ ಸ್ನಾನಕ್ಕೆ ತೆರಳುತ್ತಾರೆ. ರಾತ್ರಿಯಿಂದ ಇದುವರೆಗೆ ಅವರು ನಿರ್ವಹಿಸಿದ ಕೆಲಸವನ್ನು 'ಪನಿ ಕುಲ್ಲನೆ' [ಕನ್ನಡ : ಹನಿಯಲ್ಲಿ ಕುಳಿತುಕೊಳ್ಳುವಿಕೆ] ಎಂದು ಕರೆಯುತ್ತಾರೆ. ಸ್ನಾನದ ಅನಂತರ ಮತ್ತೆ ಅವರು ಸ್ವಲ್ಪ ವಿಶ್ರಾಂತಿ ಪಡೆದು ಕಂಬುಲದ ಗದ್ದೆಯ ಬಳಿಗೆ ಬಂದು ಡೋಲು ಬಾರಿಸುತ್ತಾ ನಿಂತಿರುತ್ತಾರೆ. ಈ ಕೆಲಸವು ಸಾಯಂಕಾಲದವರೆಗೆ ಮುಂದುವರೆದು, ಕಂಬುಲದೊಂದಿಗೆ ಮುಕ್ತಾಯವಾಗುತ್ತದೆ. ಕಂಬುಲದ ಯಜಮಾನರು ಅವರಿಗೆ ಸಲ್ಲುವ 'ಮಾಮೂಲು ಮರ್ಯಾದೆ'ಯನ್ನು ಸಲ್ಲಿಸುತ್ತಾರೆ. ಹೀಗೆ ಕೊರಗರು ಸುಮಾರು ೨೪ ಗಂಟೆಗಳ ಕಾಲ ಕಂಬುಲದ ಗದ್ದೆಯ ಬದಿಯಲ್ಲಿದ್ದು ತಮ್ಮ ಕಾರ್ಯವನ್ನು ನಿರ್ವಹಿಸುತ್ತಾರೆ.[6] ಕದರಿಯಲ್ಲಿ ಡೋಲನಲಿಕೆಯವರಿಗೆ ನಿಂಬೆ ಹುಳಿಯನ್ನು ಗೌರವಸೂಚಕವಾಗಿ ಕೊಡುತ್ತಾರೆ.

ಬೆಳಗಿನ ಜಾವ ಕೊರಗರು ಕಂಬುಲದ ಗದ್ದೆಯಿಂದ ಹೊರಟ ತಕ್ಷಣ, ಕಂಬುಲದ ಯಜಮಾನನ ಮನೆಗೆ ಸಂಬಂಧಿಸಿದ ಕೆಲವರು, ಜೇಡಿಮಣ್ಣಿನಿಂದ ತ್ರಿಶೂಲಾಕಾರದಲ್ಲಿ ಗೆರೆ ಎಳೆಯುತ್ತಾ, ಕಂಬುಲದ ಗದ್ದೆಯನ್ನು ಇತರ ಗದ್ದೆಯಿಂದ ಪ್ರತ್ಯೇಕಿಸುತ್ತಾರೆ. ಸಾಮಾನ್ಯವಾಗಿ ಕಂಬುಲದ ಗದ್ದೆಯ ಪುಣಿಯಲ್ಲಿ [ತೆವರಿನಲ್ಲಿ] ಒಳಗಿನ ಬದಿಗೆ ಈ ಗೆರೆಯನ್ನು ಎಳೆಯುತ್ತಾರೆ. ಜೊತೆಗೆ ಗದ್ದೆಯಲ್ಲಿ ಮಣ್ಣು ಕಾಣದಷ್ಟು ನೀರನ್ನು ನಿಲ್ಲಿಸುತ್ತಾರೆ. ಹೀಗೆ ಸೂರ್ಯನ ಬೆಳಕು ಏರುತ್ತಾ ಬಂದಂತೆ ಕಂಬುಲದ ಗದ್ದೆ ಕಂಗೊಳಿಸಲು ಆರಂಭವಾಗುತ್ತದೆ.

ಇಷ್ಟು ಹೊತ್ತಿಗೆ ಕಂಬುಲದಲ್ಲಿ ಪಾಲ್ಗೊಳ್ಳಲೆಂದು ಬಂದ ಕೋಣಗಳೆಲ್ಲ ಕಂಬುಲದ ಗದ್ದೆಯ ಸುತ್ತಮುತ್ತ ಸೇರಿಯುತ್ತವೆ. ಕೆಲವರು ತಮ್ಮ ಕೋಣಗಳನ್ನು ಲಾರಿಗಳಲ್ಲಿ ತರುತ್ತಾರೆ. ಕೆಲವರು ನಡೆಸಿಕೊಂಡು ಬರುತ್ತಾರೆ. ಹಾಗೆ ಬರುವಾಗ ಸಂಭ್ರಮದ ಮೆರವಣಿಗೆ ಇರುತ್ತದೆ. ಸಾಮಾನ್ಯವಾಗಿ ಮದುವೆಯ ದಿಬ್ಬಣ ಬರುವಂತೆ ಮೆರವಣಿಗೆ ಇರುತ್ತದೆ. ಕೊಂಬು, ವಾಲಗ, ತಮ್ಮಟೆಗಳ ಸದ್ದಿನ ಜೊತೆಗೆ ಸುಡುಮದ್ದಿನ ಸಿಡಿತ ಇರುತ್ತದೆ. ಮದುಮಗನನ್ನು ಸಿಂಗರಿಸಿದ ಹಾಗೆ ಕೋಣಗಳನ್ನು ಸಿಂಗರಿಸಿರುತ್ತಾರೆ ಕೋಣಗಳ ಬೆನ್ನಿಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಹಾಸಿರುತ್ತಾರೆ. ಆ ಬಟ್ಟೆಯಲ್ಲಿ ಕೋಣದ ಯಜಮಾನರ ಹೆಸರನ್ನು ಬರೆದಿರಲಾಗುತ್ತದೆ. ಈ ಬಟ್ಟೆಗೆ 'ಪಾವಡೆ' ಎಂದು ಹೆಸರು. ಕೋಣದ ಕೋಡುಗಳಿಗೆ ಸುಣ್ಣದಲ್ಲಿ ಬಿಳಿಗೆರೆಗಳನ್ನು ಅಡ್ಡವಾಗಿ ಎಳೆದಿರುವುದಲ್ಲದೆ ಕೋಡಿನ ತುದಿಗೆ ಒಂದೊಂದು ನಿಂಬೆಹಣ್ಣನ್ನು ಕಟ್ಟಿರುತ್ತಾರೆ. ಕೆಲವು ಬಾರಿ ಹೂವಿನಗೊಂಡಲನ್ನು ಸಿಕ್ಕಿಸಿರುತ್ತಾರೆ. ಖಡ್ಗಕ್ಕೆ ಹಾಕುವ ರೀತಿಯ ಒರೆಯನ್ನು ಕೋಡಿಗೆ ಹಾಕುವವರೂ ಇದ್ದಾರೆ. ಅದಕ್ಕೆ 'ಕೋಡಣಸು' ಎಂದು ಹೆಸರು. ಕೊರಳಿಗೆ ದೊಡ್ಡ ಗೆಜ್ಜೆಗಳನ್ನೂ, ಶಾಸರ್ಕನ ಮರದ ಚಿಗುರನ್ನು ಕಟ್ಟುತ್ತಾರೆ. ಕೋಣಗಳ ನೆತ್ತಿಗೆ ಹಗ್ಗವನ್ನು ಬಿಗಿಯುತ್ತಾರೆ. ಅದಕ್ಕೆ 'ನೆತ್ತಿಬಲ್ಲ್' ಎಂದು ಹೆಸರು. ಕೊರಳಿಗೆ ಕಟ್ಟಿದ ಹಗ್ಗಕ್ಕೆ 'ಜೂಲಿ' ಎನ್ನುತ್ತಾರೆ. ಮೂಗಿಗೆ ಹಗ್ಗ ಹಾಕಿರುತ್ತಾರೆ, ಅದಕ್ಕೆ 'ಮೂಂಕುದಾರ' ಇಲ್ಲವೇ 'ದುಡಿಸನೆ' ಎಂದು ಹೆಸರು. ಕೊರಳಿಗೆ ಇಲ್ಲವೇ ಬಲದ ಕಾಲಿಗೆ ಹಳೆಯ ಚಪ್ಪಲಿಯ ಒಂದು ಚೂರನ್ನು ಕಟ್ಟುತ್ತಾರೆ. ಜೊತೆಗೆ ಎಡಕಾಲಿಗೆ ಕಪ್ಪುಬಟ್ಟೆಯ ತುಂಡನ್ನು ಕಟ್ಟುತ್ತಾರೆ. ಮಂತ್ರಿಸಿದ ನೂಲನ್ನು ಇಲ್ಲವೇ ತಾಯತವನ್ನು ಬಲದ ಕಾಲಿಗೆ ಕಟ್ಟುತ್ತಾರೆ. ದಾರಿಯಲ್ಲಿ ಬರುವಾಗ ಯಾರದಾದರೂ 'ದೃಷ್ಟಿ' ಹಾಕಿರಬಹುದೆಂದು ಭಾವಿಸಿದ್ದಲ್ಲಿ, ಕಂಬುಲದ ಗದ್ದೆ ತಲುಪುತ್ತಲೇ ಕಬ್ಬಿಣವನ್ನು ಅದ್ದಿದ ನೀರನ್ನು ಸ್ವಲ್ಪ ಕುಡಿಸುತ್ತಾರೆ.

ಕಂಬುಲದ ಕೋಣಗಳ ಆಯ–ಪ್ರಮಾಣ ಊಹನಾತೀತವಾದುದು. ಚೆನ್ನಾಗಿ ತಿಂದು ಕೊಬ್ಬಿದ ಅವನ್ನು ನೋಡುವುದೇ ಒಂದು ಸುಖ. ಒಬ್ಬ ನಿರೂಪಕನ ಪ್ರಕಾರ ಒಂದು ಜೊತೆ ಕಂಬುಲದ ಕೋಣದ ಸಾಕಣೆಗೆ ವರ್ಷವೊಂದಕ್ಕೆ ಒಂದೂವರೆ ಲಕ್ಷ

ರೂಪಾಯಿ ವೆಚ್ಚತಗಲುತ್ತದೆ. ಒಳ್ಳೆಯ ತಳಿಯ ಕೋಣದ ಮರಿಗಳಿಗೆ ಸುಮಾರು ಇಪ್ಪತ್ತು ಸಾವಿರ ರೂಪಾಯಿ ಮಾರುಕಟ್ಟೆಯ ಬೆಲೆ ಇದೆ. ಸರಿ ಜೊತೆ ಹೊಂದು ವಂಥದ್ದನ್ನು ಹುಡುಕಿತರಬೇಕು. ಅನಂತರ ದಿನವೊಂದಕ್ಕೆ ಸುಮಾರು ಮೂರು ಕಿಲೋ ಹುರಳಿಯನ್ನು ಭತ್ತದ ತೌಡಿನೊಂದಿಗೆ ಬೆರೆಸಿ ಕೊಡಬೇಕು. ತೆಂಗಿನಕಾಯಿ ಯನ್ನೂ ತೆಂಗಿನಎಣ್ಣೆಯನ್ನೂ ನಿಯಮಿತವಾಗಿ ಕೊಡುತ್ತಾರೆ. ಮುಸಂಬಿ, ಬೀಟ್‌ರೂಟ್, ಶರಾಬುಗಳನ್ನೂ ಕೊಡುತ್ತಾರೆ. ಬೈ ಹುಲ್ಲನ್ನು ಹೆಚ್ಚು ಕೊಡುವು ದಿಲ್ಲ. ದಿನಕ್ಕೆ ಎರಡುಸಲ ಸ್ನಾನ ಮಾಡಿಸುತ್ತಾರೆ. ಸುಮಾರು ಒಂದು ಮೈಲಿ ಯಷ್ಟು ನಡೆಸುತ್ತಾರೆ. ಅರ್ಧಗಂಟೆಯಷ್ಟು ಈಜಾಡಿಸುತ್ತಾರೆ. ಸಾಮಾನ್ಯವಾಗಿ ಗದ್ದೆ ಉಳಲು ಇದನ್ನು ಬಳಸುವುದಿಲ್ಲ ಈ ಕೋಣಗಳನ್ನು ನೋಡಿಕೊಳ್ಳಲೆಂದೇ ಕನಿಷ್ಠ ಇಬ್ಬರನ್ನು ನೇಮಕ ಮಾಡಿರುತ್ತಾರೆ. ಇವರು ಕೋಣಗಳ ಆರೈಕೆ ಮಾಡುತ್ತಾರೆ. ಸಾಮಾನ್ಯವಾಗಿ ಇದನ್ನು 'ಕೋಣಗಳಿಗೆ ಕಸರತ್ ಮಾಡಿಸುವುದು' ಎನ್ನುತ್ತಾರೆ. ಕೋಣಗಳು ಮಲಗುವ ಹಟ್ಟಿಯನ್ನು ಅತ್ಯಂತ ಶುಚಿಯಾಗಿ ಇಟ್ಟಿರುವುದಲ್ಲದೆ, ಅಲ್ಲಿಗೆ ಫ್ಯಾನ್ ಕೂಡಾ ಹಾಕಿಸಿರುತ್ತಾರೆ.

ಮನೆಯಿಂದ ಕೋಣಗಳನ್ನು ಹೊರಡಿಸುವಾಗ ಸಾಮಾನ್ಯವಾಗಿ ಕುಲದೇವರಿಗೆ ಮತ್ತು ಊರಿನ ದೈವಗಳಿಗೆ ಕೈಮುಗಿಯುತ್ತಾರೆ. ದಾರಿಯಲ್ಲಿ ಬರುವಾಗ ಸಂಭವಿಸುವ ಘಟನೆಗಳಿಗೆ ಶುಭ ಮತ್ತು ಅಶುಭ ಫಲವನ್ನು ನಿರ್ಣಯಿಸಿಕೊಳ್ಳುತ್ತಾರೆ. ಉದಾಹರಣೆಗೆ ಕಳ್ಳಿನ [ಶೇಂದಿಯ] ಮಡಕೆಯನ್ನು ಹಿಡಿದುಕೊಂಡು ಎದುರು ಬಂದರೆ, ಮುತ್ತೈದೆ ಹೆಂಗಸರು ಕಾಣಸಿಕ್ಕಿದರೆ, ಶುಭಶಕುನವೆಂದು ಹೇಳಲಾಗು ತ್ತದೆ. ಒಂಟಿಬ್ರಾಹ್ಮಣ, ಸೌದೆಕಟ್ಟು, ಹೊಸಮಡಕೆ ಅಡ್ಡಬಂದರೆ ಅಶುಭವೆಂದೂ ತರ್ಕಿಸಲಾಗುತ್ತದೆ.

ಹೀಗೆ ಪೂರ್ವಾಹ್ನ ಸುಮಾರು ೧೧ ಗಂಟೆಯ ಹೊತ್ತಿಗೆ ಕಂಬುಲದ ಕೋಣ ಗಳೆಲ್ಲವೂ ಬಂದು ಸೇರುತ್ತವೆ. ವಿವಿಧ ವರ್ಗದ, ವಿವಿಧ ಜಾತಿಯ, ವಿವಿಧ ಪ್ರಾಯದ ಜನರೆಲ್ಲರೂ ಸೇರುತ್ತಾರೆ. ಸಾಮಾನ್ಯವಾಗಿ ಹೆಂಗಸರ ಭಾಗವಹಿಕೆ ಕಡಮೆ. ಮುಟ್ಟಾದ ಹೆಂಗಸರಿಗೆ ಕಂಬುಲದ ಸ್ಥಳಕ್ಕೆ ಪ್ರವೇಶವೇ ಇಲ್ಲ, ಬಗೆಬಗೆಯ ಅಂಗಡಿಗಳು ವ್ಯಾಪಾರವನ್ನು ಆರಂಭಿಸುತ್ತವೆ. ಸಾಮಾನ್ಯವಾಗಿ ಕೃಷಿಗೆ ಸಂಬಂಧಿಸಿದ ಕತ್ತಿ, ನೊಗ, ನೇಗಿಲುಗಳಂಥ ವಸ್ತುಗಳ ವ್ಯಾಪಾರಕ್ಕೆ ಆದ್ಯತೆ ಇರುತ್ತದೆ

ಈ ಸಮಯಕ್ಕೆ ಕಂಬುಲದ ಯಜಮಾನನು ತನ್ನ ಹತ್ತಿರದ ಬಂಧುಗಳೊಡ ಗೂಡಿ ಕಂಬುಲದ ಗದ್ದೆಯ ಸಮೀಪದಲ್ಲಿರುವ 'ನಾಗನ ಬನ'ಕ್ಕೆ ತೆರಳಿ ನಾಗನಿಗೆ ಕೈಮುಗಿದು ಕಂಬುಲದ ಯಶಸ್ಸಿಗಾಗಿ ಪ್ರಾರ್ಥಿಸುತ್ತಾನೆ. ತೆಂಗಿನಕಾಯಿಯನ್ನು ಒಡೆದು, ಪಿಂಗಾರವನ್ನು ಅರ್ಪಿಸಿ, ಅಡ್ಡಬೀಳುತ್ತಾನೆ. ಅನಂತರ ಪಿಂಗಾರದ ಕೆಲವು ಎಸಳುಗಳನ್ನು ಹಿಡಿದುಕೊಂಡು ಹಿಂದಿರುಗಿ ಮನೆಗೆ ಬರುತ್ತಾನೆ. ವಂಡಾರಿನಲ್ಲಿ ಯಜಮಾನರ ಮನೆ ಒಳಗೇ ನಾಗನ ಹುತ್ತ ಮತ್ತು ವಿಗ್ರಹ ಇರುವುದರಿಂದ 'ನಾಗ

ಪೂಜೆ' ಮನೆಯೊಳಗೆ ನಡೆಯುತ್ತದೆ. ಪೂಜೆಯನಂತರ, ಅಡಿಕೆಯ ಪಿಂಗಾರವನ್ನು ತಂದು, ಅದರ ಒಂದೆರಡು ಎಸಳುಗಳನ್ನು, ಕಂಬುಲದ ಯಜಮಾನರ ಕೋಣಗಳ ಹಣೆಗೆ ಕಟ್ಟಲಾಗುತ್ತದೆ. ಈ ಯಜಮಾನರ ಕೋಣಗಳನ್ನು 'ಮೂರ್ತದ ಎರು' ಎಂದು ಕರೆಯುತ್ತಾರೆ. 'ಮೂರ್ತದ ಎರು'ವಿಗೆ ಪಿಂಗಾರ ಕಟ್ಟಿದ ಅನಂತರವೇ ಇತರ ಕೋಣಗಳ ಹಣೆಗೆ ಪಿಂಗಾರವನ್ನು ಕಟ್ಟಲಾಗುತ್ತದೆ. ವಂಡಾರಿನಲ್ಲಿ ಪಿಂಗಾರ ಕಟ್ಟದೆ ಕೋಣಗಳಾಗಲೀ, ಎತ್ತುಗಳಾಗಲೀ ಕಂಬುಲದ ಗದ್ದೆಗೆ ಇಳಿಯುವುದಿಲ್ಲ. ಇಳಿಯಬಾರದೆಂಬ ನಿಷೇಧವೂ ಇದೆ.

'ಮೂರ್ತದ ಎರು'ವಿಗೆ ಪಿಂಗಾರ ಕಟ್ಟಿದ ಅನಂತರ ಅದನ್ನು ಬ್ಯಾಂಡ್, ವಾಲಗ, ತಮ್ಮಟೆ, ಕೊಂಬು, ಕಹಳೆ, ಸಿಡಿಮದ್ದುಗಳ ಸಿಡಿತದೊಂದಿಗೆ ವೈಭವಪೂರ್ಣವಾಗಿ ಕಂಬುಲದ ಗದ್ದೆಗೆ ತರುತ್ತಾರೆ. ಕಂಬುಲದ ಯಜಮಾನನ ಮನೆತನಕ್ಕೆ ಸೇರಿದ ಭೂತವೂ ತನ್ನ ಸಾಂಪ್ರದಾಯಿಕ ವೇಷಭೂಷಣಗಳೊಂದಿಗೆ ಮೂರ್ತದ ಎರುವಿನೊಂದಿಗೆ ಇರುತ್ತದೆ.[7] ಮೂರ್ತದ ಎರುವನ್ನು ಕಂಬುಲ ಗದ್ದೆಯ ಒಂದು ತುದಿಗೆ ಕೊಂಡೊಯ್ಯುತ್ತಾರೆ. ಆ ತುದಿಯಿಂದ ಕೋಣಗಳನ್ನು ಸಾಮಾನ್ಯವಾಗಿ ಓಡಿಸಲಾಗುತ್ತದೆ. ಆ ತುದಿಯನ್ನು 'ಗಂತ್' ಎಂದು ಕರೆಯುತ್ತಾರೆ. ಗಂತ್‌ನಲ್ಲಿ ನಿಲ್ಲಿಸಿ ಕೋಣಗಳನ್ನು ಓಡಿಸುವುದಕ್ಕೆ 'ಕರೆಬುಡ್ಪಾವುನಿ' (ಕನ್ನಡ : ಕರೆ ಬಿಡಿಸುವುದು) ಎನ್ನುತ್ತಾರೆ. ಮೂರ್ತದ ಎರುಗಳನ್ನು ಕರೆಬಿಡಿಸುತ್ತಾರೆ. ಕಂಬುಲದ ಯಜಮಾನನ ಮನೆಗೆ ಸಂಬಂಧಿಸಿದವರಲ್ಲಿ ಯಾರಾದರೂ ಒಬ್ಬರು ಆ ಕೋಣವನ್ನು ಓಡಿಸುತ್ತಾರೆ. ಈ ಕೋಣಗಳಿಗೆ ಸ್ಪರ್ಧೆ ಇಲ್ಲ, ಅವು ತಮ್ಮದೇ ವೇಗದಲ್ಲಿ ಓಡಿ ಬಂದು, ಗದ್ದೆಯ ಇನ್ನೊಂದು ತುದಿಯನ್ನು ತಲುಪುತ್ತವೆ. ಹೀಗೆ ಕೋಣಗಳು ಓಡಿ ಬಂದು, ತಲುಪುವ ಸ್ಥಳ ಗದ್ದೆಗಿಂತ ಸ್ವಲ್ಪ ಎತ್ತರದಲ್ಲಿದ್ದು, ಗದ್ದೆಯ ಕಡೆಗೆ ಇಳಿಮುಖವಾಗಿರುತ್ತದೆ. ಈ ಸ್ಥಳವನ್ನು 'ಮಂಜೊಟ್ಟಿ' ಎಂದು ಕರೆಯುತ್ತಾರೆ. ಮೂರ್ತದ ಎರುಗಳು ಮಂಜೊಟ್ಟಿಯನ್ನು ತಲುಪಿದ ಮೇಲೆ ಅವುಗಳನ್ನು ಕಂಬುಲದ ಗದ್ದೆಯ ಒಂದು ಮೂಲೆಯಲ್ಲಿ ಕಟ್ಟಿಹಾಕುತ್ತಾರೆ. ಹೀಗೆ ಕಟ್ಟಲು ಎರಡು ಕಂಬಗಳನ್ನು ನೆಟ್ಟು, ಅದಕ್ಕೆ ಅಡ್ಡಲಾಗಿ ಇನ್ನೊಂದು ಕಟ್ಟಿಗೆ ತುಂಡನ್ನು ಕಟ್ಟಿರುತ್ತಾರೆ. ಇದಕ್ಕೆ 'ದರಿಗುಂಟ' ಎಂದು ಹೆಸರು 'ದರಿಗುಂಟ'ಕ್ಕೆ ಕಟ್ಟಿದ ಮೂರ್ತದ ಎರುಗಳು ಕಂಬುಲ ಮುಗಿಯುವಲ್ಲಿಯವರೆಗೆ ಅಲ್ಲಿಯೇ ಇರುತ್ತವೆ.

ಇದಾದ ಅನಂತರ ಕೋಣಗಳ ಓಟದ ಸ್ಪರ್ಧೆ ಆರಂಭವಾಗುತ್ತದೆ. ಕೋಣಗಳ ಪ್ರಾಯವನ್ನು ಅನುಸರಿಸಿ ಅವುಗಳಲ್ಲಿ ಎರಡು ಪ್ರಭೇದಗಳನ್ನು ಮಾಡುತ್ತಾರೆ. ಪ್ರಾಯದಲ್ಲಿ ಹಿರಿಯವನ್ನು 'ಮಲ್ಲ' (ಕನ್ನಡ : ಹಿರಿಯ) ಎಂದು ಚಿಕ್ಕಪ್ರಾಯದವನ್ನು 'ಎಲ್ಯ' (ಕನ್ನಡ : ಕಿರಿಯ) ಎಂದು ವಿಭಜಿಸಿ ಕೊಳ್ಳುತ್ತಾರೆ. ಈ ಎರಡು ಪ್ರಭೇದಗಳಲ್ಲಿ ನಾಲ್ಕು ರೀತಿಯ ಓಟಗಳನ್ನು ಯೋಜಿಸಲಾಗುತ್ತದೆ. ಸ್ಥೂಲವಾಗಿ ಆ ಸ್ಪರ್ಧೆಗಳ ವಿವರ ಇಂತಿದೆ.

1. **ಬಳ್ಳ್ಯತವು**: 'ಬಳ್ಳ್ಯತವು' ಎಂದರೆ 'ಹಗ್ಗದ್ದು' ಎಂದು ಅರ್ಥ. ಇದರಲ್ಲಿ ಕೋಣಗಳ ಹೆಗಲಿಗೆ ಮೊದಲು ನೊಗವನ್ನು ಕಟ್ಟಲಾಗುವುದು. ಆ ನೊಗದ ಮಧ್ಯ ಭಾಗಕ್ಕೆ ಒಂದು ಹಗ್ಗವನ್ನು ಕಟ್ಟಿ, ಅದನ್ನು ಕೋಣಗಳ ಹಿಂದುಗಡೆಗೆ ಇಳಿ ಬಿಡಲಾಗುವುದು. ಹಗ್ಗದ ಆ ತುದಿಯನ್ನು ಹಿಡಿದುಕೊಂಡು ಒಬ್ಬಾತನು ಕೋಣಗಳನ್ನು ಓಡಿಸುತ್ತಾನೆ. ಈ ಓಟದಲ್ಲಿ ಕೋಣಗಳಿಗೆ ಅತ್ಯಂತ ವೇಗವಾಗಿ ಓಡಲು ಸಾಧ್ಯವಾಗುತ್ತದೆ. ಯಾವ ಜೊತೆ ವೇಗವಾಗಿ ಮಂಜೊಟ್ಟಿಯನ್ನು ತಲುಪುವುದೋ ಅದು ಗೆಲ್ಲುತ್ತದೆ. ಇವರಲ್ಲಿ ಓಡಿಸುವಾತನ ಓಟದ ಸಾಮರ್ಥ್ಯ ಅಧಿಕವಾಗಿರಬೇಕು.

2. **ಅಡ್ಡ ಹಲಾಯಿ**: ಇದರಲ್ಲಿ ಕೋಣಗಳ ಹೆಗಲ ಮೇಲಿನ ನೊಗಕ್ಕೆ ಉದ್ದವಾದ ಹರಗುವ ಗೋರುಹಲಗೆಯನ್ನು ಕಟ್ಟಲಾಗುತ್ತದೆ. ಈ ಹಲಗೆಯ ಮೇಲೆ ನಿಲ್ಲುವ ಕೋಣ ಓಡಿಸುವಾತ, ಎಡಗೈಯಲ್ಲಿ ಕೋಣದ ಬಾಲವನ್ನು ಹಿಡಿದುಕೊಳ್ಳುತ್ತಾನೆ. ಬಲಗೈಯಲ್ಲಿ ಚಾಟಿ ಹಿಡಿದುಕೊಂಡು, ಕೋಣಗಳ ಕೊಡೆಗೆ ಚೆನ್ನಾಗಿ ಬಾರಿಸುತ್ತ, ಅವು ವೇಗವಾಗಿ ಓಡುವಂತೆ ನೋಡಿಕೊಳ್ಳುತ್ತಾನೆ. ಓಡಿಸುವಾತನಿಗೆ ಇಲ್ಲಿ ಓಟದ ಮೇಲೆ ಅಪಾರ ಹಿಡಿತ ಬೇಕಾಗುತ್ತದೆ. ಸ್ವಲ್ಪ ಹೆಚ್ಚು ಕಡಮೆ ಆದರೂ ಆಯತಪ್ಪಿ ಗದ್ದೆಗೆ ಬೀಳುತ್ತಾನೆ. ಇದರಲ್ಲಿಯೂ ವೇಗದ ಓಟಕ್ಕೇ ಬಹುಮಾನ ಲಭಿಸುತ್ತದೆ.

3. **ನೇಗಿಲ ಓಟ**: ಇದರಲ್ಲಿ ಉಳುವ ಸ್ಥಿತಿಯಲ್ಲಿಯೇ ಕೋಣಗಳನ್ನು ನೇಗಿಲಿನೊಂದಿಗೆ ಓಡಿಸಲಾಗುತ್ತದೆ. ಇದು ಸ್ವಲ್ಪ ಅಪಾಯಕಾರಿಯಾದ ಓಟವಾದ್ದರಿಂದ ಕಡಮೆ ಜನಪ್ರಿಯವಾಗಿದೆ. ಓಡುವಾಗ ನೇಗಿಲ ಮೊನೆ ಕೋಣಗಳಿಗೆ ತಾಗಿದರೆ, ಅವಕ್ಕೆ ಅಪಾರವಾದ ನೋವುಂಟಾಗುತ್ತದೆ, ಕಾಲು ಕುಂಟಾಗಿಬಿಡಬಹುದು. ಇದರಲ್ಲಿಯೂ ವೇಗಕ್ಕೆ ಮರ್ಯಾದೆ.

4. **ಕಣೆಪಲಾಯಿ** : ಕಂಬುಲದಲ್ಲೆಲ್ಲ ಇದು ಅತ್ಯಂತ ಸುಂದರವಾದ ಓಟ. ಗೋರು ಹಲಗೆಯನ್ನು ಸ್ವಲ್ಪ ವ್ಯತ್ಯಾಸಮಾಡಿ, 'ಕಣೆಪಲಾಯಿ' (ಕನ್ನಡ : ಪಲಾಯಿ ಎಂದರೆ ಹಲಗೆ ಎಂದರ್ಥ)ಯನ್ನು ಸಿದ್ಧಗೊಳಿಸುತ್ತಾರೆ. ಇದನ್ನು ನೊಗಕ್ಕೆ ಬಿಗಿಯುತ್ತಾರೆ. ಕೋಣ ಓಡಿಸುವಾತ ಈ ಕಣೆಪಲಾಯಿಯಮೇಲೆ ಓರೆಯಾಗಿ ನಿಂತುಕೊಂಡು, ಒಂದು ಕೈಯಲ್ಲಿ ಕೋಣದ ಬಾಲವನ್ನು ಹಿಡಿದುಕೊಂಡು, ಒಂದು ಕಾಲಿನಲ್ಲಿ ಕಣೆಪಲಾಯಿಯನ್ನು ನೆಲದತ್ತ ಅದುಮುತ್ತ ಓಡಿಸುತ್ತಾನೆ. ಕಣೆಪಲಾಯಿಯಿಂದ ಈಗ ನೀರು ಕಾರಂಜಿಯಂತೆ ಮೇಲಕ್ಕೆ ಚಿಮ್ಮುತ್ತದೆ. ಓಡಿಸುವಾತನ ಚಾಕಚಕ್ಯತೆ ಮತ್ತು ಕೋಣಗಳ ವೇಗ ಎರಡನ್ನು ಅನುಸರಿಸಿಕೊಂಡು, ನೀರಿನ ಚಿಮ್ಮುವಿಕೆ ನಿರ್ಧಾರವಾಗುತ್ತದೆ. ಗದ್ದೆಯ ಮಧ್ಯಭಾಗದಲ್ಲಿ ಗದ್ದೆಗೆ ಅಡ್ಡಲಾಗಿ, ಸುಮಾರು 20–25 ಅಡಿ ಎತ್ತರದಲ್ಲಿ ಬಿಳಿ ಬಟ್ಟೆಯನ್ನು ಕಟ್ಟುತ್ತಾರೆ. ಇದಕ್ಕೆ 'ನಿಸಾನೆ' ಎಂದು (ಕನ್ನಡ: ನಿಶಾನಿ) ಎಂದು ಹೆಸರು. ನಿಶಾನಿಗೆ ನೀರು ಹಾಯಿಸಿದ ಕೋಣಗಳಿಗೆ ಪ್ರಶಸ್ತಿ

ಸಲ್ಲುತ್ತದೆ. ಒಂದು ವೇಳೆ ನಿಶಾನಿವರೆಗೆ ನೀರು ಹಾರದಿದ್ದರೆ, ಅತಿ ಎತ್ತರಕ್ಕೆ ನೀರು ಚಿಮ್ಮಿಸಿದ ಕೋಣಗಳಿಗೆ ಪ್ರಶಸ್ತಿ ಸಲ್ಲುತ್ತದೆ.[8]

ವೇಗವಾಗಿ ಓಡಿಬರುವ ಕೋಣಗಳು ಮಂಜೊಟ್ಟಿಯನ್ನು ತಲುಪಿ, ನಿಲ್ಲುತ್ತವೆ. ಕೋಣಗಳನ್ನು ಓಡಿಸುವಾತನು ಮಂಜೊಟ್ಟಿಗೆ ತಲುಪಿದ ಮೇಲೆಯೂ ಕೋಣಗಳಿಗೆ ರಪರಪನೆ ಬಾರಿಸುತ್ತಾನೆ. ಎಷ್ಟೋಬಾರಿ ಕೋಣಗಳ ಬೆನ್ನಿನ ಚರ್ಮ ಒಡೆದು ರಕ್ತ ಬರುವುದುಂಟು. ಅಲ್ಲಿಗೆ ನಿಂಬೆಹುಳಿಯನ್ನು ಹಿಂಡಿ ಗಾಯವು ಇನ್ನಷ್ಟು ತೀಕ್ಷ್ಣವಾಗುವಂತೆ ನೋಡಿಕೊಳ್ಳುತ್ತಾರೆ. ಹೀಗೆ ಮಾಡಿದರೆ ಮುಂದಿನ ಸಲದ ಓಟದಲ್ಲಿ ಅವು ಇನ್ನೂ ಚೆನ್ನಾಗಿ ಓಡುತ್ತವೆ ಎಂದು ಅವರು ಭಾವಿಸುತ್ತಾರೆ. ಏನಿದ್ದರೂ ನಿಜವಾದ ಸ್ಪರ್ಧೆ ಆರಂಭವಾಗುವುದಕ್ಕೆ ಮುನ್ನ ಅನೇಕ ಬಾರಿ ಗದ್ದೆಯಲ್ಲಿ ಕೋಣಗಳನ್ನು ಅಭ್ಯಾಸಕ್ಕಾಗಿ ಓಡಿಸುತ್ತಾರೆ.

ಹೀಗೆ ಅಭ್ಯಾಸ ನಡೆಸುವಾಗಲೇ ಕೋಣಗಳ ಮೇಲೆ ಜೂಜು ಕಟ್ಟಲಾಗುತ್ತದೆ. ಈ ಜೂಜಿನ ಮೊತ್ತ ಸುಮಾರು 10 ರೂಪಾಯಿಯಿಂದ 500 ರೂಪಾಯಿವರೆಗೆ ಇರುತ್ತದೆ. ಇವು ಗುಂಪಿನಲ್ಲಿ ಸಾಮೂಹಿಕವಾಗಿಯೂ ನಡೆಯುತ್ತದೆ. ವೈಯಕ್ತಿಕ ನೆಲೆಯಲ್ಲೂ ನಡೆಯುತ್ತದೆ. ಎರಡೂ ಕಡೆ ಕೂಡಾ ಅದು ಸಾಮಾಜಿಕ ಪ್ರತಿಷ್ಠೆಯ ಸಂಕೇತವಾಗಿರುತ್ತದೆ ಮತ್ತು ಸಾಮಾನ್ಯವಾಗಿ ಇವು ಗುಟ್ಟಿನಲ್ಲೇ ನಡೆಯುತ್ತದೆ.

ಸ್ಪರ್ಧೆಗಳೆಲ್ಲ ಮುಗಿದ ಅನಂತರ ಮುಹೂರ್ತದ ಎರುವನ್ನು ಮೇಲೆ ತರಲಾಗುವುದು. ಅನಂತರ ಬಹುಮಾನ ವಿತರಣೆ ಆಗುತ್ತದೆ. ಗೆದ್ದ ಕೋಣಗಳ ಯಜಮಾನರಿಗೆ ಎಳನೀರನ್ನು ಕೊಟ್ಟು ಗೌರವಿಸಲಾಗುವುದು. ಈಚೆಗೆ ಬಂಗಾರದ ಪದಕಗಳನ್ನು ನೀಡಲಾಗುತ್ತಿದೆ. ಗೆದ್ದ ಕೋಣಗಳನ್ನು ರಾಜವೈಭವದಿಂದ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತದೆ. ಆಗ ಜನರೂ ಆ ಕೋಣಗಳನ್ನು ಹತ್ತಿರದಿಂದ ನೋಡಿ ಸಂತೋಷಪಡುತ್ತಾರೆ. ಕೋಣಗಳಲ್ಲಿ ತೆರಳಿದ ಅನಂತರ ಕಂಬುಲದ ಗದ್ದೆಯ ನಡುಭಾಗದಲ್ಲಿ ಹೂವಿನಿಂದ ಅಲಂಕೃತವಾದ ಒಂದು ಕಂಬವನ್ನು ನೆಡುತ್ತಾರೆ. ಅದನ್ನು ನೆಡುವ ಮುನ್ನ, ನೆಡುವ ಜಾಗಕ್ಕೆ ಹಾಲೆರೆಯಲಾಗುತ್ತದೆ. ಕಂಬಕ್ಕೆ ಅರಸಿನ ಬಣ್ಣದ ಹೂವುಗಳನ್ನು, ನಿಂಬೆಹಣ್ಣನ್ನು ಕಟ್ಟುತ್ತಾರೆ. ಕಂಬವನ್ನು ನೆಡುವಾಗ, ಕಂಬುಲದ ಯಜಮಾನ ಕಂಬವನ್ನು ಮುಟ್ಟಿಕೊಂಡಿರಬೇಕು. ಡೋಲನಲಿಕೆಯವರು ಡೋಲು ಬಾರಿಸುತ್ತಾರೆ. ಈ ಇಡೀ ಕ್ರಿಯೆಗೆ 'ಪೂಕರೆ ಪಾಡುನ' ಎನ್ನುತ್ತಾರೆ. ನೆಡಲಾಗುವ ಕಂಬಕ್ಕೆ ಪೂಕರೆ ಕಂಬ ಎಂದೂ ಹೆಸರಿದೆ. 'ಪೂಕರೆ ಕಂಬ'ವನ್ನು ನೆಟ್ಟ ಅನಂತರ ಕೋಣಗಳು ಗದ್ದೆಗೆ ಇಳಿಯಬಾರದು. ಮರುದಿನ ಊರಿನ ಜನರೆಲ್ಲ ಸೇರಿ ಗದ್ದೆಗೆ ಭತ್ತದ ಸಸಿಯನ್ನು ನೆಡುತ್ತಾರೆ. ಹೀಗೆ ಸಸಿ ನೆಡುವ ಕಾರ್ಯಕ್ರಮ ಒಂದೇ ದಿನದಲ್ಲಿ ಮುಗಿಯಬೇಕೆಂದು ನಂಬಿಕೆಯಿದೆ. ಮುಟ್ಟಾದ ಹೆಂಗಸರು, ಸೂತಕ ಇರುವವರು ಭತ್ತದ ಸಸಿನೆಡಲು ಬರುವುದಿಲ್ಲ. ಸಸಿನೆಡುವಲ್ಲಿಗೆ ಕಂಬುಲ ಮುಕ್ತಾಯವಾಗುತ್ತದೆ.

ಒಟ್ಟು ಕಂಬುಲವು ತುಂಬ ರಂಗಾಗಿರುತ್ತದೆ. ಕೋಣಗಳು ಮತ್ತು ಮನುಷ್ಯರು ಒಟ್ಟೊಟ್ಟಿಗೇ ಇಲ್ಲಿ ಭಾಗವಹಿಸುತ್ತಾರೆ. ಗುತ್ತಿನ ಯಜಮಾನರು, ಅವರ ಕೆಲಸದವರು, ವಿವಿಧ ಬಗೆಯ ಜನರು ಇಲ್ಲಿ ಕಲೆಯುತ್ತಾರೆ. ತುಳುನಾಡಿನ ತುಂಬ ರಂಜನೀಯವಾದ ಪ್ರದರ್ಶನಗಳಲ್ಲಿ ಇದೂ ಒಂದಾಗಿದೆ.

೩.

ಮೇಲೆ ನೀಡಿದ ವಿವರಣೆಯಲ್ಲಿಯೇ ಕಂಬುಲದ ಅರ್ಥ ಏನೆಂಬುದು ಬಹು ಮಟ್ಟಿಗೆ ಖಚಿತವಾಗುತ್ತದೆ. ಕ್ಯೂಲರ್ ಹೇಳಿದಂತೆ ವಿವರಣೆಗೆ ಆಯ್ದುಕೊಂಡ ಘಟನೆಗಳೇ ಒಂದು ಬಗೆಯ ವ್ಯಾಖ್ಯಾನವೂ ಆಗಿಬಿಡುತ್ತದೆ [CULLER 1983 : 16].[9] 'ಕಂಬುಲ'ದ ವಿವರಣೆಯನ್ನು ಗಮನಿಸಿದವರಿಗೆ ಅದು ಕೇವಲ ಕ್ರೀಡೆಯಾಗದೆ, ಒಂದು ಆಚರಣೆಯೂ ಆಗಿರುವುದು ಕಂಡುಬರುತ್ತದೆ. ಅಲ್ಲಿ ಕೋಣಗಳನ್ನು ಓಡಿಸುವುದಷ್ಟೇ ಮುಖ್ಯವಲ್ಲ. ಬದಲಾಗಿ ಕೊರಗರು ನರ್ತಿಸುವುದು, ಪೂಕರೆ ಹಾಕುವುದು, ನಾಗಪೂಜೆ ಮಾಡುವುದು ಮತ್ತು ನೇಜಿ ನೆಡುವುದು ಕೂಡಾ ಮುಖ್ಯವಾಗುತ್ತದೆ. ಈ ಅರ್ಥದಲ್ಲಿ ನಾವು ಕಂಬುಲದ ಪಠ್ಯವನ್ನು ತುಂಬ ಬೃಹತ್ತಾಗಿ ಪರಿಭಾವಿಸಬೇಕು.

ಕಂಬುಲದ ಬಗ್ಗೆ ಇದುವರೆಗೆ ನಡೆದಿರುವ ಅಧ್ಯಯನಗಳು ಕಡಮೆ. ಅಮೃತ ಸೋಮೇಶ್ವರ (1978), ಚಿತ್ರರಂಜನ ದಾಸಶೆಟ್ಟಿ (1983), ವಿವೇಕರೈ (1986) ರಸಿಕ ಪುತ್ತಿಗೆ (1982), ಸಂಜೀವ ಸೋಮೇಶ್ವರ (1988) ಮೊದಲಾದವರು ಪ್ರಾಸಂಗಿಕವಾಗಿ ಕಂಬುಲದ ಬಗ್ಗೆ ಬರೆದಿದ್ದಾರೆ. ಇವರೆಲ್ಲರ ಪ್ರಕಾರ 'ಕಂಬಲ'ವು ಒಂದು ಜನಪದ ಕ್ರೀಡೆ. ಅದು ಜನರಿಗೆ ಮನರಂಜನೆಯನ್ನು ಕೊಡುತ್ತದೆ. ಈ ನಿಟ್ಟಿನಲ್ಲಿ ವಿದ್ವಾಂಸರ ವಾದವನ್ನು ನೋಡಿದಾಗ ಅವರೆಲ್ಲರೂ ಕಂಬುಲದ 'ಪಠ್ಯ'ವನ್ನು ತುಂಬ ಸೀಮಿತಗೊಳಿಸಿಕೊಂಡಿದ್ದಾರೆ ಎಂದೇ ಅನ್ನಿಸುತ್ತದೆ. ಕೋಣಗಳ ಓಟದ ಹಿಂದಿನ ಮತ್ತು ಮುಂದಿನ ದಿನಗಳಲ್ಲಿ ನಡೆಯುವ ಚಟುವಟಿಕೆಗಳನ್ನು ಇವರು ಗಮನಿಸಿಯೇ ಇಲ್ಲ. ಜೊತೆಗೆ ಕಂಬುಲದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಬಂಧುತ್ವದ ಸಂದರ್ಭವನ್ನು ಇವರು ಪರಿಗಣಿಸಿಲ್ಲ.

ಮೇಲೆ ಹೇಳಿದ ವಿದ್ವಾಂಸರೆಲ್ಲರೂ 'ಕಂಬಳ' ಎಂಬ ಪದವನ್ನು ಬಳಸಿಕೊಂಡು ಅದರ ಅರ್ಥನಿಷ್ಪತ್ತಿಗೆ ಪ್ರಯತ್ನಿಸಿದ್ದಾರೆ. ಈ ಅರ್ಥನಿಷ್ಪತ್ತಿಯಲ್ಲಿ ಎರಡು ವಾದಗಳಿವೆ. ಒಂದು ವಾದದ ಪ್ರಕಾರ 'ಕಂಬಳ' ಪದವು 'ಕಂಪ' ಮತ್ತು 'ಕಳ' ಎಂಬೆರಡ ಪದಗಳು ಒಟ್ಟು ಸೇರಿ ಸಿದ್ಧಿಸಿದೆ. [ಅಮೃತ ಸೋಮೇಶ್ವರ 1978 ಮತ್ತು ವಿವೇಕರೈ 1986]. ಇಲ್ಲಿ 'ಕಂಪ'ವು ಆಳವಾದ ಕೆಸರು ಗದ್ದೆಯನ್ನು ಸೂಚಿಸುತ್ತದೆ. 'ಕಳ'ವು ವಿಶಾಲವಾದ ಪ್ರದೇಶವನ್ನು ಸಂಕೇತಿಸುತ್ತದೆ. 'ಕೋಣಗಳು ಓಡುವ ಕೆಸರಿನ ವಿಶಾಲವಾದ ಗದ್ದೆ' ಎಂಬ ಅರ್ಥದ ಗ್ರಹಿಕೆ ಇದರಲ್ಲಿದೆ.

ಎರಡನೇ ವಾದದ ಪ್ರಕಾರ 'ಕಂಬಳ' ಪದವು 'ಕಂಬ' ಮತ್ತು 'ಕಳ' ಎಂಬೆರಡು ಪದಗಳಿಂದ ಸಿದ್ಧಿಸಿದೆ. ಇಲ್ಲಿನ ಪೂರ್ವಪದವು ಕೊನೆಯಲ್ಲಿ ನೆಡಲಾಗುವ 'ಕಂಬ'ವನ್ನು ಸೂಚಿಸಿದರೆ, ಎರಡನೇ ಪದವು 'ವಿಶಾಲವಾದ ಸ್ಥಳ' ವನ್ನೇ ಸೂಚಿಸುತ್ತದೆ. ಈ ನಿಟ್ಟಿನಲ್ಲಿ ಕಂಬಳವೆಂದರೆ 'ವಿಶಾಲವಾದ ಪ್ರದೇಶದಲ್ಲಿ ನೆಟ್ಟ ಕಂಬ' [ಚಿತ್ತರಂಜನ ದಾಸಶೆಟ್ಟಿ 1983] ಕೆಲವು ನಿರೂಪಕರ ಪ್ರಕಾರ 'ಮೂರ್ತದ ಎರು' ವನ್ನು ಕಟ್ಟುವ 'ದರಿಗುಂಟ' ದಿಂದ ಕಂಬಳ ಪದ ಹುಟ್ಟಿರಬೇಕು.[10]

ಮೇಲಿನ ಎಲ್ಲ ವಿದ್ವಾಂಸರು ಮಾಡಿದ ಅರ್ಥನಿಷ್ಪತ್ತಿಗೆ ಮೂಲಪದ 'ಕಂಬಳ' ಆಧಾರಪದವಾಗಿದೆ. ಆದರೆ ಕ್ಷೇತ್ರಕಾರ್ಯದಲ್ಲಿ ನಾನು ಭೇಟಿಮಾಡಿದ ಹೆಚ್ಚಿನ ಎಲ್ಲರೂ 'ಕಂಬುಲ' ಎಂಬ ಪದವನ್ನೇ ಬಳಸಿದ್ದಾರೆ.[11] 'ಕಂಬಳ' ಪದವು ವಿದ್ವಾಂಸರ ಸೃಷ್ಟಿಯೇ ಹೊರತು ಜನಪದರ ಸೃಷ್ಟಿಯಲ್ಲ. ಈ ಕಾರಣಕ್ಕೇನೇ ಜನಪದರಲ್ಲಿ ಬಳಕೆಯಲ್ಲಿ ಇಲ್ಲದ ಶಬ್ದವನ್ನು ವಿಶ್ಲೇಷಣೆಗೆ ಎತ್ತಿಕೊಳ್ಳಲಾಗದು. ಬದಲು 'ಕಂಬುಲ' ವನ್ನು ಆಧಾರಪದವಾಗಿ ತೆಗೆದುಕೊಳ್ಳಬೇಕು.

'ಕಂಬುಲ' ಪದದಲ್ಲಿ ಎರಡು ಪದಗಳಿರುವುದು ಸ್ಪಷ್ಟ. ಬಹುಶಃ ಆ ಎರಡು ಪದಗಳು 'ಕಂಪ' ಮತ್ತು 'ಪುಲ'ವೇ ಆಗಿರಬೇಕು 'ಕಂಪ' ಎಂದರೆ 'ಕೆಸರು' ಎಂದೇ ಅರ್ಥ. ತುಳುವಿನಲ್ಲಿ 'ಕಂಪ ಕಂಡ' ಎಂದರೆ ಕೆಸರು ಗದ್ದೆ' ಎಂಬ ಅರ್ಥವಿದೆ. ಎರಡನೇ ಪದವಾದ 'ಪುಲ'ವು 'ಪೊಲ'ದ ಆದಿರೂಪವಾಗಿದ್ದು ಗದ್ದೆ ಎಂಬ ಅರ್ಥವನ್ನು ಹೊಂದಿದೆ [ಕಿಟ್ಟೆಲ್ 1975 : 1086]. ಇವೆರಡು ಪದ ಸೇರಿದರೆ 'ಕೆಸರು ಗದ್ದೆ' ಎಂಬ ಅರ್ಥವನ್ನು ನೀಡುತ್ತದೆ. ಕೋಣಗಳು ಓಡುವುದಕ್ಕೆ ಕೆಸರುಗದ್ದೆಯೇ ಆಗಬೇಕು. ಕೆಲವರು 'ಕೆಸರುಗದ್ದೆ ಓಟ' ಎಂದೂ ಕಂಬುಲಕ್ಕೆ ಪರ್ಯಾಯ ಪದವನ್ನು ಬಳಸುತ್ತಾರೆ. ಇದು ಹೌದಾದರೆ 'ಕಂಬುಲ' ಪದವು ಕಂಪ+ಪುಲ→ಕಂಪುಲ→ಕಂಬುಲ ಆಗಿದೆ ಎಂದು ಹೇಳಬಹುದು. 'ಪುಲ'ವೇ ಮುಂದೆ 'ಪೊಲ'ವಾಗಿ ಅನಂತರ 'ಹೊಲ' ವಾಗಿ ಬಳಕೆಗೆ ಬಂದು, ಈಗಲೂ ಉಳಿದಿದೆ. ಜನಪದರು 'ಕಂಬುಲ' ಪದವನ್ನೇ ಬಳಸುವುದನ್ನು ನೋಡಿದರೆ, ಈ ನಿಷ್ಪತ್ತಿಯೇ ಹೆಚ್ಚು ಸರಿಯಾಗಿರುವಂತೆ ತೋರುತ್ತದೆ.[12]

ಕಂಬುಲವು ನಡೆಯುವುದು ವಿಶಾಲವಾದ ಗದ್ದೆಗಳಲ್ಲಿ. ಈ ಗದ್ದೆಗಳು ಭೂಮಾಲಕರಿಗೆ ಸೇರಿರುವುದರಿಂದಾಗಿ ಕಂಬುಲದ ಯಜಮಾನರು ಭೂಮಾಲಕರೇ ಆಗಿರುತ್ತಾರೆ. ತುಳುನಾಡಿನಲ್ಲಿರುವ ಗುತ್ತಿನ ಮನೆಗಳ ಜನರು ಕಂಬುಲದಲ್ಲಿ ಬಹಳ ಪ್ರಧಾನವಾದ ಸ್ಥಾನ ಪಡೆಯುತ್ತಾರೆ. ಕೋಣ ಸಾಕುವವರೂ ಈ ಗುತ್ತಿನ ಮನೆಗಳ ಜನರೇ ಆಗಿದ್ದಾರೆ. ಮೂಲ್ಕಿ ಅರಸು ಕಂಬಲದ ಮುಖ್ಯಸ್ಥರು. ಅಲ್ಲಿನ ಸಾಮಂತ ಅರಸರು. ಜೈನರಾಗಿರುವ ಅವರು ಭೂಮಸೂದೆಯ ಕಾಲಕ್ಕೆ ಸಾಕಷ್ಟು ಜಮೀನನ್ನು ಕಳಕೊಂಡರೂ ಇಂದಿಗೂ ಅರಸು ಎಂಬ ಅಭಿದಾನಕ್ಕೆ ಪಾತ್ರ ರಾಗಿದ್ದಾರೆ. ಅವರ ಕೋಣಗಳು ಗದ್ದೆಗೆ ಇಳಿದ ಅನಂತರವೇ ಉಳಿದವರ ಕೋಣಗಳು

ಇಳಿಯಬೇಕು. ಮೂಲ್ಕಿಮಾಗಣೆಗೆ ಸೇರಿದ 64 ಗುತ್ತಿನ ಜನರು ಅಲ್ಲಿಗೆ ಬರುತ್ತಾರೆ. ಕದರಿಯದ್ದು ಈಗ 'ದೇವರ ಕಂಬುಲ' ಎಂದು ಕರೆಸಿಕೊಂಡರೂ ಮೂಲದಲ್ಲಿ ಅದು ಕುಲಶೇಖರದ ಆಳುವ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಇಂದಿಗೂ ಕದರಿಯಲ್ಲಿ ಅತ್ತಾವರ, ಇನೋಳಿ, ಕುತ್ತಾರು, ಕೊಡಿಯಾಲಗುತ್ತು, ಗುಡ್ಡೆಗುತ್ತು, ಬಡಿಲಗುತ್ತು, ಮುನ್ನೂರು ಗುತ್ತು, ಉಳ್ಳಾಲಗುತ್ತು, ಅಮುಣಿಂಜೆ ಗುತ್ತು, ಪುತ್ತಿಗೆ ಗುತ್ತು, ತೋಕೂರು ಗುತ್ತು, ಹರೇಕಳ ಗುತ್ತು, ಅಡ್ಯಾರ ಗುತ್ತುಗಳಿಂದ ಪ್ರತಿನಿಧಿಗಳು ಬಂದರೆ, ವಿಶೇಷವಾದ ಸ್ಥಾನವನ್ನು ಅಲಂಕರಿಸುತ್ತಾರೆ. ವಂಡಾರಿನಲ್ಲಿ ವಂಡಾರಿನ ಅರಸರು ಕಂಬುಲವನ್ನು ನಡೆಸುತ್ತಾರೆ. ಈಗ ಕಳೆದ ಕೆಲವು ವರ್ಷಗಳಿಂದೀಚೆಗೆ ಅರಸರ ಪ್ರತಿನಿಧಿಯಾಗಿ ಒಂದು ವಿಗ್ರಹವನ್ನು ಮೆರವಣಿಗೆಯಲ್ಲಿ ಕಂಬುಲದ ಗದ್ದೆಗೆ ಸುತ್ತ ತರುತ್ತಾರೆ. ಈ ನಿಟ್ಟಿನಿಂದ ನೋಡಿದಾಗ ಕಂಬುಲಕ್ಕೂ ಪಾಳೇಗಾರಿ ಪದ್ಧತಿಗೂ ಒಂದು ಗಾಢವಾದ ಸಂಬಂಧ ಇರುವುದು ಸ್ಪಷ್ಟವಾಗುತ್ತದೆ. ಒಟ್ಟು ಕಂಬುಲದ ಆಚರಣೆಯಲ್ಲಿ ಗುತ್ತಿನವರಿಗೆ ಮೊದಲ ಮರ್ಯಾದೆ ಸಲ್ಲುವುದೇ, ಅವರು ಹೊಂದಿರುವ ಜಮೀನಿನ ಕಾರಣಕ್ಕೆ.

ಕಳೆದ 6 ವರ್ಷಗಳಿಂದ (1984 ರಿಂದೀಚೆ) ಕಂಬುಲದ ಗದ್ದೆಯಲ್ಲಿ ಬೃಹತ್ ಉದ್ಯಮಿಗಳ ಹೆಸರು ಕಾಣಲು ಸಿಗುತ್ತದೆ. ಗೆದ್ದ ಕೋಣಗಳಿಗೆ ಚಿನ್ನದ ಪದಕವನ್ನೋ, ಬೆಳ್ಳಿಯ ತಟ್ಟೆಯನ್ನೋ ಉದಾರವಾಗಿ ನೀಡುವ ಇವರು ನಿಧಾನವಾಗಿ ಭೂಮಾಲಕರ ಜಾಗವನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ. ಮಂಗಳೂರಿನಂಥ ನಗರ ಪ್ರದೇಶದಲ್ಲಿ ಇದು ಎದ್ದುಕಾಣುವ ವಿಚಾರವಾಗಿದೆ. ಬಹುಶಃ ಈ ಪರಿವರ್ತನೆ ಒಟ್ಟು ಭಾರತೀಯ ಗ್ರಾಮವ್ಯವಸ್ಥೆಯಲ್ಲಾಗುತ್ತಿರುವ ಪರಿವರ್ತನೆಯನ್ನೇ ಸಂಕೇತಿಸುತ್ತಿರಬಹುದು.

ಕಂಬುಲದ ಗದ್ದೆಯು ಒಡೆತನ ಗುತ್ತಿನವರಿಗೆ ಸೇರಿದ್ದರೂ ಕಂಬುಲದ ದಿನ ಗದ್ದೆಯನ್ನು ಜೇಡಿಮಣ್ಣಿನ ಗುರುತನ್ನು ಹಾಕುವುದರ ಮೂಲಕ ಇತರ ಗದ್ದೆಗಳಿಗಿಂತ ಅವನ್ನು ಪ್ರತ್ಯೇಕಿಸಲಾಗುತ್ತದೆ. ಕಂಬುಲದ ದಿನ ನಿಶ್ಚಯ ಮಾಡುವಲ್ಲಿಂದ ಕಾಲವೂ ಪ್ರತ್ಯೇಕಗೊಳ್ಳುತ್ತದೆ. ಹೀಗೆ ಪ್ರತ್ಯೇಕಿಸಲಾದ ಕಾಲ ಮತ್ತು ಸ್ಥಳದ ಮೇಲೆ ಕನಿಷ್ಠ ಕಂಬುಲದ ದಿನವಾದರೂ ಸಾರ್ವಜನಿಕರಿಗೆ ಒಡೆತನ ಇರುತ್ತದೆ. ಈ ಕಾರಣದಿಂದ ಕಂಬುಲದ ದಿನದಂದು ಕಂಬುಲದ ಗದ್ದೆಯ ಮೇಲೆ ಯಾರು ಬೇಕಾದರೂ ಒಡೆತನವನ್ನು ಸಾಧಿಸಬಹುದು. ವರ್ಷಕ್ಕೊಮ್ಮೆ ಸಾಧ್ಯವಾಗುವ ಈ ಸಾಮೂಹಿಕ ಒಡೆತನದ ಸ್ಪರ್ಧೆ ನಿಜವಾಗಲು ಜಮೀನ್ದಾರೀ ಪದ್ಧತಿಯೇ ಬೇಕಾಗುತ್ತದೆ.

ಕಂಬುಲದ ಇನ್ನೊಂದು ಕುತೂಹಲ ಅಂಶವೆಂದರೆ ಕೊರಗರ ಪಾಲ್ಗೊಳ್ಳುವಿಕೆ. ಅವರ ಪಾಲ್ಗೊಳ್ಳುವಿಕೆಯಲ್ಲಿ ಮೂರು ಕ್ರಿಯೆಗಳಿರುತ್ತವೆ.

1. ದೋಲಿನ ನಿಯತವಾದ ಶಬ್ದವನ್ನು ಉಂಟುಮಾಡುವುದು.

2 ಲೈಂಗಿಕ ಚಟುವಟಿಕೆಗಳಲ್ಲಿ ಮಗ್ನರಾಗುವುದು ಇಲ್ಲವೇ ಅವನ್ನು ಅಭಿನಯಿಸುವುದು.

3. ಕಂಬುಲವನ್ನು ಅನುಕರಿಸುವುದು.

ಮೊದಲನೆಯದಾದ ಮೇಲಿನ ಶಬ್ದ ಯಾಕೆಂದು ಕೊರಗರನ್ನೂ, ಕಂಬುಲದ ಪ್ರೇಕ್ಷಕರನ್ನು ಪ್ರಶ್ನಿಸಿದಾಗ ಅವರದು ಸಾಮಾನ್ಯವಾಗಿ ಒಂದೇ ಎನ್ನಬಹುದಾದ ಉತ್ತರ ಬಂತು. ಅವರ ಪ್ರಕಾರ ದೂರದ ಊರಿನಿಂದ ಬರುವ ಜನರಿಗೆ ಕಂಬುಲ ನಡೆವ ಸ್ಥಳವನ್ನು ನೇರವಾಗಿ ತಲುಪಲು ಸಹಾಯಕವಾಗಲು ಡೋಲನ್ನು ಬಾರಿಸುತ್ತಾರೆ. ಇದು ಬಹಳ ಸರಳವಾದ ವಿವರಣೆಯಂತೆ ತೋರುತ್ತದೆ. ಏಕೆಂದರೆ ಮೇಲಿನ ವಿವರಣೆ ನಿಜವಾದುದೇ ಆದರೆ, ವರ್ತಮಾನ ಕಾಲದಲ್ಲಿ ಡೋಲಿನ ಶಬ್ದದ ಅಗತ್ಯವಿರಲಿಲ್ಲ. ಈಗ ಧ್ವನಿವರ್ಧಕಗಳ ಶಬ್ದ ಡೋಲಿಗಿಂತ ಗಟ್ಟಿಯಾಗಿ ಕೇಳಿಸುತ್ತಿದೆ. ಮೇಲಾಗಿ ಕರಪತ್ರಗಳ ಮೂಲಕ ಕೋಣದ ಯಜಮಾನರಿಗೆ ಸ್ಥಳದ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡಲಾಗುತ್ತದೆ. ಹೀಗಿರುವುದರಿಂದ ಕೊರಗರ ಡೋಲಿಗೆ ಇನ್ನಷ್ಟು ಹೆಚ್ಚಿನ ಅರ್ಥವ್ಯಾಪ್ತಿಯನ್ನು ಕಂಡುಹಿಡಿಯಬೇಕಾಗುತ್ತದೆ.

ಶಬ್ದ ಮತ್ತು ಮೌನದ ಬಗ್ಗೆ ಚರ್ಚೆ ನಡೆಸಿದ ಎಡ್ಮಂಡ್‌ಲೀಚ್ ಅವರು 'ಸಂಸ್ಕೃತಿಯ ನಿರ್ಮಾತೃಗಳಾದ ಮಾನವರು ಕೃತಕವಾದ ಶಬ್ದವನ್ನು ಉಂಟುಮಾಡುವುದರ ಮೂಲಕ ಪ್ರಕೃತಿಯಲ್ಲಿ ತಾತ್ಕಾಲಿಕವಾದ ಮತ್ತು ನಿರ್ದಿಷ್ಟ ಸ್ಥಳಕ್ಕೆ ಬದ್ಧವಾದ ಒಂದು ಆವರಣವನ್ನು ನಿರ್ಮಾಣಮಾಡುತ್ತಾರೆ' ಎಂದು ಹೇಳಿರುವುದು ಕಂಬುಲಕ್ಕೂ ಅನ್ವಯವಾಗುತ್ತದೆ [LEACH 1976 : 63][13]. ಕೊರಗರು ಡೋಲನ್ನು ನಿಯತವಾಗಿ ಬಾರಿಸುವುದರಿಂದ ಕಂಬುಲದ ಗದ್ದೆಗೆ ಶಬ್ದದ ಒಂದು ಆವರಣವನ್ನು ನಿರ್ಮಾಣಮಾಡುತ್ತಾರೆ. ಈ ಆವರಣವು ಶಬ್ದದ ಮೂಲಕ ವ್ಯವಸ್ಥಿತವಾಗುತ್ತದೆ. ಸಾಮಾನ್ಯವಾಗಿ ಪ್ರಕೃತಿಯಲ್ಲಿ ಅವ್ಯವಸ್ಥೆ ಇರುತ್ತದೆಂಬುದು ಮಾನವನ ಗೃಹೀತ. ಡೋಲಿನ ನಿಯತವಾದ ಶಬ್ದವು ಪ್ರಕೃತಿಯ ಅವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಮಾರ್ಪಡಿಸುತ್ತದೆ. ಈ ವ್ಯವಸ್ಥೆ ತುಂಬ ತಾತ್ಕಾಲಿಕವಾದುದು ಮತ್ತು ಅಮೂರ್ತವಾದುದು. ಆದರೆ ಕಂಬುಲದ ಗದ್ದೆಯನ್ನು ಹೀಗೆ ಸಾಂಕೇತಿಕವಾಗಿ ವ್ಯವಸ್ಥಿತಗೊಳಿಸದೆ, ಮಾನವನು ತನ್ನ ಸೃಷ್ಟಿಯಾದ 'ಕಂಬುಲ'ವನ್ನು ಅಲ್ಲಿ ನಡೆಸಲು ಸಾಧ್ಯವಿಲ್ಲ. ಮಾನವನು ಪ್ರಕೃತಿಯನ್ನು ತನ್ನ ನೇರಕ್ಕೆ ನಿಯುಕ್ತಿಗೊಳಿಸುವ ವಿಧಾನವಿದು.

ಎರಡನೆಯದಾದ ಲೈಂಗಿಕ ಚಟುವಟಿಕೆಗಳಿಗೆ ವಿಸ್ತೃತವಾದ ವ್ಯಾಖ್ಯಾನ ಬೇಕಿಲ್ಲ. ಅದು ನಡೆಯುವ ರೀತಿಯೇ ಅದರ ಅರ್ಥವನ್ನು ಪ್ರಕಟಿಸುತ್ತದೆ. ಲೈಂಗಿಕ ಕ್ರಿಯೆಯ ಮೂಲಕ ಪ್ರಕಟವಾಗುವ ಸೃಷ್ಟಿಯ ಆಸೆ ಮತ್ತು ಗದ್ದೆಯಲ್ಲಿ ಬೀಜ ಬಿತ್ತುವ ಅಥವಾ ನೇಜಿನೆಡುವ ಕೆಲಸದ ಮೂಲಕ ಪ್ರಕಟವಾಗುವ ಗದ್ದೆಯ ಫಲವಂತಿಕೆ ಇವೆರಡೂ ಇಲ್ಲಿ ಸಮನ್ವಯಗೊಳ್ಳುತ್ತವೆ. ನೇಜಿನೆಡುವ ಮುನ್ನ

ಗದ್ದೆಯಲ್ಲಿ ಮಾನವರು ಸಂಭೋಗಿಸುವ ಕ್ರಿಯೆ ತುಳುನಾಡಿಗೇ ಸೀಮಿತವಾದುದೇನೂ ಅಲ್ಲ. ಅದು ಜಗತ್ತಿನಾದ್ಯಂತ ಕಂಡುಬರುವ ಒಂದು ಸಾಮಾನ್ಯ ಆಚರಣೆಯಾಗಿದೆ. ತುಳುನಾಡಿನಲ್ಲಿ ನಮಗೆ ಮುಖ್ಯವಾಗುವುದು ಕೊರಗರೇ ಈ ಕೆಲಸದಲ್ಲಿ ಯಾಕೆ ತೊಡಗುತ್ತಾರೆ ಎಂಬುದು. ಇದಕ್ಕೆ ಸಮರ್ಪಕವಾಗಿ ಉತ್ತರಿಸುವುದು ಕಷ್ಟವಾದರೂ, ಈ ಆಚರಣೆ ಕೊರಗರಿಗೂ ಭೂಮಿಗೂ ಇರುವ ಸಂಬಂಧವನ್ನು ವಿಶದೀಕರಿಸುತ್ತದೆ ಎನ್ನಬಹುದು. ಡಾ. ವಿಲ್ಲಿ ಆರ್. ಡಿಸಿಲ್ವ ಅವರು ಈ ನಿಟ್ಟಿನಲ್ಲಿ ತುಂಬ ಗಮನಾರ್ಹವಾದ ಪ್ರಮೇಯಗಳನ್ನು ಮುಂದಿಟ್ಟಿದ್ದಾರೆ. [SILVA 1985 : 81–102]. ಕಂಬುಲದೊಂದಿಗೆ ಕೊರಗರು ಹೊಂದಿರುವ ಸಂಬಂಧವು ಸಿಲ್ವ ಅವರ ಪ್ರಮೇಯಗಳನ್ನು ರುಜುವಾತುಗೊಳಿಸುತ್ತದೆ. ಭೂಮಾಲಕರ ಅಡಿಯಾಳುಗಳಾಗಿ ಕೆಲಸ ನಿರ್ವಹಿಸುವ ಕೊರಗರು ಉತ್ಪಾದನಾ ವಿಧಾನಗಳಲ್ಲಿ ತಮ್ಮನ್ನು ನೇರವಾಗಿ ತೊಡಗಿಸಿಕೊಂಡಿರುವುದರಿಂದ ಈ ವಿಧದ ಆಚರಣೆಗಳಲ್ಲಿ ಪಾಲುದಾರರಾಗುತ್ತಾರೆ.[14] ಫಲವಂತಿಕೆಯ ಆಚರಣೆಯಲ್ಲಿ ಭಾಗವಹಿಸುವಷ್ಟು ಶಕ್ತಿ ಅವರಿಗಿರುವುದು ವಿಶೇಷವಾದ ಸಂಗತಿಯಾಗಿದೆ. ಕಂಬುಲದ ದಿನ ಬೆಳಗ್ಗೆ ಕೊರಗರಿಗೆ ನೀಡಲಾಗುವ ಲಿಂಬೆಹುಳಿಯೂ ಫಲವಂತಿಕೆಯ ಆಚರಣೆಗೆ ಪೂರಕವಾಗುವ ವಿಚಾರವಾಗಿದೆ.

ಕಂಬುಲದ ದಿನ ಬೆಳಿಗ್ಗೆ ಕೊರಗರು ಕೋಣಗಳಂತೆ ನಟಿಸುವುದನ್ನು ಮನರಂಜನೆ ಎಂದೇ ಇದುವರೆಗೆ ಭಾವಿಸಲಾಗಿದೆ. ಆದರೆ ಅದು ಕೇವಲ ಮನರಂಜನೆಯಲ್ಲ. ಕೊರಗರು ಕೋಣಗಳಾಗಿ ಗದ್ದೆಯಲ್ಲಿ ಓಡುವುದರ ಮೂಲಕ ಗದ್ದೆಯನ್ನು ದುಷ್ಟಶಕ್ತಿಗಳ ಕೆಟ್ಟಕಣ್ಣಿನಿಂದ ಮುಕ್ತಗೊಳಿಸುತ್ತಾರೆ. ಗದ್ದೆಯನ್ನು ಹೀಗೆ ಮುಕ್ತಗೊಳಿಸಿ, ಸುರಕ್ಷಿತಗೊಳಿಸಿದ ಅನಂತರವೇ ಭೂಮಾಲಕರ ಕೋಣಗಳು ಕಂಬುಲದ ಗದ್ದೆಗೆ ಇಳಿಯುತ್ತವೆ. ಇಲ್ಲಿಯೂ ಕೊರಗರಿಗೆ ಮಾತ್ರ ಕೋಣಗಳಾಗಿ ಪರಿವರ್ತನೆ ಹೊಂದುವ ಶಕ್ತಿ ಬರುವುದಕ್ಕೆ ಅವರು ಪ್ರಕೃತಿ ಹೊಂದಿರುವ ಸಂಬಂಧವೇ ಕಾರಣವಾಗಿರಬೇಕು. ಜನಪದರು ಪ್ರಾಣಿವರ್ಗ ಮತ್ತು ಸಸ್ಯವರ್ಗದ ಜೊತೆ ಹೊಂದಿರುವ ಸಂಬಂಧವನ್ನು ನಾನು ಬೇರೊಂಡೆಡೆ ಇನ್ನಷ್ಟು ವಿವರಿಸಿದ್ದೇನೆ. [ಬಿಳಿಮಲೆ 1986 : 161] ಕಂಬುಲದಲ್ಲಿಯೂ ಕೊರಗರು ನೇರವಾಗಿ ಪ್ರಾಣಿಗಳಾಗಿ ಪರಿವರ್ತನೆ ಹೊಂದುವ ಶಕ್ತಿಯನ್ನು ಪಡೆದಿದ್ದಾರೆ. ಜೊತೆಗೆ ಗದ್ದೆಯಲ್ಲಿ ಇದ್ದಿರಬಹುದಾದ ಕೆಟ್ಟ ದೃಷ್ಟಿಗಳನ್ನು ತಮ್ಮ ಮೇಲೆ ಆವಾಹಿಸಿಕೊಂಡು, ಗದ್ದೆಯನ್ನು ಸುರಕ್ಷಿತಮಾಡಿಕೊಡುವ ಶಕ್ತಿಯನ್ನೂ ಅವರು ಹೊಂದಿದ್ದಾರೆ. ತುಳುನಾಡಿನ ಇತರೆಡೆಗಳಲ್ಲಿ ಬೇರೆ ಬೇರೆ ಜಾತಿಯ ಜನರು, ತಮ್ಮ ಮಕ್ಕಳಿಗೆ ಖಾಯಿಲೆ ಬಂದರೆ, ಅದನ್ನು ಕೊರಗರಿಗೆ ದಾಟಿಸುವ ಕೆಲಸ ಮಾಡುತ್ತಾರೆ. ಯಾವುದೇ ರೋಗವನ್ನು ತಮಗೆ ಆವಾಹಿಸಿಕೊಳ್ಳುವ ಶಕ್ತಿ ಕೊರಗರಿಗೆ ಇರುವುದರಿಂದಲೇ ಅವರು ಕಂಬುಲದ ಗದ್ದೆಯನ್ನೂ ಸುರಕ್ಷಿತಗೊಳಿಸುತ್ತಾರೆ.

ಕಂಬುಲದ ದಿನದಂದು ಕಂಬುಲದ ಯಜಮಾನರ ಕೋಣಗಳೇ ಗದ್ದೆಗೆ

ಮೊದಲು ಇಳಿಯಬೇಕು. ಹಾಗೆ ಇಳಿಯುವ ಮುನ್ನ ಯಜಮಾನರು ನಾಗಪೂಜೆಯನ್ನು ಮಾಡುತ್ತಾರೆ. ನಾಗನಿಗೆ ಅರ್ಪಿಸಲಾಗುವ ಅಡಿಕೆಯ ಪಿಂಗಾರವನ್ನು ಕಂಬುಲದ ಕೋಣಗಳ ಹಣೆಗೆ ಕಟ್ಟಲಾಗುತ್ತದೆ. ತುಳುನಾಡಿನಲ್ಲಿ ನಾಗನ ಆರಾಧನೆ ಮಾಡುವುದು ಮೂಲತಃ ಮಕ್ಕಳನ್ನು ಪಡೆಯುವುದಕ್ಕೆ, ಅಂದರೆ ಮನುಷ್ಯರ ಫಲವಂತಿಕೆಯ ಆಸೆಗೂ, ನಾಗನಪೂಜೆಗೂ ಸಂಬಂಧವಿದೆ. ಜೊತೆಗೆ ಅಡಿಕೆಯ ಪಿಂಗಾರವು ಮದುವೆಯಲ್ಲಿ ಅಗತ್ಯವಾಗಿ ಬಳಸಲ್ಪಡುವ ವಸ್ತುವಾಗಿದೆ. ಪಿಂಗಾರದ ಒಳಗಡೆಗೆ ಇರುವ ಸಾವಿರಾರು ಅಡಿಕೆ ಹೂಗಳು ಮತ್ತು ಅಡಿಕೆಯ ಚಿಕ್ಕ ಕಾಯಿಗಳು ಸಂತಾನದ ಸಮೃದ್ಧತೆಯನ್ನು ಸಂಕೇತಿಸುತ್ತದೆ. ಇದಕ್ಕಾಗಿ ಮದುಮಕ್ಕಳಿಗೆ ಪಿಂಗಾರದಿಂದ ಮಾಡಿದ ಮಾಲೆಯನ್ನು ಹಾಕುತ್ತಾರೆ. ಹಣೆಗೆ ಪಿಂಗಾರದಿಂದ ಮಾಡಿದ 'ಬಾಸಿಂಗ'ವನ್ನು ಕಟ್ಟುತ್ತಾರೆ. ಕೇರಳದ ಉತ್ತರ ಭಾಗ ಮತ್ತು ತುಳುನಾಡಿನ ದಕ್ಷಿಣ ಭಾಗದಲ್ಲಿ ಮದುವೆಯ ದಿನ ಒಂದು ಕಳಸೆಯತುಂಬ ಅಕ್ಕಿಯನ್ನು ತುಂಬಿಸಿ, ಅದರ ಮಧ್ಯಭಾಗದಲ್ಲಿ ಪಿಂಗಾರದ ಒಂದು ಗೊಂಚಲನ್ನು ನೆಟ್ಟು, ಅದನ್ನು ಅಡುಗೆ ಮನೆಯಲ್ಲಿ ಇರಿಸುತ್ತಾರೆ. ವಧೂವರರು ಅದಕ್ಕೆ ಕೈ ಮುಗಿಯುತ್ತಾರೆ. ಇಲ್ಲಿ ಅಕ್ಕಿಯು ಹಸಿವು ಮತ್ತು ಭೂಮಿಯ ಒಡತನವನ್ನು, ಪಿಂಗಾರವು ಸಂತಾನವನ್ನು ಸಂಕೇತಿಸುತ್ತದೆಂಬುದನ್ನು ನಾನು ಬೇರೊಂದೆಡೆ ಸ್ಪಷ್ಟವಾಗಿ ವಿವರಿಸಿದ್ದೇನೆ. [ಬಿಳಿಮಲೆ 1988 : 42]. ಪಿಂಗಾರದ ಅರಸಿನ ಬಣ್ಣವೂ ಶುಭಸೂಚಕವಾಗಿದ್ದು, ಅದು ನಾಗರ ಹಾವಿನ ಬಣ್ಣವೂ ಆಗಿದೆ. ಮದುವೆಯ ಹಿಂದಿನ ದಿನ ವಧೂವರರ ಮೈಗೆ ಅರಶಿನವನ್ನು ತಿಕ್ಕಲಾಗುತ್ತದೆ. ಕಂಬುಲದ ದಿನವೂ ಅಕ್ಕಿ ಬೆಳೆಯುವ ಭೂಮಿಯನ್ನು ಉಳುವ ಕೋಣಗಳ ಮೈಗೆ ಪಿಂಗಾರವನ್ನು ಕಟ್ಟಲಾಗುತ್ತದೆ. ಕೋಣಗಳ ಕೊರಳಿಗೆ ಲಿಂಬೆ ಹುಳಿಯನ್ನೂ ಕಟ್ಟಲಾಗುತ್ತದೆ. ರಾತ್ರಿಯಿಡೀ ಕುಣಿಯುವ, ಲೈಂಗಿಕ ಚಟುವಟಿಕೆಗಳಲ್ಲಿ ಮಗ್ನರಾಗಿರುವ ಕೊರಗರಿಗೂ ಮರುದಿನ ಬೆಳಿಗ್ಗೆ ಲಿಂಬೆ ಹುಳಿಯನ್ನು ಗೌರವಾರ್ಥ ನೀಡುತ್ತಾರೆ. ಇದನ್ನೆಲ್ಲ ಗಮನಿಸಿದರೆ ಕಂಬುಲದೊಂದಿಗೆ ಸಂಬಂಧ ಹೊಂದಿರುವ ನಾಗಪೂಜೆಯೂ ಫಲವಂತಿಕೆಯ ಆಚರಣೆಯನ್ನೇ ಸಂಕೇತಿಸುತ್ತದೆ ಎನ್ನಬಹುದು. ಯಜಮಾನರ ಕೋಣಗಳೇ ಮೊದಲು ಓಡ ಬೇಕಾದ ವಿಧಿಯೂ ಜಮೀನು ಮತ್ತು ಸಂತಾನದ ಮೇಲೆ ಅವರಿಗಿರುವ ಒಡೆತನವನ್ನು ವಿವರಿಸುತ್ತದೆ.

ಓಟದ ಕೋಣಗಳ ಸ್ಪರ್ಧೆ ಮುಗಿದ ಅನಂತರ ಕೊನೆಯಲ್ಲಿ, ಗದ್ದೆಯ ಮಧ್ಯದಲ್ಲೊಂದು ಕಂಬವನ್ನು ನೆಡುತ್ತಾರೆ. ಈ ಕಂಬಕ್ಕೆ 'ನಾಗ ಧ್ವಜ' ಎಂಬ ಹೆಸರಿದೆ. ನಾಗ ಧ್ವಜವನ್ನು ಸಾಮಾನ್ಯವಾಗಿ ಅರಸಿನ ಬಣ್ಣದ ಹೂಗಳಿಂದ ಅಲಂಕರಿಸುತ್ತಾರೆ. ಈ ಕಂಬವನ್ನು ಗದ್ದೆಯಲ್ಲಿ ನೆಡುವ ಮುನ್ನ, ನೆಡುವ ಜನಕ್ಕೆ ಸ್ವಲ್ಪ ಹಾಲನ್ನು ಎರೆಯಾಗುತ್ತದೆ. ಈ ಕ್ರಿಯೆಗಳು ನಾನು ಮೇಲೆ ಹೇಳಿದ ಫಲವಂತಿಕೆಯ ಆಚರಣೆಯನ್ನೇ ಸಂಕೇತಿಸುವ ವಿವರಗಳಾಗಿವೆ.

ಇದರ ಜೊತೆಗೆ ಇನ್ನೂ ಎರಡು ಅಂಶಗಳನ್ನು ಪರಿಶೀಲಿಸಿಕೊಳ್ಳಬೇಕು.

ಆವೆರಡೂ ನಿಷೇಧಗಳಾಗಿವೆ. ಮೊದಲನೆಯದು, ಕಂಬುಲದ ಗದ್ದೆಗೆ ಮುಟ್ಟಾದ ಹೆಂಗಸರು ಇಳಿಯಬಾರದು ಎನ್ನುವ ನಿಷೇಧಕ್ಕೆ ಸಂಬಂಧಿಸಿದೆ. ಎರಡನೆಯದು ವಂಡಾರು ಕಂಬುಲದ ಪರಿಸರದಲ್ಲಿ ಇರುವಂಥದ್ದು : ವಂಡಾರು ಕಂಬುಲ ನಡೆಯುವ ಮುನ್ನ ಮದುವೆಯಾದವರು ಕಂಬುಲ ನಡೆಯದೆ ಸಂಭೋಗಿಸಬಾರದು ಎನ್ನುವ ನಿಷೇಧಕ್ಕೆ ಸಂಬಂಧಿಸಿದೆ. ಇವೆರಡೂ ನಿಷೇಧಗಳು ಅಥವಾ ನಂಬುಗೆಗಳು ಮಾನವನ ಲೈಂಗಿಕ ಸಂಭೋಗಕ್ಕೂ ಕಂಬುಲದ ಆಚರಣೆಗೂ ಇರುವ ಸಂಬಂಧವನ್ನು ಸೂಚಿಸುತ್ತದೆ. ಗದ್ದೆಯ ಫಲವಂತಿಕೆ ಮತ್ತು ಮಾನವನ ಫಲವಂತಿಕೆಯಲ್ಲಿ ಪ್ರಕೃತಿಯ ಗೆಲುವನ್ನು ಈ ನಿಷೇಧಗಳು ಸ್ಪಷ್ಟಪಡಿಸುತ್ತವೆ. ಜೊತೆಗೆ ಪ್ರಕೃತಿಯನ್ನು ಬಿಟ್ಟು ಸಾಗಲಾರದ ಮಾನವನ ಫಲವಂತಿಕೆಯನ್ನು ಅವು ಹೇಳುತ್ತವೆ.

ಮೇಲಿನ ವಿವರಣೆಗಳನ್ನು ಗಮನಿಸಿದಾಗ, ನಾವು ಇದುವರೆಗೆ ಭಾವಿಸಿದಂತೆ, ಕಂಬುಲವು ಕೇವಲ ಓಟದ ಕೋಣಗಳ ಸ್ಪರ್ಧೆಯಲ್ಲವೆಂದೂ, ಅದು ಫಲವಂತಿಕೆಯ ಆಚರಣೆಯನ್ನು ಸಂಕೇತಿಸುತ್ತದೆಂಬುದೂ ಖಚಿತವಾಗುತ್ತದೆ. ಬೀಜವನ್ನು ಒಡೆದ ಕೋಣಗಳು ಕಂಬುಲದ ಗದ್ದೆಗೆ ಇಳಿಯದೇ ಇರುವುದು ಮೇಲಿನ ನಿರ್ಣಯಕ್ಕೆ ಪೂರಕವಾದ ಇನ್ನೊಂದು ಅಂಶ.

ಕೋಣಗಳ ಸ್ಪರ್ಧೆಯಲ್ಲಿ ಭಾಗವಹಿಸುವವರಲ್ಲಿ ಅನೇಕ ಜಾತಿಗಳ ಜನರಿದ್ದರೂ ಬಂಟರದ್ದೇ ಪ್ರಥಮ ಸ್ಥಾನ. ಬಂಟರು ಕಂಬುಲದ ಜೊತೆ ಹೊಂದಿರುವ ಮಾನಸಿಕ ಸಂಬಂಧವು ತುಂಬಾ ಸೂಕ್ಷ್ಮವಾದುದು. ವರ್ಷದ ಬಹುತೇಕ ಸಮಯವನ್ನು ಬಂಟರು ಕಂಬುಲದ ಕೋಣಗಳೊಂದಿಗೆ ಕಳೆಯುತ್ತಾರೆ. ಅವುಗಳ ಆಹಾರದಬಗ್ಗೆ, ವಸತಿಬಗ್ಗೆ, ಓಟಗೆ ಬಗ್ಗೆ, ಓಡಿಸುವವನ ಬಗ್ಗೆ ಅವರು ಮಾತಾಡುತ್ತಲೇ ಇರುತ್ತಾರೆ. ಕೋಣಗಳನ್ನು ಜೊತೆ ಮಾಡುವುದು, ಒಳ್ಳೆಯ ಒಂದು ಜೊತೆ ಕೋಣ ಕಂಡಾಗ ಅದನ್ನು ತೀಕ್ಷ್ಣವಾಗಿ ವೀಕ್ಷಿಸುತ್ತಾ ನಿಲ್ಲುವುದು ಬಂಟರ ಸಾಮಾನ್ಯ ಜಾಯಮಾನ. ಕಂಬುಲದ ದಿನವಂತೂ ಬಂಟರು ಮತ್ತು ಕೋಣಗಳು ಒಂದೇ ಆಗಿ ಬಿಡುತ್ತಾರೆ. ಓಟದ ಸಂದರ್ಭದಲ್ಲಿ ಸಾಮಾನ್ಯವಾಗಿ ಕೋಣದ ಯಜಮಾನರ ಹೆಸರುಗಳನ್ನೇ ಧ್ವನಿವರ್ಧಕದಲ್ಲಿ ಕರೆದು ಹೇಳುತ್ತಾರೆ. ಕೇವಲ ಧ್ವನಿವರ್ಧಕದ ಸ್ವರವನ್ನು ಮಾತ್ರ ಕೇಳುವವನಿಗೆ ನಿಜವಾಗಿ ಇಲ್ಲಿ ಇಬ್ಬರು ಬಂಟರು ಓಡುತ್ತಿದ್ದಾರೆ' ಎಂದು ಅನ್ನಿಸಿದರೆ ಆಶ್ಚರ್ಯವಿಲ್ಲ. ಈ ಮಟ್ಟಿನ ಸಮನ್ವಯವು ಬೇರಾವ ಆಚರಣೆಯಲ್ಲೂ ಕಾಣುವುದಿಲ್ಲ. ಓಟದ ಸಂದರ್ಭದಲ್ಲಿ ಕೋಣಗಳ ಹೆಸರೇ ಮರೆಯಾಗಿ ಯಜಮಾನರ ಹೆಸರುಗಳೇ ವಿಜೃಂಭಿಸುತ್ತವೆ. ಈಚಿನ ದಿನಗಳಲ್ಲಿ ಬಿಲ್ಲವರ ಹೆಸರು ಬಲವಾಗಿ ಕೇಳಿಬರುತ್ತಿದೆ. ಈ ಬಗೆಯ ಜನಾಂಗದ ತೊಡಗಿಸಿಕೊಳ್ಳುವಿಕೆ ಕೇವಲ ಆಕಸ್ಮಿಕ ಇರಲಾರದು. ಭೂಮಾಲಿಕರಾಗಿ ಬಂಟರೇ ಇರುವುದು ಇದಕ್ಕೆ ಮೇಲ್ನೋಟದ ಕಾರಣವೆಂಬಂತೆ ತೋರಿದರೂ ಆಳದಲ್ಲಿ ಅದಕ್ಕೂ ಮಿಗಿಲಾದ, ಗಹನವಾದ ಕಾರಣಗಳಿರಬೇಕೆಂದು ತೋರುತ್ತದೆ.

ಜಾನಪದದ ಅಧ್ಯಯನ ಸಂದರ್ಭದಲ್ಲಿ ಕೌಟುಂಬಿಕ ಸಂದರ್ಭವೊಂದರ

ಪರಿಶೀಲನೆಯ ಅಗತ್ಯ ಮತ್ತು ಅದರ ಪರಿಣಾಮವನ್ನು ಕುರಿತು ನಾನು ಪ್ರತ್ಯೇಕ ಲೇಖನವೊಂದರಲ್ಲಿ ಚರ್ಚಿಸಿದ್ದೇನೆ [ಬಿಳಿಮಲೆ 1989 : 81]. ಅದು ಇಲ್ಲಿಗೂ ಪ್ರಸ್ತುತವಾಗುತ್ತದೆ. ಬಂಟರು ಮತ್ತು ಬಿಲ್ಲವರು ಮಾತೃಮೂಲೀಯ ಕುಟುಂಬ ವ್ಯವಸ್ಥೆಗೆ ಸೇರಿದವರು. ಇಲ್ಲಿ ಆಸ್ತಿ ಅಧಿಕಾರವು ತಾಯಿಯಿಂದ ಹೆಣ್ಣು ಮಕ್ಕಳಿಗೆ ಬರುತ್ತದೆ. ಇಲ್ಲಿ ಮದುವೆಯ ನಂತರ ಹೆಣ್ಣು ಗಂಡಿನ ಮನೆಗೆ ಹೋಗದೆ, ಗಂಡೇ ಹೆಣ್ಣಿನ ಮನೆಗೆ ಹೋಗುತ್ತಾನೆ. ಇದನ್ನೇ 'ಅಳಿಯ ಕಟ್ಟು' ಸಂಪ್ರದಾಯ ಎನ್ನಲಾಗುತ್ತದೆ. ಈ ಸಂಪ್ರದಾಯದಲ್ಲಿ ಹೆಣ್ಣಿನ ಶಕ್ತಿ ಗಂಡಿಗಿಂತ ಅಧಿಕವಾಗಿರುತ್ತದೆ. ಈ ಕಾರಣಕ್ಕೇನೆ ಬಂಟ ಜನಾಂಗಕ್ಕೆ ಮನೆಯ ಒಳಗೆ ಅಧಿಕಾರ ಕಡಮೆ. ಇದನ್ನು ತುಂಬಿಕೊಳ್ಳಲು ಬಂಟರು ಮನೆಯ ಹೊರಗಡೆ ತಮ್ಮ ಶಕ್ತಿಗೆ ನೆಲೆಯನ್ನು ಕಂಡು ಕೊಳ್ಳಬೇಕಾಗುತ್ತದೆ. ಕಂಬುಲ ಮತ್ತು ಕೋಳಿಕಟ್ಟ ಅಂಥ ಬಲಿಷ್ಠ ನೆಲೆಗಳಾಗಿವೆ. ಈ ಕಾರಣದಿಂದಲೇ ಕಂಬುಲ ಮತ್ತು ಕೋಳಿಕಟ್ಟಗಳೆರಡರಲ್ಲೂ ಗಂಡಸಿನ ಅಹಂಕಾರವೇ ವಿಜೃಂಭಿಸುತ್ತದೆ. ಕೋಣಗಳು ಓಡಿ ಬಂದು ಮಂಜೊಟ್ಟಿಯನ್ನು ತಲುಪಿದ ಅನಂತರವೂ ಕೋಣಗಳಿಗೆ ರಪರಪನೆ ಬಾರಿಸುವಲ್ಲಿ ಇದು ಸರಿಯಾಗಿ ಕಾಣುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಕಂಬುಲ ಮತ್ತು ಕೋಳಿ ಕಟ್ಟಗಳು ಪುರುಷ ಪರ್ಯಾಯಗಳೆಂಬಂತೆ ತೋರುತ್ತವೆ. ಮನೆಯಲ್ಲಿ ಕಳಕೊಂಡ ಅಧಿಕಾರವನ್ನು ಹೊರಗೆ ತುಂಬಿಕೊಳ್ಳುವ ಮಾನವ ಪ್ರಯತ್ನ.

ಕಂಬುಲದ ಸುತ್ತ ಅನೇಕ ವಿಧದ ನಂಬಿಕೆಗಳು, ಐತಿಹ್ಯಗಳು ಮತ್ತು ಆಚರಣೆಗಳು ಹುಟ್ಟಿಕೊಂಡಿವೆ. ಕಂಬುಲದ ಗದ್ದೆಯ ಸುತ್ತ ಅಕ್ಕಿಯನ್ನು ಹರಡಿದರೆ ಮಾನವರಿಗೆ ಮತ್ತು ಜಾನುವಾರುಗಳಿಗೆ ಅಂಟಿದ ರೋಗ ನಿವಾರಣೆಯಾಗುತ್ತದೆಂದು ಭಾವಿಸಲಾಗಿದೆ. 'ಮಂಜೊಟ್ಟಿಗೋಣ'ನ ಕತೆಯು ಕಂಬುಲದ ಕೋಣಗಳನ್ನು ಓಡಿಸುವ ವೀರನೊಬ್ಬನ ದುರಂತವನ್ನು ಬಣ್ಣಿಸುತ್ತದೆ. ಅಗೋಳಿಮಂಜಣ್ಣನೆಂಬ ಸ್ಥಳೀಯ ವೀರನೊಬ್ಬನು ಮುಲ್ಕಿ ಅರಸು ಕಂಬುಲದ ಗದ್ದೆಯನ್ನು ಮಾಡಿದನೆಂಬ ಪ್ರತೀತಿ ಇದೆ. 'ಕಾಂತಾ ಬಾರೆ–ಬೂದಾಬಾರೆ'ಗಳೆಂಬ ತುಳುನಾಡ ವೀರರು ಪಡುಬಿದ್ರೆ ಕಂಬುಲ ಗದ್ದೆಯ ಮಂಜೊಟ್ಟಿಯನ್ನು ಒದ್ದು ಓರೆ ಮಾಡಿದರೆಂದು ಜನರು ನಂಬುತ್ತಾರೆ. 'ಕಂಬಳಿತ್ತಾಯ' ಎಂಬ ಭೂತವನ್ನು ಕಂಬುಲದ ಅಂಗವಾಗಿ ಆರಾಧಿಸುತ್ತಾರೆ. ಈ ಭೂತವು ಗದ್ದೆಯಲ್ಲಿರುವ ಬೆಳೆಯನ್ನು ರಕ್ಷಿಸುತ್ತದೆ ಎನ್ನಲಾಗಿದೆ. 'ಕೋಟಿ–ಚನ್ನಯ' ಪಾಡ್ದನದಲ್ಲಿ 'ಕಂಬುಲದ ಕಟ್ಟಪುಣಿ'ಯ ಉಲ್ಲೇಖವಿದೆ.

ಕಂಬುಲ ನಡೆಯುವ ದಿವಸದಂದು ಊರಿನ ನ್ಯಾಯತೀರ್ಮಾನವು ನಡೆಯುತ್ತಿರುವುದರಿಂದ, ಕಂಬುಲಕ್ಕೆ ನ್ಯಾಯಾಂಗ ವ್ಯವಸ್ಥೆಯ ಆಯಾಮವೂ ಲಭಿಸಿದೆ. ವರ್ತಮಾನ ಕಾಲದಲ್ಲಿ ಕಂಬುಲದ ಕೋಣಗಳನ್ನು ಓಡಿಸುವವನ ಮೂರು ತಿಂಗಳ ಉತ್ಪತ್ತಿ 10 ರಿಂದ 15 ಸಾವಿರ ರೂಪಾಯಿಗಳವರೆಗೂ ಇದೆ. ತುಳುನಾಡಿನಲ್ಲಿ ಇಂಥವರ ಸಂಖ್ಯೆ ಸುಮಾರು 30 ಇದೆ. ಕಂಬುಲದ ದಿನದಂದು ಸಾವಿರಾರು ಜನ

ಕಲೆಯುತ್ತಾರೆ. ಕೃಷಿ ಸಾಮಗ್ರಿಗಳ ಮಾರಾಟ ವ್ಯವಸ್ಥೆಯೂ ಇರುತ್ತದೆ. ಈ ನಿಟ್ಟಿನಲ್ಲಿ ಕಂಬುಲಕ್ಕೆ ಒದಗಿದ ಆರ್ಥಿಕ ಆಯಾಮವೂ ಅಧ್ಯಯನ ಯೋಗ್ಯವಾದುದು.

ಇವೆಲ್ಲವನ್ನೂ ಗಮನಿಸಿದರೆ ಕಂಬುಲವು ಕೇವಲ ಓಟದ ಕೋಣಗಳ ಸ್ಪರ್ಧೆಯೂ ಅಲ್ಲ, ಜನಪದರ ಮನರಂಜನಾ ಸಾಮಗ್ರಿಯೂ ಅಲ್ಲ, ಬದಲಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ ಆಯಾಮವುಳ್ಳ ಫಲವಂತಿಕೆಯ ಆಚರಣೆ ಎಂಬುದು ಖಚಿತವಾಗುತ್ತದೆ. ಈ ಲೇಖನದ ಉದ್ದೇಶವೂ ಅಷ್ಟೇ ಆಗಿದೆ.*

---

* ತಿರುವನಂತಪುರದಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ : 1–3–1990.

ಅಡಿಟಿಪ್ಪಣಿಗಳು

1. ಅಸ್ಪೃಶ್ಯ ಜನಾಂಗಕ್ಕೆ ಸೇರಿದ ಕೊರಗರ ಬಗ್ಗೆ ಇತರ ವಿವರಣೆಗಳಿಗಾಗಿ ನೋಡಿರಿ: ಅಮೃತ ಸೋಮೇಶ್ವರ 1979.

2. ಕೊರಗು ತನಿಯ ಭೂತದ ವಿವರಣೆಗಾಗಿ ನೋಡಿರಿ : ವಿವೇಕ ರೈ 1985 ಮತ್ತು ಚಿನ್ನಪ್ಪಗೌಡ 1988.

3, ಕಂದೆಲ್ ತಡ್ಯೆ : ಇದು ಒಂದು ಬಗೆಯ ತಿಂಡಿ. ಅಕ್ಕಿಯನ್ನು ಚೆನ್ನಾಗಿ ಅರೆದು. ಅದಕ್ಕೆ ಹುಳಿ ಹೆಂಡ ಸೇರಿಸಿ, ಒಂದು ರಾತ್ರಿ ಇಟ್ಟರೆ ಅಕ್ಕಿಯ ಹಿಟ್ಟು ಚೆನ್ನಾಗಿ ಉಬ್ಬುತ್ತದೆ. ಅದನ್ನು ಒಂದು ಮಡಕೆಗೆ ತುಂಬಿಸಿ, ಇಡೀ ಮಡಕೆಯನ್ನೇ ಬೆಂಕಿಯಲ್ಲಿ ಬೇಯಿಸುತ್ತಾರೆ. ಅನಂತರ ಮಡಕೆಯನ್ನು ಒಡೆದು ತೆಗೆದು, ಒಳಗಿನ ಮಡಕೆಯಾಕಾರದ 'ಅಡ್ಯೆ' (ತಿಂಡಿ)ಯನ್ನು ತಿನ್ನುತ್ತಾರೆ. ಕಂಬುಲ ಬಿಟ್ಟರೆ ಬೇರೆಕಡೆ ಇಂಥ ಅಡ್ಯೆ ಮಾಡಿ ತಿನ್ನುವುದು ನನ್ನ ಗಮನಕ್ಕೆ ಬಂದಿಲ್ಲ.

4. ಉರಲ್‌ಗಳ ಬಗೆಗಣ ಹೆಚ್ಚಿನ ವಿವರಗಳಿಗಾಗಿ ನೋಡಿರಿ–ವಿವೇಕ ರೈ 1985: 290·

5. ಇಲ್ಲಿ ಪ್ರೇಕ್ಷಕರನ್ನು ತುಂಬ ಸೀಮಿತವಾದ ಅರ್ಥದಲ್ಲಿ ಗ್ರಹಿಸಿದ್ದೇನೆ. ಕೊರಗರ ದೋಲಿನ ಸದ್ದು ಕಂಬುಲ ಗದ್ದೆಯ ಸುತ್ತಮುತ್ತಲಿರುವ ಮನೆಗಳಿಗೆ ಕೇಳುತ್ತದೆ. "ಅ ಕೊರಗೆರ್ನವು ಸುರು ಅಂಡ್" (ಹಾ....ಕೊರಗರದ್ದು ಸುರು ಆಯಿತು) ಎಂದು ಮನೆಯವರು ಹೇಳುತ್ತಿರುತ್ತಾರೆ. ಆದರೆ ನೇರವಾಗಿ ಕೊರಗರು ಕುಣಿವಸ್ಥಳಕ್ಕೆ ಅವರ್‍ಯಾರೂ ಬರುವುದಿಲ್ಲ. 'ಮರ್ಯಾದಸ್ಥರು' ಅಲ್ಲಿಗೆ ಹೋಗಬಾರದು ಎಂದು ಸಾಮಾನ್ಯ ಜನರು ಆಡಿಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಕೊರಗರ ಕುಣಿತಕ್ಕೆ ಪರೋಕ್ಷ ಪ್ರೇಕ್ಷಕರು ಇದ್ದಾರೆ, ನೇರವಾಗಿ ಇಲ್ಲ.

6. ಎಲ್ಲ ಕಂಬುಲದಲ್ಲಿಯೂ ಕೊರಗರೇ 'ಪನಿಕುಲ್ಲುವ' ಕೆಲಸ ಮಾಡುತ್ತಾರೆ. ಕದರಿಯಲ್ಲಿ ಈಚಿನ ದಿನಗಳಲ್ಲಿ ಮುಂಡಾಲರು ಈ ಕೆಲಸ ಮಾಡುತ್ತಾರೆ. ನಾನು ಭೇಟಿ ಮಾಡಿದ ಅನೇಕ ನಿರೂಪಕರು, ಮೊದಲು ಕೊರಗರೇ ಅಲ್ಲಿ ಕೂಡಾ 'ಪನಿಕುಲ್ಲುವ' ಕೆಲಸ ಮಾಡುತ್ತಿದ್ದರು ಎಂದು ಹೇಳಿದ್ದಾರೆ.

7. ಮೂಲ್ಕಿಯಲ್ಲಿ ಕಂಬುಲದ ಕೋಣದೊಂದಿಗೆ, ಮೂಲ್ಕಿ ಸಾವಂತರ ಕುಲದೈವವಾದ 'ಎರು ಬಂಟ' ನೆಂಬ ಭೂತ ನರ್ತಿಸಿಕೊಂಡು ಬರುತ್ತದೆ. ಈಚೆಗೆ ಅಷ್ಟ ಮಂಗಲ ಪ್ರಶ್ನೆ ಇರಿಸಿ ನೋಡಿದಾಗ ಆ ಭೂತವು 'ಎರು ಬಂಟ' ನಲ್ಲವೆಂದೂ, ಬದಲು 'ಪಂಜುರ್ಲಿ' ಎಂದೂ ಕಂಡದ್ದರಿಂದ 1988 ರಿಂದೀಚೆ ಆ ಭೂತವನ್ನು ಪಂಜುರ್ಲಿ ಎನ್ನಲಾಗುತ್ತಿದೆ. ಎಲ್ಲ ಕಡೆಯೂ ಮೂರ್ತದ ಎರುವಿನೊಂದಿಗೆ ಭೂತಗಳು ಬರುವ ಸಂಪ್ರದಾಯವಿಲ್ಲ.

8. ನಾನು ಕ್ಷೇತ್ರಕಾರ್ಯ ಮಾಡಿದ ಹೊತ್ತಿಗೆ (1985–1990) ಮೇಲಿನ ಓಟಗಳಲ್ಲಿ ಅಸಾಮಾನ್ಯ ಸಾಧನೆ ಪ್ರದರ್ಶಿಸಿ, ಒಂದಲ್ಲ ಒಂದು ಬಹುಮಾನ ಪಡೆದ ಕೋಣಗಳ ಯಜಮಾನರ ಹೆಸರುಗಳು ಈ ಕೆಳಗಿನಂತಿವೆ.

1. ಕಂಕನಾಡಿ ಜೆ. ರಾಮಪ್ಪ ಪೂಜಾರಿ (ಈಗ ಕಮಲಾ ಜೆ. ರಾಮಪ್ಪ)
2. ಕಾಡಬೆಟ್ಟು ನಾರಾಯಣ ರೈ
3. ಸೂರಿಂಜೆ ಗುತ್ತು ಸತೀಶ್ ಭಂಡಾರಿ
4. ಕೊಡಂಗೆ ಗರಡಿಮನೆ ಸುಂದರ ಪೂಜಾರಿ

5. ಎರ್ಮಾಳು ಫೂಲ ವಿಠಲ ಶೆಟ್ಟಿ
6. ಕುತ್ತೆತ್ತೂರು ಪುರಂದರ ವಿಠಲದಾಸ್
7. ಸುರತ್ಕಲ್ಲು ಮಾಧವ ಪ್ರಭು
8. ಮಿಜಾರು ಗುತ್ತು ಆನಂದ ಆಳ್ವ
9. ಪಾಕಬೆಟ್ಟು ಲಕ್ಕಣ್ಣ ಶೆಟ್ಟಿ
10. ಮುಂಡ್ಕೂರು ಜಯರಾಮ ಶೆಟ್ಟಿ
11. ಮುಂಡ್ಕೂರು ರಾಜು ಶೆಟ್ಟಿ
12. ಪೈಯೊಟ್ಟು ರುಕ್ಕರಾಮ ಸಾಲಿಯಾನ್
13. ಬಾರಾಡಿ ಬೂಡು ಜೀವಂಧರ ಬಲ್ಲಾಳ
14. ನೆಲ್ಲಿಗುಡ್ಡೆ ಹಸನೆ ಬ್ಯಾರಿ
15. ಕಾಪಾರ್ಡಿ ಮಂಜಪ್ಪ ಗೌಡ
16. ಕೊಳಕೆ ಕೃಷ್ಣ ಭಟ್ಟ.

9. "Selecting facts that require explanation is already an act of interpretation" (either 1983 :16)

10. ಈ ವಿವರ ನೀಡಿದ ನಿರೂಪಕರೆಂದರೆ, ಸಂಜೀವ ಸೋಮೇಶ್ವರ (1988), ಬಾಲಕೃಷ್ಣ ಶೆಟ್ಟಿ (1988), ಮನೋಹರ ಶೆಟ್ಟಿ (1989) ಮತ್ತು ಭೋಜು ಶೆಟ್ಟಿ (1989).

11. ಈ ಕಾರಣಕ್ಕೆ ನಾನು ಆರಂಭದ ಪುಟಗಳಲ್ಲಿ ನೀಡಿರುವ ವಿವರಣೆಯಲ್ಲಿ 'ಕಂಬುಲ' ಪದವನ್ನೇ ಬಳಸಿದ್ದೇನೆ.

12. ಕನ್ನಡದ ಪ್ರಾಚೀನ ಕಾವ್ಯಗಳಲ್ಲಿ 'ಪುಲ–ಪೊಲ' ಪದವು ಸಾಕಷ್ಟು ಬಾರಿ ಬಳಕೆಯಾಗಿದೆ. ಉದಾಹರಣೆಗೆ :

1. ಪೊಲನುಡುಗಿ ಬನ್ದು ದುಡಿದುದು ಪುಲ್ (ಪಂಪಭಾರತ 5-37).
2. 'ಪೊಲನಂ' (ಶಬ್ದಮಣಿದರ್ಪಣ 130)
3. ಪೊಲದಲ್ಲಿ ಇರ್ದಂ, ಪೊಲದೆ ಎಳ್ತಂದಂ (ಶಬ್ದಮಣಿದರ್ಪಣ 63)
4. ದಿಟ್ಟಿಗೆ ಪೊಲನಾದುದು ಪೊಂಬೆಟ್ಟಂ (ಶ್ರೀರಾಮಚಂದ್ರ ಚರಿತ ಪುರಾಣ 1–44)ಇತ್ಯಾದಿ.

13. "It seems significant therefore that culture has repeatedly come to use artificial noise for just the same kind of boundary marking purpose. Drum beating, horn blowing, cymbol clashing, the firing off guns and fire-crackers, the ringing of bells, organised cheering and so on are regularly used as markers of temporal and spatial boundaries, but the boundaries are metaphysical as well as physical (Leach 1976-63)

14. "Most of them, but especially the Koraga, are bonded labourers of what are called landlords (vargadar) and are called soil-bound (mannualu), birth-bound (Huttalu) or credit-bound (Honnalu) laboures. This seems to be the original association with the system of production in Kunara. Since they are

associated with the system of production and social organisation in which they are scavengers of settlements, lifting dead cattle, and are accustomed to eat cow-meat, they are avoided as polluting by the Brahmin, lorded over wherever the Brahman are powerful, and excluded from temple-centred tradition and life everywhere (SILVA 1985 : 86-87)

15. ಗಂತ್‌ನಿಂದ ಬಿಡಲ್ಪಟ್ಟ ಕೋಣಗಳು ನೇರವಾಗಿ ಓಡಿ ಬಂದು ಮಂಜೊಟ್ಟಿಯನ್ನು ತಲುಪುತ್ತವೆ. ಇಲ್ಲಿ 'ಮಂಜೊಟ್ಟಿ' ಪದದ ನಿಷ್ಪತ್ತಿ ಬಹಳ ಕೊಡಕಾದುದು. ಈ ಪದ ಬಹುಶಃ 'ಮಂಚ' ಮತ್ತು 'ಅಡಿ' ಎಂಬೆರಡು ಪದಗಳಿಂದ ಸಿದ್ಧಿಸಿದಂತೆ ತೋರುತ್ತದೆ. ಕೋಣಗಳು ತಲುಪುವ ಸ್ಥಳಕ್ಕಿಂತಲೂ ಸ್ವಲ್ಪ ಮುಂದುಗಡೆ ಇನ್ನಷ್ಟು ಎತ್ತರದಲ್ಲಿ ಮಂಚಗಳನ್ನು ಇಡುತ್ತಿದ್ದರು ಎಂದು ಹೇಳಲಾಗಿದೆ. ಆ ಮಂಚದಲ್ಲಿ ಕಂಬುಲಕ್ಕೆ ಬಂದ ಗಣ್ಯರೆಲ್ಲ ಕುಳ್ಳಿರುತ್ತಿದ್ದರು. ಈ ಮಂಚದ ಅಡಿಯೇ 'ಮಂಜೊಟ್ಟಿ' ಆಗಿರಬಹುದಾದ ಸಾಧ್ಯತೆ ಇದೆ.

ಆಧಾರ ಗ್ರಂಥಗಳು

1. ಅಮೃತ ಸೋಮೇಶ್ವರ 1978, ಅವಿಲು ; ಪುತ್ತೂರು : ಕನ್ನಡ ಸಂಘ.

2. ಅಮೃತ ಸೋಮೇಶ್ವರ 1979, ಕೊರಗರು; ಬೆಂಗಳೂರು : ಐಬಿಎಚ್ ಪ್ರಕಾಶನ

3. ಚಿತ್ತರಂಜನ್ ದಾಸ ಶೆಟ್ಟಿ 1983, ಕಂಬಳ; ಮೂಡಬಿದಿರೆ: ಸಾಗಶ್ರೀ ಪ್ರಕಾಶನ.

4. ಪುರುಷೋತ್ತಮ ಬಿಳಿಮಲೆ 1986, ಕರಾವಳಿ ಜನಪದ ಕಾವ್ಯದ ತಾತ್ತ್ವಿಕ ಹಿನ್ನೆಲೆ (ಸಾಧನೆ ಸಂಪುಟ 15, ಸಂಚಿಕೆ 3-4) ಬೆಂಗಳೂರು; ಬೆಂಗಳೂರು ವಿಶ್ವವಿದ್ಯಾನಿಲಯ.

5. ಪುರುಷೋತ್ತಮ ಬಿಳಿಮಲೆ 1988, ಅಕ್ಕಿ ಮತ್ತು ಮದುವೆ (ತರಂಗ 25 ಸೆಪ್ಟಂಬರ 1988 ಸಂ. ಸಂತೋಷಕುಮಾರ ಗುಲ್ವಾಡಿ) ಮಣಿಪಾಲ.

6. ಪುರುಷೋತ್ತಮ ಬಿಳಿಮಲೆ 1989, ಜನಪದ ಕತೆಯ ಪಾಠಾಂತರಗಳು ಸಂದರ್ಭ ಮತ್ತು ಅರ್ಥ (ಜಾನಪದ ಗಂಗೋತ್ರಿ, ಡಿಶಂಬರ 1989 ಸಂ. ಪುರುಷೋತ್ತಮ ಬಿಳಿಮಲೆ) ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,

7. ರಸಿಕ ಪುತ್ತಿಗೆ 1978, ಕಂಬಳ ಮತ್ತು ಕೋಳಿ ಅಂಕ; ಬೆಂಗಳೂರು: ಐಬಿಎಚ್ ಪ್ರಕಾಶನ.

8. ವಿವೇಕ ರೈ ಬಿ.ಎ. 1986, ಕಂಬಳ (ಮುಂಗಾರು ಸಂ. ವಡ್ಡರ್ಸೆ ರಘುರಾಮಶೆಟ್ಟಿ ಮಂಗಳೂರು

9. CULLER JONATHAN 1981, The Persuit of Signs; London : Routledge and Kegan Paul.

10. LEACH EDMUND 1976, Culture and Communication; Cambridge: Cambridge University Press.

11. SILVA WILLIE R. De 1985, From Rta to Dharma; Mangalore : Pragathi Prakshana.

ಯಾವ ಸಮಾಜದಲ್ಲಿ ಶ್ರೇಷ್ಠತಮ ಸತ್ಯಗಳ ಅನುಷ್ಠಾನ ಸಾಧ್ಯವಾಗುವುದೋ ಅದೇ ಶ್ರೇಷ್ಠ ಸಮಾಜ. ಇದೇ ನನ್ನ ಅಭಿಪ್ರಾಯ. ಸಮಾಜದಲ್ಲಿ ಶ್ರೇಷ್ಠ ಸತ್ಯವನ್ನು ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲದೆ ಇದ್ದರೆ ಅದು ಸಾಧ್ಯವಾಗುವಂತೆ ಮಾಡಿ ಅದನ್ನು ಎಷ್ಟು ಬೇಗ ಮಾಡಿದರೆ ಅಷ್ಟು ಒಳ್ಳೆಯದು. ಈ ರೀತಿ ಸ್ತ್ರೀ ಪುರುಷರು ಒಂದು ಆದರ್ಶಕ್ಕೆ ನಿಲ್ಲಬೇಕು. ಸತ್ಯವನ್ನು ಧೈರ್ಯವಾಗಿ ನಂಬಿ, ನಿರ್ಭಯವಾಗಿ ಅನುಷ್ಠಾನಕ್ಕೆ ತನ್ನಿ.

—ಸ್ವಾಮಿ ವಿವೇಕಾನಂದ

ನೀತಿಯುಗುರಿ, ಇದುವರೆಗೆ ಇರುವ ಮತ್ತು ಇನ್ನು ಮುಂದೆ ಬರುವ ವೈವಿಧ್ಯತೆಯನ್ನು ನಾಶಮಾಡಿ ಒಂದೇ ಆದರ್ಶವನ್ನು ಪ್ರಪಂಚಕ್ಕೆಲ್ಲಾ ಬೋಧಿಸುವುದಲ್ಲ, ಅದು ಎಂದಿಗೂ ಸಾಧ್ಯವೇ ಇಲ್ಲ. ಅದರಿಂದ ಸರ್ವ ನಾಶವಾಗುವುದು, ಮೃತ್ಯು ಸಂಭವಿಸುವುದು. ವೈವಿಧ್ಯತೆಯ ಹಿಂದೆ ಐಕ್ಯತೆಯನ್ನು ಕಾಣುವುದೇ ಆದರ್ಶ.

—ಸ್ವಾಮಿ ವಿವೇಕಾನಂದ

ನಿಜವ ಕಂಡವರಿಲ್ಲ, ನಿಜ ಕಾಣುವಂತಿಲ್ಲ, ನಿಜವೇನು ಮಳಲ ಹುಡಿಗಿಂತ ಕೀಳೆ?

—ಅಂಬಿಕಾತನಯದತ್ತ

ಸತ್ಪುರುಷರ ಶರೀರವು ಪರೋಪಕಾರದಿಂದ ಭೂಷಿತವಾಗಿರುತ್ತದೆಯೇ ಹೊರತು ಶ್ರೀಗಂಧದಿಂದಲ್ಲ.

ಡಾ|| ಆರ್. ಆರ್. ಕುಲಕರ್ಣಿ

ಕರ್ನಾಟಕ ರಾಜ್ಯದಲ್ಲಿ ಜಿಲ್ಲೆಗಳ ಹಾಗೂ ತಾಲ್ಲೂಕುಗಳ ಮರುವಿಂಗಡನೆಯ ಸಮಸ್ಯೆಗಳು

1956ರ ನವೆಂಬರ್ 1 ರಂದು ಸಂಯುಕ್ತ ಕರ್ನಾಟಕ ರಾಜ್ಯ ಅಥವಾ ಪುನರ್ಘಟಿತ ಕರ್ನಾಟಕ ರಾಜ್ಯವು ಉದಯವಾಯಿತು. 'ಬಿ' ಭಾಗದಲ್ಲಿದ್ದ ಸಮಗ್ರ ಹಳೆಯ ಮೈಸೂರು ಸಂಸ್ಥಾನ ಹಾಗೂ 'ಕ' ಭಾಗದಲ್ಲಿದ್ದ ಸಮಗ್ರ ಕೊಡಗು ರಾಜ್ಯ, ಮುಂಬಯಿರಾಜ್ಯದ, ಹೈದ್ರಾಬಾದ್ ರಾಜ್ಯದ ಹಾಗೂ ಮದ್ರಾಸ್ ರಾಜ್ಯದ ಕೆಲವು ಜಿಲ್ಲೆಗಳು ಸೇರ್ಪಡೆಗೊಂಡು ನೂತನ ಕರ್ನಾಟಕ ರಾಜ್ಯವು ಅಸ್ತಿತ್ವಕ್ಕೆ ಬಂದಿತು. ರಾಜ್ಯಗಳ ಪುನರ್‌ರಚನೆ ಕಾನೂನಿನ ಏಳನೆಯ ಕಲಂನಲ್ಲಿ ಸೇರ್ಪಡೆಗೊಂಡ ಪ್ರದೇಶ ಗಳನ್ನು ಈ ರೀತಿಯಾಗಿ ವಿವರಿಸಲಾಗಿದೆ.

(ಅ) ಹಳೆಯ ಮೈಸೂರಿನ ಎಲ್ಲ ಪ್ರದೇಶಗಳು.

(ಬ) ಚಂದಗಡ ತಾಲ್ಲೂಕನ್ನು ಹೊರತುಪಡಿಸಿದ ಬೆಳಗಾವಿ ಜಿಲ್ಲೆ, ವಿಜಾಪುರ ಜಿಲ್ಲೆ, ಧಾರವಾಡ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆ.

(ಕ) ಕೊಡಂಗಲೆ ಹಾಗೂ ತಾಂಡೂರು ತಾಲ್ಲೂಕುಗಳನ್ನು ಹೊರತುಪಡಿಸಿದ ಕಲ್ಬುರ್ಗಿ ಜಿಲ್ಲೆ, ಗದ್ವಾಯಿ ಹಾಗೂ ಅಲಂಪೂರ ತಾಲ್ಲೂಕುಗಳನ್ನು ಹೊರತುಪಡಿಸಿದ ರಾಯಚೂರು ಜಿಲ್ಲೆ, ಅಹಮ್ಮದಪೂರ ನೀಲಂಗಾ, ಉದಗೀರ, ಜಹೀರಾಬಾದ ಹಾಗೂ ನಾರಾಯಣಖೇಡ ತಾಲ್ಲೂಕು ಗಳನ್ನು ಹೊರತುಪಡಿಸಿದ ಬೀದರ ಜಿಲ್ಲೆ.

(ಡ) ಕಾಸರಗೋಡನ್ನು ಹೊರತುಪಡಿಸಿದ ದಕ್ಷಿಣ ಕನ್ನಡ ಜಿಲ್ಲೆ, ಅಮೀನ್ ದೀವ್ ನಡುಗಡ್ಡೆಗಳು ಹಾಗೂ ಕೊಯಿಮತ್ತೂರು ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕು.

(ಇ) ಹಳೆಯ ಕೊಡಗು ರಾಜ್ಯ.

ಈ ಎಲ್ಲ ಭಾಗಗಳ ಪರವಾಗಿ ನೂತನ ರಾಜ್ಯ ಬಂದಂತಹ ಪ್ರದೇಶ ಹಾಗೂ ಜನಸಂಖ್ಯೆಯ ವಿವರಗಳು ಈ ರೀತಿಯಾಗಿದೆ.

ಭಾಗಗಳು	ಪ್ರದೇಶ ಚದರ ಮೈಲುಗಳಲ್ಲಿ	ಜನಸಂಖ್ಯೆ (ಲಕ್ಷಗಳಲ್ಲಿ)
1. ಹಳೆಯ ಮೈಸೂರಿನಿಂದ ಬಂದ ಪ್ರದೇಶ	33,310	98,48,684
2. ಮುಂಬಯಿ ರಾಜ್ಯದಿಂದ ಬಂದ ಪ್ರದೇಶಗಳು	20,984	51,35,746
3. ಹೈದ್ರಾಬಾದ್ ರಾಜ್ಯದಿಂದ ಬಂದ ಪ್ರದೇಶಗಳು	13,789	27,18,296
4. ಮದ್ರಾಸ್ ರಾಜ್ಯದಿಂದ ಬಂದ ಪ್ರದೇಶಗಳು	4,313	14,69,825
5. ಹಳೆಯ ಕೊಡಗಿನಿಂದ ಬಂದ ಪ್ರದೇಶ	1,595	2,29,405

ಕೇಂದ್ರ ಸರಕಾರದಿಂದ ನೇಮಿಸಲ್ಪಟ್ಟ ರಾಜ್ಯ ಪುನರ್ಘಟನಾ ಆಯೋಗವು ಅತ್ತ ಕಡೆಗೆ ತನ್ನ ಕಾರ್ಯದಲ್ಲಿ ನಿರತವಾಗಿರುವಾಗ, ಇತ್ತ ಕಡೆಗೆ ಹಳೆಯ ಮೈಸೂರು ಸರಕಾರದಿಂದ ನೇಮಿಸಲ್ಪಟ್ಟ ಶೇಷಾದ್ರಿ ಸಮಿತಿಯು, ನೂತನ ಕರ್ನಾಟಕ ರಾಜ್ಯದಲ್ಲಿ ವಿಲೀನಗೊಳ್ಳಲಿರುವ ಹಳೆಯ ಕೊಡಗು ರಾಜ್ಯ ಜಿಲ್ಲೆಯು, ಹಳೆಯ ಹೈದರಾಬಾದ ಕರ್ನಾಟಕದ ಜಿಲ್ಲೆಗಳು, ಹಳೆಯ ಮುಂಬಯಿ ಕರ್ನಾಟಕದ ಜಿಲ್ಲೆಗಳು ಹಳೆಯ ಮದ್ರಾಸ್ ಕರ್ನಾಟಕದ ಜಿಲ್ಲೆಗಳು, ಶಿಕ್ಷಣ, ಜನಾರೋಗ್ಯ, ಗ್ರಾಮಾಭಿವೃದ್ಧಿ, ಉದ್ದಿಮೆಗಳು, ನೀರಾವರಿ ಹಾಗೂ ವಿದ್ಯುಚ್ಛಕ್ತಿ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿ ಹಾಗೂ ಹಳೆಯ ಮೈಸೂರಿನ ಜಿಲ್ಲೆಗಳು ಸಾಧಿಸಿದ ಪ್ರಗತಿಯ ಬಗ್ಗೆ ಅಂಕಿಸಂಖ್ಯೆಗಳನ್ನು ತಲೆಹಾಕುತ್ತ ಸಮೀಕ್ಷೆಯೊಂದನ್ನು ಕೈಗೊಂಡಿತ್ತು. ಶೇಷಾದ್ರಿ ಸಮಿತಿಯು ಈ ಎಲ್ಲ ಜಿಲ್ಲೆಗಳಲ್ಲಿಯ ಅಭಿವೃದ್ಧಿಯ ಮಟ್ಟದ ಬಗ್ಗೆ ಆಳವಾದ ಅಧ್ಯಯನ ನಡೆಸಿ ತನ್ನ ವರದಿಯನ್ನು ಸಲ್ಲಿಸಿತು. ವಿಲೀನವಾಗಲಿರುವ ಜಿಲ್ಲೆಗಳಲ್ಲಿಯ ಅಭಿವೃದ್ಧಿಯ ಮಟ್ಟವು ಹಳೆಯ ಮೈಸೂರಿನಲ್ಲಿಯ ಜಿಲ್ಲೆಗಳ ಅಭಿವೃದ್ಧಿಯ ಮಟ್ಟದೊಂದಿಗೆ ಹೋಲಿಸಿ ನೋಡಿದಾಗ ಅತ್ಯಂತ ಶೋಚನೀಯವಾಗಿದೆ ಎಂದು ಬಣ್ಣಿಸಿ ಕೆಲವೊಂದು ಸತ್ಯಸಂಗತಿಗಳನ್ನು ಹೊರಗೆಡಹಿತು. ಆ ವರದಿಯಲ್ಲಿ ಪ್ರಕಟವಾದ ಅಂಕಿಸಂಖ್ಯೆಗಳನ್ನು ಕೆಳಗೆ ಕಾಣಿಸಿದ ಪಟ್ಟಿಗಳಲ್ಲಿ ನಮೂದಿಸಲಾಗಿದೆ.

ಸಾರಿಗೆ ಸಂಪರ್ಕ

ಪ್ರದೇಶಗಳು	ರಸ್ತೆ ಸಾರಿಗೆಯ ಒಟ್ಟು ಮೈಲುಗಳು	ಪ್ರತಿ 100 ಮೈಲುಗಳಿಗೆ ಇರುವ ರಸ್ತೆ ಸೌಲಭ್ಯ
1. ಹಳೆಯ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು (3)	1604.5 ಮೈಲುಗಳು	8.6 ಮೈಲುಗಳು
2. ಹಳೆಯ ಮುಂಬಯಿ ಕರ್ನಾಟಕದ ಜಿಲ್ಲೆಗಳು (4)	4593 ಮೈಲುಗಳು	21.6 ಮೈಲುಗಳು
3. ಮದ್ರಾಸ್ (ಹಳೆಯ) ಕರ್ನಾಟಕದ ಜಿಲ್ಲೆಗಳು (1)	1275 ಮೈಲುಗಳು	26 ಮೈಲುಗಳು
4. ಹಳೆಯ ಕೊಡಗು ಪ್ರಾಂತದ ಜಿಲ್ಲೆಗಳು (1)	413 ಮೈಲುಗಳು	26.3 ಮೈಲುಗಳು
5. ಹಳೆಯ ಮೈಸೂರಿನ ಜಿಲ್ಲೆಗಳು (10)	10.848 ಮೈಲುಗಳು	36.7 ಮೈಲುಗಳು

ವೈದ್ಯಕೀಯ ಚಿಕಿತ್ಸೆ

ಪ್ರದೇಶಗಳು	ಪ್ರತಿಯೊಂದು ವೈದ್ಯಕೀಯ ಕೇಂದ್ರವು ಸಲ್ಲಿಸುತ್ತಿರುವ ಸೇವೆಯ ಕ್ಷೇತ್ರ (ಚದರ) ಪ್ರಮಾಣ—ಮೈಲುಗಳಲ್ಲಿ	ಪ್ರತಿಯೊಂದು ವೈದ್ಯಕೀಯ ಕೇಂದ್ರದಿಂದ ಸೇವೆ ಸಲ್ಲಿಸಲ್ಪಡುತ್ತಿರುವ ಜನಸಂಖ್ಯೆಯ ಪ್ರಮಾಣ
1. ಹಳೆಯ ಹೈದ್ರಾಬಾದ್ ಕರ್ನಾಟಕದ ಜಿಲ್ಲೆಗಳು	431	87,759
2. ಹಳೆಯ ಮುಂಬಯಿ ಕರ್ನಾಟಕದ ಜಿಲ್ಲೆಗಳು	225	62,098
3. ಹಳೆಯ ಮದ್ರಾಸ್ ಕರ್ನಾಟಕದ ಜಿಲ್ಲೆಗಳು	88	47,270
4. ಹಳೆಯ ಕೊಡಗು ಪ್ರಾಂತದ ಜಿಲ್ಲೆ	99	14,312
5. ಹಳೆಯ ಮೈಸೂರಿನ ಜಿಲ್ಲೆಗಳು	645	19,086

ಪಶುವೈದ್ಯಕೀಯ ಚಿಕಿತ್ಸೆ

ಪ್ರದೇಶಗಳು	ಪಶುವೈದ್ಯಕೀಯ ಕೇಂದ್ರಗಳು ಸಂಖ್ಯೆ	ಪ್ರತಿಯೊಂದು ಕೇಂದ್ರದಿಂದ ಸೇವೆ ಸಲ್ಲಿಸಲ್ಪಡುತ್ತಿರುವ ದನಗಳ ಸರಾಸರಿ ಸಂಖ್ಯೆ
1. ಹಳೆಯ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು (3)	37	43,570
2. ಹಳೆಯ ಮುಂಬಯಿ ಕರ್ನಾಟಕದ ಜಿಲ್ಲೆಗಳು (4)	64	44,245
3. ಹಳೆಯ ಮದ್ರಾಸ್ ಕರ್ನಾಟಕದ ಜಿಲ್ಲೆಗಳು (1)	8	1,11,342
4. ಹಳೆಯ ಕೊಡಗು ಪ್ರಾಂತದ ಜಿಲ್ಲೆಗಳು (1)	17	10,000
5. ಹಳೆಯ ಮೈಸೂರಿನ ಜಿಲ್ಲೆಗಳು (10)	205	28,207

ಆದರೆ ನೂತನ ಕರ್ನಾಟಕ ರಾಜ್ಯವು 1956 ನವಂಬರ್ 1 ರಂದು ಉದಯವಾದನಂತರ ಈ ವಿಲೀನ ಪ್ರದೇಶಗಳ ಜಿಲ್ಲೆಗಳನ್ನು ಅಭಿವೃದ್ಧಿಗೊಳಿಸುವ ಬಹುದೊಡ್ಡ ಹೊಣೆಗಾರಿಕೆಯನ್ನು ರಾಜ್ಯಸರಕಾರವು ಹೊರಬೇಕಾಯಿತು. ವಿಲೀನಗೊಂಡ ಜಿಲ್ಲೆಗಳಲ್ಲಿಯೇ ಪ್ರಾದೇಶಿಕ ಅಸಮತೆಯು ಹೆಚ್ಚಾಗಿ ಕಂಡುಬರುತ್ತದೆ. ಕರ್ನಾಟಕದ ಸರಕಾರವು ಹಳೆಯ ಮೈಸೂರಿನ ಜಿಲ್ಲೆಗಳ ಅಭಿವೃದ್ಧಿ ಮಟ್ಟಕ್ಕೆ ಈ ವಿಲೀನ ಪ್ರದೇಶಗಳ ಜಿಲ್ಲೆಗಳನ್ನು ಅಭಿವೃದ್ಧಿಗೊಳಿಸಬೇಕೆಂಬ ಉದ್ದೇಶದಿಂದ ಸಾಕಷ್ಟು ವೆಚ್ಚ ಮಾಡಿರುತ್ತದೆ. ಈ ವೆಚ್ಚವನ್ನು ರಾಜ್ಯ ಸರಕಾರವು ಲೋಕೋಪಯೋಗಿ ಕಾಮಗಾರಿಗಳು, ರಸ್ತೆ ಸಾರಿಗೆ, ಗೃಹನಿರ್ಮಾಣ, ಅರಣ್ಯಾಭಿವೃದ್ಧಿ, ಆರ್ಥಿಕ ನಿಗಮದ ಸಾಲವಿತರಣೆ, ಸಹಕಾರ, ಕೃಷಿ, ಆರ್ಥಿಕ ಸಹಾಯ, ವಿದ್ಯುಚ್ಛಕ್ತಿ ಪೋಲೀಸ್ ಗೃಹ ನಿರ್ಮಾಣ, ಪಶುಸಂಗೋಪನ, ಮೀನುಗಾರಿಕೆ, ಜನಾರೋಗ್ಯ, ನಗರ ಹಾಗೂ ಗ್ರಾಮಾಂತರ ಕುಡಿಯುವ ನೀರಿನ ಪೂರೈಕೆ, ಗ್ರಾಮಾಂತರ ವಿದ್ಯುಚ್ಛಕ್ತಿ, ಉದ್ದಿಮೆಗಳು, ಭೂಸಾರ ಸಂರಕ್ಷಣೆ ಹಾಗೂ ಪರಿಹಾರ ಕಾಮಗಾರಿಗಳು ಈ ಎಲ್ಲ ಬಾಬುಗಳಿಗಾಗಿ ಖರ್ಚು ಮಾಡಿದೆ. ಈ ಮೇಲ್ಕಂಡ ಬಾಬುಗಳಿಗಾಗಿ 1957 ರಿಂದ 1968 ರವರೆಗೆ ಮಾಡಿದ ವೆಚ್ಚದ ವಿವರಗಳನ್ನು ಈ ಕೆಳಗೆ ಕಾಣಿಸಿದ ಪಟ್ಟಿಯಲ್ಲಿ ನಮೂದಿಸಲಾಗಿದೆ.

ವಿಲೀನ ಪ್ರದೇಶಗಳ ಜಿಲ್ಲೆಗಳ ಅಭಿವೃದ್ಧಿಗಾಗಿ 1957 ರಿಂದ 1968 ರವರೆಗೆ ಮಾಡಿದ ವೆಚ್ಚದ ವಿವರಗಳು.

ವಿಲೀನಗೊಂಡ ಪ್ರದೇಶಗಳ ಜಿಲ್ಲೆಗಳು	ವೆಚ್ಚದ ವಿವರಗಳು (ಲಕ್ಷ ರೂಪಾಯಿಗಳಲ್ಲಿ)
1. ಹಳೆಯ ಮೈಸೂರಿನ ಜಿಲ್ಲೆಗಳು (10)	63,353.51
2. ಹಳೆಯ ಮುಂಬಯಿ ಕರ್ನಾಟಕದ ಜಿಲ್ಲೆಗಳು (4)	20,010.31
3. ಹಳೆಯ ಹೈದ್ರಾಬಾದ್ ಕರ್ನಾಟಕದ ಜಿಲ್ಲೆಗಳು (3)	10,122.57
4. ಹಳೆಯ ಮದ್ರಾಸ್ ಕರ್ನಾಟಕದ ಜಿಲ್ಲೆಗಳು (1)	05,084.06
5. ಹಳೆಯ ಕೊಡಗು ಪ್ರಾಂತದ ಜಿಲ್ಲೆಗಳು (1)	02,125.17
6. ಎಲ್ಲ 19 ಜಿಲ್ಲೆಗಳಿಗಾಗಿ ಮಾಡಿದ ಒಟ್ಟು ವೆಚ್ಚ	1,00,695.62

ಈ ರೀತಿಯಾಗಿ ನೂತನ ರಾಜ್ಯವು ಶತಮಾನಗಳಿಂದಲೂ ಅಸ್ತಿತ್ವದಲ್ಲಿದ್ದ ಹಾಗೂ ಅಭಿವೃದ್ಧಿಯ ವಿಷಯದಲ್ಲಿ ಪ್ರಾದೇಶಿಕ ಅಸಮತೋಲನವನ್ನು ಹೊಂದಿದ ಜಿಲ್ಲೆಗಳನ್ನು ಹಾಗೂ ತಾಲ್ಲೂಕಗಳನ್ನು ತನ್ನ ಉದಯದೊಂದಿಗೆ ಹೊತ್ತು ತಂದಿತು.

ನೂತನ ಕರ್ನಾಟಕ ರಾಜ್ಯವು (1,91,791) ಚದರ ಕೀಲೋ ಮೀಟರುಗಳಷ್ಟು ಪ್ರದೇಶವನ್ನು ಹಾಗೂ 3,70,43,451 ಜನಸಂಖ್ಯೆಯನ್ನು ಹೊಂದಿದ್ದು, ನಾಲ್ಕು ವಿಭಾಗಗಳನ್ನು, 19 ಜಿಲ್ಲೆಗಳನ್ನು, 48 ಉಪ ವಿಭಾಗಗಳನ್ನು ಹಾಗೂ 175 ತಾಲ್ಲೂಕಗಳನ್ನು ಹೊಂದಿರುತ್ತದೆ. ರಾಜ್ಯದ 19 ಜಿಲ್ಲೆಗಳನ್ನು ನಾಲ್ಕು ವಿಭಾಗಗಳಲ್ಲಿ ವಿಂಗಡಿಸಿ ರಾಜ್ಯ ಸರಕಾರವು ಅಕ್ಟೋಬರ್ 18, 1956ರಂದು ಆಜ್ಞೆಯೊಂದನ್ನು ಹೊರಡಿಸಿತು. ಈ ಆಜ್ಞೆಯ ಮೇರೆಗೆ ಬೆಂಗಳೂರು, ತುಮಕೂರು, ಕೋಲಾರ ಚಿತ್ರದುರ್ಗ ಹಾಗೂ ಬಳ್ಳಾರಿ ಜಿಲ್ಲೆಗಳನ್ನು ಬೆಂಗಳೂರು ವಿಭಾಗಕ್ಕೆ ಸೇರಿಸಲಾಯಿತು. ಮೈಸೂರು, ಶಿವಮೊಗ್ಗ, ಚಿಕ್ಕ ಮಂಗಳೂರು, ಹಾಸನ, ಕೊಡಗು, ದಕ್ಷಿಣ ಕನ್ನಡ ಹಾಗೂ ಮಂಡ್ಯ ಜಿಲ್ಲೆಗಳನ್ನು ಮೈಸೂರು ವಿಭಾಗಕ್ಕೆ ಸೇರಿಸಲಾಯಿತು. ಗುಲ್ಬರ್ಗಾ, ರಾಯಚೂರು, ಬೀದರ ಜಿಲ್ಲೆಗಳನ್ನು ಗುಲ್ಬರ್ಗಾ ವಿಭಾಗಕ್ಕೆ ಸೇರಿಸಲಾಯಿತು. ಬೆಳಗಾವಿ, ವಿಜಾಪೂರ, ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳನ್ನು ಬೆಳಗಾವಿ ವಿಭಾಗಕ್ಕೆ ಸೇರಿಸಲಾಯಿತು. ಆದರೆ 1966 ಜನವರಿ 3 ರಂದು ಸರಕಾರವು ಮತ್ತೊಂದು ಆಜ್ಞೆಯನ್ನು ಹೊರಡಿಸಿ ವಿಭಾಗಗಳ ನಕ್ಷೆಯನ್ನು ಬದಲಾಯಿಸಿತು. ಶಿವಮೊಗ್ಗ ಜಿಲ್ಲೆಯನ್ನು ಮೈಸೂರು ವಿಭಾಗದಿಂದ ತೆಗೆದುಹಾಕಿ ಅದನ್ನು ಬೆಂಗಳೂರು ವಿಭಾಗಕ್ಕೆ ಸೇರಿಸಲಾಯಿತು. ಅದೇ ರೀತಿಯಾಗಿ ಬಳ್ಳಾರಿ ಜಿಲ್ಲೆಯನ್ನು ಬೆಂಗಳೂರು ವಿಭಾಗದಿಂದ ತೆಗೆದುಹಾಕಿ ಗುಲ್ಬರ್ಗಾ ವಿಭಾಗಕ್ಕೆ ಸೇರಿಸಲಾಯಿತು. 1959ರಿಂದ 1969ರ ಕಾಲಾವಧಿಯಲ್ಲಿ ಒಟ್ಟು ಆರು ಹೊಸ ತಾಲ್ಲೂಕುಗಳನ್ನು ರಾಜ್ಯಸರಕಾರವು ರಚಿಸಿತು.

1. 1-10-1959 ರಂದು ದಕ್ಷಿಣ ಜಿಲ್ಲೆಯಲ್ಲಿ ಬಂಟ್ವಾಳ ಹಾಗೂ ಬೆಳ್ತಂಗಡಿ ಎಂಬ ಎರಡು ತಾಲ್ಲೂಕುಗಳನ್ನು ರಚಿಸಲಾಯಿತು.
2. 1-4-1960 ರಂದು ಬಳ್ಳಾರಿ ಜಿಲ್ಲೆಯಲ್ಲಿ ಮೂವತ್ತೆರಡು ಹಳ್ಳಿಗಳನ್ನೊಳಗೊಂಡ ಮಲ್ಲಾಪುರ ತಾಲ್ಲೂಕನ್ನು ರಚಿಸಲಾಯಿತು.
3. 10-11-1965 ರಂದು ಬೀದರ ಜಿಲ್ಲೆಯಲ್ಲಿ 114 ಹಳ್ಳಿಗಳನ್ನೊಳಗೊಂಡ ಬಸವಕಲ್ಯಾಣ ತಾಲ್ಲೂಕನ್ನು ರಚಿಸಲಾಯಿತು.
4. 14-12-1965 ರಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 45 ಹಳ್ಳಿಗಳನ್ನೊಳಗೊಂಡ ಸುಳ್ಯ ಎಂಬ ತಾಲ್ಲೂಕನ್ನು ರಚಿಸಲಾಯಿತು.
5. 26-1-1969 ರಂದು ಧಾರವಾಡ ಜಿಲ್ಲೆಯಲ್ಲಿ 62 ಹಳ್ಳಿಗಳನ್ನೊಳಗೊಂಡ ಸವಣೂರು ತಾಲ್ಲೂಕನ್ನು ರಚಿಸಲಾಯಿತು.

ಒಟ್ಟಿನ ಮೇಲೆ ಬೆಂಗಳೂರು ವಿಭಾಗವು 48.231 ಚದರ ಕೀಲೋ ಮೀಟರಗಳಷ್ಟು ಪ್ರದೇಶವನ್ನು ಹಾಗೂ 1,22,28,424 ಜನಸಂಖ್ಯೆಯನ್ನು ಹೊಂದಿದೆ. ಮೈಸೂರು ವಿಭಾಗವು (43,473) ಚದರ ಮೀಟರಗಳಷ್ಟು ಪ್ರದೇಶವನ್ನು ಹಾಗೂ 90,93,333 ಜನಸಂಖ್ಯೆಯನ್ನು ಹೊಂದಿದೆ. ಬೆಳಗಾವಿ ವಿಭಾಗವು 54,513 ಚದರ ಕಿಲೋಮೀಟರಗಳಷ್ಟು ಪ್ರದೇಶವನ್ನು ಹಾಗೂ 93,85,216 ಜನಸಂಖ್ಯೆಯನ್ನು ಹೊಂದಿದೆ. ಗುಲ್ಬರ್ಗಾ ವಿಭಾಗವು 45,574 ಚದುರ ಕೀಲೊಮೀಟರಗಳಷ್ಟು ಪ್ರದೇಶವನ್ನು ಹೊಂದಿದೆ. ಜಿಲ್ಲೆಗಳು, ತಾಲ್ಲೂಕುಗಳು ಹೊಂದಿರುವ ಪ್ರದೇಶ ಹಾಗೂ ಜನಸಂಖ್ಯೆ ವಿವರಗಳನ್ನು ಈ ಕೆಳಗೆ ಕಾಣಿಸಿದ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಜಿಲ್ಲೆಗಳ ತಾಲ್ಲೂಕುಗಳ ಜನಸಂಖ್ಯಾ ಪ್ರದೇಶ ವಿವರಗಳು

	ಜಿಲ್ಲೆಗಳು	ತಾಲ್ಲೂಕುಗಳು	ಪ್ರದೇಶ ಚದರ ಕಿ.ಮಿ.ಗಳಲ್ಲಿ	ಜನಸಂಖ್ಯೆ	ಸಾಂದ್ರತೆ ಪ್ರತಿ ಚದರ ಕಿಲೋಮೀಟರಿಗೆ
1.	ಬೆಂಗಳೂರು	11	8005	4,921,828	615
2.	ಬೆಳಗಾವಿ	10	13415	29,74,861	222
3.	ಬಳ್ಳಾರಿ	08	9885	14,87,062	150
4.	ಬೀದರ	05	5448	99,41,06	182
5	ಬಿಜಾಪುರ	11	11069	23,99,124	141
6.	ಚಿಕ್ಕಮಂಗಳೂರು	07	7021	90,86,26	126
7.	ಚಿತ್ರದುರ್ಗ	09	10852	17,74,717	164
8.	ಧಾರವಾಡ	17	13738	29,39,988	214

1	2	3	4	5	6
9.	ಗುಲ್ಬರ್ಗಾ	10	16224	20,75,368	128
10.	ಹಾಸನ	08	6814	13,51,923	198
11.	ಕೊಡಗು	03	4102	04,60,164	112
12.	ಕೋಲಾರ	11	8223	18,98,984	231
13.	ಮಂಡ್ಯ	07	4961	14,14,383	285
14.	ಮೈಸೂರು	11	11954	25,84,878	216
15.	ಉತ್ತರಕನ್ನಡ	11	10291	10,71,243	104
16.	ರಾಯಚೂರು	11	14017	17,79,942	127
17.	ಶಿವಮೊಗ್ಗ	09	10553	16,57,564	157
18.	ದಕ್ಷಿಣಕನ್ನಡ	08	8441	23,73,359	281
19.	ತುಮಕೂರು	08	10598	10,71,243	186
	ಕರ್ನಾಟಕ :	175	191791	37,043,451	193

ಈ ಮೇಲ್ಕಾಣಿಸಿದ ಪಟ್ಟಿಯಲ್ಲಿಯ ರಾಜ್ಯದಲ್ಲಿಯ ಜಿಲ್ಲೆಗಳು ಹಾಗೂ ತಾಲ್ಲೂಕುಗಳ ಬಗ್ಗೆ ವಿವರಗಳನ್ನು ಅಂಶಗಳು ನೀಡಿವೆ. ಹಳೆಯ ಮೈಸೂರು ಪ್ರದೇಶದ ಜಿಲ್ಲೆಗಳು ಹಾಗೂ ತಾಲ್ಲೂಕುಗಳು ಚಿಕ್ಕವಾಗಿರುತ್ತವೆ. ಹಳೆಯ ಮೈಸೂರು ಪ್ರದೇಶಗಳಲ್ಲಿ ಜಿಲ್ಲೆಯ ಮುಖ್ಯ ಸ್ಥಳಕ್ಕೂ ಹಾಗೂ ಅದರ ಅತಿ ದೂರ ತಾಲ್ಲೂಕಿನ ಮುಖ್ಯಸ್ಥಳಕ್ಕೂ ಅರವತ್ತು ಮೈಲುಗಳಷ್ಟು ಅಂತರ ಕಂಡುಬರುತ್ತದೆ. ಆದರೆ ಅದೇ ಮುಂಬೈ ಕರ್ನಾಟಕದಲ್ಲಿ ಇವೆರಡರ ನಡುವಿನ ಅಂತರ ನೂರು ಮೈಲುಗಳಷ್ಟು ಇರುವ ಉದಾಹರಣೆಗಳಿವೆ. ವಿವಿಧ ಜಿಲ್ಲೆಗಳ ಭೌಗೋಳಿಕ ಸ್ವರೂಪ ಹಾಗೂ ಸಾರಿಗೆ ಸಂಪರ್ಕ ಸೌಲಭ್ಯಗಳ ವಿಷಯದಲ್ಲಿಯೂ ವ್ಯತ್ಯಾಸಗಳು ಕಂಡುಬರುತ್ತವೆ. ಜಿಲ್ಲೆಗಳ ಗಾತ್ರವನ್ನು ಕಡಮೆಮಾಡಿ ಅವುಗಳನ್ನು ನಿರ್ವಹಿಸಲು ಯೋಗ್ಯವಾಗುವ ಮಟ್ಟಕ್ಕೆ ರಚಿತಗೊಳಿಸುವ ಕಾಲವೀಗ ಸನ್ನಿಹಿತವಾಗಿದೆ. ಕೆಲವೊಂದು ಜಿಲ್ಲೆಗಳು ಅತಿ ದೊಡ್ಡದಾಗಿದ್ದು ಅಲ್ಲಿ ಆಡಳಿತ ನಿರ್ವಹಣೆ ಕ್ಲಿಷ್ಟವಾಗಿದೆ. ಅನೇಕಸಲ ಆಡಳಿತವು ಅದಕ್ಷ ಹಾಗೂ ನಿಷ್ಪ್ರಯೋಜಕವಾಗಿದೆ ಎಂಬ ಭಾವನೆಯು ಮೂಡುತ್ತದೆ. ಇದಲ್ಲದೆ ಈ ಎಲ್ಲ ಜಿಲ್ಲೆಗಳಿಗೆ ಶತಮಾನಗಳ ಇತಿಹಾಸವಿದೆ. ಜನತೆಯ ಜೀವನದೊಂದಿಗೆ ಅಲ್ಲಿಯ ಜಿಲ್ಲಾಡಳಿತವು ಹಾಸುಹೊಕ್ಕಾಗಿ ಬೆಳೆದುಕೊಂಡುಬಂದಿದೆ. ಈ ಜಿಲ್ಲೆಗಳನ್ನು ವಿಭಜಿಸುವ ಯಾವುದೇ ಯತ್ನಗಳನ್ನು ಜನತೆ ಸಹಿಸಲಾರದಷ್ಟು ಅವುಗಳೊಂದಿಗೆ ಅನ್ಯೋನ್ಯ ಸಂಬಂಧವನ್ನು ಬೆಳೆಸಿಕೊಂಡು ಬಂದಿದ್ದಾರೆ. ಅವುಗಳ

ಮರುವಿಂಗಡನೆಯು ಬಗ್ಗೆ ಮಾತನಾಡಿದರೆ ಅವರು ಉಗ್ರ ಚಳವಳಿ ಹೂಡಿ ಪ್ರತಿಭಟಿಸಬಹುದು. ಬಹುಸಂಖ್ಯಾತ ಜನರೊಂದಿಗೆ ಸಮಾಲೋಚಿಸಿ ಜನಾಭಿಪ್ರಾಯಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತರೆ ಈಗಿದ್ದ ಜಿಲ್ಲೆಗಳಲ್ಲಿ ಬದಲಾವಣೆ ಸುಲಭವಾಗಬಹುದು.

ರಾಜ್ಯಗಳ ಪುನರ್ಘಟನಾ ಆಯೋಗವು ಜಿಲ್ಲೆಗಳ ಮರುವಿಂಗಡನೆಯನ್ನು ಕುರಿತು ತನ್ನ ಅಭಿಪ್ರಾಯ ವ್ಯಕ್ತಮಾಡಿತು. ರಾಜ್ಯಗಳ ಪುನರ್ಘಟನೆಯಾದ ನಂತರ ನವೋದಿತ ರಾಜ್ಯಗಳು, ಜಿಲ್ಲೆಗಳು ಹಾಗೂ ವಿಭಾಗಗಳು ವಿಶೇಷವಾಗಿ ಆಡಳಿತ ಯಂತ್ರದ ಪುನರ್‌ರಚನೆಗಾಗಿ ತನ್ನ ಗಮನವನ್ನು ಹರಿಸಬೇಕಾಗುತ್ತದೆ. ರಾಜ್ಯ ಪುನರ್ಘಟನಾ ಆಯೋಗದ ಈ ಅಭಿಪ್ರಾಯಗಳನ್ನು ಗಮನದಲ್ಲಿರಿಸಿಕೊಂಡು ಜಿಲ್ಲೆಗಳ ಹಾಗೂ ತಾಲ್ಲೂಕುಗಳ ಮರುವಿಂಗಡನೆಗಾಗಿ ಕರ್ನಾಟಕ ರಾಜ್ಯ ಸರಕಾರ ಭಗೀರಥ ಪ್ರಯತ್ನಗಳನ್ನು ಮಾಡುತ್ತ ಬಂದಿರುವದು.

ಮೂಲ : ಎಚ್. ಜಿ. ವೇಲ್ಸ್

ಅನು : ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರಿದುದು)

ಆದರೆ ಇಂದಿನ ಈ ದೊಡ್ಡತನ ಮತ್ತು ಸುಭದ್ರತೆಗಳನ್ನು ಸಾಧಿಸುವ ಮಾರ್ಗದಲ್ಲಿ ಅಮೆರಿಕೆಯ ಜನ ಒಂದು ದಾರುಣವಾದ ಘರ್ಷಣೆಯನ್ನು ಎದುರಿಸಬೇಕಾಯಿತು. ಈ ಒಕ್ಕೂಟದ ದಕ್ಷಿಣ ಮತ್ತು ಉತ್ತರದ ಸಂಸ್ಥಾನಗಳ ಹಿತಾಸಕ್ತಿಗಳು ಮತ್ತು ಚಿಂತನೆಗಳ ನಡುವೆ ತೀವ್ರವಾದ ಘರ್ಷಣೆ ಆಯಿತು. ನದಿಯ ಹಬೆಜಹಜುಗಳು, ರೈಲುಗಾಡಿ, ತಂತಿಸೌಕರ್ಯ ಮತ್ತು ಇವುಗಳೊಡನೆ ಬಂದ ಇತರ ಸಲಕರಣೆಗಳು ಇನ್ನೂ ಮುಂಚೆಯೇ ಬಂದಿದ್ದಲ್ಲಿ ಈ ಘರ್ಷಣೆ ತಪ್ಪಬಹುದಿತ್ತು. ಅಲ್ಲಿನ ದಕ್ಷಿಣ ಸಂಸ್ಥಾನಗಳು ಗುಲಾಮರನ್ನಿಟ್ಟುಕೊಂಡಿದ್ದುವು. ಉತ್ತರ ಸಂಸ್ಥಾನಗಳಲ್ಲಿ ಎಲ್ಲರೂ ಸ್ವತಂತ್ರರಾಗಿದ್ದರು.

ಮೊದಲಂತೂ ಈ ಎರಡು ವಿಭಾಗಗಳಲ್ಲಿ ಆಗಲೇ ಏರ್ಪಟ್ಟಿದ್ದ ವ್ಯತ್ಯಾಸಗಳಿಂದ ಉಂಟಾಗಿದ್ದ ಘರ್ಷಣೆ ಈ ರೈಲುಬಂಡಿ ಮತ್ತು ಹಬೆಜಹಜುಗಳಿಂದಲೇ ಇನ್ನೂ ತೀವ್ರವಾಗುವಂತೆ ಆಯಿತು. ಈ ಹೊಸ ಸಾರಿಗೆ ವಿಧಾನಗಳಿಂದ ಹೆಚ್ಚಾಗುತ್ತಿದ್ದ ಏಕತೆಯಿಂದ ಏಕೀಕೃತ ರಾಷ್ಟ್ರದಲ್ಲಿ ಮೇಲುಗೈಯಾಗಬೇಕಾದುದು ದಕ್ಷಿಣದ ಚೇತನಸದ್ದೋ ಉತ್ತರದ್ದೋ ಎಂಬ ಪ್ರಶ್ನೆ ಇನ್ನೂ ತುರ್ತಿನದಾಯಿತು. ಇಲ್ಲಿ ಪರಸ್ಪರ ರಾಜಿಯಾಗುವ ಸಾಧ್ಯತೆ ಅತ್ಯಲ್ಪವಾಗಿತ್ತು. ಉತ್ತರಭಾಗದ ಚೇತನ ಸ್ವತಂತ್ರವಾದದ್ದು, ವ್ಯಕ್ತಿನಿಷ್ಠವಾದದ್ದು. ದಕ್ಷಿಣದಲ್ಲಿ ಎಸ್ಟೇಟುಗಳು ಹಾಗೂ ಕಪ್ಪುಬಣ್ಣದ ಜನಸಮುದಾಯವನ್ನು ಅಧೀನವಾಗಿಟ್ಟುಕೊಂಡು ಆಳುವ ಪ್ರಜ್ಞಾವಂತ ಕುಲೀನ ವರ್ಗಗಳ ವ್ಯವಸ್ಥೆಯಲ್ಲಿ ವಿಶ್ವಾಸವಿತ್ತು.

ಜನಪ್ರವಾಹ ಪಶ್ಚಿಮಾಭಿಮುಖವಾಗಿ ಮುನ್ನುಗ್ಗಿದಂತೆ ಹೊಸ ಹೊಸ ಪ್ರದೇಶಗಳು ಸಂಸ್ಥಾನಗಳಾಗಿ ವ್ಯವಸ್ಥೆಯಾಗುತ್ತಿದ್ದುವು. ಹೀಗೆ ಬೇಗ ಬೇಗ ಬೆಳೆಯುತ್ತಿದ್ದ ಅಮೆರಿಕನ್ ಸಮಾಜದ ಒಳಬರುತ್ತಿದ್ದ ಪ್ರತಿಯೊಂದು ಹೊಸ ಘಟಕದಲ್ಲೂ ಅದು ಸ್ವತಂತ್ರ ಪ್ರಜೆಗಳ ಸಂಸಾನವಾಗಬೇಕೇ ಇಲ್ಲವೇ, ಎಸ್ಟೇಟು ಮತ್ತು ಗುಲಾಮಗಿರಿಗಳ

ವ್ಯವಸ್ಥೆ ಅಲ್ಲಿ ನಡೆದುಕೊಂಡುಬರಬೇಕೇ ಎಂಬ ಎರಡು ಪ್ರಶ್ನೆಗಳ ನಡುವೆ ಘರ್ಷಣೆ ಏರ್ಪಡುತ್ತಿತ್ತು. ಕ್ರಿ.ಶ. 1833 ರಿಂದ ಅಮೆರಿಕನ್ ಗುಲಾಮಗಿರಿ ವಿರೋಧಿ ಸಂಘವು ಗುಲಾಮಗಿರಿಯ ವಿಸ್ತರಣೆಯನ್ನು ಎದುರಿಸುತ್ತಿತ್ತಷ್ಟೇ ಅಲ್ಲದೆ ಅದನ್ನು ಪೂರ್ತಿಯಾಗಿ ತೊಡೆದುಹಾಕಬೇಕೆಂದು ರಾಷ್ಟ್ರಾದ್ಯಂತ ಚಳುವಳಿ ನಡೆಸುತ್ತಿತ್ತು. ಟೆಕ್ಸಾಸನ್ನು ಒಕ್ಕೂಟಕ್ಕೆ ಸೇರಿಸಿಕೊಳ್ಳುವ ಪ್ರಶ್ನೆ ಬಂದಾಗ ಈ ವಿವಾದ ಘರ್ಷಣೆಯ ರೂಪದಲ್ಲಿ ಹೊರಬಿದ್ದಿತು. ಟೆಕ್ಸಾಸ್ ಮೊದಲು ಮೆಕ್ಸಿಕೊ ಗಣರಾಜ್ಯದ ಭಾಗವಾಗಿತ್ತು. ಅಲ್ಲಿ ವಲಸೆ ಹೋಗಿ ನೆಲಸಿದ್ದವರಲ್ಲಿ ಗುಲಾಮಗಿರಿಯಿದ್ದ ಸಂಸ್ಥಾನಗಳ ಅಮೆರಿಕನ್ನರೇ ಹೆಚ್ಚಾಗಿದ್ದರು. ಇದು ಮೆಕ್ಸಿಕೊವಿನಿಂದ ಹೊರಬಂದು 1835ರಲ್ಲಿ ಸ್ವಾತಂತ್ರ್ಯ ಘೋಷಿಸಿತು. 1844 ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಇದನ್ನು ಸೇರಿಸಿಕೊಳ್ಳಲಾಯಿತು. ಮೆಕ್ಸಿಕೊವಿನ ಕಾನೂನು ಪ್ರಕಾರ ಅಲ್ಲಿ ಗುಲಾಮಗಿರಿಯನ್ನು ನಿಷೇಧಿಸಲಾಗಿತ್ತು. ಆದರೆ ಅಮೆರಿಕೆಯ ದಕ್ಷಿಣಭಾಗ ಅಲ್ಲಿ ಗುಲಾಮಗಿರಿ ಇರಬೇಕೆಂದು ಕೇಳಿ ತನ್ನ ಮಾತನ್ನು ನಡೆಸಿಕೊಂಡಿತು.

ಇಷ್ಟರಲ್ಲಿ ಸಮುದ್ರಯಾನ ಸುಗಮವಾಗುತ್ತಾ ಹೋದಂತೆ ಯೂರೋಪಿನಿಂದ ಹಿಂಡುಹಿಂಡಾಗಿ ವಲಸೆಗಾರರು ಬರಲಾರಂಭಿಸಿದರು. ಇದರಿಂದ ಉತ್ತರದ ಸಂಸ್ಥಾನಗಳ ಜನಸಂಖ್ಯೆ ಹೆಚ್ಚುತ್ತಾ ಹೋಯಿತು. ಮತ್ತು ಆಯೋವಾ, ವಿಸ್‌ಕಾನ್ಸಿನ್, ಮಿನ್ನೆಸೋಟಾ ಮತ್ತು ಓರೆಗಾನ್‌ಗಳಲ್ಲಿದ್ದ ಸಾಗುವಳಿಯಾದ ಜಮೀನುಗಳೆಲ್ಲ ಸಂಸ್ಥಾನವಟ್ಟಕ್ಕೆ ಏರಿದುವು. ಸೆನೆಟ್ ಮತ್ತು ಪ್ರತಿನಿಧಿಸಭೆಗಳೆರಡರಲ್ಲೂ ಗುಲಾಮಗಿರಿ ವಿರೋಧಿ ಉತ್ತರಭಾಗದ್ದೇ ಮೇಲುಗೈಯಾಗುವ ಸಾಧ್ಯತೆ ಹೆಚ್ಚಾಯಿತು. ಹತ್ತಿ ಬೆಳೆಯುತ್ತಿದ್ದ ದಕ್ಷಿಣಕ್ಕೆ ಗುಲಾಮಗಿರಿ ವಿರೋಧಿ ಚಳವಳಿ ಹೆಚ್ಚಾಗುತ್ತಿದ್ದುದರಿಂದ ಕಿರಿಕಿರಿಯಾಯಿತು ಮತ್ತು ಉತ್ತರಭಾಗ ಕಾಂಗ್ರೆಸ್ಸಿನಲ್ಲಿ ಪ್ರಬಲವಾಗಬಹುದೆಂದು ಭಯವಾಯಿತು. ಹೀಗಾಗಿ ಅದು ಒಕ್ಕೂಟದಿಂದ ಹೊರಬೀಳುವ ಮಾತಾಡತೊಡಗಿತು. ದಕ್ಷಿಣದ ಜನರು ತಮ್ಮ ದಕ್ಷಿಣದ ಮೆಕ್ಸಿಕೊ ಮತ್ತು ವೆಸ್ಟ್ ಇಂಡೀಸ್‌ಗಳಿಂದ ಭೂಭಾಗಗಳನ್ನು ಆಕ್ರಮಿಸಿಕೊಂಡು ಪನಾಮುವರೆಗೆ ಚಾಚಿದ ಉತ್ತರಭಾಗದಿಂದ ಪ್ರತ್ಯೇಕವಾದ ಗುಲಾಮಗಿರಿ ಇರುವ ಒಂದು ಬೃಹತ್ ರಾಷ್ಟ್ರ ಕಟ್ಟುವ ಕನಸು ಕಾಣತೊಡಗಿದರು.

ಗುಲಾಮಗಿರಿ ವಿಸ್ತರಣಾ ವಿರೋಧಿ ಅಧ್ಯಕ್ಷನಾಗಿ ಅಬ್ರಹಾಂ ಲಿಂಕನ್ ಕ್ರಿ.ಶ. 1860ರಲ್ಲಿ ಚುನಾಯಿತನಾಗಿದ್ದರಿಂದ ದಕ್ಷಿಣ ಭಾಗ ಅಮೆರಿಕನ್ ಒಕ್ಕೂಟವನ್ನು ಒಡೆಯಲು ನಿರ್ಧರಿಸಿತು. ದಕ್ಷಿಣ ಕ್ಯಾರೊಲೈನಾವು "ಪ್ರತ್ಯೇಕೀಕರಣದ ಸುಗ್ರೀವಾಜ್ಞೆ"ಯೊಂದನ್ನು ಹೊರಡಿಸಿ ಯುದ್ಧಕ್ಕೆ ಸಿದ್ಧವಾಗತೊಡಗಿತು. ಮಿಸಿಸಿಪ್ಪಿ, ಫ್ಲಾರಿಡಾ, ಅಲಬಾಮು, ಜಾರ್ಜಿಯ, ಲ್ಯೂಸಿಯಾನ ಮತ್ತು ಟೆಕ್ಸಾಸ್ ಇದರೊಡನೆ ಸೇರಿದುವು. ಅಲಬಾಮುದ ಮಾಂಟೆಗೋಮರಿಯಲ್ಲಿ ಒಂದು ಸಭೆ ಸೇರಿತು. ಇದು ಜೆಫರ್‌ಸನ್ ಡೇವಿಸನನ್ನು ಈ "ಜೊತೆಗೂಡಿದ ಸಂಸ್ಥಾನಗಳ" ಅಧ್ಯಕ್ಷನನ್ನಾಗಿ

ಚುನಾಯಿಸಿ ನೀಗ್ರೋ ಗುಲಾಮಗಿರಿ ವ್ಯವಸ್ಥೆಯನ್ನು ಮುಖ್ಯವಾಗಿ ಎತ್ತಿ ಹಿಡಿಯುವ ಸಂವಿಧಾನವನ್ನು ಅಂಗೀಕರಿಸಿತು.

ಅಬ್ರಹಾಂ ಲಿಂಕನ್ ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮದ ನಂತರ ಅಭಿವೃದ್ಧಿಯಾಗಿದ್ದ ಹೊಸ ಜನಾಂಗವನ್ನು ಚೆನ್ನಾಗಿ ಪ್ರತಿನಿಧಿಸುತ್ತಿದ್ದನು. ಪಶ್ಚಿಮಾಭಿಮುಖವಾಗಿ ಹರಿಯುತ್ತಿದ್ದ ಜನಪ್ರವಾಹದಲ್ಲಿ ಸಾಗುತ್ತಿದ್ದ ಒಂದು ಕಣದೋಪಾದಿಯಲ್ಲಿ ಇವನು ತನ್ನ ಕಿರಿಯ ವಯಸ್ಸಿನ ದಿನಗಳನ್ನು ಕಳೆದನು. 1809ರಲ್ಲಿ ಇವನು ಕೆಂಟಕಿಯಲ್ಲಿ ಹುಟ್ಟಿದನು. ಹುಡುಗನಾಗಿದ್ದಾಗಲೇ ಮೊದಲು ಇಂಡಿಯಾನಕ್ಕೆ ಅಲ್ಲಿಂದ ಇಲ್ಲಿನಾಯ್ಸ್‌ಗೆ ಮನೆಯವರೊಂದಿಗೆ ಹೋದನು. ಇಂಡಿಯಾನದ ಕಾಡು ಪ್ರದೇಶದಲ್ಲಿ ಜೀವನ ಕಷ್ಟಕರವಾಗಿತ್ತು. ಅಲ್ಲಿ ಮನೆಯೆಂದರೆ ಕಾಡು ಪ್ರದೇಶದಲ್ಲಿದ್ದ ಮರದ ದಿಮ್ಮಿಗಳಿಂದ ಮಾಡಿದ ಗುಡಿಸಿಲು. ಶಾಲಾ ವಿದ್ಯಾಭ್ಯಾಸ ಏನೇನೂ ಚೆನ್ನಾಗಿ ನಡೆಯುತ್ತಿರಲಿಲ್ಲ, ಆದರೆ ಅವನ ತಾಯಿ ಬಹು ಮುಂಚೆಯೇ ಅವನಿಗೆ ಓದು ಕಲಿಸಿದಳು. ಇವನು ಸಿಕ್ಕಿದ್ದೆಲ್ಲವನ್ನೂ ಓದ ತೊಡಗಿದನು. ಹದಿನೇಳು ವರ್ಷ ತುಂಬುವ ಹೊತ್ತಿಗೆ ಇವನು ಬಲಿಷ್ಠನಾದ ದೊಡ್ಡ ಆಳುತನದ ತರುಣನಾಗಿ ಬೆಳೆದಿದ್ದನು. ಅಲ್ಲದೆ ಒಳ್ಳೆ ಕುಸ್ತಿಪಟುವೂ ಓಟಗಾರನೂ ಆಗಿದ್ದನು. ಕೆಲವು ಕಾಲ ಒಂದು ಅಂಗಡಿಯಲ್ಲಿ ಗುಮಾಸ್ತನಾಗಿ ಕೆಲಸಮಾಡಿದನು. ಬಳಿಕ ಕುಡುಕನೊಬ್ಬನೊಂದಿಗೆ ಪಾಲುದಾರನಾಗಿ ತಾನೇ ಅಂಗಡಿ ಇಟ್ಟು ಸಾಲ ಮಾಡಿಕೊಂಡನು. ಈ ಸಾಲಗಳನ್ನು ಪೂರ್ತಿ ತೀರಿಸಲು ಇವನಿಗೆ ಹದಿನೈದು ವರ್ಷ ಬೇಕಾಯಿತು. 1834ರಲ್ಲಿ ಇವನಿಗೆ ಕೇವಲ ಇಪ್ಪತ್ತೈದು ವರ್ಷಗಳಾಗಿದ್ದಾಗ ಇಲ್ಲಿನಾಯ್ಸ್ ಸಂಸ್ಥಾನದ ಪ್ರತಿನಿಧಿ ಸಭೆಯ ಸದಸ್ಯನಾಗಿ ಆಯ್ಕೆಯಾದನು. ಇಲ್ಲಿನಾಯ್ಸ್‌ನ ಸೆನೇಟರ್ ಆಗಿದ್ದ ಡಗ್ಲಾಸ್ ರಾಷ್ಟ್ರೀಯ ಕಾಂಗ್ರೆಸಿನಲ್ಲಿ ಗುಲಾಮಗಿರಿ ವಿಸ್ತರಣಾ ಪಕ್ಷದ ಪ್ರಧಾನ ಮುಂದಾಳುವಾಗಿದ್ದುದರಿಂದ ಇಲ್ಲಿನಾಯ್ಸ್‌ನಲ್ಲಿ ಗುಲಾಮಗಿರಿಯ ಪ್ರಶ್ನೆಗೆ ವಿಶೇಷವಾದ ಪ್ರಾಮುಖ್ಯ ಬಂದಿತು. ಡಗ್ಲಾಸ್ ಅತ್ಯಂತ ಶಕ್ತನೂ ಗೌರವಯುತ ವ್ಯಕ್ತಿಯೂ ಆಗಿದ್ದನು. ಕೆಲವು ವರ್ಷಗಳು ಭಾಷಣಗಳು ಮತ್ತು ಬರಹಗಳ ಮೂಲಕ ಇವನೊಂದಿಗೆ ಲಿಂಕನ್ ಹೋರಾಡಿದನು. ಹಾಗೆಯೇ ಲಿಂಕನ್ ಡಗ್ಲಾಸನ ದುರ್ದಮ್ಯ ಪ್ರತಿವಾದಿಯಾಗಿ ಕಡೆಗೆ ಅವನನ್ನು ಸೋಲಿಸಿದನು. 1860ರ ರಾಷ್ಟ್ರಾಧ್ಯಕ್ಷ ಚುನಾವಣಾ ಪ್ರಚಾರದಲ್ಲಿ ಇವರ ಹೋರಾಟ ಪರಾಕಾಷ್ಠೆಯನ್ನು ಮುಟ್ಟಿತು. 1861ರ ಮಾರ್ಚಿ 4ನೇ ತಾರೀಖು ಲಿಂಕನ್ ರಾಷ್ಟ್ರಾಧ್ಯಕ್ಷನಾದನು. ವಾಷಿಂಗ್‌ಟನ್ನಿನ ರಾಷ್ಟ್ರೀಯ ಸರ್ಕಾರದ ಆಡಳಿತದಿಂದ ದಕ್ಷಿಣದ ಸಂಸ್ಥಾನಗಳು ಆಗಲೇ ಪ್ರತ್ಯೇಕಗೊಂಡು ಯುದ್ಧ ಪ್ರಾರಂಭಿಸಿದ್ದುವು.

ಅಮೆರಿಕದ ಈ ಅಂತರ್ಯುದ್ಧದಲ್ಲಿ ಕಾದಿದ್ದು ತತ್ಕಾಲಕ್ಕೆ ಹೊಂದಿಸಿಕೊಂಡ ಸೈನ್ಯಗಳು ಮೊದಲು ಹಲವಾರು ಸಾವಿರ ಸೈನಿಕರಿದ್ದ ಈ ಸೈನ್ಯಗಳು ಒಂದೇ ಸಮನೆ ಬೆಳೆಯುತ್ತಾ ಹೋಗಿ ಬಳಿಕ ಇವುಗಳಲ್ಲಿ ಲಕ್ಷಗಟ್ಟಲೆ ಸೈನಿಕರು ಸೇರಿ ಕಟ್ಟ ಕಡೆಗೆ ಫೆಡರಲ್ ಸೈನ್ಯದಲ್ಲಿ ಮಿಲಿಯನ್ನಿಗಿಂತ ಹೆಚ್ಚು ಜನರಾದರು. ಈ ಯುದ್ಧ

ನಡೆದದ್ದು ನ್ಯೂ ಮೆಕ್ಸಿಕೊವಿನಿಂದ ಪೂರ್ವ ಸಮುದ್ರದ ನಡುವಿನ ವಿಶಾಲ ವಿಸ್ತೀರ್ಣದಲ್ಲಿ ವಾಷಿಂಗ್‌ಟನ್ ಮತ್ತು ರಿಚ್ಮಂಡ್ ಪಟ್ಟಣಗಳೇ ಈ ಯುದ್ಧದ ಮುಖ್ಯ ಗುರಿಗಳಾಗಿದ್ದುವು. ಟೆನಿಸ್ಸೀ ಮತ್ತು ವರ್ಜೀನಿಯಗಳ ಗುಡ್ಡ ಬೆಟ್ಟಗಳಲ್ಲಿ ಮತ್ತು ಕಾಡುಗಳಲ್ಲಿ ಮಿಸಿಸಿಪ್ಪಿ ನದಿಯ ಹರಿವಿನಲ್ಲಿ ಹಿಂದಕ್ಕೂ ಮುಂದಕ್ಕೂ ಎಳೆದಾಡಿದ ಈ ಭಾರೀ ಹೋರಾಟದಲ್ಲಿ ಕಡೆಯವರೆಗೂ ಉಕ್ಕೇರುತ್ತಲೇ ಇದ್ದ ರಣೋತ್ಸಾಹವನ್ನು ಕುರಿತು ಹೇಳಲು ಇಲ್ಲಿ ಸಾಧ್ಯವಿಲ್ಲ. ಇದರಲ್ಲಿ ಭೀಕರ ನಷ್ಟವಾಯಿತು. ಅಸಂಖ್ಯ ಜನರು ಸತ್ತರು. ದಾಳಿಗೆ ಪ್ರತಿದಾಳಿ ನಡೆಯಿತು. ಆಸೆ ನಿರಾಸೆಗಳು ಒಂದನ್ನೊಂದು ಹಿಂಬಾಲಿಸುತ್ತಿದ್ದುವು. ಕೆಲವು ಸಲ ವಾಷಿಂಗ್‌ಟನ್ ಫೆಡರೇಟುಗಳ ಕೈಗೆ ಸಿಗುವಂತೆ ತೋರುತ್ತಿತ್ತು. ತಿರುಗಿ ಫೆಡರಲ್ ಸೈನ್ಯಗಳು ರಿಚ್‌ಮಂಡ್ ಕಡೆ ನುಗ್ಗುತ್ತಿದ್ದುವು. ಕಾನ್‌ಫೆಡರೇಟ್ ಸೈನ್ಯದಲ್ಲಿ ಜನ ಕಡಮೆ ಇದ್ದರು. ಅವರ ಸಾಧನ ಸೌಕರ್ಯಗಳೂ ಕಡಮೆ ಇದ್ದುವು. ಆದರೆ ಅವರ ಸೇನಾಪತಿ ಜನರಲ್ ಲೀ ಅತ್ಯಂತ ದಕ್ಷನಾಗಿದ್ದನು. ಒಕ್ಕೂಟದ ಸೇನಾಪತಿಗಳು ಅಷ್ಟು ಉತ್ತಮರಾಗಿರಲಿಲ್ಲ. ಸೇನಾಪತಿಗಳನ್ನು ಕೆಲಸದಿಂದ ತೆಗೆದು ಹಾಕುವುದು ಹೊಸಬರನ್ನು ನೇಮಿಸುವುದು ನಡೆಯುತ್ತಲೇ ಇತ್ತು. ಕೈ ಖಾಲಿಯಾಗಿ ಸುಸ್ತಾಗಿ ಹೋಗಿದ್ದ ದಕ್ಷಿಣದ ಮೇಲೆ ಕೊಟ್ಟ ಕೊನೆಗೆ ಷರ್ಮನ್ ಮತ್ತು ಗ್ರಾಂಟರ ಮುಂದಾಳತ್ವದಲ್ಲಿ ಉತ್ತರ ಜಯ ಗಳಿಸಿತು. 1864ರ ಅಕ್ಟೋಬರ್‌ನಲ್ಲಿ ಷರ್ಮನ್ ನೇತೃತ್ವದಲ್ಲಿ ಒಂದು ಫೆಡರಲ್ ಸೈನ್ಯವು ಕಾನ್‌ಫೆಡರೇಟ್ ಸೈನ್ಯದ ಎಡಭಾಗವನ್ನು ಭೇದಿಸಿ ಟೆನೆಸ್ಸೀ ಜಾರ್ಜಿಯಗಳ ಮೂಲಕ ಕಾನ್‌ಫೆಡರೇಟ್ ಪ್ರದೇಶವನ್ನು ನೇರವಾಗಿ ಹಾದು ಅಟ್ಲಾಂಟಿಕ್ ತೀರವನ್ನು ಮುಟ್ಟಿತು. ಅಲ್ಲಿಂದ ಉತ್ತರಾಭಿಮುಖವಾಗಿ ಕಾರೊಲೈನಾ ಸಂಸ್ಥಾನಗಳನ್ನು ಹಾದು ಕಾನ್‌ಫೆಡರೇಟ್ ಸೈನ್ಯದ ಹಿಂಭಾಗವನ್ನು ತಲುಪಿತು. ಅದಷ್ಟು ಕಾಲವೂ—ಷರ್ಮನ್ ಹಿಂದಿನಿಂದ ಬಂದು ತನ್ನನ್ನು ಸೇರುವವರೆಗೂ ಜನರಲ್ ಗ್ರಾಂಟನು ಲೀ ಯನ್ನು ರಿಚ್‌ಮಂಡಿನ ಮುಂದೆ ತಡೆದಿಟ್ಟಿದ್ದನು. ಕ್ರಿ. ಶ. 1865ರ ಏಪ್ರಿಲ್ 9ರಂದು ಲೀ ತನ್ನ ಸೈನ್ಯದೊಡನೆ ಅಪೊಮಾಟಕ್ಸ್ ಕೋರ್ಟಿನಲ್ಲಿ ಸೋಲೊಪ್ಪಿಕೊಂಡನು. ಆದಾಗಿ ತಿಂಗಳಾಗುವಷ್ಟರಲ್ಲಿ ಉಳಿದ ಪ್ರತ್ಯೇಕತಾವಾದಿ ಸೈನ್ಯಗಳೆಲ್ಲವೂ ಆಯುಧಗಳನ್ನು ಕೆಳಗಿಟ್ಟುವು. ಕಾನ್‌ಫೆಡರೇಸಿ ಕೊನೆಗೊಂಡಿತು.

ಈ ನಾಲ್ಕು ವರ್ಷಗಳ ಹೋರಾಟ ಮಿತಿಮೀರಿದ ದೈಹಿಕ ಮಾನಸಿಕ ಶ್ರಮಗಳನ್ನು ಅಮೆರಿಕದ ಜನರಿಗೆ ತಂದೊಡ್ಡಿತು. ಅನೇಕರಿಗೆ ಸಂಸ್ಥಾನಗಳ ಸ್ವಾಯತ್ತತೆ ಬಹುಪ್ರಿಯವಾದ ತತ್ತ್ವವಾಗಿದ್ದು ದಕ್ಷಿಣದ ಮೇಲೆ ಗುಲಾಮಗಿರಿ ನಿಷೇಧವನ್ನು ಉತ್ತರ ಭಾಗವು ಬಲವಂತವಾಗಿ ಹೇರುತ್ತಿದೆಯೆನಿಸುತ್ತಿತ್ತು. ಈ ಭಾಗಗಳ ಎಲ್ಲೆಗಳಲ್ಲಿದ್ದವರಲ್ಲಿ ಅಣ್ಣ ತಮ್ಮಂದಿರು, ದಾಯಾದಿಗಳು ಏಕೆ, ತಂದೆ ಮಕ್ಕಳು ಸಹ ವಿರೋಧ ಪಕ್ಷಗಳನ್ನಾರಿಸಿಕೊಂಡು ಕದನಗಳಲ್ಲಿ ಒಬ್ಬರನ್ನೊಬ್ಬರು ಎದುರಿಸುವಂತೆ ಆಯಿತು. ತನ್ನದೇ ನೈತಿಕವಾಗಿ ಸರಿಯಾದ ಪಕ್ಷ ಎಂದು ಉತ್ತರ ಎಂದುಕೊಂಡಿತು.

ಆದರೆ ಇದು ಪರಿಪೂರ್ಣವಾದ ಆಕ್ಷೇಪ ರಹಿತವಾದ ನೈತಿಕ ಮಾರ್ಗ ಎಂದು ಬಹು ಜನರಿಗೆ ಎನಿಸಿರಲಿಲ್ಲ. ಲಿಂಕನನಿಗೆ ಮಾತ್ರ ಈ ವಿಷಯದಲ್ಲಿ ಯಾವ ಸಂದೇಹವೂ ಇರಲಿಲ್ಲ. ಭಾರೀ ಗೊಂದಲದ ಮಧ್ಯೆ ಅವನೊಬ್ಬ ನಿಸ್ಸಂದೇಹ ಮನಸ್ಸಿನವನಾಗಿದ್ದನು.

ಅಮೆರಿಕಾ ಒಂದಾಗಿರಬೇಕು, ಅಲ್ಲೆಲ್ಲಾ ಕಡೆ ಶಾಂತಿ ಇರಬೇಕು ಎಂಬುದು ಅವನ ಆಶಯವಾಗಿತ್ತು. ಗುಲಾಮಗಿರಿ ಅವನಿಗೆ ಇಷ್ಟವಿರಲಿಲ್ಲ. ಆದರೆ ಈ ಪ್ರಶ್ನೆಗೆ ಅವನು ಎರಡನೆ ಸ್ಥಾನ ಕೊಟ್ಟಿದ್ದನು. ಅಮೇರಿಕ ಸಂಯುಕ್ತ ಸಂಸ್ಥಾನಗಳು ವಿರುದ್ಧ ಗುಣವುಳ್ಳ ಪರಸ್ಪರ ಘರ್ಷಣೆಯಾಗುತ್ತಿರುವ ಹೋಳುಗಳಾಗಿ ಹೋಗಬಾರದೆಂಬುದು ಅವನ ಪ್ರಥಮ ಗುರಿಯಾಗಿತ್ತು.

ಯುದ್ಧ ಮೊದಲಾಗುವ ಪರಿಸ್ಥಿತಿ ಇದ್ದಾಗ ಫೆಡರಲ್ ದಳಪತಿಗಳು ಮತ್ತು ಕಾಂಗ್ರೆಸ್ ತರಾತುರಿಯಲ್ಲಿ ಗುಲಾಮರ ಬಿಡುಗಡೆ ಮಾಡಲು ತೊಡಗಿದರು. ಆಗ ಲಿಂಕನ್ ಅದನ್ನು ವಿರೋಧಿಸಿ ಅವರ ಅತ್ಯುತ್ಸಾಹವನ್ನು ತಡೆದನು. ಒಂದಾದ ಮೇಲೊಂದರಂತೆ ಬೇರೆ ಬೇರೆ ಸಂಸ್ಥಾನಗಳಲ್ಲಿ ಪರಿಹಾರ ದ್ರವ್ಯಕೊಟ್ಟು ಗುಲಾಮರ ವಿಮೋಚನೆ ತರಬೇಕೆಂದು ಅವನ ಇಷ್ಟವಾಗಿತ್ತು. ಕ್ರಿ.ಶ. 1865ರ ಜನವರಿಯಲ್ಲಷ್ಟೆ ಪರಿಸ್ಥಿತಿ ಪೂರ್ತಿ ಒಂದು ಹದಕ್ಕೆ ಬಂದು ಗುಲಾಮಗಿರಿಯನ್ನು ಖಾಯಮ್ಮಾಗಿ ರದ್ದು ಮಾಡುವುದಕ್ಕಾಗಿ ಒಂದು ಸಂವಿಧಾನದ ತಿದ್ದುಪಡಿಯನ್ನು ಸೂಚಿಸಲು ಕಾಂಗ್ರೆಸ್ಸಿಗೆ ಸಾಧ್ಯವಾಯಿತು. ಈ ತಿದ್ದುಪಡಿ ಮಸೂದೆ ಸಂಸ್ಥಾನಗಳಿಂದ ಅಂಗೀಕೃತವಾಗುವ ಮುಂಚೆಯೇ ಯುದ್ಧವೇ ಮುಗಿದು ಹೋಗಿತ್ತು.

ಕ್ರಿ.ಶ. 1862 ಮತ್ತು 1863ರಲ್ಲಿ ಯುದ್ಧ ಎಳೆದುಕೊಂಡು ಮುಂದುವರಿದಂತೆ ಪ್ರಾರಂಭದ ಉತ್ಸಾಹಶೌರ್ಯಗಳು ಇಳಿಯುತ್ತಾ ಹೋದುವು. ಯುದ್ಧವೊಂದರಿಂದ ಬರುವ ಜುಗುಪ್ಸೆ ಮತ್ತು ದಣಿವುಗಳ ಎಲ್ಲ ಅವಸ್ಥೆಗಳನ್ನೂ ಅಮೆರಿಕ ಅನುಭವಿಸಿತು. ರಾಷ್ಟ್ರಾಧ್ಯಕ್ಷನ ಹಿಂದೆ ಪರಾಜಯವಾದಿಗಳು, ದ್ರೋಹಿಗಳು ನಿಜಾ ಆದ ಸೇನಾಪತಿಗಳು, ಕೊಂಕುಬುದ್ಧಿಯ ರಾಜಕಾರಣಿಗಳು, ಸಂಶಯ ತುಂಬಿದ ದಣಿದು ಹೋದ ಜನರು ಇದ್ದರೆ ಅವನ ಮುಂದೆ ಸ್ಫೂರ್ತಿಯೇ ಇಲ್ಲದ ಸೇನಾಪತಿಗಳೂ ಎದೆಗುಂದಿದ ದಳಗಳೂ ಇದ್ದುವು. ಆತನಿಗಿದ್ದಿರಬಹುದಾದ ಒಂದೇ ಮುಖ್ಯ ಸಮಾಧಾನವೆಂದರೆ ರಿಚ್‌ಮಂಡಿನಲ್ಲಿದ್ದ ಜೆಫರ್‌ಸನ್ ಡೇವಿಸನ ಸ್ಥಿತಿಯೂ ಬಹುಶಃ ಅದಕ್ಕಿಂತ ಉತ್ತಮವಾಗಿದ್ದಿರಲಿಕ್ಕಿಲ್ಲ ಎಂಬುದು. ಆಗ ಇಂಗ್ಲಿಷ್ ಸರ್ಕಾರ ತಪ್ಪಾಗಿ ನಡೆದುಕೊಂಡಿತು. ವೇಗವಾದ ಮೂರು ಖಾಸಗಿ ಯುದ್ಧದ ಹಡಗುಗಳನ್ನು ಸಜ್ಜುಗೊಳಿಸಿ (ಇವುಗಳಲ್ಲಿ ಅಲಬಾಮ ಹೆಚ್ಚು ಪ್ರಖ್ಯಾತವಾದುದು) ಸಮುದ್ರದಲ್ಲಿ ಓಡಿಸಲು ಇಂಗ್ಲೆಂಡಿನಲ್ಲಿದ್ದ ಕಾನ್‌ಫೆಡರೇಟ್ ಪ್ರತಿನಿಧಿಗಳಿಗೆ ಅವಕಾಶ ಕೊಟ್ಟಿತು. ಇವು ಅಮೇರಿಕ ಸಂಯುಕ್ತ ಸಂಸ್ಥಾನದ ಹಡಗುಗಳನ್ನು ಅಟ್ಟಿಸಿಕೊಂಡು ಹೋದುವು. ಮೆಕ್ಸಿಕೊವಿನಲ್ಲಿ ಫ್ರೆಂಚ್ ಸೈನ್ಯವು ಮನ್ರೊ ತತ್ವವನ್ನು ತುಳಿದುಹಾಕುತ್ತಿತ್ತು. ಯುದ್ಧ ನಿಲ್ಲಿಸಿ, ಯುದ್ಧ ನಿರ್ಧರಿಸಬೇಕಾಗಿದ್ದ ಪ್ರಶ್ನೆಗಳನ್ನು ಮುಂದೆ ಚರ್ಚಿಸ

ಬೇಕೆಂದೂ ಉತ್ತರದವರು ಹಾಗೂ ದಕ್ಷಿಣದವರೂ ಸೇರಿಕೊಂಡು ಮೆಕ್ಸಿಕೊವಿನಲ್ಲಿ ಫ್ರೆಂಚರನ್ನು ಸರಿಸಬೇಕೆಂದೂ ರಿಚ್‌ಮಂಡಿನಿಂದ ಜಾಣತನದ ಸಲಹೆಗಳು ಬಂದುವು. ಆದರೆ ಲಿಂಕನ್ ಅವುಗಳಿಗೆ ಕಿವಿಗೊಡಲಿಲ್ಲ. ಅದಕ್ಕೆ ಮೊದಲು ಅಮೆರಿಕನ್ ಒಕ್ಕೂಟದ ಪರಮಾಧಿಕಾರ ಗಟ್ಟಿಯಾಗಿ ಉಳಿದುಕೊಳ್ಳಬೇಕೆಂಬುದು ಅವನ ಇಷ್ಟವಾಗಿತ್ತು. ಯಾವುದೇ ಕಾರ್ಯವನ್ನು ಅಮೆರಿಕನ್ನರು ಒಂದೇ ಜನತೆಯಾಗಿ ಮಾಡಬೇಕಾಗಿತ್ತು, ಎರಡು ಜನತೆಯಾಗಿಯಲ್ಲ.

ತಮ್ಮ ಪ್ರಯತ್ನಗಳಿಗೆ ಫಲವೇ ಇಲ್ಲ ಎನಿಸುತ್ತಿದ್ದಾಗ, ಸೋಲಿನ ಮೇಲೆ ಸೋಲು ಎದುರಾಗುತ್ತಿದ್ದಾಗ, ಒಡಕುಗಳು ಹುಟ್ಟಿದಾಗ ಧೈರ್ಯಗೆಟ್ಟಾಗ, ಎಂತಹ ಕಾಳದಿನಗಳಲ್ಲೂ ಆ ದೀರ್ಘಕಾಲದುದ್ದಕ್ಕೂ ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ಛಿದ್ರವಾಗದಂತೆ ಲಿಂಕನ್ ಹಿಡಿದಿಟ್ಟಿದ್ದನು. ಈ ಉದ್ದೇಶದಿಂದ ಆತ ಯಾವಾಗಲೂ ಹಿಂತೆಗೆದಂತೆ ತೋರುವುದಿಲ್ಲ. ಎಷ್ಟೋ ಸಲ ಏನು ಮಾಡುವುದೂ ಸಾಧ್ಯವಿಲ್ಲದೆ ಶ್ವೇತಭವನದಲ್ಲಿ ಅಚಲವಾಗಿ ಮೌನವಾಗಿ ದೃಢತೆಯ ಪ್ರತೀಕವೆಂಬಂತೆ ಆತ ಕುಳಿತಿರುತ್ತಿದ್ದುದುಂಟು; ಮಧ್ಯೆ ಮಧ್ಯೆ ವಿನೋದವಾಗಿ ಕುಚೋದ್ಯದ ಕಥೆ ಹೇಳುತ್ತಾ ವಿರಮಿಸುತ್ತಿದ್ದುದೂ ಉಂಟು.

ಒಕ್ಕೂಟ ಗೆದ್ದುದನ್ನು ಆವನು ಕಂಡನು. ರಿಚ್‌ಮಂಡ್ ಸೋಲೊಪ್ಪಿಕೊಂಡ ಮರುದಿನ ಅಲ್ಲಿಗೆ ಹೋಗಿ ಜನರಲ್ ಲೀ ಶರಣಾದುದನ್ನೂ ಕೇಳಿದನು. ಅಲ್ಲಿಂದ ವಾಷಿಂಗ್‌ಟನ್ನಿಗೆ ಹಿಂದಿರುಗಿ ಏಪ್ರಿಲ್ 11ನೆ ತಾರೀಖು ತನ್ನ ಕೊನೆಯ ಭಾಷಣ ಮಾಡಿದನು. ಸೋತು ಹೋಗಿದ್ದ ಸಂಸ್ಥಾನಗಳಲ್ಲಿ ಮನಸ್ತಾಪ ನಿವಾರಣೆ ಹಾಗೂ ನಿಷ್ಠಾವಂತ ಸರ್ಕಾರಗಳ ಸ್ಥಾಪನೆ ಇವೇ ಈ ಭಾಷಣದ ವಿಷಯವಾಗಿತ್ತು. ಏಪ್ರಿಲ್ 14ರ ಸಾಯಂಕಾಲ ವಾಷಿಂಗ್‌ಟನ್ನಿನ ಫೋರ್ಡ್ಸ್ ಥಿಯೇಟರಿಗೆ ಹೋದನು. ಅಲ್ಲಿ ರಂಗಸ್ಥಳದ ಕಡೆ ನೋಡುತ್ತಾ ಕುಳಿತಿದ್ದಾಗ ಬೂತ್ ಎಂಬ ಒಬ್ಬ ನಟ ಯಾರಿಗೂ ಕಾಣದಂತೆ ಹಿಂದಿನಿಂದ ಬಂದು ಇವನ ತಲೆಯ ಹಿಂಭಾಗಕ್ಕೆ ಗುಂಡಿಟ್ಟನು. ಈ ನಟನಿಗೆ ಲಿಂಕನ್ನನ ಮೇಲೆ ಏನೋ ಅಸಮಾಧಾನವಿತ್ತು. ಲಿಂಕನ್ ತಕ್ಷಣ ತೀರಿಕೊಂಡನು. ಆದರೆ ಆತನ ಕಾರ್ಯ ಸಫಲವಾಗಿತ್ತು; ಒಕ್ಕೂಟ ಉಳಿದುಕೊಂಡಿತ್ತು.

ಈ ಯುದ್ಧ ಪ್ರಾರಂಭವಾದಾಗ ಫೆಸಿಫಿಕ್ ತೀರಕ್ಕೆ ರೈಲ್ವೆ ಮಾರ್ಗ ಇರಲಿಲ್ಲ. ಇದಾದ ಮೇಲೆ ಶೀಘ್ರವಾಗಿ ಬೆಳೆದು ಹರಡಿಕೊಳ್ಳುವ ಗಿಡದಂತೆ ರೈಲ್ವೆಗಳು ಬೆಳೆದುವು. ಅಮೆರಿಕ ಸಂಯುಕ್ತ ಸಂಸ್ಥಾನಗಳ ವಿಶಾಲ ಪ್ರದೇಶಗಳನ್ನೆಲ್ಲ ಇವು ಆಕ್ರಮಿಸಿಕೊಂಡು ಎಂದೂ ಛಿದ್ರವಾಗದಂತಹ ಮಾನಸಿಕ ಮತ್ತು ಭೌತಿಕ ಐಕ್ಯವನ್ನಾಗಿ ಅದನ್ನು ಹೆಣೆದಿವೆ. ಚೀನದ ಸಾಮಾನ್ಯ ಜನರೆಲ್ಲ ಓದು ಬರಹ ಕಲಿಯುವವರೆಗೆ ಇದೇ ಪ್ರಪಂಚದಲ್ಲಿ ನಿಜವಾದ ದೊಡ್ಡ ಜನಸಮುದಾಯವಾಗಿರುತ್ತದೆ.

61. ಯುರೋಪಿನಲ್ಲಿ ಜರ್ಮನಿಯ ಉನ್ನತಿ

ಫ್ರೆಂಚ್ ಕ್ರಾಂತಿ ಮತ್ತು ನೆಪೋಲಿಯನ್ನನ ಸಾಹಸಗಳು ಈ ಕ್ಷೋಭೆಗಳಾದ ಮೇಲೆ ಯುರೋಪಿನಲ್ಲಿ ಕೆಲಕಾಲ ಒಂದು ವಿಧವಾದ ಅಭದ್ರವಾದ ಶಾಂತಿನೆಲಸಿತೆಂದೂ ಅದಕ್ಕೆ ಐವತ್ತು ವರ್ಷಗಳ ಹಿಂದಿದ್ದ ರಾಜಕೀಯ ಪರಿಸ್ಥಿತಿಯನ್ನೇ ಒಂದು ವಿಧವಾದ ಹೊಸ ರೂಪಕೊಟ್ಟು ತಿರುಗಿ ಅಲ್ಲಿ ತರಲಾಯಿತೆಂದೂ ನೋಡಿಯಾಯಿತು. ಉಕ್ಕಿನ ಬಳಕೆಯಲ್ಲಿ ಹೊಸ ಹೊಸ ವಿಧಾನಗಳು, ರೈಲು ಗಾಡಿಗಳು ಹಾಗೂ ಹಬೆಜಹಜುಗಳು ಮೊದಲಾದ ಹೊಸ ಅನ್ವೇಷಣೆಗಳಿಂದ ಈ ಶತಮಾನದ ಮಧ್ಯಭಾಗದವರೆಗೂ ರಾಜಕೀಯ ಕ್ಷೇತ್ರದಲ್ಲಿ ಅಂತಹ ಪರಿಣಾಮಗಳೇನೂ ಆಗಲಿಲ್ಲ. ಆದರೆ ನಗರಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿಯ ಫಲವಾದ ಸಾಮಾಜಿಕ ಅಶಾಂತಿ ಹೆಚ್ಚಾಯಿತು. ಎಲ್ಲ ರಾಜ್ಯಗಳಿಗಿಂತ ಫ್ರಾನ್ಸಿನಲ್ಲಿ ವಿಶೇಷವಾಗಿ ಅಶಾಂತಿ ಎದ್ದುಕಾಣಿಸುತ್ತಿತ್ತು. 1830ರಲ್ಲಿ ಆದ ಕ್ರಾಂತಿಯ ಬಳಿಕ 1848ರಲ್ಲಿ ಮತ್ತೊಂದು ಕ್ರಾಂತಿಯಾಯಿತು. ಬಳಿಕ ನೆಪೋಲಿಯನ್ ಬೋನಪಾರ್ಟೆಯ ವಂಶದವನಾದ ಮೂರನೆಯ ನೆಪೋಲಿಯನ್ ಮೊದಲು ರಾಷ್ಟ್ರಾಧ್ಯಕ್ಷನಾಗಿ ಅನಂತರ 1852ರಲ್ಲಿ ಚಕ್ರವರ್ತಿಯಾದನು.

ಇವನು ಪ್ಯಾರಿಸ್ ನಗರವನ್ನು ಪುನರ್ರಚಿಸಲು ತೊಡಗಿದನು. 17ನೆ ಶತಮಾನದ ಧಾಟಿಯಲ್ಲಿದ್ದ ಸುಂದರವಾಗಿದ್ದರೂ ಅಷ್ಟೇನೂ ನಿರ್ಮಲವಾಗಿಲ್ಲದ ನಗರವಾಗಿದ್ದ ಪ್ಯಾರಿಸ್ ಇಂದಿನ ವಿಶಾಲವಾದ ಲ್ಯಾಟಿನ್ ರೀತಿಯ ಅಮೃತ ಶಿಲೆಯ ನಗರವಾಯಿತು.

ಫ್ರಾನ್ಸ್ ರಾಷ್ಟ್ರವನ್ನು ಇವನು ಪುನರ್ನಿರ್ಮಿಸಲು ಮೊದಲಿಟ್ಟನು. ಈ ರಾಷ್ಟ್ರ ಮೇಲಿದ್ದು ಕಾಣುವ ನಿರಂಕುಶ ಚಕ್ರಾಧಿಪತ್ಯವಾಯಿತು. 17 ಮತ್ತು 18ನೆ ಶತಮಾನಗಳಲ್ಲಿ ಪ್ರಬಲ ಪ್ರಭುತ್ವಗಳು ಒಂದರೊಡನೆ ಒಂದು ಸ್ಪರ್ಧಿಸುತ್ತಾ ನಿಷ್ಪ್ರಯೋಜಕ ಯುದ್ಧಗಳಲ್ಲಿ ತೊಡಗಿ ಯುರೋಪನ್ನು ತಳಮಳಗೊಳಿಸುತ್ತಿದ್ದುವಷ್ಟೆ. ಅಂಥ ಸ್ಪರ್ಧಾಮನೋಭಾವವನ್ನು ತಿರುಗಿ ಮೇಲೆಬ್ಬಿಸುವ ಪ್ರವೃತ್ತಿ ಇವನಲ್ಲಿ ಕಾಣಿಸಿಕೊಂಡಿತು. ರಷ್ಯದ ತ್ಸಾರ್ ನಿಕಲಾಸ್ (1825-1856) ನದ್ದೂ ಪರರ ಮೇಲೆ ದಾಳಿಮಾಡುವ ಸ್ವಭಾವವಾಗಿದ್ದು ಅವನು ಕಾನ್‌ಸ್ಟಂಟಿನೋಪಲ್ ಮೇಲೆ ಕಣ್ಣಿಟ್ಟು ದಕ್ಷಿಣ ದಿಕ್ಕಿಗೆ ತುರ್ಕಿ ಸಾಮ್ರಾಜ್ಯದ ಮೇಲೆ ನುಗ್ಗಿ ಹೋದನು.

18ನೆ ಶತಮಾನ ಕಳೆದಮೇಲೆ ಯುರೋಪಿನಲ್ಲಿ ಯುದ್ಧಗಳ ಒಂದು ಹೊಸ ಸರಣಿಯೇ ಮೊದಲಾಯಿತು. ಇವೆಲ್ಲ ಮುಖ್ಯವಾಗಿ ಬಲಗಳ ಸಮತೋಲನಕ್ಕಾಗಿಯೇ (Balance of Power) ಔನ್ನತ್ಯಕ್ಕಾಗಿಯೇ ಹೂಡಿದ ಯುದ್ಧಗಳು. ಕ್ರಿಮಿಯನ್ ಯುದ್ಧದಲ್ಲಿ ತುರ್ಕಿಯನ್ನು ಸಂರಕ್ಷಿಸುತ್ತೇವೆಂದು ಇಂಗ್ಲೆಂಡ್, ಫ್ರಾನ್ಸ್ ಹಾಗೂ ಸಾರ್ಡೀನಿಯಗಳು ರಷ್ಯವನ್ನು ಎದುರಿಸಿದುವು. ಜರ್ಮನಿಯಲ್ಲಿ ಮುಖ್ಯ ಸ್ಥಾನ ಪಡೆಯಲು ಪ್ರಷ್ಯಾ, ಆಸ್ಟ್ರಿಯಗಳು ಹೋರಾಡಿದುವು. ಪ್ರಷ್ಯಾಕ್ಕೆ ಇಟಲಿಯ ಸಹಾಯವಿತ್ತು. ಆಸ್ಟ್ರಿಯದ ಹಿಡಿತದಿಂದ ಉತ್ತರ ಇಟಲಿಯನ್ನು ಫ್ರಾನ್ಸ್ ಬಿಡುಗಡೆ

ಮಾಡಿತು. ಇದಕ್ಕಾಗಿ ಸಾವಾಯನ್ನು ಅದು ತೆರಬೇಕಾಯಿತು. ನಿಧಾನವಾಗಿ ಇಟಲಿಯೆಲ್ಲ ಒಂದುಗೂಡಿ ಒಂದೇ ರಾಜ್ಯವಾಯಿತು. ಅಮೆರಿಕದ ಒಳ ಯುದ್ಧದ ಸಮಯದಲ್ಲಿ ಮೂರನೇ ನೆಪೋಲಿಯನ್ ಒಂದು ತಿಳಿಗೇಡಿತನದ ಕೆಲಸ ಮಾಡಿದನು. ಅತಿಯಾಸೆಯಿಂದ ಮೆಕ್ಸಿಕೊವಿನಲ್ಲಿ ಹಸ್ತಕ್ಷೇಪ ಮಾಡಿ ಒಬ್ಬನನ್ನು ಮ್ಯಾಕ್ಸಿಮಿಲಿಯನ್ ಚಕ್ರವರ್ತಿಯೆಂದು ಅಲ್ಲಿ ಸ್ಥಾಪಿಸಿದನು. ಅಂತರ್ಯುದ್ಧದಲ್ಲಿ ಗೆದ್ದ ಅಮೆರಿಕದ ರಾಷ್ಟ್ರೀಯ ಸರ್ಕಾರ ತನ್ನ ಬಲ ಪ್ರದರ್ಶನ ಮಾಡುತ್ತಲೂ ಮ್ಯಾಕ್ಸಿಮಿಲಿಯನ್ನನ ಪಡೆಯಲ್ಲಿದ್ದ ಹಾಗೆ ಆಗಲಿ ಎಂದು ಇದ್ದಕ್ಕಿದ್ದಂತೆ ಅವನ ಕೈಬಿಟ್ಟನು. ಮೆಕ್ಸಿಕನ್ನರು ಮ್ಯಾಕ್ಸಿಮಿಲಿಯನ್ನನನ್ನು ಗುಂಡಿಟ್ಟು ಕೊಂದರು.

1870ರಲ್ಲಿ ಫ್ರಾನ್ಸ್ ಮತ್ತು ಪ್ರಷ್ಯಾಗಳ ನಡುವೆ ಸುದೀರ್ಘವಾದ ಕಾದಾಟ ಮೊದಲಾಯಿತು. ಪ್ರಷ್ಯ ಬಹುದಿನಗಳಿಂದ ಈ ಕಾದಾಟವನ್ನು ಎದುರುನೋಡುತ್ತಿದ್ದು ಅದಕ್ಕೆ ತಯಾರಾಗಿ ನಿಂತಿತ್ತು. ಫ್ರಾನ್ಸ್‌ನಲ್ಲಿಯಾದರೋ ಹಣಕಾಸಿನ ಭ್ರಷ್ಟಾಚಾರ ವಿಪರೀತವಾಗಿ ಅಲ್ಲಿಯ ವ್ಯವಸ್ಥೆ ಟೊಳ್ಳಾಗಿ ಹೋಗಿತ್ತು. ಅತಿ ಶೀಘ್ರವಾಗಿ ನಾಟಕೀಯವಾಗಿ ಫ್ರಾನ್ಸ್ ಸೋತುಹೋಯಿತು. ಆಗಸ್ಟಿನಲ್ಲಿ ಜರ್ಮನ್ನರು ಫ್ರಾನ್ಸಿನ ಮೇಲೇರಿ ಬಂದರು, ಸೆಪ್ಟೆಂಬರಿನಲ್ಲಿ ಸೆಡಾನಿನಲ್ಲಿ ಫ್ರಾನ್ಸ್ ಚಕ್ರವರ್ತಿಯ ನೇತೃತ್ವದಲ್ಲಿನ ಒಂದು ದೊಡ್ಡ ಸೈನ್ಯ ಸೋಲೊಪ್ಪಿಕೊಂಡಿತು, ಮತ್ತೊಂದ ಸೈನ್ಯ ಅಕ್ಟೋಬರಿನಲ್ಲಿ ಮೆಟ್ಜ್ ನಲ್ಲಿ ಶರಣಾಗತವಾಯಿತು, 1871 ಜನವರಿಯಲ್ಲಿ ಜರ್ಮನ್ನರ ಮುತ್ತಿಗೆ ಮತ್ತು ಫಿರಂಗಿಯ ಹೊಡೆತಗಳನ್ನು ಎದುರಿಸಲಾರದೆ ಪ್ಯಾರಿಸ್ ಜರ್ಮನ್ನರ ಕೈ ಸೇರಿತು. ಫ್ರಾಂಕ್‌ಫರ್ಟ್‌ನಲ್ಲಿ ಶಾಂತಿಯ ಕೌಲಿಗೆ ಸಹಿಬಿದ್ದಿತು. ಅದರ ಪ್ರಕಾರ ಅಲ್ಸಾಸ್ ಮತ್ತು ಲೊರೇನ್ ಪ್ರಾಂತಗಳನ್ನು ಜರ್ಮನಿಗೆ ಒಪ್ಪಿಸಲಾಯಿತು. ಆಸ್ಟ್ರಿಯ ಬಿಟ್ಟು ಉಳಿದ ಜರ್ಮನಿಯೆಲ್ಲ ಒಂದುಗೂಡಿ ಒಂದು ಚಕ್ರಾಧಿಪತ್ಯವಾಯಿತು. ಯುರೋಪಿನ ಕೈಸರ್‌ಗಳ ತಂಡಕ್ಕೆ ಪ್ರಷ್ಯದ ರಾಜನು ಜರ್ಮನ್ ಚಕ್ರವರ್ತಿ ಎಂಬ ಹೆಸರಿನಿಂದ ಸೇರ್ಪಡೆಯಾದನು.

ಮುಂದೆ ನಲವತ್ತುಮೂರು ವರ್ಷಗಳ ಕಾಲ ಯೂರೋಪ್ ಖಂಡದಲ್ಲಿ ಜರ್ಮನಿಯೇ ಮುಖ್ಯವಾದ ಪ್ರಭುತ್ವವಾಗಿತ್ತು. 1877–78ರಲ್ಲಿ ರಷ್ಯಾ ತುರ್ಕಿಗಳ ನಡುವೆ ಒಂದು ಯುದ್ಧವಾಯಿತು. ಇದಾದ ಮೇಲೆ ಕಾನ್‌ಸ್ಟಾಂಟಿನೋಪಲ್ ಮೇಲೆ ರಷ್ಯ ಆಸೆಪಟ್ಟು ಸಂಚಿಕೆ ಮಾಡಿದಾಗ ಲಾರ್ಡ್ ಬೀಕನ್ಸ್‌ಫೀಲ್ಡನ ಸಹಾಯದಿಂದ ರಷ್ಯ ಅದು ವಿಫಲವಾಗುವಂತೆ ಮಾಡಿತು. ಅನಂತರ ಬಾಲ್ಕನ್ ಪ್ರದೇಶಗಳಲ್ಲಿ ಎಲ್ಲೋ ಕೆಲವು ಸಣ್ಣಪುಟ್ಟ ಹೊಂದಾಣಿಕೆಗಳನ್ನು ಬಿಟ್ಟರೆ ಮೂವತ್ತು ವರ್ಷಗಳ ಕಾಲ ಯುರೋಪಿನಲ್ಲಿ ರಾಜ್ಯಗಳ ಗಡಿಗಳು ಒಂದು ವಿಧ ಅಭದ್ರತೆಯಿದ್ದರೂ ಸ್ಥಿರವಾಗಿದ್ದುವು.

62. ಹಬೆ ಜಹಜು ಮತ್ತು ರೈಲುಗಾಡಿಗಳಿಂದಾದ ಸಮುದ್ರದಾಚೆಯ ಹೊಸ ಸಾಮ್ರಾಜ್ಯಗಳು

ಹದಿನೆಂಟನೆ ಶತಮಾನದ ಕೊನೆ ವರ್ಷಗಳಲ್ಲಿ ಸಾಮ್ರಾಜ್ಯಗಳು ಛಿದ್ರವಾಗಿ ಹೋದುವು ಹಾಗೂ ವಿಸ್ತರಣಾಕಾಂಕ್ಷಿಗಳ ಕನಸುಗಳು ಮುರಿದುಹೋದುವು.

ಒಂದು ಕಡೆ ಬ್ರಿಟನ್ ಮತ್ತು ಸ್ಪೇನ್, ಮತ್ತೊಂದು ಕಡೆ ಅವುಗಳ ವಸಾಹತುಗಳು, ಇವುಗಳ ಮಧ್ಯದ ಪ್ರಯಾಣ ದೀರ್ಘವೂ ಶ್ರಮಕರವೂ ಆಗಿದ್ದುದರಿಂದ ಮೂಲ ದೇಶಗಳು ಮತ್ತು ಅವುಗಳ ಶಾಖೆಗಳ ನಡುವೆ ಸರಾಗವಾಗಿ ಸರಿಯಾದ ಸಂಪರ್ಕ ಬೆಳೆಯಲು ಆಗುತ್ತಿರಲಿಲ್ಲ. ಹೀಗಾಗಿ ಈ ವಸಾಹತುಗಳು ಹೊಸ ಹೊಸ ವಿಶಿಷ್ಟ ಸಮುದಾಯಗಳಾಗಿ ಬೇರ್ಪಟ್ಟವು. ಇವುಗಳು ಒಂದೊಂದಕ್ಕೂ ತಮ್ಮದೇ ಆದ ಭಾವನೆಗಳು ಏಕೆ ವಿಶಿಷ್ಟವಾದ ಮಾತಿನ ಧಾಟಿಗಳೂ ಇದ್ದುವು. ಇವುಗಳನ್ನು ಒಂದುಗೂಡಿಸುವ ಸೂತ್ರವಾಗಿದ್ದ ನೌಕಾವ್ಯವಸ್ಥೆ ದುರ್ಬಲವಾಗಿತ್ತು. ಇವುಗಳು ದೊಡ್ಡವಾಗುತ್ತಾ ಹೋದಂತೆ ಈ ಸೂತ್ರದ ಮೇಲಿನ ಎಳೆತ ಹೆಚ್ಚಾಗುತ್ತಾ ಹೋಯಿತು. ಕೆನಡಾದ ಅರಣ್ಯ ಪ್ರದೇಶಗಳಲ್ಲಿ ಫ್ರಾನ್ಸ್ ಸ್ಥಾಪಿಸಿದ್ದ ವ್ಯಾಪಾರ ಕೋಠಿಗಳಿದ್ದುವು. ಇವುಗಳು ಅಷ್ಟೇನೂ ಪ್ರಬಲವಾಗಿರಲಿಲ್ಲ. ಇಂಡಿಯದಂತಹ ದೊಡ್ಡ ವಿದೇಶಿ ಸಮಾಜದಲ್ಲಿ ಬ್ರಿಟನ್ನು ವಾಣಿಜ್ಯ ಸಂಸ್ಥೆಗಳನ್ನು ಸ್ಥಾಪಿಸಿತ್ತು. ಈ ವ್ಯಾಪಾರ ಕೋಠಿಗಳು ಹಾಗೂ ವಾಣಿಜ್ಯ ಸಂಸ್ಥೆಗಳಿಗೂ ಅವುಗಳನ್ನು ಪ್ರಾರಂಭಿಸಿ ನಡೆಸಿಕೊಂಡು ಹೋಗುತ್ತಿದ್ದ ರಾಷ್ಟ್ರಗಳಿಗೂ ಎಷ್ಟೋ ಅಷ್ಟು ಮಾತ್ರ ಸಂಬಂಧವಿರುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಮೊದಲಭಾಗದಲ್ಲಿ ಸಮುದ್ರದ ಆಚೆಯಿಂದ ಇದಕ್ಕಿಂತ ಹೆಚ್ಚು ಹತೋಟಿ ಇಟ್ಟುಕೊಳ್ಳಲು ಸಾಧ್ಯವಿಲ್ಲ ಎನಿಸುತ್ತಿತ್ತು. ಯೂರೋಪಿಯನ್ನರಿಗೆ ಸೇರಿದುವು ಎಂದು ಭೂಪಟಗಳಲ್ಲಿ ಸ್ಥೂಲವಾಗಿ ಗುರ್ತಿಸಿದ್ದ ಯೂರೋಪಿನ ಹೊರಗಿದ್ದ ಸಾಮ್ರಾಜ್ಯಗಳು ಕ್ರಿ.ಶ 1820ರ ಹೊತ್ತಿಗೆ ಕುಗ್ಗಿಹೋಗಿ ತುಂಬಾ ಚಿಕ್ಕದಾಗಿ ಬಿಟ್ಟಿದ್ದುವು. ರಷ್ಯನ್ ಸಾಮ್ರಾಜ್ಯ ಮಾತ್ರ ಮೊದಲಿನಿಂದ ಇದ್ದಂತೆ ದೊಡ್ಡದಾಗಿ ಏಷ್ಯಾದಲ್ಲಿ ಪಸರಿಸಿತ್ತು.

1815ರಲ್ಲಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಈ ಕೆಳಕಂಡ ಭಾಗಗಳಿದ್ದುವು: ಕೆನಡಾದ ಸಮುದ್ರತೀರ ಮತ್ತು ನದೀ ಸರೋವರಗಳ ದಡದ ಪ್ರದೇಶಗಳು (ಇಲ್ಲಿ ಅತಿಸ್ವಲ್ಪ ಜನರಿರುತ್ತಿದ್ದರು), ಅದೇ ದೇಶದಲ್ಲಿ ಹಡ್ಸನ್ ಬೇ ಕಂಪೆನಿಯ ತುಪ್ಪಳ ಚರ್ಮ ವ್ಯಾಪಾರದ ಠಾಣ್ಯಗಳು ಮಾತ್ರ ಇದ್ದ ವಿಶಾಲವಾದ ಹಿಮ್ಮೆಲೆಯ ಕಾಡು ಪ್ರದೇಶ, ಇಂಡಿಯಾ ಪರ್ಯಾಯ ಭೂಮಿಯ ಮೂರನೆ ಒಂದು ಭಾಗ (ಇದು ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿತ್ತು). ಕಪ್ಪು ಜನರು ಮತ್ತು ಪ್ರಾ[illegible]ಕೆಯಲ್ಲಿದ್ದ ಡಚ್ ವಲಸೆಗಾರರು ವಾಸಿಸುತ್ತಿದ್ದ ಗುಡ್‌ಹೋಪ್ ಭೂಶಿರದ ಸಮೀಪದ ತೀರಪ್ರದೇಶಗಳು, ಪಶ್ಚಿಮ ಆಫ್ರಿಕದ ತೀರದಲ್ಲಿ ಕೆಲವು ವ್ಯಾಪಾರ ಕೋಠಿಗಳು, ಜಿಬ್ರಾಲ್ಟರ್, ಮಾಲ್ಟಾದ್ವೀಪ, ಜಮೈಕಾ, ವೆಸ್ಟ್ ಇಂಡೀಸ್‌ನಲ್ಲಿದ್ದ ಗುಲಾಮರಿಂದ ಕೆಲಸ ನಡೆಯುತ್ತಿದ್ದ ಕೆಲವು ಅಷ್ಟು ಮುಖ್ಯವಲ್ಲದ ಸ್ವಾಮ್ಯಗಳು, ದಕ್ಷಿಣ ಅಮೆರಿಕದ ಗಯಾನ ಮತ್ತು ಭೂಮಿಯ ಮತ್ತೊಂದು ಪಕ್ಕದಲ್ಲಿ ಟಾಸ್ಮೇನಿಯದಲ್ಲಿ ಮತ್ತು ಆಸ್ಟ್ರೇಲಿಯದ ಬಾಟನಿ ಕೊಲ್ಲಿ ಪ್ರದೇಶದಲ್ಲಿ ಖೈದಿಗಳನ್ನು ಹಾಕುತ್ತಿದ್ದ ಪ್ರದೇಶಗಳು ಕ್ಯೂಬವನ್ನೂ ಮತ್ತು ಫಿಲಿಪೈನ್ ದ್ವೀಪಗಳಲ್ಲಿ ಕೆಲವು ಸ್ವಾಸ್ಥ್ಯಗಳನ್ನೂ ಸ್ಪೇನ್

ಉಳಿಸಿಕೊಂಡಿತ್ತು. ಪುರಾತನ ಹಕ್ಕುಗಳ ನೆನಪಿಗೆಂಬಂತೆ ಪೋರ್ಚುಗಲ್ಲಿನ ಪಾಲಿಗೆ ಕೆಲವೇ ಕೆಲವು ಪ್ರದೇಶಗಳು ಮಾತ್ರ ಉಳಿದಿದ್ದುವು. ಈಸ್ಟ್ ಇಂಡೀಸ್‌ನಲ್ಲಿ ಹಲವಾರು ದ್ವೀಪಗಳು ಮತ್ತು ಸ್ವಾಮ್ಯಗಳು ಮತ್ತು ಡಚ್ ಗಯಾನ ಹಾಲೆಂಡಿನ ಅಧೀನದಲ್ಲಿದ್ದುವು. ವೆಸ್ಟ್ ಇಂಡೀಸ್‌ನಲ್ಲಿ ಒಂದೋ ಎರಡೋ ದ್ವೀಪಗಳು ಡೆನ್ಮಾರ್ಕಿನ ವಶದಲ್ಲಿದ್ದುವು. ಒಂದೆರಡು ವೆಸ್ಟ್ ಇಂಡೀಸ್‌ನ ದ್ವೀಪಗಳು ಮತ್ತು ಫ್ರೆಂಚ್ ಗಯಾನ ಫ್ರಾನ್ಸಿನ ವಶದಲ್ಲಿದ್ದುವು. ಯೂರೋಪಿಗೆ ಅಥವಾ ಯೂರೋಪ್ ವಶಪಡಿಸಿಕೊಳ್ಳುವ ಸಾಧ್ಯತೆಯಿದ್ದದ್ದು ಇದಿಷ್ಟನ್ನು ಮಾತ್ರ ಎಂದು ಆಗ ಎನ್ನಿಸುತ್ತಿತ್ತು. ಇವುಗಳಲ್ಲಿ ವಿಸ್ತರಣಾಕಾಂಕ್ಷಿಯಾಗಿದ್ದುದು ಈಸ್ಟ್ ಇಂಡಿಯಾ ಕಂಪೆನಿ ಮಾತ್ರ.

ನೆಪೋಲಿಯನ್ನನ ಯುದ್ಧಗಳಲ್ಲಿ ಯೂರೋಪು ಮಗ್ನವಾಗಿದ್ದಾಗ ಇಂಡಿಯಾದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಹಿಂದೆ ಉತ್ತರದಿಂದ ದಂಡೆತ್ತಿ ಬಂದ ಟರ್ಕೋಮನ್ನರು ಮತ್ತಿತರ ಆಕ್ರಮಣಕಾರರ ಮೇಲ್ಪಂಕ್ತಿಯನ್ನು ಅನುಸರಿಸುತ್ತಿತ್ತು. ಒಬ್ಬನಾದ ಮೇಲೆ ಒಬ್ಬನಂತೆ ಗವರ್ನರ್ ಜನರಲ್‌ಗಳು ಅಲ್ಲಿ ಆಳುತ್ತಿದ್ದರು. ವಿಯೆನ್ನಾದ ಶಾಂತಿಕಾಲದ ಅನಂತರವೂ ತೆರಿಗೆ ವಸೂಲಿ ಮಾಡುವುದು, ಯುದ್ಧ ಹೂಡುವುದು, ಏಷ್ಯದ ಪ್ರಭುತ್ವಗಳಿಗೆ ರಾಯಭಾರಿಗಳನ್ನು ಕಳುಹಿಸುವುದು ಇವೆಲ್ಲವನ್ನೂ ಈಸ್ಟ್ ಇಂಡಿಯಾ ಕಂಪೆನಿ ನಡೆಸುತ್ತಲೇ ಇತ್ತು. ಇದೊಂದು ಬಗೆಯ ಸ್ವತಂತ್ರ ಪ್ರಭುತ್ವವೇ ಆಗಿತ್ತು. ಈ ಪ್ರಭುತ್ವದ ಐಶ್ವರ್ಯವನ್ನು ಪಶ್ಚಿಮಾಭಿಮುಖವಾಗಿ ಕಳುಹಿಸುವುದೇ ಈ ಪ್ರಭುತ್ವದ ಮುಖ್ಯ ಪ್ರವೃತ್ತಿಯಾಗಿತ್ತು.

ಈ ಬ್ರಿಟಿಷ್ ಕಂಪನಿಯು ಪರಮಾಧಿಪತ್ಯವನ್ನು ಹೇಗೆ ಗಳಿಸಿತು ಎಂಬುದನ್ನು ವಿವರವಾಗಿ ಇಲ್ಲಿ ಹೇಳಲು ಸಾಧ್ಯವಿಲ್ಲ. ಒಮ್ಮೆ ಒಂದು ಪ್ರಭುತ್ವದೊಡನೆ ಮೈತ್ರಿ ಬೆಳೆಸುವುದು, ಮತ್ತೊಮ್ಮೆ ಇನ್ನೊಂದು ಪ್ರಭುತ್ವದ ಮಿತ್ರನಾಗುವುದು ಹೀಗೆ ಮಾಡುತ್ತಾ ಕಡೆಗೆ ಎಲ್ಲ ಪ್ರಭುತ್ವಗಳನ್ನೂ ಜಯಿಸಿತು. ಇದರ ಅಧಿಕಾರ ಅಸ್ಸಾಂ ಸಿಂಧ್ ಮತ್ತು ಅವಧ್‌ಗಳಿಗೆ ಹರಡಿತು. ಇಂಡಿಯಾದ ಭೂಪಟ ಈಗ ಎಲ್ಲ ಇಂಗ್ಲಿಷ್ ಶಾಲಾ ವಿದ್ಯಾರ್ಥಿಗಳಿಗೂ ಪರಿಚಿತವಾದ ರೂಪಪಡೆಯಿತು; ಅಂದರೆ ನೇರವಾಗಿ ಬ್ರಿಟಿಷರ ಆಡಳಿತಕ್ಕೊಳಪಟ್ಟ ದೊಡ್ಡ ದೊಡ್ಡ ಅಧಿಪತ್ಯಗಳು ಮತ್ತು ಅವುಗಳಿಂದ ಆವೃತವಾದ ದೇಶೀ ಸಂಸ್ಥಾನಗಳು.

ದೇಶೀಯ ಸೈನಿಕರು ಒಂದು ಗಂಭೀರ ಸ್ವರೂಪದ ದಂಗೆ ನಡೆಸಿದರು. ಅದರ ನಂತರ 1859ರಲ್ಲಿ ಈ ಸಾಮ್ರಾಜ್ಯ ಬ್ರಿಟಿಷ್ ರಾಜನ ಸೆತ್ತನಕ್ಕೆ ಸೇರಿತು. "ಇಂಡಿಯಾದಲ್ಲಿ ಆಡಳಿತ ಉತ್ತಮಪಡಿಸುವುದಕ್ಕಾಗಿ ಕಾಯಿದೆ" ಎಂಬ ಕಾನೂನಿನ ಫಲವಾಗಿ ಗವರ್ನರ್ ಜನರಲ್ಲನು ಇಂಗ್ಲೆಂಡಿನ ರಾಜನನ್ನು ಪ್ರತಿನಿಧಿಸುವ "ವೈಸ್‌ರಾಯ್" ಆದನು. ಈಸ್ಟ್ ಇಂಡಿಯಾ ಕಂಪೆನಿಯ ಸ್ಥಾನಕ್ಕೆ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯ ಬಂದನು. ಇವನು ಬ್ರಿಟಿಷ್ ಪಾರ್ಲಿಮೆಂಟಿನೆದುರು ಇಂಡಿಯಾದ ಬಗ್ಗೆ ಜವಾಬ್ದಾರಿ ವಹಿಸಬೇಕಾಗಿತ್ತು. 1877ರಲ್ಲಿ ಲಾರ್ಡ್

ಬೀಕನ್ಸ್ ಫೀಲ್ಡ್ ವಿಕ್ಟೋರಿಯ ರಾಣಿಯನ್ನು ಇಂಡಿಯದ ಚಕ್ರವರ್ತಿನಿ ಎಂದು ಘೋಷಿಸಿದಾಗ ಈ ಕ್ರಿಯೆ ಪೂರ್ಣವಾಯಿತು.

ಈ ರೀತಿಯ ವಿಶೇಷ ಸಂಬಂಧ ಸಧ್ಯದಲ್ಲಿ ಇಂಡಿಯಾ ಮತ್ತು ಬ್ರಿಟನ್‌ಗಳನ್ನು ಹೆಣೆದಿಟ್ಟಿದೆ. ಇಂದಿಗೂ ಇಂಡಿಯ ಅಂದಿನ ಭಾರೀ ಮೊಗಲ್ ಸಾಮ್ರಾಜ್ಯವೇ. ಆದರೆ ಆ ಮೊಗಲನ ಸ್ಥಾನಕ್ಕೆ ಗ್ರೇಟ್ ಬ್ರಿಟನ್ನಿನ ಅಭಿಷಿಕ್ತರಾಜನಿರುವ ಪ್ರಜಾ ಪ್ರಭುತ್ವ ಬಂದಿದೆ. ನಿರಂಕುಶರಾಜನಿಲ್ಲದಿರುವ ನಿರಂಕುಶ ಪ್ರಭುತ್ವ ಇಂದಿನ ಇಂಡಿಯ. ನಿರಂಕುಶ ರಾಜಪ್ರಭುತ್ವದ ಅನಾನುಕೂಲಗಳೊಡನೆ ಪ್ರಜಾಪ್ರಭುತ್ವ ಗಳಲ್ಲಿರುವ ವೈಯಕ್ತಿಕ ಕಾಳಜಿ ಇಲ್ಲದ ಬೇಜವಾಬ್ದಾರಿಯ ಅಧಿಕಾರಿವರ್ಗವೂ ಇಲ್ಲಿದೆ. ಭಾರತೀಯನೊಬ್ಬನು ಏನಾದರೂ ದೂರು ತೆಗೆದುಕೊಂಡು ಹೋಗ ಬೇಕೆಂದರೆ ಅವನಿಗೆ ಕಣ್ಣಿಗೆ ಕಾಣುವಂಥ ರಾಜ ಯಾರು ಇಲ್ಲ. ಅವನ ಚಕ್ರವರ್ತಿ ಒಂದು ಸುವರ್ಣ ಸಂಕೇತವಷ್ಟೆ. ಈ ಪ್ರಜೆ ಮಾಡಬಹುದಾದುದು ಎಂದರೆ ಇಂಗ್ಲೆಂಡಿನಲ್ಲಿ ಪ್ರಚಾರ ಪತ್ರಿಕೆಗಳನ್ನು ಹಂಚುವುದು ಇಲ್ಲವೇ ಅಲ್ಲಿಯ ಹೌಸ್ ಆಫ್ ಕಾಮನ್ಸಿನಲ್ಲಿ ಪ್ರಶ್ನೆ ಕೇಳುವಂತೆಮಾಡುವುದು. ಪಾರ್ಲಿಮೆಂಟಿನಲ್ಲಿ ಬ್ರಿಟನ್ನಿನ ವ್ಯವಹಾರಗಳು ಹೆಚ್ಚಾದಷ್ಟೂ ಇಂಡಿಯಾ ದೇಶದ ಕಡೆ ಗಮನ ಕಡಮೆಯಾಗಿ ಅಲ್ಲಿನ ಜನ ಉನ್ನತ ಅಧಿಕಾರಿಗಳ ಒಂದು ಸಣ್ಣ ಗುಂಪಿನ ಕೃಪಾಕಟಾಕ್ಷವನ್ನೇ ಎದುರು ನೋಡಬೇಕಾಗುತ್ತದೆ.

ರೈಲ್ವೆಗಳು ಮತ್ತು ಹಬೆಜಹಜುಗಳ ಉಪಯೋಗ ಪರಿಣಾಮಕಾರಿಯಾಗುವ ವರೆಗೆ ಇಂಡಿಯ ಬಿಟ್ಟರೆ ಮತ್ತೆಲ್ಲೂ ಯಾವ ಯೂರೋಪಿಯನ್ ಚಕ್ರಾಧಿಪತ್ಯವೂ ವಿಸ್ತಾರಗೊಳ್ಳಲಿಲ್ಲ. ಬ್ರಿಟನ್ನಿನಲ್ಲಿ ಎಷ್ಟೋ ಜನ ರಾಜಕೀಯ ಚಿಂತಕರು ಸಮುದ್ರ ದಾಚೆಯ ಸ್ವಾಮ್ಯಗಳಿಂದ ರಾಜ್ಯ ದುರ್ಬಲವಾಗುವುದೆಂದು ಅಭಿಪ್ರಾಯ ಪಡುತ್ತಿದ್ದರು. 1842ರಲ್ಲಿ ಬೆಲೆ ಬಾಳುವ ತಾಮ್ರಗಣಿಗಳೂ 1851ರಲ್ಲಿ ಚಿನ್ನದ ಗಣಿಗಳೂ ಸಿಕ್ಕಮೇಲೆ ಆಸ್ಟ್ರೇಲಿಯದ ವಸಾಹತುಗಳಿಗೆ ಹೊಸ ಪ್ರಾಮುಖ್ಯ ಬಂದಿತು. ಅಲ್ಲಿಯವರೆಗೆ ಅವು ಬಲು ನಿಧಾನವಾಗಿ ಅಭಿವೃದ್ಧಿ ಹೊಂದುತ್ತಿದ್ದುವು. ಸಾರಿಗೆ ವ್ಯವಸ್ಥೆ ಉತ್ತಮಗೊಂಡಂತೆ ಯೂರೋಪಿನಲ್ಲಿ ಆಸ್ಟ್ರೇಲಿಯದ ಉಣ್ಣೆಯ ಮಾರಾಟ ಹೆಚ್ಚಾಯಿತು. 1849ರವರೆಗೂ ಕೆನಡಾದಲ್ಲೂ ಅಂಥಗಮನಾರ್ಹ ಪ್ರಗತಿಯಾಗಲಿಲ್ಲ ಅಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ನಿವಾಸಿಗಳ ಮಧ್ಯೆ ವೈಮನಸ್ಯವಿದ್ದು ಹಲವು ದೊಡ್ಡ ದಂಗೆಗಳೂ ಆದುವು. 1867ರಲ್ಲಷ್ಟೆ ಒಂದು ಹೊಸ ಸಂವಿಧಾನ ರೂಪಿತವಾಗಿ ಕೆನಡಾ ಒಂದು ಸಂಯುಕ್ತ ಆಧಿಪತ್ಯ (ಫೆಡರಲ್‌ಡೊಮಿನಿಯನ್) ಎಂಬ ಸ್ಥಾನ ಪಡೆದು ಈ ಒಳತೊಡಕುಗಳು ಪರಿಹಾರವಾದುವು. ಕೆನಡಾದ ಸ್ವರೂಪವನ್ನು ಬದಲಾಯಿಸಿದ್ದು ರೈಲುಗಾಡಿಯೇ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಆದರಂತೆ ಇಲ್ಲಿಯೂ ಕೆನಡಾ ಪಶ್ಚಿಮಾಭಿಮುಖವಾಗಿವ್ಯಾಪಿಸಲು ಹಾಗೂ ಅಲ್ಲಿ ಬೆಳೆದ ಕಾಳುಮತ್ತಿತರ ಉತ್ಪನ್ನಗಳು ಯೂರೋಪಿನಲ್ಲಿ ಮಾರಾಟವಾಗಲು ರೈಲ್ವೆಯಿಂದ ಅನುಕೂಲ ವಾಯಿತು. ಆಸ್ಟ್ರೇಲಿಯಲ್ಲಿ, ಅತಿ ವೇಗವಾಗಿ ಅತಿವಿಸ್ತಾರವಾಗಿ ಬೆಳೆದದ್ದು ಆ ದೇಶ

ಭಾಷೆ, ಅಂತಃಕರಣ ಮತ್ತು ಚಿಂತನೆಗಳಲ್ಲಿ ಒಂದೇ ಸಮುದಾಯವಾಗಿ ಉಳಿದು ಕೊಳ್ಳಲು ಸಾಧ್ಯವಾಯಿತು. ರೈಲುಗಾಡಿಗಳು, ಹಬೆಹಡಗುಗಳು ಮತ್ತು ತಂತಿ ವರ್ತಮಾನ (ಟೆಲಿಗ್ರಾಫ್)ಗಳ ಮೂಲಕ ವಸಾಹತುಗಳು ಬೆಳೆಯುತ್ತಿದ್ದ ರೀತಿಯೇ ಬದಲಾಯಿಸಿಹೋಯಿತು.

1840ಕ್ಕೂ ಮೊದಲೇ ನ್ಯೂಜಿಲೆಂಡಿನಲ್ಲಿ ಇಂಗ್ಲೆಂಡಿನ ಜನನೆಲಸಲು ಮೊದಲು ಮಾಡಿದ್ದರು. ಆ ದ್ವೀಪಗಳಿಂದ ಎಷ್ಟು ಸಾಧ್ಯವೋ ಅಷ್ಟು ಪ್ರಯೋಜನ ಪಡೆದು ಕೊಳ್ಳುವ ಸಲುವಾಗಿ ನ್ಯೂಜಿಲ್ಯಾಂಡ್ ಭೂಕಂಪೆನಿಯೆಂಬ ಕಂಪೆನಿ ಸ್ಥಾಪಿತ ವಾಗಿತ್ತು. 1840ರಲ್ಲಿ ಬ್ರಿಟಿಷ್‌ರಾಜರ ವಸಾಹತು ಸ್ವಾಮ್ಯಗಳಲ್ಲಿ ನ್ಯೂಜಿ ಲ್ಯಾಂಡನ್ನೂ ಸೇರಿಸಲಾಯಿತು.

ಈ ಹೊಸ ಸಾರಿಗೆ ವಿಧಾನಗಳ ಪೂರ್ಣ ಪ್ರಯೋಜನ ಪಡೆದು ಅವುಗಳ ಆರ್ಥಿಕ ಸಾಧ್ಯತೆಗಳನ್ನು ನನಸನ್ನಾಗಿ ಮಾಡಲು ಪ್ರಯತ್ನಿಸಿದ ಬ್ರಿಟಿಷ್ ಸ್ವಾಮ್ಯಗಳಲ್ಲಿ ಕೆನಡಾ ದೇಶವೇ ಮೊದಲನೆಯದೆಂದು ನೋಡಿದೆವು ಬಳಿಕ ಪಶುಪಾಲನೆಯಲ್ಲಿ ಮತ್ತು ಕಾಫಿ ಬೆಳೆಯುವುದರಲ್ಲಿ ಮುಂದಿದ್ದ ದಕ್ಷಿಣ ಅಮೆರಿಕದ ಪ್ರಜಾರಾಜ್ಯಗಳಿಗೆ ಅದರಲ್ಲೂ ಅರ್ಜೆಂಟೈನಾಕ್ಕೆ ಬಹುಬೇಗನೇ ಯುರೋಪಿನ ಮಾರುಕಟ್ಟೆ ಹತ್ತಿರ ವಾಗುತ್ತಾಬಂತು ಎನಿಸಿತು. ಅದುವರೆಗೆ ಚಿನ್ನ ಮತ್ತಿತರ ಲೋಹಗಳು, ಸಂಬಾರ ವಸ್ತುಗಳು, ದಂತ ಮತ್ತು ಗುಲಾಮರುಗಳ ಆಸೆಯಿಂದ ಯುರೋಪಿನ ಜನರು ಸುರಕ್ಷಿತವಲ್ಲದ ಅನಾಗರಿಕ ಪ್ರದೇಶಗಳಿಗೆ ಹೋಗುತ್ತಿದ್ದರು. ಆದರೆ 19ನೆ ಶತಮಾನದ ಕಡೆಯ ಇಪ್ಪತ್ತೈದು ವರ್ಷ ಯುರೋಪಿನ ಜನಸಂಖ್ಯೆ ಹೆಚ್ಚಾಗಿ ಹೋದದರಿಂದ ಅಲ್ಲಿಯ ಸರ್ಕಾರಗಳು ಪ್ರಮುಖ ಆಹಾರ ಪದಾರ್ಥಗಳಿಗಾಗಿ ಸಮುದ್ರದಾಚೆಯ ನಾಡುಗಳತ್ತ ನೋಡುವ ಪರಿಸ್ಥಿತಿ ಬಂದಿತ್ತು. ವೈಜ್ಞಾನಿಕವಾಗಿ ಕೈಗಾರಿಕಾ ಕ್ಷೇತ್ರದಲ್ಲಿ ಪ್ರಗತಿಯಾದುದರಿಂದ ಹೊಸ ಹೊಸ ಕಚ್ಚಾ ಪದಾರ್ಥಗಳಿಗಾಗಿ ಅದರಲ್ಲೂ ಎಲ್ಲ ಬಗೆ ಕೊಬ್ಬು ಮತ್ತು ಜಿಡ್ಡುಗಳು ರಬ್ಬರ್ ಮತ್ತು ಅದುವರೆಗೆ ಮುಖ್ಯವೆಂದು ಪರಿಗಣಿಸದಿದ್ದ ಕೆಲವು ಪದಾರ್ಥಗಳಿಗೆ ಗಿರಾಕಿ ಬಂದಿತು. ಉಷ್ಣವಲಯ ಮತ್ತು ಅದರ ಸಮೀಪದ ಪ್ರದೇಶದ ಉತ್ಪನ್ನಗಳ ಮೇಲೆ ಬೇಕಾದಷ್ಟು ಹತೋಟಿ ಇದ್ದ ಗ್ರೇಟ್ ಬ್ರಿಟನ್, ಹಾಲೆಂಡ್ ಮತ್ತು ಪೋರ್ಚುಗಲ್ ದೇಶಗಳಿಗೆ ತುಂಬಾ ಲಾಭವಾಗುತ್ತಿತ್ತು ಎಂಬುದು ಸ್ಪಷ್ಟವಾಗಿತ್ತು. 1871ರ ಬಳಿಕ ಜರ್ಮನಿ, ಅನಂತರ ಫ್ರಾನ್ಸ್, ಬಳಿಕ ಇಟಲಿಗಳು ಅದುವರೆಗೂ ಯಾರ ಕೈಗೂ ಸಿಕ್ಕಿರದಿದ್ದ ಕಚ್ಚಾ ವಸ್ತುಗಳು ಸಿಗುವ ಪ್ರದೇಶಗಳಿಗಾಗಿ ಮತ್ತು ಲಾಭದಾಯಕವಾಗುವಂತೆ ಅಧೀನೀಕರಿಸಬಹುದಾದ ಪೌರ್ವಾತ್ಯ ದೇಶಗಳ ಶೋಧದಲ್ಲಿ ತೊಡಗಿದರು.

ಮನ್ರೋತತ್ತ್ವ ಜಾರಿಯಲ್ಲಿದ್ದ ಅಮೆರಿಕಗಳಲ್ಲಿ ಇಂತಹ ಹಂಚಿಕೆಗಳನ್ನು ನಿಷೇಧಿಸಲಾಗಿತ್ತು. ಪ್ರಪಂಚದ ಉಳಿದ ಎಲ್ಲ ಕಡೆಗಳಲ್ಲೂ ರಾಜಕೀಯವಾಗಿ ರಕ್ಷಣೆ ಇಲ್ಲದಿದ್ದ ನಾಡುಗಳಿಗಾಗಿ ಹೋರಾಟ ನಡೆಯಿತು.

ಯೂರೋಪಿಗೆ ತುಂಬ ಹತ್ತಿರವಾದ ಭೂಖಂಡ ಆಫ್ರಿಕ. ಅಲ್ಲಿ ಬೇಕಾದಷ್ಟು ಇಂಥ ಅವಕಾಶಗಳಿದ್ದುವು ಎಂದು ಕಲ್ಪಿಸಿಕೊಳ್ಳಬಹುದಾಗಿತ್ತು. 1850ರಲ್ಲಿ ಅದು ನಿಗೂಢವಾದ ಕತ್ತಲೆಯ ಭೂಖಂಡವಾಗಿತ್ತು. ಈಜಿಪ್ಟ್ ಮತ್ತು ಈ ಖಂಡದ ತೀರ ಪ್ರದೇಶಗಳು ಮಾತ್ರ ಪರಿಚಿತವಾಗಿದ್ದುವು. ಆಫ್ರಿಕದ ಅಂಧಕಾರವನ್ನು ಮೊದಲು ಭೇದಿಸಿ ಮುನ್ನುಗ್ಗಿದ ಸಂಶೋಧಕರು ಮತ್ತು ಸಾಹಸಿಗಳು, ಅವರನ್ನು ಹಿಂಬಾಲಿಸಿ ಹೋದ ರಾಜಕೀಯ ಪ್ರತಿನಿಧಿಗಳು, ಆಡಳಿತಗಾರರು, ವ್ಯಾಪಾರಿಗಳು, ಅಲ್ಲಿ ನೆಲಸಿದವರು ಮತ್ತು ವಿಜ್ಞಾನಿಗಳ ಅದ್ಭುತ ಕತೆಗಳನ್ನು ಹೇಳಲು ಇಲ್ಲಿ ಅವಕಾಶವಿಲ್ಲ. ಪಿಗ್ಮಿಗಳಂಥ ಆಶ್ಚರ್ಯಕರ ಜನಾಂಗದವರು, ಒಕಾಪಿಯಂಥ ವಿಚಿತ್ರ ಪ್ರಾಣಿಗಳು, ಸೋಜಿಗಗೊಳಿಸುವ ಹಣ್ಣು ಹೂಗಳು ಮತ್ತು ಕೀಟಗಳು, ಭಯಂಕರ ರೋಗಗಳು, ದಿಗ್ಭ್ರಮೆಗೊಳಿಸುವ ಅರಣ್ಯ ಹಾಗೂ ಪರ್ವತ ದೃಶ್ಯಗಳು, ಅಗಾಧವಾದ ಒಳನಾಡಿನ ಸಮುದ್ರಗಳು, ಬೃಹದಾಗಾತ್ರದ ನದಿಗಳು ಮತ್ತು ಜಲಪಾತಗಳು ಬೆಳಕಿಗೆ ಬಂದುವು. ಅದೇ ಒಂದು ದೊಡ್ಡ ಹೊಸ ಪ್ರಪಂಚವಾಗಿತ್ತು. ಜಿಂಬಾಬ್ವೆಯಲ್ಲಿ ಯಾವುದೋ ಪುರಾತನ ಕಾಲದ ಅಳಿದು ಹೋದ ಜನರ ಅವಶೇಷಗಳೂ ಸಹ ಸಿಕ್ಕಿದುವು. ಇವರು ಬಹು ಹಿಂದೆ ದಕ್ಷಿಣಾಭಿಮುಖವಾಗಿ ಹೊರಟಿದ್ದವರಾಗಿರಬೇಕು. ಈ ನೂತನ ಪ್ರಪಂಚಕ್ಕೆ ಯೂರೋಪಿಯನ್ನರು ಬರುವ ಹೊತ್ತಿಗಾಗಲೇ ಅಲ್ಲಿ ಅರಬ್ ಗುಲಾಮ ವ್ಯಾಪಾರಿಗಳ ಕೈಯಲ್ಲಿ ಬಂದೂಕು ಬಂದುಬಿಟ್ಟಿತ್ತು. ನೀಗ್ರೋ ಜನಜೀವನವೆಲ್ಲ ಅಸ್ತವ್ಯಸ್ತವಾಗಿ ಹೋಗಿತ್ತು.

ಅರ್ಧ ಶತಮಾನ ಕಳೆಯುವಷ್ಟರಲ್ಲಿ 1900ರ ಹೊತ್ತಿಗಾಗಲೇ ಯೂರೋಪಿನ ರಾಜ್ಯಗಳು ಸಮಗ್ರ ಆಫ್ರಿಕದ ನಕ್ಷೆ ತಯಾರು ಮಾಡಿ ಆ ಭೂಖಂಡವನ್ನು ಪೂರ್ತಿ ಸಂಶೋಧಿಸಿ ಅಳತೆಮಾಡಿ ತಮ್ಮ ತಮ್ಮಲ್ಲೇ ಹಂಚಿಕೊಂಡು ಬಿಟ್ಟಿದ್ದುವು. ಈ ಕಚ್ಚಾಟದಲ್ಲಿ ಅಲ್ಲಿಯ ನಿವಾಸಿಗಳ ಯೋಗಕ್ಷೇಮ ಕುರಿತು ಯಾರೂ ಸ್ವಲ್ಪವೂ ಜವಾಬ್ದಾರಿ ವಹಿಸಲಿಲ್ಲ. ಅರಬ್ಬಿ ಗುಲಾಮ ವ್ಯಾಪಾರಿಗಳನ್ನು ಓಡಿಸಲಿಲ್ಲ. ಆದರೆ ಹತೋಟಿಯಲ್ಲಿಡಲಾಯಿತು. ಆದರೂ ಹೆಚ್ಚು ಹೆಚ್ಚಾಗಿ ರಬ್ಬರ್‌ಬೇಕೆಂಬ ದುರಾಸೆ ಅನೇಕ ಹೇಯ ಕೃತ್ಯಗಳಿಗೆ ಕಾರಣವಾಯಿತು. ಆಗ ರಬ್ಬರನ್ನು ಅರಣ್ಯಗಳಿಂದ ಸಂಗ್ರಹಿಸಬೇಕಾಗಿತ್ತು. ಇದಕ್ಕಾಗಿ ಬೆಲ್ಜಿಯಂ ಕಾಂಗೋವಿನಲ್ಲಿ ಅಲ್ಲಿಯ ನಿವಾಸಿಗಳನ್ನು ಬಲಾತ್ಕರಿಸುತ್ತಿದ್ದರು. ಈ ದುರಾಸೆಯೊಡನೆ ಅನುಭವಿಗಳಾದ ಯೂರೋಪಿಯನ್ ಅಧಿಕಾರಿಗಳಿಗೂ ಅಲ್ಲಿಯ ಮೂಲನಿವಾಸಿಗಳಿಗೂ ಆಗುತ್ತಿದ್ದ ಘರ್ಷಣೆಗಳೂ ಸೇರಿ ಘೋರವಾದ ಹಿಂಸಾಕೃತ್ಯಗಳು ನಡೆದುವು. ಈ ಸಂಬಂಧದಲ್ಲಿ ಎಲ್ಲ ಯೂರೋಪಿಯನ್ ರಾಜ್ಯಗಳೂ ಕಲಂಕ ಹಚ್ಚಿಕೊಂಡವು.

ಬ್ರಿಟನ್ 1883ರಲ್ಲಿ ಈಜಿಪ್ಟನ್ನು ಸ್ವಾಧೀನ ಮಾಡಿಕೊಂಡು ಆ ದೇಶ ಟರ್ಕಿ ಚಕ್ರಾಧಿಪತ್ಯದ ಭಾಗವಾಗಿದ್ದರೂ ಅಲ್ಲಿಯೇ ಉಳಿಯಿತು. ಕರ್ನಲ್ ಮಾರ್ಚಾಂದ್

ಎಂಬುವನು ಮಧ್ಯ ಆಫ್ರಿಕವನ್ನು ಪಶ್ಚಿಮ ತೀರದಿಂದ ಹಾದುಬಂದು ಫಷೋದಾ (Fashoda) ಎಂಬಲ್ಲಿ ನೈಲ್ ನದಿಯನ್ನು ಮೇಲ್ಭಾಗದ ಪ್ರದೇಶಗಳನ್ನು ವಶಪಡಿಸಿ ಕೊಳ್ಳಲು ಯತ್ನಿಸಿದನು. ಇದರ ಫಲವಾಗಿ 1898ರಲ್ಲಿ ಇಂಗ್ಲೆಂಡು ಮತ್ತು ಫ್ರಾನ್ಸ್‌ಗಳ ನಡುವೆ ಇನ್ನೇನು ಯುದ್ಧ ಮಾಡಲಾಗುವುದರಲ್ಲಿತ್ತು. ಇವನ್ನೆಲ್ಲಾ ಇಲ್ಲಿ ವಿವರವಾಗಿ ಹೇಳಲು ಸಾಧ್ಯವಿಲ್ಲ.

ಹಾಗೆಯೇ ದಕ್ಷಿಣ ಆಫ್ರಿಕಾದ ಸಂಗತಿ ಸಹ ವಿವರವಾಗಿ ಹೇಳಲು ಸಾಧ್ಯವಿಲ್ಲ. ಬೋಯರ್‌ಗಳೆಂಬ ಡಚ್ ನೆಲಸುನಾಡಿಗರು ಆರೆಂಜ್ ನದಿ ಪ್ರದೇಶ ಮತ್ತು ಟ್ರಾನ್ಸ್‌ವಾಲಿನಲ್ಲಿ ಸ್ವತಂತ್ರ ಗಣರಾಜ್ಯಗಳನ್ನು ಸ್ಥಾಪಿಸಬಹುದೆಂದು ಬ್ರಿಟಿಷ್ ಸರ್ಕಾರ ಮೊದಲು ಒಪ್ಪಿಕೊಂಡಿತು. ಬಳಿಕ ಹಾಗೆ ಮಾಡಬಾರದಿತ್ತೆಂದು ಚಿಂತಿಸಿ 1877ರಲ್ಲಿ ಟ್ರಾನ್ಸ್‌ವಾಲನ್ನು ವಶಪಡಿಸಿಕೊಂಡಿತು. ಅಲ್ಲಿನ ಬೋಯರ್‌ಗಳು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಾಜುಬಾ ಗುಡ್ಡದ ಕದನ (1881)ದ ನಂತರ ವಿಜಯ ಗಳಿಸಿದರು. ಒಂದೇ ಸಮನೆ ವಾರ್ತಾ ಪತ್ರಿಗಳಲ್ಲಿ ನಡೆಸಿದ ಪ್ರಚಾರ ಇಂಗ್ಲಿಷ್ ಜನರ ಮನಸ್ಸಿನಲ್ಲಿ ಈ ಮಾಜುಬಾ ಗುಡ್ಡದ ಕದನ ಸದಾ ಚುಚ್ಚುತ್ತಿರುವಂತೆ ಮಾಡಿತು. ಈ ಎರಡೂ ಗಣರಾಜ್ಯಗಳೊಂದಿಗೆ 1899ರಲ್ಲಿ ಯುದ್ಧ ಪ್ರಾರಂಭವಾಯಿತು. ಮೂರು ವರ್ಷ ನಡೆದ ಈ ಯುದ್ಧದಲ್ಲಿ ಬ್ರಿಟಿಷರಿಗೆ ವಿಪರೀತ ನಷ್ಟವಾದರೂ ಕಡೆಗೆ ಈ ಎರಡೂ ಗಣರಾಜ್ಯಗಳೂ ಶರಣಾದುವು.

ಆದರೆ ಅವು ಹೀಗೆ ಬ್ರಿಟಿಷರ ಹತೋಟಿಯಲ್ಲಿದ್ದುದು ಅತ್ಯಲ್ಪಕಾಲ ಮಾತ್ರ. 1907ರಲ್ಲಿ ಅವುಗಳನ್ನು ಸೋಲಿಸಿದ್ದ ಸಾಮ್ರಾಜ್ಯವಾದಿ ಸರ್ಕಾರ ಬಿದ್ದುಹೋಯಿತು. ಅನಂತರ ಇಂಗ್ಲೆಂಡಿನ ಲಿಬರಲ್ ಪಾರ್ಟಿಯವರು ಈ ಸಮಸ್ಯೆಯನ್ನು ವಹಿಸಿಕೊಂಡರು. ಕೊನೆಗೆ ಆವೆರಡೂ ದಕ್ಷಿಣ ಆಫ್ರಿಕದ ಎಲ್ಲ ರಾಜ್ಯಗಳೂ ಇರುವಂತಹ ಒಂದು ಸಂಯುಕ್ತ ರಾಜ್ಯದ ಸಹ ಸದಸ್ಯರುಗಳಾಗಿ ಕೇಪ್ ಕಾಲೊನಿ ಮತ್ತು ನೇಟಾಲ್‌ಗಳೊಡನೆ ತಮ್ಮ ಸ್ವಂತ ಇಷ್ಟದಿಂದಲೇ ಸೇರಿದುವು. ಬ್ರಿಟಿಷ್ ರಾಜರ ಕೈಕೆಳಗಿದ್ದ ಈ ಸಂಯುಕ್ತ ರಾಜ್ಯಕ್ಕೆ ಸ್ವತಂತ್ರ ಆಡಳಿತವಿತ್ತು.

ಈಗಾಲು ಶತಮಾನ ಕಳೆಯುವಷ್ಟರಲ್ಲಿ ಆಫ್ರಿಕವನ್ನು ಪೂರ್ತಿ ಹಂಚಿಕೊಂಡು ಆಯಿತು. ಮೂರು ಸಣ್ಣ ರಾಜ್ಯಗಳು ಮಾತ್ರ ಯಾರಿಗೂ ಸೇರದೆ ಉಳಿದುಕೊಂಡುವು. ಪಶ್ಚಿಮ ತೀರದಲ್ಲಿದ್ದ ಬಿಡುಗಡೆ ಪಡೆದ ನೀಗ್ರೊ ಗುಲಾಮರು ನೆಲಸಿದ್ದ ರಾಜ್ಯ ಲೈಬೀರಿಯ; ಮುಸ್ಲಿಮ್ ಸುಲ್ತಾನನ ಕೈಕೆಳಗಿದ್ದ ಮೊರಾಕೊ; ಅನಾಗರೀಕ ರಾಜ್ಯವಾದ ಅಬಿಸೀನಿಯ. ಈ ಕಡೆಯ ರಾಜ್ಯದಲ್ಲಿ ಪ್ರಾಚೀನ ಕಾಲದ ವಿಚಿತ್ರವಾದ ಕ್ರೈಸ್ತ ಧರ್ಮ ಆಚರಣೆಯಲ್ಲಿತ್ತು. ಈ ರಾಜ್ಯ 1896ರಲ್ಲಿ ನಡೆದ ಅಡೋವಾ ಕದನದಲ್ಲಿ ಇಟಲಿಯೊಡನೆ ಹೋರಾಡಿ ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡಿತ್ತು.

63. ಏಷ್ಯದಲ್ಲಿ ಯುರೋಪಿಯನರ ಆಕ್ರಮಣ ಮತ್ತು ಜಪಾನಿನ ಉತ್ಥಾನ

ಹೀಗೆ ಯುರೋಪಿನ ಜನರು ಆಫ್ರಿಕದ ಭೂಪಟಕ್ಕೆ ಯುರೋಪಿನ ಬಣ್ಣಗಳನ್ನು ತಮ್ಮ ಮನಸ್ಸಿಗೆ ಬಂದಂತೆ ಬಳಿದರು. ಪ್ರಪಂಚದ ಆಗುಹೋಗುಗಳಲ್ಲಿ ಶಾಶ್ವತವಾಗಿ ಉಳಿಯುವ ಒಂದು ಏರ್ಪಾಟೆಂದು ಅಸಂಖ್ಯಾತ ಜನರು ಇದನ್ನು ಒಪ್ಪಿಕೊಂಡರು ಎಂಬುದನ್ನು ನಂಬುವುದು ಕಷ್ಟವಾದರೂ ಹಾಗೆ ಎಲ್ಲರೂ ಇದನ್ನು ಒಪ್ಪಿಕೊಂಡರು ಎಂದು ಚರಿತ್ರಕಾರ ಬರೆಯಲೇಬೇಕಾಗುತ್ತದೆ. 19ನೆ ಶತಮಾನದ ಯುರೋಪಿನ ಜನತೆಗೆ ಚಾರಿತ್ರಿಕ ಅರಿವಿದ್ದುದು ಬಹು ಸ್ವಲ್ಪ. ಯಾವುದೇ ಸಂಗತಿಯನ್ನು ಆಳವಾಗಿ ಪರಿಶೀಲಿಸುವ ಪ್ರವೃತ್ತಿಯಂತೂ ಇರಲೇ ಇಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ನಡೆದ ಯಾಂತ್ರಿಕ ಕ್ರಾಂತಿಯಿಂದ ಅಲ್ಲಿಯ ಜನತೆಗೆ ಕೆಲವು ವಿಷಯಗಳಲ್ಲಿ ಪೌರ್ವಾತ್ಯ ಪ್ರಪಂಚದವರಿಗಿಂತ ಹೆಚ್ಚಿನ ಸೌಕರ್ಯಗಳು ಒದಗಿದವು ಈ ಪ್ರಾಧಾನ್ಯ ಅಂಥ ಶಾಶ್ವತವಾದದ್ದೇನೂ ಆಗಿರಲಿಲ್ಲ. ಮಂಗೋಲ್ ವಿಜಯಯಾತ್ರೆಗಳಂಥ ಹಿಂದೆ ಆಗಿಹೋದ ಸಂಗತಿಗಳ ಅರಿವೇ ಇಲ್ಲದಿದ್ದ ಜನ ಈ ಸೌಕರ್ಯಗಳ ಪರಿಣಾಮವಾಗಿ ಮಾನವ ವರ್ಗದಲ್ಲಿ ಯುರೋಪಿಯನರು ಎಂದೆಂದಿಗೂ ಮುಂದಾಳುಗಳಾಗಿಯೇ ಇರುತ್ತಾರೆಂದುಕೊಳ್ಳುವಂತೆ ಆಯಿತು. ವೈಜ್ಞಾನಿಕ ತಿಳಿವಳಿಕೆ ಮತ್ತು ಅದರ ಫಲಗಳನ್ನು ಬೇರೆ ಜನರೂ ಪಡೆದುಕೊಳ್ಳಬಹುದು ಎಂದು ಅವರಿಗೆ ಅನ್ನಿಸಲೇ ಇಲ್ಲ. ಫ್ರೆಂಚರು ಅಥವಾ ಇಂಗ್ಲಿಷರು ವೈಜ್ಞಾನಿಕ ಸಂಶೋಧನೆ ನಡೆಸಿದಂತೆ ಭಾರತೀಯರೂ ಹಾಗೂ ಚೀನಿಯರೂ ನಡೆಸಬಲ್ಲರು ಎಂಬುದನ್ನು ಅವರು ಗ್ರಹಿಸಲಿಲ್ಲ ಪಶ್ಚಿಮ ದೇಶಗಳಲ್ಲಿ ಸ್ವಭಾವ ಸಿದ್ಧವಾದ ಬೌದ್ಧಿಕ ಸಾಮರ್ಥ್ಯವಿದೆ ಮತ್ತು ಪೌರ್ವಾತ್ಯ ರಾಜ್ಯಗಳಲ್ಲಿ ಹುಟ್ಟಿನಿಂದ ಬಂದ ಆಲಸ್ಯ ಮತ್ತು ಸಂಪ್ರದಾಯ ಶರಣತೆಗಳಿವೆಯೆಂದೂ ಇದರಿಂದಾಗಿ ಪ್ರಪಂಚದಲ್ಲಿ ಎಂದೆಂದಿಗೂ ಯುರೋಪಿಯನರದೇ ಮೇಲುಗೈಯಾಗಿರುವುದೆಂದೂ ಅವರು ನಂಬಿದ್ದರು

ನಾಗರೀಕತೆ ಬಂದಿಲ್ಲದ ಅಭಿವೃದ್ಧಿಯಾಗಿಲ್ಲದ ಪ್ರದೇಶಗಳನ್ನು ತಮ್ಮ ತಮ್ಮಲ್ಲಿ ಕಚ್ಚಾಡಿ ಹಂಚಿಕೊಂಡಂತೆ ಜನನಿಬಿಡವಾದ ನಾಗರೀಕತೆ ಪಡೆದ ಏಷ್ಯದ ದೇಶಗಳನ್ನೂ ಈ ತಪ್ಪು ತಿಳಿವಳಿಕೆಯ ಫಲವಾಗಿ ಯುರೋಪಿಯನ್ನರು ಹಂಚಿಕೊಂಡರು. ಅಲ್ಲಿಯ ಜನ ಮನುಷ್ಯರೇ ಅಲ್ಲ ತಮ್ಮ ಉಪಯೋಗಕ್ಕೆ ಬರುವ ಕಚ್ಚಾ ಸಾಮಗ್ರಿಗಳು ಎಂದು ಇವರು ಭಾವಿಸಿಕೊಂಡಂತೆ ಇತ್ತು. ಒಳಗೆ ಅನಿಶ್ಚಿತತೆಯಿಂದ ಕೂಡಿದ್ದರೂ ಹೊರ ನೋಟಕ್ಕೆ ವೈಭವಯುತವಾಗಿ ಕಾಣುತ್ತಿದ್ದ ಭಾರತದ ಬ್ರಿಟಿಷ್ ಆಡಳಿತ ವರ್ಗದ ಪ್ರತಿಷ್ಠೆಯನ್ನೂ ಈಸ್ಟ್ ಇಂಡೀಸಿನಲ್ಲಿ ಡಚ್ಚರ ಅಧೀನದಲ್ಲಿದ್ದ ಲಾಭದಾಯಕ ಸಾಮ್ರಾಜ್ಯಗಳನ್ನೂ ನೋಡಿ ಅನೇಕ ಪ್ರಮುಖ ರಾಷ್ಟ್ರಗಳು ಅವುಗಳ ಮೇಲೆ ಪೈಪೋಟಿ ನಡೆಸುತ್ತಾ ಪರ್ಷಿಯ ಛಿದ್ರವಾಗುತ್ತಿದ್ದ ಆಟೋಮನ್ ಸಾಮ್ರಾಜ್ಯ, ವಿಶಾಲ ಭಾರತ,

ಚೀನ ಮತ್ತು ಜಪಾನುಗಳಲ್ಲಿ ತಾವೂ ಹಾಗೇ ದರ್ಬಾರು ಮಾಡಬಹುದೆಂದು ಕನಸು ಕಾಣುತ್ತಿದ್ದುವು.

1898ರಲ್ಲಿ ಜರ್ಮನಿ ಚೀನದ ಕ್ರಿಯಾವೊ ಚೌವನ್ನು ವಶಕ್ಕೆ ತೆಗೆದುಕೊಂಡಿತು. ಇದಕ್ಕೆ ಉತ್ತರವೆಂಬಂತೆ ಬ್ರಿಟನ್ನು ವೆಯಿ–ಹಾ–ವೆಯಿಯನ್ನು ಸ್ವಾಧೀನ ಮಾಡಿಕೊಂಡಿತು. ಮೂರನೆ ವರ್ಷ ರಷ್ಯ ಪೋರ್ಟ್ ಆರ್ಥರನ್ನು ಆಕ್ರಮಿಸಿತು. ಚೀನದಾದ್ಯಂತವೂ ಯೂರೋಪಿಯನರ ಮೇಲೆ ದ್ವೇಷಾಗ್ನಿ ಪ್ರಜ್ವಲಿಸಿತು. ಯೂರೋಪಿಯನ್ನರೂ ಮತಾಂತರ ಹೊಂದಿ ಕ್ರೈಸ್ತರಾಗಿದ್ದ ಚೀನಿಯರೂ ಅಲ್ಲಲ್ಲೇ ಸಾಮೂಹಿಕ ಕೊಲೆಗೀಡಾದರು. 1900ರಲ್ಲಿ ಪೀಕಿಂಗಿನಲ್ಲಿದ್ದ ಐರೋಪ್ಯರಾಯಭಾರಿ ಕಚೇರಿಗಳ ಮೇಲೆ ದಾಳಿ ನಡೆಸಿ ಅವುಗಳನ್ನು ಚೀನೀಯರು ಆಕ್ರಮಿಸಿಕೊಂಡರು. ಆಗ ಯೂರೋಪಿನ ವಿವಿಧ ರಾಷ್ಟ್ರಗಳು ಸೇರಿ ಕಟ್ಟಿದ ಒಂದು ದಳ ಅವರನ್ನು ದಂಡಿಸುವುದಕ್ಕೋಸ್ಕರ ಪೀಕಿಂಗಿಗೆ ಹೋಗಿ ಈ ಕಚೇರಿಗಳನ್ನು ಬಿಡಿಸಿಕೊಂಡು ಚೀನೀಯರಿಗೆ ಸೇರಿದ ಅಗಾಧ ಬೆಲೆಬಾಳುವ ಆಸ್ತಿಗಳನ್ನು ಅಪಹರಿಸಿತು. ಬಳಿಕ ರಷ್ಯನರು ಮಂಚೂರಿಯವನ್ನು ತೆಗೆದುಕೊಂಡರು. 1904ರಲ್ಲಿ ಬ್ರಿಟಿಷರು ಟಿಬೆಟ್ಟಿನ ಮೇಲೆ ದಾಳಿ ಮಾಡಿದರು

ಆದರೆ ಈಗ ಪ್ರಪಂಚದ ಈ ಪ್ರಬಲ ರಾಷ್ಟ್ರಗಳ ಕಾದಾಟದಲ್ಲಿ ಒಂದು ಹೊಸ ಶಕ್ತಿ ಕಾಣಿಸಿಕೊಂಡಿತು. ಅದೇ ಜಪಾನ್. ಅದುವರೆಗೆ ಪ್ರಪಂಚದ ವಿದ್ಯಮಾನಗಳಲ್ಲಿ ಈ ರಾಷ್ಟ್ರ ಭಾಗವಹಿಸಿದ್ದು ಅತಿ ಸ್ವಲ್ಪ. ಒಂದು ರೀತಿಯಲ್ಲಿ ಪ್ರತ್ಯೇಕವಾಗಿ ಇದ್ದುಬಿಟ್ಟಿದ್ದ ಈ ರಾಷ್ಟ್ರ ಮಾನವ ಸಮಾಜದ ಬೆಳವಣಿಗೆಗೆ ಇತ್ತಿರುವುದು ಬಹು ಕಡಮೆ. ಈ ರಾಷ್ಟ್ರ ಬೇಕಾದಷ್ಟನ್ನು ಇತರರಿಂದ ಸ್ವೀಕರಿಸಿದೆ, ಆದರೆ ಕೊಟ್ಟಿಲ್ಲ. ಜಪಾನೀಯರು ಮಂಗೋಲ್ ಬುಡಕಟ್ಟಿಗೆ ಸೇರಿದ ಜನ. ಇವರ ಸಂಸ್ಕೃತಿ, ಲಿಪಿ, ಸಾಹಿತ್ಯಿಕ ಮತ್ತು ಲಲಿತಕಲಾ ಸಂಪ್ರದಾಯಗಳೆಲ್ಲ ಚೀನೀಯರಿಂದ ಬಂದುವು. ಇವರ ಚರಿತ್ರೆಯು ಸ್ವಾರಸ್ಯವಾದುದು. ಕ್ರೈಸ್ತಕಾಲಮಾನದ ಮೊದಲ ಶತಮಾನಗಳಲ್ಲಿ ಅಲ್ಲಿ ಊಳಿಗಮಾನ್ಯ ಪದ್ಧತಿ ಮತ್ತು ಒಂದು ರೀತಿಯ ವೀರವರ್ಗ ವ್ಯವಸ್ಥೆ (System of Chivalry) ಬೆಳೆಯಿತು. ಇಂಗ್ಲಿಷರು ಫ್ರಾನ್ಸಿನಲ್ಲಿ ಯುದ್ಧ ಮಾಡಿದಂತೆ ಇವರೂ ಕೊರಿಯ ಚೀನಗಳ ಮೇಲೆ ದಂಡೆತ್ತಿ ಹೋದರು. ಜಪಾನ್ ಮತ್ತು ಯೂರೋಪ್‌ಗಳಿಗೆ ಪ್ರಪ್ರಥಮ ಸಂಪರ್ಕವಾದದ್ದು 16ನೆ ಶತಮಾನದಲ್ಲಿ. 1542ರಲ್ಲಿ ಕೆಲವು ಪೋರ್ಚುಗೀಸರು ಚೀನೀ ದೋಣಿಯೊಂದರಲ್ಲಿ ಜಪಾನನ್ನು ಮುಟ್ಟಿದರು. 1549ರಲ್ಲಿ ಜೆಸ್ಯೂಟ್ ಮಿಷನರಿಯಾದ ಫ್ರಾನ್ಸಿಸ್ ಜೇವಿಯರ್ ಅಲ್ಲಿ ಕ್ರೈಸ್ತಮತ ಬೋಧನೆ ಮಾಡತೊಡಗಿದನು. ಸ್ವಲ್ಪ ಕಾಲ ಜಪಾನು ಯೂರೋಪಿನೊಡನೆ ವ್ಯವಹರಿಸಲು ಇಷ್ಟಪಟ್ಟಿತು. ಚೀನಿ ಮಿಷನರಿಗಳು ಅನೇಕ ಜಪಾನಿಯರನ್ನು ಕ್ರೈಸ್ತರನ್ನಾಗಿ ಮತಾಂತರಿಸಿದರು. ವಿಲಿಯಂ ಆಡಮ್ಸ್ ಎಂಬುವನಲ್ಲಿ ಜಪಾನೀಯರು ಬಹಳ ವಿಶ್ವಾಸವಿಟ್ಟಿದ್ದರು ಈತ ಅವರಿಗೆ ಸಲಹೆಗಾರನಾಗಿದ್ದು ದೊಡ್ಡ ದೊಡ್ಡ ಹಡಗು

ಗಳನ್ನು ಕಟ್ಟುವುದನ್ನು ತೋರಿಸಿಕೊಟ್ಟನು. ಹೀಗೆ ಜಪಾನಿನಲ್ಲಿ ಕಟ್ಟಿದ ಹಡಗುಗಳು ಭಾರತ ಮತ್ತು ಪೆರುಗಳಿಗೆ ಯಾನಮಾಡಿದುವು. ಅನಂತರ ಅಲ್ಲಿಗೆ ಹೋಗಿದ್ದ ಕ್ರೈಸ್ತರಲ್ಲಿ ಒಳಜಗಳಗಳಾದುವು. ಸ್ಪೇನಿನ ಡಾಮಿನಿಕನ್ನರು, ಪೋರ್ಚುಗಲ್ಲಿನ ಜೆಸ್ಯೂಟರು, ಇಂಗ್ಲಿಷ್ ಮತ್ತು ಡಚ್ ಪ್ರಾಟೆಸ್ಟೆಂಟರು ಇವರು ಒಬ್ಬೊಬ್ಬರೂ ಇನ್ನುಳಿದವರಿಗೆ ರಾಜಕೀಯವಾಗಿಯೂ ಜಪಾನನ್ನು ತಮ್ಮಂತೆ ಮಾಡಿಕೊಳ್ಳುವ ಹಂಚಿಕೆಯಿದೆ ಎಂದು ಜಪಾನೀಯರಿಗೆ ಎಚ್ಚರಿಕೆ ಕೊಟ್ಟರು. ತಮ್ಮದೇ ಮೇಲುಗೈಯೆನಿಸಿದಾಗ ಜೆಸ್ಯೂಟರು ಅಲ್ಲಿಯ ಬೌದ್ಧರನ್ನು ಕ್ರೂರವಾಗಿ ಹಿಂಸಿಸಿ ಅಪಮಾನಗೊಳಿಸಿದರು. ಯುರೋಪಿನ ಜನರೆಂದರೆ ಅಸಹನೀಯವಾದ ಪೀಡೆಯುಂಟುಮಾಡುವವರು ಮತ್ತು ಕ್ಯಾಥೊಲಿಕ್ ಕ್ರೈಸ್ತಮತವೆಂದರೆ ಪೋಪ್ ಮತ್ತು ಸ್ಪೇನಿನ ರಾಜವಂಶದವರ ರಾಜ್ಯದಾಹಕ್ಕೆ ಒಂದು ಮುಸುಕು ಎಂಬ ತೀರ್ಮಾನಕ್ಕೆ ಜಪಾನೀಯರು ಬಂದರು. ಸ್ಪೇನ್ ಆಗಲೇ ಫಿಲಿಪ್ಪೈನ್ ದ್ವೀಪಗಳನ್ನು ವಶಪಡಿಸಿಕೊಂಡಿತ್ತು. ಇವೆಲ್ಲದರ ಪರಿಣಾಮವೆಂದರೆ ಜಪಾನಿನಲ್ಲಿ ಕ್ರೈಸ್ತರನ್ನು ಹಿಂಸಿಸಿ 1638ರಲ್ಲಿ ಯುರೋಪಿಯನ್ನರು ಯಾರೂ ಅಲ್ಲಿ ಕಾಲಿಡದಂತೆ ನಿಷೇಧ ವಿಧಿಸಲಾಯಿತು. ಇನ್ನೂರು ವರ್ಷಗಳ ಕಾಲ ಈ ನಿಷೇಧ ಹಾಗೆಯೇ ಇತ್ತು. ಈ ಎರಡು ಶತಮಾನಗಳು ಜಪಾನೀಯರು ಬೇರೆ ಗ್ರಹದ ಮೇಲೆ ವಾಸಿಸುತ್ತಿದ್ದಾರೋ ಎಂಬಂತಿತ್ತು. ಅಷ್ಟರಮಟ್ಟಿಗೆ ಪ್ರಪಂಚದ ಉಳಿದ ದೇಶಗಳೊಡನೆ ಅವರ ಸಂಪರ್ಕ ಕಡಿದುಹೋಗಿತ್ತು. ಸಮುದ್ರ ತೀರದಲ್ಲಿ ಮಾತ್ರ ಯಾನಮಾಡಬಲ್ಲ ದೋಣಿಗಳಿಗಿಂತ ದೊಡ್ಡ ನಾವೆಗಳನ್ನು ಕಟ್ಟುವುದಕ್ಕೆ ಸಹ ಸರ್ಕಾರದ ಸಮ್ಮತಿಯಿರಲಿಲ್ಲ. ಜಪಾನೀಯರು ಯಾರೂ ದೇಶ ಬಿಟ್ಟು ಹೋಗುವಂತಿರಲಿಲ್ಲ. ಯುರೋಪಿಯನ್ನರು ಯಾರು ಜಪಾನನ್ನು ಪ್ರವೇಶಿಸುವಂತಿರಲಿಲ್ಲ.

ಎರಡು ಶತಮಾನಗಳ ಕಾಲ ಹೀಗೆಯೇ ಜಪಾನು ಪ್ರಪಂಚ ಚರಿತ್ರೆಯ ಮಧ್ಯ ಪ್ರವಾಹದ ಹೊರಗೇ ಉಳಿದುಕೊಂಡಿತ್ತು. ಆಗ ಅಲ್ಲಿ ಊಳಿಗಮಾನ್ಯ ಪದ್ಧತಿ ನಡೆಯುತ್ತಿದ್ದು ಹೊರಗಿನಿಂದ ನೋಡುವವರಿಗೆ ಅಲ್ಲಿಯ ವಿದ್ಯಮಾನಗಳು ರಂಗುರಂಗಾಗಿ ಕಾಣುತ್ತಿದ್ದುವು. ಅಲ್ಲಿನ ಜನಸಂಖ್ಯೆಯ ಶೇಕಡಾ ಐದು ಭಾಗ ಮಾತ್ರವಿದ್ದ ಶ್ರೀಮಂತ ಕುಟುಂಬಗಳವರು ಮತ್ತು ಕಾಳಗದ ಶಿಕ್ಷಣ ಪಡೆದ ಸಮುದಾಯಿಗಳು ಉಳಿದವರ ಮೇಲೆ ಯಾವ ಹಿಡಿತಡೆಯಿಲ್ಲದೆ ದಬ್ಬಾಳಿಕೆ ನಡೆಸುತ್ತಿದ್ದರು. ಇದೇ ಸಮಯದಲ್ಲಿ ಹೊರಗಿನ ವಿಶಾಲ ಪ್ರಪಂಚ ಹೊಸಹೊಸ ಶಕ್ತಿಗಳನ್ನೂ ವಿಶಾಲ ದೃಷ್ಟಿಯನ್ನೂ ಪಡೆದುಕೊಳ್ಳುತ್ತಿತ್ತು. ಹೊಸ ಹೊಸ ತೆರದ ಹಡಗುಗಳು ಜಪಾನಿನ ಭೂಶಿರಗಳ ಹತ್ತಿರ ಹಾದು ಹೋಗುವುದು ಹೆಚ್ಚಾಯಿತು. ಕೆಲವೊಮ್ಮೆ ಈ ಹಡಗುಗಳು ಒಡೆದು ಹೋದಾಗ ಅವುಗಳ ನಾವಿಕರನ್ನು ಜಪಾನಿನ ಒಳಗೆ ಕರೆತರಲಾಗುತ್ತಿತ್ತು. ದೇಶಿಯ ದ್ವೀಪದಲ್ಲಿದ್ದ ಡಚ್ ಶಿಬಿರ ಜಪಾನಿಗೂ ಹೊರ ಪ್ರಪಂಚಕ್ಕೂ ಸಂಪರ್ಕ ಕಲ್ಪಿಸುವ ಏಕೈಕ ಸಾಧನವಾಗಿತ್ತು. ಇದರ ಮುಖಾಂತರ ಜಪಾನು ಪಾಶ್ಚಾತ್ಯ

ಪ್ರಪಂಚಕ್ಕಿಂತ ಹಿಂದೆ ಬೀಳುತ್ತಿದೆಯೆಂಬ ಸೂಚನೆಗಳು ಬಂದುವು. 1837ರಲ್ಲಿ ನಕ್ಷತ್ರಗಳು ಮತ್ತು ಪಟ್ಟಿಗಳು ಇದ್ದ ಜಪಾನಿನ ಜನಕ್ಕೆ ಹೊಸದಾದ ಧ್ವಜವಿದ್ದ ಒಂದು ಹಡಗು ಫೆಸಿಫಿಕ್ ಸಾಗರದಲ್ಲಿ ಅತಿದೂರ ತೇಲಿಹೋಗುತ್ತಿದ್ದ ಜಪಾನೀ ನಾವಿಕರನ್ನು ಕರೆದುಕೊಂಡು ಯೆಡೊಕೊಲ್ಲಿಯನ್ನು ಪ್ರವೇಶಿಸಿತು. ಈ ಹಡಗನ್ನು ಫಿರಂಗಿಗುಂಡು ಹೊಡೆದು ದೂರ ಓಡಿಸಲಾಯಿತು. ಇದೇ ಧ್ವಜ ಇದ್ದ ಇತರ ಹಡಗುಗಳೂ ಅಲ್ಲಿ ಕಾಣಿಸಿಕೊಳ್ಳಲಾರಂಭಿಸಿದುವು. ತಮ್ಮ ಹಡಗು ಮುಳುಗಿ ಹೋದದ್ದರಿಂದ ಜಪಾನನ್ನು ಪ್ರವೇಶಿಸಿದ್ದ ಹದಿನೆಂಟು ಅಮೆರಿಕನ್ ನಾವಿಕರನ್ನು ಬಿಟ್ಟುಕೊಡಬೇಕೆಂದು ಕೇಳಲು ಅಂಥ ಒಂದು ಹಡಗು 1849ರಲ್ಲಿ ಅಲ್ಲಿಗೆ ಬಂದಿತು, ಕಡೆಗೆ 1853ರಲ್ಲಿ ಕಮೋಡೋರ್ ಪೆರ್ರಿಯು ನೇತೃತ್ವದಲ್ಲಿ ಅಮೆರಿಕದ ಯುದ್ಧನೌಕೆಗಳು ನಾಲ್ಕು ಅಲ್ಲಿಗೆ ಬಂದುವು. ಇವು ಜಪಾನೀಯರ ಬೆದರಿಕೆಗೆ ಜಗ್ಗದೆ ಅಲ್ಲಿಯೇ ಜಪಾನಿಗೆ ಸೇರಿದ ಜಲಭಾಗದಲ್ಲೇ ಲಂಗರು ಹಾಕಿ ನಿಂತವು. ಅಲ್ಲದೆ ಜಪಾನನ್ನು ಆಗ ಆಳುತ್ತಿದ್ದ ಇಬ್ಬರು ಅಧಿಪತಿಗಳಿಗೆ ಸಂದೇಶಗಳನ್ನು ಪೆರ್ರಿ ಕಳುಹಿಸಿದನು. 1854ರಲ್ಲಿ ಈತನೇ ದೊಡ್ಡ ದೊಡ್ಡ ತೋಪುಗಳಿದ್ದ ಹಬೆಯಿಂದ ಚಲಿಸುವ ಆಶ್ಚರ್ಯಕರವಾದ ಹತ್ತು ಹಡಗುಗಳೊಡನೆ ತಿರುಗಿಬಂದನು. ಅವನು ವ್ಯಾಪಾರ ಮತ್ತು ಇತರ ವ್ಯವಹಾರಗಳಿಗೋಸ್ಕರ ಮಾಡಿದ ಸಲಹೆಗಳನ್ನು ತಿರಸ್ಕರಿಸಲು ಜಪಾನಿಗೆ ಸಾಧ್ಯವಾಗಲಿಲ್ಲ. ಕರಾರು ಪತ್ರಕ್ಕೆ ಸಹಿ ಹಾಕಲು ಪೆರ್ರಿ ಐನೂರು ಜನರಿದ್ದ ಕಾವಲು ಪಡೆಯೊಡನೆ ಬಂದನು. ರಸ್ತೆಗಳಲ್ಲಿ ತಾಳಬದ್ಧ ನಡಿಗೆಯಲ್ಲಿ ಮಾರ್ಚ್ ಮಾಡುತ್ತ ಬಂದ ಈ ಪಡೆಯನ್ನು ಜಪಾನಿನ ಜನಜಂಗುಳಿ ಅವರೆಲ್ಲ ಈ ಲೋಕದವರೇ ಅಲ್ಲವೇನೋ ಎಂಬಂತೆ ಬೆರಗಾಗಿ ನೋಡಿತು.

ಅಮೆರಿಕದ ನಂತರ ರಷ್ಯ, ಹಾಲೆಂಡ್ ಮತ್ತು ಬ್ರಿಟನ್‌ಗಳು ಈ ದೇಶವನ್ನು ಪ್ರವೇಶಿಸಿದರು. ಷಿಮೊನೊಸೆಕಿ ಜಲಸಂಧಿಯ ಬಳಿ ಇದ್ದ ಜಪಾನೀ ಜಹಗೀರುದಾರನೊಬ್ಬ ಕೆಲವು ವಿದೇಶಿ ಹಡಗುಗಳ ಮೇಲೆ ಗುಂಡು ಹಾರಿಸಿದಾಗ ಬ್ರಿಟಿಷ್, ಫ್ರೆಂಚ್, ಡಚ್, ಮತ್ತು ಅಮೆರಿಕನ್ ಹಡಗುಗಳೆಲ್ಲ ಕೂಡಿ ಅವನ ತುಪಾಕಿಗಳನ್ನೆಲ್ಲ ನಾಶ ಮಾಡಿ ಅವನ ಖಡ್ಗದಳವನ್ನೆಲ್ಲ ಚದುರಿಸಿಬಿಟ್ಟರು. ಕಡೆಗೆ 1865ರಲ್ಲಿ ಈ ಎಲ್ಲ ರಾಷ್ಟ್ರಗಳ ಸಮ್ಮಿಶ್ರ ನೌಕಾದಳ ಕ್ಯೋತೋ ಹತ್ತಿರ ಸಮುದ್ರದಲ್ಲಿ ಲಂಗರು ಹಾಕಿ ನಿಂತು ಕೌಲುಗಳಿಗೆ ಜಪಾನನ್ನು ಬಲವಂತದಿಂದ ಒಪ್ಪಿಸಿತು. ಜಪಾನಿನ ಬಾಗಿಲು ಹೊರ ಪ್ರಪಂಚಕ್ಕೆ ತೆರೆಯಿತು.

ಈ ಎಲ್ಲ ಘಟನೆಗಳಿಂದ ಜಪಾನಿಗೆ ತುಂಬ ಅಪಮಾನವಾಯಿತು. ಯೂರೋಪಿನ ರಾಷ್ಟ್ರಗಳ ಸಮಕ್ಕೆ ತಾವೂ ಬರಬೇಕೆಂದು ಜಪಾನೀಯರು ನಿರ್ಧರಿಸಿದರು. ಆಶ್ಚರ್ಯಕರವಾದ ಬುದ್ಧಿವಂತಿಕೆ ಮತ್ತು ಚಟುವಟಿಕೆಗಳಿಂದ ಇದನ್ನು ಅವರು ಸಾಧಿಸಿಯೂ ಸಾಧಿಸಿದರು. ಮಾನವಚರಿತ್ರೆಯಲ್ಲಿ ಯಾವ ರಾಷ್ಟ್ರವೂ ಯಾವಾಗಲೂ ಇಂಥ ಮುನ್ನಡೆಯನ್ನು ಸಾಧಿಸಿಲ್ಲ, 1866ರಲ್ಲಿ ಜಪಾನು ಮಧ್ಯಯುಗದಲ್ಲಿತ್ತು. ಅಲ್ಲಿಯ

ಸಮಾಜ ಅತಿರೇಕಕ್ಕೆ ಹೋದ ಊಳಿಗಮಾನ್ಯ ಪದ್ಧತಿಯ ವಿಚಿತ್ರ ವ್ಯಂಗ್ಯಚಿತ್ರ ದಂತಿತ್ತು. 1899ರಲ್ಲಿ ಅಲ್ಲಿಯ ಜನರು ಪೂರ್ಣವಾಗಿ ಪಾಶ್ಚಾತ್ಯರಂತೆ ಆಗಿದ್ದರು, ಆ ದೇಶ ಮುಂದುವರಿದಿದ್ದ ಯುರೋಪಿನರಾಷ್ಟ್ರಗಳ ಸಮಸಮಕ್ಕೆ ಬಂದಿತ್ತು. ಯುರೋಪಿನಷ್ಟು ಮುನ್ನಡೆಯಲು ಎಂದೆಂದಿಗೂ ಏಷ್ಯಕ್ಕೆ ಸಾಧ್ಯವೇ ಆಗಲಾರದೆಂಬ ನಂಬಿಕೆಯನ್ನು ಜಪಾನು ಹೋಗಲಾಡಿಸಿತು. ಅಷ್ಟೇ ಅಲ್ಲ, ಯುರೋಪಿನ ಮುನ್ನಡೆ ತನ್ನದಕ್ಕೆ ಹೋಲಿಸಿದರೆ ಅತಿನಿಧಾನವೆಂದೂ ತೋರಿಸಿಕೊಟ್ಟಿತು.

1894–95ರಲ್ಲಿ ನಡೆದ ಚೀನಾ–ಜಪಾನ್ ಯುದ್ಧ ಕುರಿತು ವಿವರವಾಗಿ ತಿಳಿಸಲು ಇಲ್ಲಿ ಸಾಧ್ಯವಿಲ್ಲ. ಜಪಾನ್ ಎಷ್ಟರಮಟ್ಟಿಗೆ ಪಾಶ್ಚಿಮಾತ್ಯ ದೇಶಗಳಂತಾಗಿತ್ತು ಎಂಬುದನ್ನು ಈ ಯುದ್ಧ ತೋರಿಸಿಕೊಟ್ಟಿತು. ಜಪಾನಿನಲ್ಲಿ ದಕ್ಷವಾದ ಪಾಶ್ಚಿಮಾತ್ಯ ರೀತಿಯ ಸೈನ್ಯವಿತ್ತು. ಪುಟ್ಟದಾದರೂ ಶಕ್ತಿಯುತವಾದ ನೌಕಾದಳವಿತ್ತು. ಜಪಾನಿನ ಈ ಪುನಶ್ಚೇತನದ ಮಹತ್ತ್ವವನ್ನು ಬ್ರಿಟನ್ ಮತ್ತು ಅಮೆರಿಕಗಳು ಅರ್ಥಮಾಡಿಕೊಂಡು ಅದೂ ಒಂದು ಯುರೋಪಿನ ರಾಜ್ಯವೆಂಬಂತೆ ಅದರೊಡನೆ ವ್ಯವಹರಿಸುತ್ತಿದ್ದುವು. ಏಷ್ಯದಲ್ಲಿ ಹೊಸ ಹೊಸ "ಇಂಡಿಯ"ಗಳನ್ನು ಗಳಿಸಬೇಕೆಂಬ ಹವಣಿಕೆಯಲ್ಲಿದ್ದ ಇತರ ರಾಷ್ಟ್ರಗಳಿಗೆ ಇದು ಅರ್ಥವಾಗಲಿಲ್ಲ. ಮಂಚೂರಿಯುವನ್ನು ಹಾದು ಕೊರಿಯದೊಳಕ್ಕೆ ರಷ್ಯ ಒತ್ತಿಕೊಂಡುಬರುತ್ತಿತ್ತು. ದಕ್ಷಿಣದಲ್ಲಿ ಫ್ರಾನ್ಸ್ ಟಾಂಕಿನ್ ಮತ್ತು ಅನ್ನಾಮ್‌ಗಳಲ್ಲಿ ತಳಊರಿತ್ತು. ಜರ್ಮನಿ ಆಸೆಗಣ್ಣುಗಳಿಂದ ಯಾವುದಾದರೂ ಸ್ವಾಮ್ಯ ದೊರಕೀತೇ ಎಂದು ಹೊಂಚು ಹಾಕುತ್ತಿತ್ತು. ಚೀನದೊಡನೆ ನಡೆದ ಯುದ್ಧದಿಂದ ಜಪಾನು ಲಾಭಪಡೆದು ಕೊಳ್ಳುವುದಕ್ಕೆ ಈ ಮೂರು ರಾಷ್ಟ್ರಗಳು ಅಡ್ಡಬಂದುವು. ಕಾದಾಟದಿಂದ ಸೋತಿದ್ದ ಜಪಾನ್ ಮೇಲೆ ಇವು ಯುದ್ಧದ ಬೆದರಿಕೆ ಹಾಕಿದುವು.

ಕೆಲಕಾಲ ತಲೆಬಾಗಿಸಿದಂತೆ ಮಾಡಿ ಜಪಾನ್ ತನ್ನ ಬಲಗಳನ್ನು ಕೂಡಿಸಿ ಕೊಂಡಿತು. ಹತ್ತುವರ್ಷಗಳೊಳಗೆ ಅದು ರಷ್ಯದೊಡನೆ ಯುದ್ಧಮಾಡಲು ಸಿದ್ಧ ವಾಯಿತು. ಏಷ್ಯದ ಚರಿತ್ರೆಯಲ್ಲಿ ಐರೋಪ್ಯರ ಗರ್ವದ ಅಂತ್ಯವನ್ನು ಸಾರುವ ಮೈಲಿಗಲ್ಲು ಈ ಯುದ್ಧ. ರಷ್ಯದ ಜನತೆಗೆ ಭೂಗೋಳದ ಅರ್ಧ ಸುತ್ತಿನಾಚೆ ನಡೆದಿದ್ದ ತಮ್ಮನ್ನೂ ಸೆಳೆದುಕೊಳ್ಳಲಿದ್ದ ಈ ಕ್ಷೋಭೆಯ ಬಗ್ಗೆ ಏನೂ ತಿಳಿದಿರಲಿಲ್ಲ. ರಷ್ಯದ ಮೇಧಾವಿ ರಾಜನೀತಿಜ್ಞರೂ ಈ ಮೂರ್ಖ ಸಾಹಸಕ್ಕೆ ಒಪ್ಪಿಗೆ ಕೊಟ್ಟಿರಲಿಲ್ಲ. ಆದರೆ ರಷ್ಯದ ಜ್ಯಾರನ ಸುತ್ತಲೂ ರಾಜವಂಶಕ್ಕೆ ಸೇರಿದ ದುರಾಸೆಯುಳ್ಳ ಕೆಲವು ಶ್ರೀಮಂತ ಸರದಾರರು ಸೇರಿಕೊಂಡಿದ್ದರು. ಚೀನ ಮತ್ತು ಮಂಚೂರಿಯಗಳಲ್ಲಿ ಮುಂದೆ ಸಂಪತ್ತನ್ನು ಲೂಟಿಹೊಡೆಯಬಹುದೆಂಬ ಭರವಸೆಯ ಮೇಲೆ ಇವರೆಲ್ಲ ಆರ್ಥಿಕ ಸಾಹಸಗಳಿಗಿಳಿದಿದ್ದರು. ಇದರಿಂದ ಹಿಂದೆಗೆಯುವುದು ಅವರಿಗೆ ಸ್ವಲ್ಪವೂ ಒಪ್ಪಿಗೆಯಿರಲಿಲ್ಲ. ಇದರ ಫಲ ಜಪಾನಿನ ಸೈನಿಕರು ಸಮುದ್ರ ದಾಟಿ ಪೋರ್ಟ್‌ಆರ್ಥರ್ ಹಾಗೂ ಕೊರಿಯಗಳಿಗೆ ರವಾನೆಯಾಗತೊಡಗಿದರು ಮತ್ತು ಒಂದಾದ ಮೇಲೊಂದರಂತೆ

ಬರುತ್ತಿದ್ದ ರೈಲುಗಾಡಿಗಳಲ್ಲಿ ಸೈಬೀರಿಯದ ರೈಲು ಮಾರ್ಗಗಳಲ್ಲಿ ಅಸಂಖ್ಯಾತ ರಷ್ಯನ್ ರೈತರು ಈ ದೂರದ ರಣರಂಗಗಳಲ್ಲಿ ಮೃತ್ಯುವನ್ನಪ್ಪಲುಬಂದಿಳಿದರು.

ರಷ್ಯನರಿಗೆ ಒಳ್ಳೆಯ ಮುಂದಾಳುಗಳಿರಲಿಲ್ಲ. ಅವರಿಗೆ ಸಾಮಾನು ಸರಬರಾಜಿನಲ್ಲಿ ಬೇಕಾದಷ್ಟು ಮೋಸ ನಡೆದಿತ್ತು, ಜಲನೆಲಗಳೆರಡರಲ್ಲೂ ಅವರು ಪೆಟ್ಟು ತಿಂದರು. ಆಫ್ರಿಕಾ ಖಂಡವನ್ನು ಸುತ್ತಿಕೊಂಡು ಬಂದ ರಷ್ಯದ ಬಾಲ್ಟಿಕ್ ನೌಕಾದಳ ತ್ಸುಷಿಮಾ ಜಲಸಂಧಿಯಲ್ಲಿ ಸಂಪೂರ್ಣವಾಗಿ ನಾಶವಾಯಿತು. ದೂರಪ್ರದೇಶದಲ್ಲಿ ನಡೆದ ಈ ನಿಷ್ಕಾರಣ ನರಮೇಧದಿಂದ ರಷ್ಯದ ಸಾಮಾನ್ಯ ಜನತೆ ಕೆರಳಿ ಬಂಡಾಯ ಚಳವಳಿ ನಡೆಸಿದರು. ಇದರ ಪರಿಣಾಮವಾಗಿ ತ್ಸಾರ್‌ಯುದ್ಧವನ್ನು ನಿಲ್ಲಿಸಬೇಕಾಯಿತು. (1905). 1875ರಲ್ಲಿ ರಷ್ಯ ಆಕ್ರಮಿಸಿದ್ದ ಸಖೇಲಿನ್ ದೀಪದ ದಕ್ಷಿಣಾರ್ಧವನ್ನು ಜಪಾನಿಗೆ ಹಿಂದಿರುಗಿಸಿ ಮಂಚೂರಿಯದಿಂದ ಹೊರಬಿದ್ದು ಕೊರಿಯವನ್ನು ಜಪಾನಿಗೆ ತ್ಸಾರ್ ವಹಿಸಿಕೊಡಬೇಕಾಯಿತು. ಏಷ್ಯದಲ್ಲಿ ಯೂರೋಪಿಯನ್ನರ ದಂಡಯಾತ್ರೆಗಳ ಕೊನೆಗಾಲ ಮೊದಲಾಯಿತು. ಯೂರೋಪ್ ಚಾಚಿದ್ದ ತನ್ನ ಪಂಜಗಳನ್ನು ಒಳಗೆಳೆದುಕೊಳ್ಳಲಾರಂಭಿಸಿತು.

64. 1914ರಲ್ಲಿ ಬ್ರಿಟಿಷ್ ಸಾಮ್ರಾಜ್ಯ

ಹಬೆ ಹಡಗು ಮತ್ತು ರೈಲುಗಾಡಿಗಳಿಂದ ಒಂದುಗೂಡಿದ್ದ ಬ್ರಿಟಿಷ್ ಚಕ್ರಾಧಿಪತ್ಯದ ವಿವಿಧ ಘಟಕಗಳ ವೈಶಿಷ್ಟ್ಯಗಳನ್ನು ಇಲ್ಲಿ ಗಮನಿಸೋಣ. ಈ ಸಾಮ್ರಾಜ್ಯ ಒಂದು ಅಸಾಧಾರಣ ರಾಜಕೀಯ ವ್ಯವಸ್ಥೆ. ಇಂಥ ಸಂಗತಿ ಹಿಂದೆ ನಡೆದಿರಲೇ ಇಲ್ಲ.

"ಪಟ್ಟಾಭಿಷಿಕ್ತ" ರಾಜನಿರುವ ಪ್ರಜಾಪ್ರಭುತ್ವವಾದ ಸಂಯುಕ್ತ ಬ್ರಿಟಿಷ್ ರಾಜ್ಯ ಈ ಸಂಸ್ಥೆಯ 'ಕೇಂದ್ರ. ಎಷ್ಟೋ ಐರಿಷ್ ಜನರ ಇಚ್ಛೆಗೆ ವಿರುದ್ಧವಾಗಿ ಐರ್‌ಲ್ಯಾಂಡಿನ ಒಂದು ಭಾಗ ಇದರಲ್ಲಿ ಸೇರಿದೆ. ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕಾಟ್‌ಲೆಂಡುಗಳು ಸೇರಿ ಚುನಾಯಿಸಿದ ಪಾರ್ಲಿಮೆಂಟಿನ ಬಹುಮತವು ಯಾರು ಇಲ್ಲಿಯ ಮಂತ್ರಿಮಂಡಲದ ಮುಖ್ಯಸ್ಥರಾಗಬೇಕೆಂಬುದನ್ನೂ ಇದರ ರಾಜಕೀಯ ಧೋರಣೆ ಹಾಗೂ ಕಾರ್ಯಸಾಮರ್ಥ್ಯಗಳನ್ನೂ ಬ್ರಿಟನ್ನಿನ ಸ್ವಂತ ರಾಜಕೀಯ ವಿದ್ಯಮಾನಗಳ ಆಧಾರದ ಮೇಲೆ ನಿರ್ಧರಿಸುತ್ತದೆ. ಈ ಮಂತ್ರಿಮಂಡಲವೇ ಚಕ್ರಾಧಿಪತ್ಯದ ಉಳಿದೆಲ್ಲ ಭಾಗಗಳನ್ನೂ ಆಳುವ ಅತ್ಯುಚ್ಚಶಕ್ತಿ. ಇದಕ್ಕೆ ಯುದ್ಧ ಮತ್ತು ಶಾಂತಿಗಳನ್ನು ಘೋಷಿಸುವ ಅಧಿಕಾರವೂ ಇದೆ.

ಇದರ ನಂತರ ರಾಜಕೀಯ ಪ್ರಾಮುಖ್ಯ ಪಡೆದಿರುವ ಭಾಗಗಳು ನೇರವಾಗಿ ಪಟ್ಟಾಭಿಷಿಕ್ತ ರಾಜನ ಕೆಳಗಿರುವ ಪ್ರಜಾಪ್ರಭುತ್ವಗಳಾದ ಆಸ್ಟ್ರೇಲಿಯ, ಕೆನಡಾ, ನ್ಯೂಫೌಂಡಲ್ಯಾಂಡ (ಇದೇ ಅತ್ಯಂತ ಹಳೆಯ ಬ್ರಿಟಿಷ್ ಸ್ವಾಮ್ಯ, 1583ರಲ್ಲಿ ಬ್ರಿಟನ್ನಿಗೆ ಸೇರಿದ್ದು), ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕ. ಇವೆಲ್ಲ ಬ್ರಿಟನ್ನಿ

ನೊಡನೆ ವಿತ್ರರಂತಿರುವ ಕಾರ್ಯತಃ ಸ್ವತಂತ್ರವಾದ ಸ್ವಾಧಿಕಾರವುಳ್ಳ ರಾಜ್ಯಗಳು, ಆದರೆ ಇವುಗಳಲ್ಲಿ ಬ್ರಿಟನ್ನಿನ ಸರ್ಕಾರ ನೇಮಿಸಿರುವ ರಾಜಪ್ರತಿನಿಧಿಯೊಬ್ಬ ನಿರುತ್ತಾನೆ.

ಇಂಡಿಯಾ ಸಾಮ್ರಾಜ್ಯ ಇವುಗಳ ಬಳಿಕ ಬರುತ್ತದೆ. ಇದು ಹಿಂದೆ ಇದ್ದ ಮೊಗಲ್ ಸಾಮ್ರಾಜ್ಯದ್ದೇ ಮುಂದುವರಿಕೆ. ಬಲೂಚಿಸ್ತಾನದಿಂದ ಬರ್ಮಾವರೆಗೆ ಹರಡಿರುವ ಏಡನ್ನನ್ನೂ ಒಳಕೊಂಡಿರುವ ಇದರಲ್ಲಿ ಆಶ್ರಿತರಾಜ್ಯಗಳೂ ಸಂರಕ್ಷಿತ ರಾಜ್ಯಗಳೂ ಇವೆ. ಬ್ರಿಟನ್ನಿನ ರಾಜಪ್ರಭುತ್ವ ಮತ್ತು ಪಾರ್ಲಿಮೆಂಟಿನ ಆಧೀನದಲ್ಲಿರುವ ಇಂಡಿಯಾ ಆಫೀಸ್ ಈ ರಾಜ್ಯಗಳಲ್ಲಿ ಮೊದಲಿನ ಟರ್ಕೊಮನ್ ವಂಶದ ಮೊಗಲ್ ಸರ್ಕಾರ ನಿರ್ವಹಿಸುತ್ತಿದ್ದ ಪಾತ್ರವನ್ನೇ ತಾನೂ ನಿರ್ವಹಿಸುತ್ತಿದೆ.

ಇದರ ನಂತರ ಬರುವುದು ಈಜಿಪ್ಟ್. ಇದರ ಸ್ಥಾನ ಹೀಗೇ ಎಂದು ಹೇಳಲು ಬರುವುದಿಲ್ಲ. ಹೆಸರಿಗೆ ಇದು ತುರ್ಕಿ ಸಾಮ್ರಾಜ್ಯದ ಒಂದು ಭಾಗವೆನಿಸಿಕೊಂಡಿದೆ. ಇಲ್ಲಿ ಅವರದೇ ಆದ ಖೆಡಿವ್ ಎಂಬ ಹೆಸರಿನ ರಾಜ ಸಹ ಇದ್ದಾನೆ, ಆದರೆ ಇಲ್ಲಿಯ ವಹಿವಾಟೆಲ್ಲ ಬ್ರಿಟಿಷ್ ಸರಕಾರದ ನಿರಂಕುಶ ಪ್ರಭುತ್ವದ ನಿಯಂತ್ರಣದಲ್ಲಿದೆ.

ಇದರ ಮುಂದಿನದು ಇಲ್ಲಿ ಸಂದಿಗ್ಧಸ್ಥಿತಿಯಲ್ಲಿರುವ ಆಂಗ್ಲೋ ಈಜಿಪ್ಟಿಯನ್ ಸೂಡಾನ್. ಬ್ರಿಟಿಷರು ಮತ್ತು ಬ್ರಿಟಿಷರ ಹತೋಟಿಯಲ್ಲಿರುವ ಈಜಿಪ್ಟ್ ಸರ್ಕಾರಗಳು ಇದನ್ನು ಆಕ್ರಮಿಸಿಕೊಂಡು ಜಂಟಿಯಾಗಿ ಇದನ್ನು ಆಳುತ್ತಿವೆ.

ಭಾಗಶಃ ಸ್ವಾಧಿಕಾರವುಳ್ಳ ಮಾಲ್ಟಾ, ಜಮೈಕಾ, ಬಹಾಮಾದ್ವೀಪಗಳು ಮತ್ತು ಬರ್ಮುಡಾ ರಾಜಕೀಯ ಪ್ರಾಮುಖ್ಯದಲ್ಲಿ ಸೂಡಾನಿನ ಕೆಳಗೆ ಬರುತ್ತವೆ. ಇವುಗಳಲ್ಲಿ ಕೆಲವು ಸಮುದಾಯಗಳು ಬ್ರಿಟಿಷ್ ಮೂಲದವು. ಇವುಗಳಲ್ಲಿ ಚುನಾಯಿಸಿದ ಶಾಸನಸಭೆಗಳೂ ನೇಮಕಗೊಂಡ ಕಾರ್ಯನಿರ್ವಾಹಕ ಶಾಖೆಗಳೂ ಇವೆ.

ಇವುಗಳಾದ ಮೇಲೆ ಕ್ರೌನ್ ಕಾಲೊನಿಗಳು ಬರುತ್ತವೆ. ಇವುಗಳಲ್ಲಿ ಬ್ರಿಟನ್ನಿನ ಸರ್ಕಾರ ತನ್ನ ವಸಾಹತು ಇಲಾಖೆಯ ಮೂಲಕ ಹೆಚ್ಚು ಕಡಿಮೆ ನಿರಂಕುಶವೆನ್ನಬಹುದಾದ ಆಳಿಕೆ ನಡೆಸುತ್ತದೆ. ಇವುಗಳಲ್ಲಿ ಸಿಲೋನ್, ಟ್ರಿನಿಡಾಡ್, ಫಿಜಿಗಳಲ್ಲಿ ನೇಮಕಗೊಂಡ ಮಂತ್ರಾಲೋಚನಾ ಸಭೆ ಇರುತ್ತದೆ. ಜಿಬ್ರಾಲ್ಟರ್ ಮತ್ತು ಸೆಂಟ್ ಹೆಲೆನಾಗಳಲ್ಲಿ ಗೌರ್ನರ್‌ಗಳಿರುತ್ತಾರೆ.

ಇವುಗಳಲ್ಲದೆ ಬಹುತೇಕ ಉಷ್ಣವಲಯಗಳಲ್ಲಿರುವ ವಿಸ್ತಾರವಾದ ಪ್ರದೇಶಗಳು ಈ ಸಾಮ್ರಾಜ್ಯದಲ್ಲಿವೆ. ಇವು ಕಚ್ಚಾ ಪದಾರ್ಥಗಳಿಗೆ ಒಳ್ಳೆಯ ಆಕರಗಳು. ಇವುಗಳಲ್ಲಿ ಅಷ್ಟೇನೂ ಸುಧಾರಿಸಿಲ್ಲದ ರಾಜಕೀಯ ಪ್ರಜ್ಞೆ ಇಲ್ಲದ ಜನಸಮುದಾಯಗಳಿವೆ. ಹೆಸರಿಗೆ ಸಂರಕ್ಷಿತ ಪ್ರದೇಶಗಳೆನಿಸಿಕೊಂಡ ಇವುಗಳಲ್ಲಿ ಮೂಲನಿವಾಸಿಗಳ ಮುಖ್ಯಸ್ಥರು (ಬಸುಟೋ ಲ್ಯಾಂಡಿನಲ್ಲಿದ್ದಂತೆ) ಅಥವಾ ವಿಶೇಷಾಧಿಕಾರ ಪಡೆದ ಕಂಪೆನಿಗಳಿದ್ದು (ರ್ಹೊಡೀಷಿಯದಂತೆ) ಇವುಗಳ ಮೇಲೆ ಹೈಕಮಿಷನರು ನಿಯಂತ್ರಣಾಧಿಕಾರ ಪಡೆದಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಇಂಥ ಅನಿರ್ದಿಷ್ಟ ಸ್ಥಿತಿ

ಯಲ್ಲಿರುವ ಸ್ವಾಮ್ಯಗಳನ್ನು ಬ್ರಿಟನ್ನಿನ ವಿದೇಶೀಯ ಖಾತೆಯೋ ಕಲೋನಿಯಲ್ ಖಾತೆಯೋ ಇಂಡಿಯಾ ಕಚೇರಿಯೋ ವಹಿಸಿಕೊಂಡಿದ್ದರೂ ಬಹುತೇಕ ಈ ಸ್ವಾಮ್ಯಗಳನ್ನು ಕಲೋನಿಯಲ್ ಕಚೇರಿಯೇ ನೋಡಿಕೊಳ್ಳುತ್ತದೆ.

ಯಾವುದೇ ಒಬ್ಬ ವ್ಯಕ್ತಿ ಅಥವಾ ಯಾವುದೇ ಒಬ್ಬ ಅಧಿಕಾರಿ ಈ ಬ್ರಿಟಿಷ್ ಸಾಮ್ರಾಜ್ಯವನ್ನು ಅದು ಈಗಿರುವ ಸಮಗ್ರರೂಪಿನಲ್ಲಿ ಯಾವಾಗಲೂ ಕಲ್ಪಿಸಿಕೊಂಡಿರಲಿಲ್ಲವೆಂದು ಎಲ್ಲರಿಗೂ ತಾನಾಗಿಯೇ ಮನವರಿಕೆಯಾಗುತ್ತದೆ. ಇದಕ್ಕೆ ಮುಂಚೆ ಇರುತ್ತಿದ್ದ ಸಾಮ್ರಾಜ್ಯ ಎಂದು ಕರೆಯುತ್ತಿದ್ದ ಸಂಸ್ಥೆಗಳೆಲ್ಲವಕ್ಕಿಂತ ಇದು ಭಿನ್ನವಾದದ್ದು. ಕಾಲ ಸರಿದಂತೆ ಒಂದೊಂದಾಗಿ ಸೇರ್ಪಡೆಯಾದ ಅನೇಕ ಭಾಗಗಳ ಮಿಶ್ರಣವಿದು. ಇದು ವಿಸ್ತಾರವಾದ ಪ್ರದೇಶಗಳಲ್ಲಿ ಶಾಂತಿ ಮತ್ತು ಕ್ಷೇಮಗಳನ್ನು ತಂದಿತು. ಅದರಿಂದಲೇ ಹೋಮ್ ಎಂದು ಕರೆಸಿಕೊಳ್ಳುತ್ತಿದ್ದ ಇಂಗ್ಲೆಂಡ್ ದೇಶದ ಜನತೆಯ ನಿರ್ಲಕ್ಷ್ಯ ಮತ್ತು ಸರ್ಕಾರದ ದಬ್ಬಾಳಿಕೆ ಮತ್ತು ಕುಂದುಕೊರತೆಗಳ ಕಡೆ ಅಷ್ಟು ಗಮನಕೊಡದೆ "ಅಧೀನ" ಜನಾಂಗಗಳ ಜನರಲ್ಲನೇಕರು ಇದನ್ನು ಸಹಿಸಿಕೊಂಡು ಪೋಷಿಸಿದರು. ಅಥೆನ್ಸ್ ಸಾಮ್ರಾಜ್ಯದಂತೆ ಇದೂ ಸಹ ಸಾಗರೋತ್ತರ ಸಾಮ್ರಾಜ್ಯವಾಗಿತ್ತು. ಸಮುದ್ರವೇ ಇವರ ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸಿ ಬ್ರಿಟಿಷ್ ನೌಕಾಪಡೆಯೇ ಸಂಪರ್ಕ ಸಾಧನವಾಗಿತ್ತು. ಯಾವುದೇ ಸಾಮ್ರಾಜ್ಯದ ಸಂಬದ್ಧತೆ ಒಂದು ರೀತಿಯ ಸಂಪರ್ಕ ಸಾಧನವನ್ನವಲಂಬಿಸಿರುತ್ತದೆ. 16ನೇ ಶತಮಾನದಿಂದ 19ನೇ ಶತಮಾನದ ವರೆಗೆ ಹಡಗು ಕಟ್ಟುವುದು, ಸಮುದ್ರಯಾನ ವಿಧಾನಗಳು ಮತ್ತು ಹಬೆಜಹಜುಗಳ ನಿಯೋಜನೆಯಲ್ಲಿ ಬಹಳ ಪ್ರಗತಿಯಾಗಿದ್ದು ಈ ಸಾಮ್ರಾಜ್ಯದಲ್ಲಿ ''ಪಾಕ್ಸ್‌ಬ್ರಿಟಾನಿಕಾ'' ಎಂದು ಕರೆಯುತ್ತಿದ್ದ ಬ್ರಿಟಾನಿಯಾದ ಶಾಂತಿ ಸ್ಥಾಪನೆಗೆ ಬಹಳ ಅನುಕೂಲವಾಗಿತ್ತು. ವಾಯು ಯಾನದಲ್ಲಿ ಅಥವಾ ತೀವ್ರ ವೇಗದ ಭೂ ಸಂಚಾರದಲ್ಲಿ ಹೊಸ ಹೊಸ ಮುನ್ನಡೆಯಾದಂತೆ ಇದಕ್ಕೆ ತೊಂದರೆಯಾಗಬಹುದಿತ್ತು.

ಡಿ. ಆರ್. ಸರ್ವಮಂಗಳ

ಮಾನವ ಸಂಪನ್ಮೂಲ ಬೆಳವಣಿಗೆಯನ್ನು ನಿರ್ಧರಿಸುವ ವಿಧಾನಗಳು

ಸಮಾಜದ ಎಲ್ಲಾ ಜನರ ಜ್ಞಾನ, ಕುಶಲತೆ, ಕಾರ್ಯಸಾಮರ್ಥ್ಯ ಮತ್ತಿತರ ಅಂತರ್ನಿಹಿತ ಸಾಮರ್ಥ್ಯಗಳನ್ನು ಹೊರತರುವಿಕೆ ಮುಂತಾದ ವಿಷಯಗಳ ಬೆಳವಣಿಗೆಯು ಮಾನವ ಸಂಪನ್ಮೂಲದ ಬೆಳವಣಿಗೆಯೆನಿಸುತ್ತದೆ.

ದೀರ್ಘಕಾಲದ ಭವಿಷ್ಯತ್ ಅವಶ್ಯಕತೆಗಳನ್ನು ನಿರ್ಧರಿಸುವ ಮಾನವ ಶಕ್ತಿ ವಿಶ್ಲೇಷಣೆಯು ಅತ್ಯಂತ ಕ್ಲಿಷ್ಟಕರವಾದುದು. ಏಕೆಂದರೆ ಮಾನವ ಸಂಪನ್ಮೂಲದ ಅಭಿವೃದ್ಧಿಯನ್ನು 20 ವರ್ಷಗಳ ಅಥವಾ ಕನಿಷ್ಟಪಕ್ಷ 10 ವರ್ಷಗಳ ಅವಧಿಗೆ ಅಂದಾಜು ಮಾಡಬೇಕಾಗುತ್ತದೆ. ಶಾಲೆಗಳ ಕಟ್ಟಡಗಳನ್ನು ನಿರ್ಮಿಸಲು, ಶಿಕ್ಷಕರಿಗೆ ತರಬೇತಿ ಕೊಡಲು ಮತ್ತು ವಿಶ್ವವಿದ್ಯಾನಿಲಯದ ಪದವೀಧರರ ಸಂಖ್ಯೆಯನ್ನು ಹೆಚ್ಚಿಸಲು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಹೆಚ್ಚಳವನ್ನುಂಟುಮಾಡಲು ಬೇಕಾಗುವ ಕಾಲವನ್ನು ಗಮನಿಸಿದರೆ ಈ ಸಮಸ್ಯೆಯ ಕ್ಲಿಷ್ಟತೆಯು ಸ್ಪಷ್ಟವಾಗಿ ಗೋಚರವಾಗುತ್ತದೆ. ಉದಾಹರಣೆಗೆ 10 ವರ್ಷಗಳ ಅವಧಿಯಲ್ಲಿ ಪದವೀಧರರಾಗ ಬಲ್ಲ ವಿದ್ಯಾರ್ಥಿಗಳು ಈಗಾಗಲೆ ಪ್ರೌಢಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವವರಾಗಿದ್ದಾರೆ. ಪ್ರಾಥಮಿಕ ಶಾಲೆಗಳಿಗೆ ಪ್ರಸಕ್ತ ಸಾಲಿನಲ್ಲಿ ಸೇರುವ ವಿದ್ಯಾರ್ಥಿಗಳು ಕೊನೆಯ ಪಕ್ಷ 10 ವರ್ಷಗಳ ಕಾಲ ಪ್ರೌಢಶಿಕ್ಷಣ ಮುಗಿಸಲು ಅಥವಾ ಪದವೀಧರರಾಗಲು 15 ವರ್ಷಗಳ ಕಾಲ ಹಿಡಿಯುತ್ತದೆ. ಆರ್ಥಿಕ ಅಭಿವೃದ್ಧಿ ಯೋಜನೆಗಿಂತ ಮಾನವ ಸಂಪನ್ಮೂಲ ಯೋಜನೆಗೆ ಹೆಚ್ಚು ಅವಧಿ ಬೇಕಾಗುತ್ತದೆ.

ಭವಿಷ್ಯತ್ ಅವಶ್ಯಕತೆಗಳನ್ನು ಅಂದಾಜುಮಾಡಲು ಯಾವುದೇ ಒಂದು ಸರ್ವ ಸಮ್ಮತವಾದ ಹಾಗೂ ನಿರ್ದಿಷ್ಟವಾದ ವಿಧಾನವು ಬಳಕೆಯಲ್ಲಿಲ್ಲ. ಅಲ್ಲದೆ ಭವಿಷ್ಯತ್ ಅವಶ್ಯಕತೆಗಳನ್ನು ಅರ್ಥೈಸುವ ಸ್ಪಷ್ಟವಾದ ಕಲ್ಪನೆಯೂ ಇಲ್ಲ. ಕೆಲವರು ಭವಿಷ್ಯದ ಅವಶ್ಯಕತೆಗಳ ಮುನ್ಸೂಚನೆಯೆಂದು ಮಂಡಿಸಿದರೆ ಇತರರು ತಾವು ಈ ಅಂಶಗಳನ್ನು ಎತ್ತಿ ತೋರಿಸುತ್ತೇವೆಂದು ಮಾತ್ರ ಭಾವಿಸುತ್ತಾರೆ, ಇನ್ನಿತರರು ಮುಂದಿನ ಗುರಿಗಳನ್ನು ಸ್ಥಿರಪಡಿಸುತ್ತೇವೆಂದು ಭಾವಿಸುತ್ತಾರೆ. ಈ ಪರಿಕಲ್ಪನೆಯನ್ನು ಅರ್ಥೈಸಿ

ಕೊಳ್ಳಲು ಈಗ ಬಳಕೆಯಲ್ಲಿರುವ ಕೆಲವು ವಿಧಾನಗಳ ಪರಿಚಯವು ಉಪಯುಕ್ತ ವಾಗುವುದು.

ಅತ್ಯಂತ ಸರಳವಾದುದೆಂದರೆ ಹಾಲಿ ಇರುವ ಸಂಸ್ಥೆಗಳ ಅಭಿಪ್ರಾಯಗಳನ್ನು ಈ ಬಗ್ಗೆ ಕೇಳುವುದು. ಆದರೆ ಇದು ದೀರ್ಘಾವಧಿ ಯೋಜನೆಗೆ ನಂಬಲರ್ಹ ಅಂಶವಾಗು ವುದಿಲ್ಲ. 10 ಅಥವಾ 20 ವರ್ಷಗಳ ನಂತರದ ಗುರಿ ಈಗಿನ ಗುರಿಸಾಧನೆಯ ಕಲ್ಪನೆಗೆ ಹೊಂದದಿರಬಹುದು. ಅಲ್ಲದೆ ಬಹಳಷ್ಟು ಸಂಸ್ಥೆಗಳ ನಿರ್ವಾಹಕರು ಭವಿಷ್ಯದ ಉದ್ಯೋಗಾವಕಾಶಗಳನ್ನು ಅಂದಾಜಿಸಲು ಇಷ್ಟಪಡುವುದಿಲ್ಲ ಅಥವಾ ಅವರು ಶಕ್ತರೂ ಆಗಿರುವುದಿಲ್ಲ.

ಹಿಂದಿನ ಒಲವು ಅಥವಾ ಪ್ರವೃತ್ತಿಗಳ ಆಧಾರದ ಮೇಲೆ ಭವಿಷ್ಯತ್ತಿನ ಆವಶ್ಯಕತೆ ಗಳನ್ನು ರೂಪಿಸಿಕೊಳ್ಳುವುದು ಮತ್ತೊಂದು ವಿಧಾನ. ಈ ವಿಧಾನವನ್ನು ಪ್ರಗತಿಪರ ರಾಷ್ಟ್ರಗಳಲ್ಲಿ ವೈಜ್ಞಾನಿಕ, ತಾಂತ್ರಿಕ ಹಾಗೂ ಶಿಕ್ಷಕ ಕ್ಷೇತ್ರಗಳಲ್ಲಿ ಉನ್ನತಮಟ್ಟದ ಸಿಬ್ಬಂದಿಯನ್ನು ಪಡೆಯಲು ಬಳಸಲಾಗುತ್ತದೆ. ಭೂತಕಾಲದ ಒಲವು ಅಥವಾ ಪ್ರವೃತ್ತಿಗಳನ್ನು ಆಧರಿಸಿ ನಿರ್ದಿಷ್ಟವಾದ ವೃತ್ತಿಯಲ್ಲಿರುವ ವ್ಯಕ್ತಿಗಳ ಸಂಖ್ಯೆಗೆ ಅನುಗುಣವಾಗಿ ಮುಂದಿನ ಆವಶ್ಯಕತೆಗಳನ್ನು ಗುರುತಿಸಿ, ಅನಂತರ ಸಮಗ್ರ ಉದ್ಯೋಗಾವಕಾಶಗಳು, ಉತ್ಪಾದನೆ, ಜನಸಂಖ್ಯೆ, ಸಮಗ್ರ ರಾಷ್ಟ್ರೀಯ ಉತ್ಪಾದನೆ (GNP) ಅಥವಾ ಯಾವುದೇ ಸಮಷ್ಟಿ ಸರಿದೂಗಿಸುವ ವಿಧಾನ—ಈ ರೀತಿ ಪಡೆದ ಸಮಾಶ್ರಯಣ ಪಟ್ಟಿಯನ್ನು ಪ್ರತಿಯೊಂದು ವ್ಯಕ್ತಿಯ ಭವಿಷ್ಯತ್ ಗುರಿಗಳನ್ನು ನಿರ್ಧರಿಸಲು ಉಪಯೋಗಿಸಬಹುದಾಗಿದೆ.

ಈ ವಿಧಾನವು ಬಹಳ ಸರಳವಾದುದಾದರೂ ಇದರ ಉಪಯುಕ್ತತೆ ಬಹಳ ಕಡಮೆ. ಅನೇಕ ದೇಶಗಳಲ್ಲಿ ಹಿಂದಿನ ಅವಧಿಗಳ ದತ್ತಾಂಶಗಳನ್ನು ಪಡೆಯುವುದು ದುರ್ಲಭವಾಗಿದೆ. ಈ ದತ್ತಾಂಶಗಳು ದೊರೆತರೂ ಹಿಂದಿನ ಅನುಭವಗಳಿಂದ ಮುಂದಿನ ಅವಶ್ಯಕತೆಗಳನ್ನು ಪಡೆಯುವ ಕಲ್ಪನೆಯು ಪ್ರಶ್ನಾತೀತವಾದುದೇನೂ ಅಲ್ಲ. ವಾಸ್ತವವಾಗಿ ಭವಿಷ್ಯತ್ ಕಾಲಕ್ಕೆ ರೂಪಿಸಿದ ಯೋಜನೆಯು ಭೂತಕಾಲಕ್ಕಿಂತಲೂ ಬಹಳ ಭಿನ್ನವಾಗಿರುತ್ತದೆ. ಕೆಲವು ಸನ್ನಿವೇಶಗಳಲ್ಲಿ ಬೇರೆ ವಿಧಾನಗಳಿಂದ ಮುಂದಿನ ಭವಿಷ್ಯತ್ ರೂಪರೇಷೆಗಳನ್ನು ತಯಾರಿಸುವಾಗ ಉಂಟಾಗಬಹುದಾದ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಈ ವಿಧಾನವನ್ನು ಉಪಯೋಗಿಸಬಹುದು.

ಅತ್ಯಂತ ಸಂಕೀರ್ಣವಾದುವೆಂದರೆ, ಬೀಕರ್‌ಮನ್ ಮತ್ತು ಪಾರ್ನ್ಸ್‌ಯವರು ರೂಪಿಸಿರುವ "ಶೈಕ್ಷಣಿಕ ಯೋಜನೆ ತಯಾರಿಕೆಯಲ್ಲಿ ಮಾನವಶಕ್ತಿ ಆವಶ್ಯಕತೆಯ ಕ್ರಮ". ಇಲ್ಲಿ ಉತ್ಪಾದನೆಯಲ್ಲಿ ಆಗುವ ಬದಲಾವಣೆಯ ಅಂದಾಜು ಮಾಡುವಿಕೆಯು ನಿರ್ಣಾಯಕ ಅಂಶವಾಗಿದೆ.

ಈ ವಿಧಾನವು ಆರ್ಥಿಕ ಅಭಿವೃದ್ಧಿ ಯೋಜನಾಕಾರರಿಗೆ ಹೆಚ್ಚು ಆಕರ್ಷಣೀಯ ವಾಗಿದೆ. ಮೆಡಿಟರೇನಿಯನ್ ಪ್ರದೇಶದ ಅನೇಕ ದೇಶಗಳಲ್ಲಿ ಈ ವಿಧಾನವನ್ನು

ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಉಪಯೋಗಿಸುತ್ತಿದ್ದಾರೆ. ಇದು ಉತ್ಪಾದನೆಗೆ ಮಾನವಶಕ್ತಿ ಅವಶ್ಯಕತೆಗಳಿಗೆ ಸಂಬಂಧ ಕಲ್ಪಿಸುತ್ತದೆ. ಉತ್ಪಾದನೆಯನ್ನು ವೊಟಕು ಗೊಳಿಸುವ ಉನ್ನತ ಶಿಕ್ಷಣ ಪಡೆದ ಸಿಬ್ಬಂದಿಯ ಅಭಾವವನ್ನು ಗುರುತಿಸಲು ಸಹಾಯಕವಾಗುತ್ತದೆ. ಆದ್ದರಿಂದ ಆರ್ಥಿಕ ಅವಶ್ಯಕತೆಗಳಿಗೂ ಮಾನವ ಸಂಪನ್ಮೂಲಕ್ಕೂ ಸಂಬಂಧವನ್ನು ಕಲ್ಪಿಸುತ್ತದೆ.

ಈ ವಿಧಾನದಲ್ಲಿ ಕೆಲವು ನ್ಯೂನತೆಗಳಿವೆ ನಿರ್ಮಾಣಕಾರ್ಯ, ಗಣಿಕೆಲಸ, ಸಾರಿಗೆ ಕ್ಷೇತ್ರ ಮುಂತಾದುವುಗಳಿಗೆ ಉತ್ಪಾದನಾ ಮಾನದಂಡವು ಸೂಕ್ತವಾದುದಾದರೂ ಸಾರ್ವಜನಿಕ ಆರೋಗ್ಯ, ಸರ್ಕಾರದ ಕಾರ್ಯ ಕ್ಷೇತ್ರಗಳು, ಮತ್ತಿತರ ಸೇವೆಗಳಿಗೆ ಉನ್ನತಶಿಕ್ಷಣ ಪಡೆದ ಸಿಬ್ಬಂದಿಯನ್ನು ಅಂದಾಜು ಮಾಡಲು ಉಪಯುಕ್ತವಾಗಲಾರದು. ಕೃಷಿ ಕ್ಷೇತ್ರದಲ್ಲಿ ಭವಿಷ್ಯದಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ ಎಂದು ಅಂದಾಜುಮಾಡಿ ಆ ಆಧಾರದ ಮೇಲೆ ಎಷ್ಟು ಉದ್ಯೋಗಗಳು ಉಂಟಾಗುತ್ತದೆ ಎಂದು ಊಹಿಸುವುದು ಪ್ರಶ್ನಾತೀತವೆನಿಸುವುದಿಲ್ಲ; ಅದರಲ್ಲಿಯೂ ಅಗೋಚರ ನಿರುದ್ಯೋಗ ಮತ್ತು ಕೃಷಿ ಕಾರ್ಮಿಕ ಶಕ್ತಿಯ ಅಲ್ಪ ಉಪಯೋಗವಿರುವ ದೇಶಗಳಲ್ಲಿ ಅಂದಾಜು ಸಾಧ್ಯವೇ ಇಲ್ಲವೆನ್ನಬಹುದು. ಕೆಲವು ದೇಶಗಳಲ್ಲಿ ಬೇರೆ ಯಾವುದೇ ಕ್ಷೇತ್ರದಲ್ಲಿ ಉಪಯೋಗಿಸಲಾರದ ಕಾರ್ಮಿಕ ಶಕ್ತಿಯನ್ನು ಕೃಷಿ ಕ್ಷೇತ್ರದಲ್ಲಿ ಉಪಯೋಗಿಸಲೇಬೇಕಾಗುತ್ತದೆ ಎಂಬ ಕಲ್ಪನೆಯೂ ಇದೆ. ಏನೇ ಆದರೂ ಭವಿಷ್ಯತ್ ಉತ್ಪಾದನೆಯ ಸರಳ ಅಂದಾಜು ಕೃಷಿ ಕ್ಷೇತ್ರಕ್ಕೆ ಬೇಕಾದ ಉನ್ನತ ಶಿಕ್ಷಣ ಪಡೆದ ಸಿಬ್ಬಂದಿ ಸಂಖ್ಯೆ ಮತ್ತು ಗುಣಮಟ್ಟಗಳ ಅಂದಾಜುಮಾಡಲು ಅನೇಕ ಸೂಚನೆಗಳು ದೊರೆಯುವುದಂತೂ ದುರ್ಲಭ.

ಉತ್ಪಾದನೆಯ ನಿರೀಕ್ಷಿತ ಹೆಚ್ಚಳ ಮತ್ತು ವ್ಯಕ್ತಿ ಅವಶ್ಯಕತೆಗಳ ಮಾರ್ಪಾಡಿಗೆ ಇದು ಉಂಟುಮಾಡುವ ಪ್ರಭಾವವನ್ನು ಅಂದಾಜುಮಾಡಲು ಬೇಕಾಗುವ ಪ್ರಾಯೋಗಿಕ ದತ್ತಾಂಶಗಳ ಅಭಾವವೇ ಈ ದಿಶೆಯಲ್ಲಿ ಕಷ್ಟಕರವಾದ ಸಮಸ್ಯೆ. ವಾಸ್ತವವಾಗಿ ಕಲ್ಪನೆ ಮಾಡಿಕೊಳ್ಳುವುದಕ್ಕಿಂತಲೂ ಪ್ರಾಯೋಗಿಕ ದತ್ತಾಂಶಗಳನ್ನು ಪಡೆಯುವುದು ಒಳ್ಳೆಯದು.

ನಿರ್ದಿಷ್ಟ ಅವಧಿಯಲ್ಲಿ ಉನ್ನತ ಹುದ್ದೆಗಳಿಗೆ ಬೇಕಾಗುವ ವಿದ್ಯಾರ್ಹತೆಗಳನ್ನು ನಿರ್ಧರಿಸುವುದು ಈ ವಿಧಾನದಲ್ಲಿ ಸಹಜವಾಗಿ ಉದ್ಭವಿಸುವ ಮತ್ತೊಂದು ಸಮಸ್ಯೆ. ವಿದ್ಯಾರ್ಹತೆಗಳು ಹಾಗೂ ಹುದ್ದೆಗಳು ಆ ಕಾಲದಲ್ಲಿ ದೊರೆಯುವ ಶಿಕ್ಷಣ ಸೌಲಭ್ಯಗಳನ್ನು ಅವಲಂಬಿಸಿರುವುದರಿಂದ ಯೋಜನಾಕಾರರು ನಿರ್ಧರಿಸುವ ಅವಶ್ಯಕತೆಗಳು ಆ ಕಾಲಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಆದ್ದರಿಂದ ಮುಂದಿನ ಅಭಿವೃದ್ಧಿಗೆ ಯೋಜನೆ ಮಾಡುವಾಗ ಇವುಗಳ ಬಗೆಗೆ ಅಂದಿನ ಅವಶ್ಯಕತೆಗಳಿಗನುಗುಣವಾಗಿ ಮಾಡುವುದು ಅವಶ್ಯಕ. ಹೀಗೆ ಮಾಡುವಾಗ ಪ್ರಗತಿಪರ ದೇಶಗಳ ವ್ಯವಸ್ಥೆಗಳ ಮೂಲಕವೇ ಮಾಡಬೇಕಾಗುವುದು ಅನಿವಾರ್ಯ.

ಮಾನವಶಕ್ತಿ ಅವಶ್ಯಕತೆ ವಿಧಾನವನ್ನು ಕುರಿತು ಮಾಡಲಾಗಿರುವ ಮತ್ತೊಂದು ಪ್ರಮುಖ ಟೀಕೆಯೆಂದರೆ ಭವಿಷ್ಯದ ಸನ್ನಿವೇಶದ ಬಗ್ಗೆ ಭವಿಷ್ಯವಾಣಿಯನ್ನು ಹೇಳಿದಂತೆ ಭಾಸವಾಗುತ್ತದೆ. ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸನ್ನಿವೇಶಗಳ ಸಂಕೀರ್ಣದಿಂದ ಭವಿಷ್ಯ ನುಡಿಯುವುದು ತುಂಬಾ ಅಪಾಯಕಾರಿಯಾದುದು. ಆದಾಗ್ಯೂ ಭವಿಷ್ಯ ನುಡಿಯುವುದಕ್ಕೆ ಪ್ರಯತ್ನಿಸದೆ ಸಾಧಿಸಬೇಕಾದ ಗುರಿಯನ್ನು ನಿರ್ಧರಿಸಲು ಈ ವಿಧಾನವನ್ನು ಉಪಯೋಗಿಸಬಹುದು.

ಕೊನೆಯಲ್ಲಿ ಈ ವಿಧಾನದ ಸಮಂಜಸತೆಯು ಉತ್ಪನ್ನಗಳ ವಿಚಾರದಲ್ಲಿ ತಾಳಿದ ಕಲ್ಪನೆಗಳ ಯುಕ್ತಾಯುಕ್ತತೆಯನ್ನು ಅವಲಂಬಿಸಿರುತ್ತದೆ. ಈ ಕಲ್ಪನೆಗಳು ಸಾಮಾನ್ಯವಾಗಿ ಅಂತರರಾಷ್ಟ್ರೀಯ ಹೋಲಿಕೆಗಳ ಆಧಾರದ ಮೇಲೆ ಮಾಡಬೇಕು. ಸಾಕಷ್ಟು ಅವಧಿಗೆ ದತ್ತಾಂಶಗಳು ಇರುವ ಕೆಲವು ದೇಶಗಳು ಹಿಂದಿನ ಪ್ರವೃತ್ತಿಗಳ ಆಧಾರದ ಮೇಲೆ ಗುರಿಯನ್ನು ನೆಲೆಗೊಳಿಸಬಹುದು. ಕರಾರುವಾಕ್ಕಾದ ಉತ್ಪಾದನಾ ತಂತ್ರಗಳನ್ನು ನಿಗದಿಗೊಳಿಸಿರುವ ಉತ್ಪಾದನಾ ಮತ್ತು ವ್ಯಕ್ತಿಗಳ ಅವಶ್ಯಕತೆಗಳ ಅಂದಾಜನ್ನು ಕೆಲವು ಉತ್ಪಾದನಾ ಕ್ಷೇತ್ರಗಳಿಗೆ ಮಾಡಬಹುದು. ಆದಾಗ್ಯೂ ಇತರ ವಿಧಾನಗಳಿಗಿಂತ ಉತ್ಪಾದನಾ ವಿಶ್ಲೇಷಣೆ ಆಧಾರದ ಮೇಲೆ ಭವಿಷ್ಯತ್ ಮಾನವಶಕ್ತಿ ಅವಶ್ಯಕತೆಗಳನ್ನು ಅಂದಾಜುಮಾಡುವುದು ಉತ್ತಮವಲ್ಲವೆಂದು ತಿಳಿಯುವುದು ತಪ್ಪು ಹಾದಿಯನ್ನು ಹಿಡಿದಂತಾಗುವುದು.

ಜೇಕರ್‌ಮನ್ ಮತ್ತು ಪಾರ್ನ್ಸ್‌ಯವರು ಪರ್ಯಾಯ ವಿಧಾನವನ್ನು ರೂಪಿಸಿರುತ್ತಾರೆ. ಅದನ್ನು 'ಸಾಮಾಜಿಕ ವಾಸ್ತವಿಕ ವಿಧಾನ'ವೆಂದು ಕರೆಯಲಾಗಿದೆ. ಮಾನವಶಕ್ತಿ ಅವಶ್ಯಕತೆಯ ಕ್ರಮವು ಒಂದು ನಿರ್ದಿಷ್ಟ ಆರ್ಥಿಕ ಬೆಳವಣಿಗೆಗೆ ಬೇಕಾದ ಶಿಕ್ಷಣದ ಅವಶ್ಯಕತೆಗಳನ್ನು ನಿರೂಪಿಸಲು ಪ್ರಯತ್ನಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಸಾಮಾಜಿಕ ವಾಸ್ತವಿಕ ವಿಧಾನವು ಅಂದಿನ ಸಾಮಾಜಿಕ ಆರ್ಥಿಕ ಅವಶ್ಯಕತೆಗಳಿಗನುಗುಣವಾಗಿರಲು ಹೆಚ್ಚು ಸಹಾಯಕವಾದುದೆಂದು ಅಂಗೀಕರಿಸುತ್ತದೆ. ಹೆಚ್ಚು ವಿದ್ಯಾರ್ಹತೆ ಹಾಗೂ ಕೌಶಲ್ಯಗಳಿರುವ ಕಾರ್ಮಿಕ ಬಲವು ತಾನಾಗಿಯೇ ಆರ್ಥಿಕ ಬೆಳವಣಿಗೆಗೆ ಸಾಧನವಾಗುತ್ತದೆ. ಆರ್ಥಿಕ ಗುರಿಯನ್ನು ಸಾಧಿಸಲು, ಇಂತಿಷ್ಟೇ ವಿದ್ಯಾರ್ಹತೆಯುಳ್ಳ ಸಿಬ್ಬಂದಿ ಇರಬೇಕೆಂದು ನಿರ್ಧರಿಸುವುದು ಸಾಧುವೂ ಅಲ್ಲ ಅಪೇಕ್ಷಣೀಯವಂತೂ ಅಲ್ಲವೇ ಅಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ಗುರಿಗಳ ದೃಷ್ಟಿಯಿಂದ ಈ ವಿಧಾನವು ಪ್ರಸಕ್ತ ಶೈಕ್ಷಣಿಕ ವ್ಯವಸ್ಥೆಯಲ್ಲಿರುವ ಲೋಪದೋಷಗಳನ್ನು ಗುರುತಿಸುವುದಕ್ಕೆ ಹೆಚ್ಚು ಒತ್ತನ್ನು ಕೊಡುತ್ತದೆ.

ಒಂದು ನಿರ್ದಿಷ್ಟ ಉತ್ಪನ್ನವನ್ನು, ಉನ್ನತ ತರಬೇತಿ ಹೊಂದಿದ ಕೆಲವೇ ಕೆಲಸಗಾರರು ಅಥವಾ ಕಡಿಮೆ ತರಬೇತಿ ಹೊಂದಿದ ಹೆಚ್ಚು ಸಂಖ್ಯೆಯ ಕೆಲಸಗಾರರಿಂದ ಪಡೆಯಬಹುದು. ಸ್ವತಃಶ್ಚಲಿಗಳ ಮೂಲಕ ಕಡಮೆ ತರಬೇತಿ ಹೊಂದಿದ ಕೆಲವೇ ಕೆಲಸಗಾರರಿಂದಲೂ ಪಡೆಯಬಹುದು. ಸ್ವಲ್ಪದರಲ್ಲೇ ಹೇಳಬೇಕೆಂದರೆ

ತಾಂತ್ರಿಕತೆಯ ಆಯ್ಕೆ ಮತ್ತು ಅದರಿಂದ ಶಿಕ್ಷಣರಂಗದ ಮೇಲೆ ಆಗುವ ಪರಿಣಾಮಗಳು ಶಿಕ್ಷಣಾಭಿವೃದ್ಧಿಯ ಕಾರ್ಯಕ್ರಮದ ಪ್ರಮುಖ ವಿಷಯವಾಗಿದೆ. ಇದೇ ರೀತಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹೆಚ್ಚಿನ ತರಬೇತಿ ಮತ್ತು ಶಿಕ್ಷಣ, ಮತ್ತು ಕಡಮೆ ಉದ್ಯೋಗಾವಕಾಶಗಳು ಅಥವಾ ಕಡಮೆ ಶಿಕ್ಷಣ, ತರಬೇತಿ ಮತ್ತು ಹೆಚ್ಚಿನ ಉದ್ಯೋಗಾವಕಾಶಗಳು ಇವೆರಡರ ನಡುವೆ ಯಾವುದನ್ನು ಆಯ್ಕೆಮಾಡಬೇಕೆಂಬುದೇ ಆಗಿದೆ. ಅನೇಕ ದೇಶಗಳಲ್ಲಿ ಸಂಖ್ಯೆಗಳ ಸಮೀಕ್ಷೆಯ ದತ್ತಾಂಶಗಳ ಕೊರತೆಯಿರುವುದರಿಂದಲೂ, ಗಣಕಯಂತ್ರದ ಅಭಾವದಿಂದಲೂ ಇದನ್ನು ನಿಖರವಾಗಿ ನಿರ್ಧರಿಸಲಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಸಮೀಕ್ಷೆಯ ಬದಲು ನಿರ್ಣಯಗಳ ಮೂಲಕ ನೀತಿ ನಿರ್ಧಾರಗಳನ್ನು ಮಾಡಬಹುದು. ಅನಂತರ ತರ್ಕಬದ್ಧವಾದ ಸಾಂಖ್ಯಿತ ಲೆಕ್ಕಾಚಾರ ಮತ್ತು ವಿವಿಧ ಅವಧಿಗಳಲ್ಲಿ ಈ ಗುರಿ ಸಾಧನೆಗಳಿಗೆ ತಗಲುವ ವೆಚ್ಚಗಳ ಆಧಾರದ ಮೇಲೆ ಅಭಿವೃದ್ಧಿಯ ಗುರಿಗಳನ್ನು ನಿರ್ಧರಿಸಬಹುದು.

ಈ ವಿಧಾನವು ಸಾಂಪ್ರದಾಯಿಕ ಶಿಕ್ಷಣತಜ್ಞರ ಮನ್ನಣೆಯನ್ನು ಪಡೆದಿದೆ. ವ್ಯಕ್ತಿಗಳಿಗೆ ಬೇಕಾದ ವಿದ್ಯಾರ್ಹತೆಗಳನ್ನು ನಿರ್ಧರಿಸುವ ಸಂಕಷ್ಟದಿಂದ ಪಾರು ಮಾಡಿದೆ. ಆದರೆ ಇದು ಆರ್ಥಿಕ ಸಮಸ್ಯೆಗಳಿಗೆ ಗಮನಕೊಟ್ಟಿಲ್ಲ ಎಂಬುದನ್ನು ಮರೆಯಬಾರದು. ಈ ವಿಧಾನವನ್ನು ಆಚರಣೆಗೆ ತಂದರೆ ಶೈಕ್ಷಣಿಕ ಯೋಜಕರು ಮತ್ತು ಆರ್ಥಿಕ ಯೋಜಕರ ನಡುವೆ ಸಂಘಟನೆಯನ್ನು ತರಬಹುದು. ಕೊನೆಯಲ್ಲಿ ಯೋಜಕರು ಉತ್ಪಾದನೆ ಹೆಚ್ಚಿಸುವ ಯೋಜನೆಗೆ ಹೆಚ್ಚು ಹಣವನ್ನು ಮೀಸಲಿಟ್ಟು ಶಿಕ್ಷಣ ಮತ್ತಿತರ ಸಾಮಾಜಿಕ ಚಟುವಟಿಕೆಗಳಿಗೆ ಕಡಮೆ ಮೊತ್ತವನ್ನು ಶಿಫಾರಸ್ಸು ಮಾಡುವ ಸಾಧ್ಯತೆ ಇದೆ.

ವಿವಿಧ ಹಂತಗಳ ಶಿಕ್ಷಣವನ್ನು ಪಡೆಯಲು ಬಯಸುವ ಜನಸಂಖ್ಯೆಯ ಪ್ರಮಾಣಗಳ ಆಧಾರದ ಮೇಲೆ ಭವಿಷ್ಯದ ಗುರಿಯ ನೆಲೆಯನ್ನು ಸ್ಥಿರಪಡಿಸುತ್ತದೆ. ನಿರಕ್ಷರತಾ ನಿರ್ಮೂಲನೆ, ಪ್ರೌಢಶಿಕ್ಷಣ ಪ್ರವೇಶದ ಹೆಚ್ಚಳ, ಅಪೇಕ್ಷಿತ ಪ್ರಮಾಣಕ್ಕೆ ಶಿಕ್ಷಕ–ವಿದ್ಯಾರ್ಥಿಗಳ ಪ್ರಮಾಣ ಇಳಿಯುವಿಕೆ, ಅಪವ್ಯಯ ಕಡಿಮೆಗೊಳಿಸುವಿಕೆ, ಗುಣಮಟ್ಟವನ್ನು ಹೆಚ್ಚಿಸುವಿಕೆ ಮುಂತಾದುವುಗಳು ಸಾಧಿಸಲೇಬೇಕಾದ ಗುರಿಗಳು, ಬೇರೆ ದೇಶಗಳೊಡನೆ ಹೋಲಿಕೆಯ ಮುಖಾಂತರ ಈ ಗುರಿಗಳನ್ನು ನಿರೂಪಿಸಲಾಗುವುದು. ಇದು ವಿದ್ಯಾವಂತರ ಸಮೂಹ, ಶಿಕ್ಷಣವನ್ನು ನಿರ್ದಿಷ್ಟ ಹಂತದಲ್ಲಿ ಪೂರೈಸಿದ ಮಕ್ಕಳಿಗೆ ಸಂಬಂಧಪಟ್ಟ ವಿಷಯವಾಗಿದೆ. ಇದು ಮಾನವ ಶಕ್ತಿ ಮುನ್ಸೂಚನೆಯ ಹಂತವನ್ನು ಪರಿಗಣಿಸದೆ ನೇರವಾಗಿ ರಾಷ್ಟ್ರೀಯ ಉತ್ಪನ್ನಗಳು ಮತ್ತು ಸೇವೆಗಳಿಗೆ ಕೊಡುಗೆಯನ್ನು ಸಲ್ಲಿಸುತ್ತದೆ. ಶಿಕ್ಷಣದ ಕ್ರೋಢೀಕೃತ ಪ್ರಮಾಣಕ್ಕೆ ನಿರ್ದಿಷ್ಟ ಹಂತದ ಶಿಕ್ಷಣವನ್ನು ಮುಗಿಸಿದ ವಿದ್ಯಾವಂತರ ಸಮೂಹ ಹಾಗೂ ಪ್ರತಿಯೊಂದು ಹಂತದಲ್ಲೂ ವಿದ್ಯಾರ್ಥಿಗಳ ಸಂಖ್ಯೆಗೆ ಸಂಬಂಧಿಸಿದಂತೆ ಹಲವಾರು ಲಂಬ ಸಮೀಕರಣಗಳು ರಚಿತವಾಗುತ್ತದೆ. ಇವುಗಳು ವ್ಯವಸ್ಥೆಯ

ಸಂರಚನೆಯು ಹೇಗೆ ಮಾರ್ಪಾಡಾಗಬೇಕೆಂಬುದನ್ನು ಸೂಚಿಸಬಹುದಾಗಿದೆ. ಪ್ರತಿಯೊಂದು ವಿಧಾನಕ್ಕೂ ಆದರದೆ ಆದ ಮಿತಿಗಳು ಮತ್ತು ಸಮಸ್ಯೆಗಳು ಇರುತ್ತವೆ. ಇಲ್ಲಿನ ಸಮಸ್ಯೆಗಳೆಂದರೆ–ಶಿಕ್ಷಕರು ವಿದ್ಯಾರ್ಥಿಗಳ ಪ್ರಮಾಣ ರೂಪಿತವಾದ ಯೋಜನೆಯ ಹಂತದಿಂದ ಉತ್ಪನ್ನ ಮತ್ತು ಶಿಕ್ಷಣಗಳೆರಡರ ನಡುವೆ ಯಥೋಚಿತ ಕಲ್ಪನೆ ಮಾಡುವುದೇ ಆಗಿದೆ. ಈ ಕಲ್ಪನೆಗಳು ಸರಿಯಾಗಿಲ್ಲದಿದ್ದಲ್ಲಿ ಫಲತಾಂಶಗಳು ನಿರರ್ಥಕವಾಗುತ್ತವೆ. ಅಷ್ಟೇ ಅಲ್ಲದೆ ವಿವಿಧ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಉಂಟಾದ ಭಿನ್ನ ಆರ್ಥಿಕ ಅಭಿವೃದ್ಧಿಯು ಮತ್ತು ಉತ್ಪನ್ನಗಳ ಬೇಡಿಕೆಯನ್ನು ಪರಿಗಣಿಸಬೇಕು. ಈ ವಿಧಾನವನ್ನು ಬೇರೆ ವಿಧಾನಗಳ ಜೊತೆಗೆ ಪ್ರಯೋಗಿಸಬಹುದು. ವೈಯಕ್ತಿಕ ವಿವೇಚನೆಯು ಉತ್ತಮ ಫಲಿತಾಂಶಕ್ಕೆ ಮಾರ್ಗವಾಗುತ್ತದೆ.

ಟಿನ್‌ಬರ್‌ಗೇನ್ ಕೊರಿಯಾರವರ ಅತ್ಯಂತ ಕಾಲ್ಪನಿಕ ಮಾದರಿಯನ್ನು ಒಳಗೊಂಡಂತೆ ಶೈಕ್ಷಣಿಕ ಬೇಡಿಕೆ ಮತ್ತು ಭವಿಷ್ಯತ್ ಮಾನವ ಶಕ್ತಿಯನ್ನು ಅಂದಾಜಿಸುವ ಇತರ ವಿಧಾನಗಳು ಸೂಚಿಸಲ್ಪಟ್ಟಿವೆ. ಇಳಿತ–ಭರಿತ ನಮೂನೆಯನ್ನು ಉಪಯೋಗಿಸಿಕೊಂಡು, ವ್ಯಕ್ತಿಯ ಅವಶ್ಯಕತೆಗಳನ್ನು ಗಣನೆಮಾಡದೆ, ಮಧ್ಯಂತರ ಹಂತಗಳನ್ನು ಬಳಸದೆ, ನಿರ್ದಿಷ್ಟ ಆರ್ಥಿಕ ಬೆಳವಣಿಗೆಗೆ ಅನುರೂಪವಾಗಿ ಪ್ರೌಢ ಮತ್ತು ಉನ್ನತ ಶಿಕ್ಷಣಗಳಿಗೆ ನೇರವಾಗಿ ಸಂಬಂಧವನ್ನು ಕಲ್ಪಿಸಲು ಪ್ರಯತ್ನಿಸಲಾಗಿದೆ. ಒಟ್ಟು ಉತ್ಪನ್ನಗಳ ಪ್ರಮಾಣಕ್ಕೆ ಪ್ರತಿಯೊಂದು ಹಂತದಲ್ಲಿ ಶಿಕ್ಷಣವನ್ನು ಪೂರೈಸಿದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಆಯಾ ಹಂತದಲ್ಲಿ ಬೇಕಾಗಿರುವ ಸಂಖ್ಯೆಯನ್ನು ಲಂಬ ವ್ಯತ್ಯಾಸಾತ್ಮಕ ಸಮೀಕರಣಗಳ ಸರಣಿಗಳಿಂದ ಲೆಕ್ಕಾಚಾರ ಮಾಡಬಹುದಾಗಿದೆ. ಇದರ ಉದ್ದೇಶ ಆರ್ಥಿಕ ಬೆಳವಣಿಗೆಯು ಗೊತ್ತಾದ ಪ್ರಮಾಣದಲ್ಲಿ ಮುಂದುವರಿಯಲು ಶಿಕ್ಷಣ ವ್ಯವಸ್ಥೆಯ ಸಂರಚನೆಯು ಹೇಗಿರಬೇಕೆಂದೂ ಸೂಚಿಸುವುದಾಗಿದೆ.

ಖಂಡಿತವಾಗಿಯೂ ಈ ಮಾದರಿಯ ಗಣಿತ ನಿರೂಪಣೆಯು ಯಾವ ಟೀಕೆಗೂ ಎಡೆಮಾಡಿಕೊಡುವುದಿಲ್ಲ, ಆದರೆ ತಾಂತ್ರಿಕ ಗುಣಲಬ್ಧಗಳನ್ನು ಉಪಯೋಗಿಸಲು ಬಳಸುವ ಕಲ್ಪನೆಗಳು ಟೀಕೆಗೆ ಒಳಗಾಗಬಹುದು.

ಟಿನ್ ಬರ್‌ಗೇನ್ ಕೊರಿಯಾ ಮಾದರಿಯ ಮತ್ತೊಂದು ಸೂಚಿತ ಕಲ್ಪನೆಯೆಂದರೆ ಒಟ್ಟು ಉತ್ಪನ್ನಗಳ ಪ್ರಸಕ್ತಮಟ್ಟಕ್ಕೆ ಪ್ರೌಢ ಮತ್ತು ಉನ್ನತ ಶಿಕ್ಷಣ ಪಡೆದವರ ಕರಾರುವಾಕ್ಕಾದ ಸಂಖ್ಯೆಯಂತೆ ಕಂಡುಬಂದರೂ ವಾಸ್ತವವಾಗಿ ವಿಪರೀತ ಕೊರತೆ ಅಥವಾ ಹೆಚ್ಚಳ ಇರುವುದು ಸಾಮಾನ್ಯವಾಗಿರುತ್ತದೆ. ನಿರ್ದಿಷ್ಟ ಅವಧಿಯಲ್ಲಿ ತಾಂತ್ರಿಕತೆ ಮತ್ತು ಉತ್ಪನ್ನಗಳು ಸ್ಥಿರವಾಗಿರುತ್ತವೆಯೆಂದು ಸೂಚ್ಯವಾಗಿ ಕಲ್ಪನೆ ಮಾಡಲಾಗುತ್ತದೆ. ಅವಶ್ಯವಾದ ವ್ಯಕ್ತಿಗಳು ಮತ್ತು ಶೈಕ್ಷಣಿಕ ಅರ್ಹತೆಗಳ ಮೇಲೆ ಯಾವ ಪರಿಣಾಮವನ್ನು ಉಂಟುಮಾಡಬಹುದು ಎಂಬುದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಕೊನೆಯದಾಗಿ ಈ ಮಾದರಿಯು ಈಗ ಜಾರಿಯಲ್ಲಿರುವ ರೂಪ

ದಲ್ಲಿ ವಿವಿಧ ಶಿಕ್ಷಣಗಳ (ತಾಂತ್ರಿಕ ಶೈಕ್ಷಣಿಕ) ನಡುವೆ ವ್ಯತ್ಯಾಸವನ್ನು ಗುರುತಿಸುವುದಿಲ್ಲ–ಶಾಲಾಪಠ್ಯವಸ್ತುವಿನಲ್ಲಿ ಅಸಮತೋಲನಗಳು ಉಂಟಾಗುವುದನ್ನು ನಿರೀಕ್ಷಿಸುವುದಿಲ್ಲ. ಪ್ರಮುಖ ಆರ್ಥಿಕ ಕ್ಷೇತ್ರಗಳ ನಡುವೆ ಅಂತರವನ್ನು ಗುರುತಿಸುವುದಿಲ್ಲ.

ಟಿನ್‌ಬರ್‌ಗೇನ್ ಕೊರಿಯಾ ಮಾದರಿ, ಮತ್ತಿತರ ವಿಧಾನಗಳ ಪ್ರಾಯೋಗಿಕ ಉಪಯುಕ್ತತೆ ಹಾಗೂ ವಾಸ್ತವಾಂಶಗಳ ಮತ್ತು ಕಲ್ಪನೆಗಳ ಯುಕ್ತಾಯುಕ್ತತೆಯನ್ನು ಅವಲಂಬಿಸಿದೆಯೆಂದು ಉಪಸಂಹರಿಸಬಹುದು. ವಾಸ್ತವಾಂಶಗಳು ದೊರಕದಿರುವ ಸಂದರ್ಭಗಳಲ್ಲಿ ಆ ಪ್ರಮಾಣಕ್ಕೆ ಸರಿಯಾಗಿ ನಿರ್ಣಯಗಳನ್ನು ಮಾಡಬೇಕು. ಈ ಮಾದರಿಯು ತೋರಿಕೆಗೆ ನಿಖರವಾದ ವಿಧಾನವೆಂದು ಕಂಡುಬಂದರೂ ವಾಸ್ತವವಾಗಿ ಬೇರೆ ವಿಧಾನಗಳಿಗಿಂತ ಊಹೆ, ಕಲ್ಪನೆಗಳನ್ನು ಅವಲಂಬಿಸಿರುವುದು ಕಡಮೆ ಏನೂ ಅಲ್ಲ. ಖಾತ್ರಿಗೊಳಿಸಲು ವಾಸ್ತವಾಂಶಗಳು ದೊರೆತಂತೆಲ್ಲಾ, ತಾಂತ್ರಿಕ ಗುಣಲಬ್ಧಗಳ ಕಲ್ಪನೆಯನ್ನು ಅನುರೂಪವಾಗಿ ಬದಲಾಯಿಸಬೇಕು. ಇದೇ ರೀತಿ ಈ ವಿಧಾನವನ್ನು ಉತ್ಪಾದನೆ ಹೆಚ್ಚಳ ಮತ್ತಿತರ ಚಲಕಗಳನ್ನು ಒಳಗೊಳ್ಳಲು ಸೂಕ್ತವಾಗಿ ವಿಸ್ತರಿಸಿಕೊಳ್ಳಬೇಕು. ಪ್ರತಿ ವ್ಯಕ್ತಿಗೂ ಪ್ರತಿಯೊಂದು ಕ್ಷೇತ್ರಕ್ಕೂ ಬೇಕಾದ ಶಿಕ್ಷಿತ ಮಾನವಶಕ್ತಿಯನ್ನು ಅಂದಾಜಿಸಲು ಸೂಕ್ತ ಸಂಸ್ಕರಣಗೊಳಿಸಿ ಈ ವಿಧಾನವನ್ನು ಉಪಯೋಗಿಸಬಹುದು. ಈಗ ಪ್ರಾಯೋಗಿಕ ನಿರ್ಣಯಗಳಿಗೆ ಬದಲಿ ವ್ಯವಸ್ಥೆಯನ್ನು ಇದು ಒದಗಿಸುವುದಿಲ್ಲ, ಹಾಗೂ ಬೇರೆ ವಿಧಾನಗಳಿಗಿಂತ ಹೆಚ್ಚು ವಾಸ್ತವಿಕವೂ ಅಲ್ಲ.

ಗ್ರಂಥಋಣ

1. Naik J. P. : Educational Planning in India, 1965
2. Premi M. K. : Educational Planning in India, 1972
3. UNESCO : Economic and Social Aspects of Educational Planning, 1970
4. Mohammad Shamsul Huq : Education, Manpower and Development in South and South East Asia

ಅನುಭವ ಚಿಂತನೆಯ ಫಲವಾದರೆ, ಚಿಂತನೆ ಕೆಲಸದ ಫಲ.

ಮನೆಯ ಪ್ರೀತಿಯೇ ದೇಶಪ್ರೇಮದ ಮೂಲ.

—ಚಾರ್ಲ್ಸ್ ಡಿಕನ್ಸ್

ಬುದ್ಧಿಗೆ ತಿಳಿಯದ ಕಣ್ಣು ಹೃದಯಕ್ಕಿದೆ.

—ಸಿ. ಎಚ್. ಪಾರ್ಕಸ್ಟ್

ರೋಗದ ಲಕ್ಷಣ ತಿಳಿಯುವುದೇ ರೋಗ ನಿವಾರಣೆಯ ಮೊದಲ ಹೆಜ್ಜೆ.

—ಆರ್ನಾಲ್ಡ್ ಬೆನೆಟ್

ಕೀರ್ತಿ ಮನುಷ್ಯನ ಅಮೂಲ್ಯ ಆಸ್ತಿ.

—ಎಡ್ಮಂಡ್ ಬರ್ಕ್

ವಿವಿಧ ಜಾತಿ, ಗುಂಪುಗಳ ಕಾರಣ ಪರಸ್ಪರ ದ್ವೇಷವೇ ಹೊರತು ಪರಸ್ಪರ ವಿರುದ್ಧವಾದ ತತ್ವಗಳಲ್ಲ.

—ಆಲಿವರ್ ಗೋಲ್ಡ್‌ಸ್ಮಿತ್

ಪ್ರೇಮಿಸಲ್ಪಡುತ್ತಿದ್ದೇನೆ ಎಂಬ ಅರಿವೇ ಜೀವನದ ಅತ್ಯಂತ ಸುಖ.

—ವಿಕ್ಟರ್ ಹ್ಯೂಗೋ

ಡಾ. ಎನ್. ಸರಸ್ವತಿ

ವಿಜಯನಗರ ಕಾಲದ ಮಹಿಳೆಯರು ಮತ್ತು ದೇವಾಲಯಗಳು

ಈ ಸಂಶೋಧನಾ ಲೇಖನದಲ್ಲಿ ವಿಜಯನಗರ ಕಾಲದ ಮಹಿಳೆಯರು ದೇವಾಲಯಗಳೊಂದಿಗೆ ಹೊಂದಿದ್ದ ಕಾರ್ಯವ್ಯಾಪ್ತಿ ಮತ್ತು ಸಂಬಂಧಗಳನ್ನು ಶಾಸನಗಳನ್ನಾಧರಿಸಿ ಪ್ರಸ್ತುತಪಡಿಸಲಾಗಿದೆ. ವಿಜಯನಗರ ಕಾಲದಲ್ಲಿ ಸರ್ವಧರ್ಮಗಳ ಸಮನ್ವಯತೆಯನ್ನು ಕಾಣಬಹುದು ಹಾಗೂ ವಿಜಯನಗರದ ಅರಸರು ಧರ್ಮ ಸಹಿಷ್ಣುಗಳಾಗಿದ್ದರು.

ವಿಜಯನಗರ ರಾಜ್ಯದಲ್ಲಿ ದೇವಾಲಯಗಳು ಧರ್ಮವನ್ನು ಪ್ರತಿನಿಧಿಸುತ್ತಿದ್ದುವು. ಈ ಕಾಲದಲ್ಲಿ ದೇವಾಲಯಗಳು ಮತ್ತು ಮಹಿಳೆಯರ ನಡುವೆ ಹೊಂದಾಣಿಕೆಯಿರುವಂತಹ ಸಂಬಂಧ ಏರ್ಪಟ್ಟಿತ್ತು. ದೇವಾಲಯಗಳಲ್ಲಿ ಮಹಿಳೆಯರು ನರ್ತಕಿಯರುಗಳಾಗಿ, ಹಾಡುಗಾರರಾಗಿ, ವಾದ್ಯಗಳನ್ನು ನುಡಿಸುವ ಶಿರೋಮಣಿಗಳಾಗಿ ಹಾಗೂ ಇನ್ನಿತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ದೇವಾಲಯಗಳಲ್ಲಿನ ದೇವರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದವರಿಗೆ, ರಂಗಭೋಗಮುವರು, ಭೋಗಮುವರು, ದೇವದಾಸಿಗಳು, ಪತ್ರಿಗಳು ಮತ್ತು ಸಣಿಗಳು ಎಂಬ ವಿವಿಧ ಹೆಸರುಗಳಿದ್ದುವು. ಶೈವ ದೇವಾಲಯಗಳಲ್ಲಿ ಉದ್ಯೋಗವನ್ನರಿಸಿಕೊಂಡಿದ್ದ ಮಹಿಳೆಯರಿಗೆ ಬಸವಿಗಳು ಅಥವಾ ಬಸವಲುಗಳು ಎಂಬ ಹೆಸರಿತ್ತು. ಕ್ರಿ.ಶ. 1518ರ ಒಂದು ಶಾಸನದಲ್ಲಿ ಮಹಿಳೆಯರನ್ನು ಮೇಲಿನಂತೆ ಉಲ್ಲೇಖಿಸಲಾಗಿದೆ.[1] ಸಮಕಾಲೀನ ಸಾಮಾಜಿಕ ಪರಿಸ್ಥಿತಿಯಲ್ಲಿ ಮಹಿಳೆಯರು ದೇವಾಲಯಗಳಲ್ಲಿ ಉದ್ಯೋಗಸ್ಥರಾಗಿರುವುದು ಒಂದು ಸಾಮಾನ್ಯ ವಿಷಯವಾಗಿತ್ತು. ಕ್ರಿ.ಶ. 1515ರ ಅಮರಾವತಿ ಶಾಸನದ ಪ್ರಕಾರ ಅಲ್ಲಿನ ಮಧುರಪುರಿ ಮಧುವಿದೇವಿಯ ದೇವಾಲಯದಲ್ಲಿ ಮಹಿಳೆಯರು ಸಣಿಗಳ ಉದ್ಯೋಗವನ್ನು ಮಾಡಿಕೊಂಡಿದ್ದರು.[2] ನುರಿತ ನೃತ್ಯ ತರಬೇತಿದಾರರಿಂದ ತರಬೇತಿ ಪಡೆಯುತ್ತಿದ್ದ ಹಾಗೂ ಬಾಲ್ಯದಿಂದಲೇ ತಮ್ಮನ್ನು ತಾವೇ ದೇವಾಲಯಕ್ಕೆ ಅರ್ಪಿಸಿಕೊಂಡಿದ್ದ ನರ್ತಕಿಯರು ಈ ತರಬೇತಿದಾರರಿಂದ ಕಲೆಯ ಎಲ್ಲಾ ಪ್ರಕಾರಗಳಲ್ಲಿಯೂ ತರಬೇತಿ ಹೊಂದುತ್ತಿದ್ದರು. ಕ್ರಿ.ಶ. 1496ರ

ತಿರುಪತಿಯ ಶಾಸನದಲ್ಲಿ ನೃತ್ಯ ತರಬೇತಿದಾರರುಗಳ ಬಗ್ಗೆ ಉಲ್ಲೇಖವಿದೆ.[3] ಈ ತರಬೇತಿದಾರರುಗಳು ನರ್ತಕಿಯರಿಗೆ ಎಲ್ಲ ಕಲಾ ಪ್ರಕಾರಗಳ ಬಗ್ಗೆ ಕೊಡುವ ತರಬೇತಿಯ ಬಗೆಗೆ ಎಚ್ಚರಿಕೆ ವಹಿಸಲಾಗುತ್ತಿತ್ತು.

ಸಾಮಾನ್ಯವಾಗಿ ದಕ್ಷಿಣ ಭಾರತದ ಎಲ್ಲ ದೇವಾಲಯಗಳು ಗರ್ಭಗೃಹ, ಸುಖನಾಸ, ನವರಂಗ ಅಥವಾ ಸಭಾ ಮಂಟಪಗಳನ್ನು ಹೊಂದಿಕೊಂಡಿರುವಂತೆ ಕಟ್ಟಲಾಗಿವೆ. ಈ ದೇವಾಲಯಗಳಲ್ಲಿನ ಸುಖನಾಸಿ ಅಥವಾ ಅಂತರಾಳದ ಎದುರಿಗಿರುವ ನವರಂಗ ಅಥವಾ ಸಭಾಮಂಟಪಗಳಲ್ಲಿ ದೇವಾಲಯದ ನರ್ತಕಿಯರು ದೇವಾಲಯದ ಭಕ್ತರನ್ನು ತಮ್ಮ ನರ್ತನದ ಮೂಲಕ ರಂಜಿಸುತ್ತಿದ್ದರೆ ಮೂಲವಿಗ್ರಹಕ್ಕೆ ತಮ್ಮ ನೃತ್ಯ ಅರ್ಪಿಸುತ್ತಿದ್ದರು. ಕ್ರಿ.ಶ. 1318ರ ಗೋದಾವರಿ ಜಿಲ್ಲೆಯ ದ್ರಾಕ್ಷಾರಮ ಶಾಸನದ ಪ್ರಕಾರ ಅಲ್ಲಿನ ಭೀಮಾವರಂ ದೇವಾಲಯದಲ್ಲಿ ನೃತ್ಯಕ್ಕಾಗಿಯೇ ನಾಟ್ಯ ಮಂಟಪವನ್ನು ಕಟ್ಟಲಾಯಿತೆಂದು ಉಲ್ಲೇಖಿಸಲಾಗಿದೆ.

ಕೆಲವು ದೇವಾಲಯಗಳಲ್ಲಿ ಮಹಿಳೆಯರು ಹಾಡುವುದರಲ್ಲಿ ಮತ್ತು ವಾದ್ಯಗಳನ್ನು ನುಡಿಸುವುದರಲ್ಲಿ ಪರಿಣತಿಯನ್ನು ಹೊಂದಿದ್ದರು. ನರಸಿಂಹನ ವಿಗ್ರಹಕ್ಕೆ ಮಹಾಮಂಗಳಾರತಿಯ ಸಮಯದಲ್ಲಿ ಸಣಿಗಳು ನಾಮಸಂಕೀರ್ತನೆಗಳನ್ನು ಹಾಡುತ್ತಿದ್ದರೆಂದು ಕ್ರಿ.ಶ. 1359ರ ಸಿಂಹಾಚಲಂ ಶಾಸನವು ಉಲ್ಲೇಖಿಸುತ್ತದೆ.[5] ಕ್ರಿ.ಶ. 1349ರ ಸಿಂಹಾಚಲಂನ ಮತ್ತೊಂದು ಶಾಸನದ ಪ್ರಕಾರ ಮಹಿಳೆಯರು ನರಸಿಂಹ ದೇವಾಲಯದಲ್ಲಿ ವೀಣೆ ಮತ್ತು ಇತರ ವಾದ್ಯಗಳನ್ನು ನುಡಿಸುತ್ತಿದ್ದರು.[6] ಹೀಗೆ ಮಹಿಳೆಯರು ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಂತಹ ವಿವಿಧ ಉದ್ಯೋಗ ಪ್ರಾಕಾರಗಳು ಸಮಕಾಲೀನ ಶಾಸನಗಳಲ್ಲಿ ಉಲ್ಲೇಖಿತಗೊಂಡಿವೆ. ಕ್ರಿ.ಶ. 1382ರ ಸಿಂಹಾಚಲಂ ಶಾಸನದ ಪ್ರಕಾರ ಇಬ್ಬರು ಸಣಿಯರು ಸಿಂಹಾಚಲಂನ ದೇವಾಲಯದಲ್ಲಿ ಚಾಮರಸೇವೆ ನಡೆಸುತ್ತಿದ್ದರೆಂದು ಉಲ್ಲೇಖವಿದೆ.[7] ಸಿಂಹಾಚಲಂನ ಇನ್ನೊಂದು ಶಾಸನದ ಪ್ರಕಾರ ಸ್ಥಳೀಯ ಒಂದು ದೇವಾಲಯದಲ್ಲಿ ಒಬ್ಬ ಮಹಿಳೆ ಅದ್ದಮು ಪಟ್ಟೆನು ಅಥವಾ ಕನ್ನಡಿ ಹಿಡಿಯುವ ಕೆಲಸ ಹಾಗೂ ಮಗ್ಗು ಪಟ್ಟೆನ್ನು ಅಥವಾ ದೇವಾಲಯದ ನೆಲವನ್ನು ಸಿಂಗರಿಸುವ ಕೆಲಸದಲ್ಲಿ ತೊಡಗಿದ್ದಳೆಂದು ಉಲ್ಲೇಖಿಸುತ್ತದೆ.[8] ಕ್ರಿ.ಶ. 1384ರ ಒಂದು ಶಾಸನ ಮಹಿಳೆಯರು ದೇವಾಲಯದಲ್ಲಿ ಅಕ್ಕಿಯನ್ನು ಕುಟ್ಟುವುದು ಮತ್ತು ಹೂವಿನ ಹಾರಗಳನ್ನು ತಯಾರಿಸುವುದರಲ್ಲಿ ನಿರತರಾಗಿದ್ದರೆಂದು ಉಲ್ಲೇಖಿಸುತ್ತದೆ.[9]

ಕೆಲವು ವೇಳೆಯಲ್ಲಿ ನೃತ್ಯ ಮತ್ತು ಹಾಡುಗಾರಿಕೆಯಲ್ಲಿ ಪರಿಣತಿಯನ್ನು ಹೊಂದಿದ್ದ ಮಹಿಳೆಯರನ್ನು ಹೆಚ್ಚಿನ ಉದ್ಯೋಗಕ್ಕಾಗಿ ದೇವಾಲಯಗಳಿಗೆ ಬಡ್ತಿನೀಡಿ ಎರವಲು ಸೇವೆಗಾಗಿ ಕಳುಹಿಸಲಾಗುತ್ತಿತ್ತು. ಕ್ರಿ.ಶ. 1531ರ ತಿರುಮಲ ತಿರುಪತಿ ಶಾಸನದ ಪ್ರಕಾರ ಅಚ್ಯುತದೇವರಾಯನ ಅರಮನೆಯಲ್ಲಿ ಉದ್ಯೋಗದಲ್ಲಿದ್ದ ಮುದ್ದು ಕುಪ್ಪಾಯಿಯನ್ನು ಅವಳ ಸೇವೆಯನ್ನು ಮನ್ನಿಸಿ, ಅವರ ಪರಿಣತಿಯನ್ನು ಗೌರವಿಸಿದ

ರಾಜನು ಅವಳನ್ನು ತಿರುಪತಿಯ ವೆಂಕಟೇಶ್ವರ ದೇವಾಲಯಕ್ಕೆ ಎರವಲು ನೀಡಿದನೆಂದು ಉಲ್ಲೇಖಿಸುತ್ತದೆ.[10]

ಕೆಲವು ದೇವಾಲಯಗಳ ಧರ್ಮದರ್ಶಿಗಳು, ದೇವಾಲಯಗಳಲ್ಲಿದ್ದ ಮಹಿಳೆಯರ ವಿವಿಧ ಉದ್ಯೋಗಗಳಿಂದ ಸಂಪ್ರೀತರಾಗಿ ಮಹಿಳೆಯರಿಗೆ ಕೆಲವು ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದರು. ತಿರುಪತಿಯ ಶ್ರೀವೆಂಕಟೇಶ್ವರ ದೇವಾಲಯದ ನರ್ತಕಿ ತಿರುವೆಂಕಟ ಮಾಣಿಕಂ ಎಂಬುವವಳಿಗೆ ದೇವಾಲಯದ ಪಲ್ಲಕ್ಕಿಯನ್ನು ಅವಳ ಉಪಯೋಗಕ್ಕಾಗಿ ದೇವಾಲಯದ ಆಡಳಿತ ಸಂಸ್ಥೆ ಒದಗಿಸಿಕೊಟ್ಟಿತ್ತು.[11] ಒಬ್ಬ ನರ್ತಕಿಗೆ ನೀಡಿದಂತಹ ಈ ಸೌಲಭ್ಯ ಬಹಳ ಅಪರೂಪದ್ದಾಗಿತ್ತು.

ಸಮಕಾಲೀನ ವಿಜಯನಗರ ರಾಜ್ಯದ ಶಾಸನಗಳು ನಮಗೆ ದೇವಾಲಯಗಳ ಮಹಿಳೆಯರ ಜಾತಿ, ಸಾಮಾಜಿಕ ಅಂತಸ್ತು ಮತ್ತು ಖಾಸಗಿ ಜೀವನಗಳ ಮೇಲೆ ಯಾವುದೇ ಮಾಹಿತಿಗಳನ್ನು ಕೊಡುವುದರಲ್ಲಿ ವಿಫಲವಾಗಿವೆ. ಆದರೆ ಕೆಲವು ಶಾಸನಗಳ ಪ್ರಕಾರ ದೇವಾಲಯಗಳಲ್ಲಿ ಈ ಮಹಿಳೆಯರು ವಿವಾಹಿತರಾಗಿದ್ದು, ಮಕ್ಕಳೊಂದಿಗರಾಗಿದ್ದರು. ಕ್ರಿ.ಶ. 1391 ಬೆಜವಾಡ ಶಾಸನದ ಪ್ರಕಾರ ಬೆಜವಾಡದ ಮಲ್ಲಿಕಾರ್ಜುನ ದೇವಾಲಯದ ನರ್ತಕಿ ಭೋಗಂ ನಂಬೂರಿ ಅನ್ನರಾಣಿಗೆ ಒಬ್ಬಳು ಸೊಸೆಯಿದ್ದಳೆಂದು, ಈ ಸಂಬಂಧ ಆ ನರ್ತಕಿಯ ವೈವಾಹಿಕ ಜೀವನವನ್ನು ತೋರಿಸುತ್ತದೆಂದು ಈ ಶಾಸನವು ತಿಳಿಸುತ್ತದೆ.[12] ಈ ವಿಷಯದ ಮೇಲೆ ಸಿಂಹಾಚಲಂನ ಇತರ ಶಾಸನಗಳು ಹೆಚ್ಚಿನ ಬೆಳಕನ್ನು ಚೆಲ್ಲುತ್ತವೆ. ಈ ಶಾಸನಗಳು ದೇವಾಲಯಗಳಲ್ಲಿ ಉದ್ಯೋಗದಲ್ಲಿದ್ದ ಮಹಿಳೆಯರನ್ನು ಎರಡು ವಿಧಗಳಾಗಿ ಅಂದರೆ ಸಂಪ್ರದಾಯದವರು (ಸಂಪ್ರದಾಯವಾದಿಗಳು) ಮತ್ತು ಕಇಲು (ಸಂಪ್ರದಾಯವಾದಿಗಳಲ್ಲದವರು)ಗಳೆಂದು ವಿಂಗಡಿಸಿವೆ. ಮೊದಲನೆಯ ವರ್ಗದಲ್ಲಿ ಮಹಿಳೆಯರು ಅವಿವಾಹಿತರಾಗಿದ್ದು ದೇವಾಲಯಗಳಲ್ಲಿ ನೆಲಸಿದ್ದರೆ, ಎರಡನೆ ವರ್ಗದ ಮಹಿಳೆಯರುಗಳು, ವಿವಾಹಿತರಾಗಿದ್ದು ಸ್ವತಂತ್ರ ಜೀವನ ನಡೆಸುತ್ತ ದೇವಾಲಯಗಳಲ್ಲಿ ಅಂಶಕಾಲಿಕ ಉದ್ಯೋಗಗಳಲ್ಲಿದ್ದರೆಂದು ಈ ಶಾಸನಗಳು ತಿಳಿಸುತ್ತವೆ.[13]

ವಿಜಯನಗರ ರಾಜ್ಯದಲ್ಲೇ ಮಹಿಳೆಯರು ದೇವಾಲಯಗಳಿಗೆ ದತ್ತಿದಾನಗಳನ್ನು ನೀಡುತ್ತಿದ್ದರು. ಅವರುಗಳು ದೇವಾಲಯಗಳಿಗೆ ಭೂಮಿ ಕಾಣಿಕೆಗಳನ್ನು ಕೊಡುತ್ತಿದ್ದು, ಹಣ ಮತ್ತು ಆಭರಣಗಳನ್ನು ದಾನ ನೀಡುತ್ತಿದ್ದು, ಈ ಹಣವನ್ನು ದೇವಾಲಯಗಳಲ್ಲಿ ಉದ್ಯೋಗದಲ್ಲಿದ್ದ ಜನರುಗಳ ದೈನಂದಿನ ಚಟುವಟಿಕೆಗಳಿಗೆ ವಿನಿಯೋಗಿಸಲಾಗುತ್ತಿತ್ತು. ದೇವಾಲಯಗಳ ಧರ್ಮದರ್ಶಿಗಳು ಮತ್ತು ಆಡಳಿತ ಸಂಸ್ಥೆಗಳು ಈ ತರಹದ ದಾನಿಗಳಿಗೆ ವಿಶೇಷ ಉತ್ಸವಗಳ ಕಾಲದಲ್ಲಿ ಅಗ್ರಪ್ರಸಾದವನ್ನು ನೀಡಿ ಗೌರವಿಸುತ್ತಿದ್ದರು. ತಿರುಮಲ ತಿರುಪತಿ ದೇವಾಲಯದ ಶಾಸನಗಳು ಈ ಗೌರವ ನೀಡಿರುವ ಬಗೆಗೆ ಮಾಹಿತಿಯನ್ನು ನೀಡುತ್ತವೆ. ದೇವಾಲಯಗಳಿಗೆ ಕೊಡುತ್ತಿದ್ದ ದಾನಗಳು, ಭೂಮಿದಾನ, ಗ್ರಾಮದಾನ, ಗ್ರಾಮಗಳಿಂದ ಬರುತ್ತಿದ್ದಂತಹ

ವರಮಾನ, ಕರದ ಮೇಲಿನ ದಾನ, ಆಭರಣಗಳು, ಬಟ್ಟೆಗಳು ಮತ್ತು ದಿಂಬುಗಳು, ವಸ್ತ್ರಗಳಿಂದ ಕೂಡಿದ್ದವು. ಈ ದಾನಗಳನ್ನು ದೇವಾಲಯದ ಮೂಲ ವಿಗ್ರಹಕ್ಕೆ ರಾಜರುಗಳು ಅಧಿಕಾರಿಗಳು, ಮುಖ್ಯಸ್ಥರುಗಳು, ಮಹಾಮಂಡಲೇಶ್ವರರು, ಮಹಿಳೆಯರು, ಗ್ರಾಮ ಸಭೆಗಳು, ರಾಣಿಯರು ರಾಜವಂಶಕ್ಕೆ ಸೇರಿದ ಮಹಿಳೆಯರು, ಸಾಮಾನ್ಯ ಮಹಿಳೆಯರು, ಜಾತಿ ಮತ್ತು ಧರ್ಮದ ಭೇದವಿಲ್ಲದೆ ನೀಡುತ್ತಿದ್ದರು. ಈ ದಾನಗಳು ಮತ್ತು ದತ್ತಿಗಳನ್ನು ದಾನಿಗಳು ದೇವಾಲಯದ ಧರ್ಮದರ್ಶಿಗಳ ವಶದಲ್ಲಿ ಬಿಟ್ಟಿದ್ದು, ಈ ದಾನಗಳನ್ನು ದೈನಂದಿನ ವಿಗ್ರಹ ಪೂಜೆ, ದೀಪಗಳನ್ನು ಹಚ್ಚುವುದಕ್ಕೆ, ದೇವಾಲಯಗಳಲ್ಲಿ ವಿಶೇಷ ಉತ್ಸವಗಳನ್ನು ನಡೆಸುವುದಕ್ಕಾಗಿ ಮತ್ತು ದೇವಾಲಯಗಳಲ್ಲಿ ಉದ್ಯೋಗದಲ್ಲಿದ್ದವರಿಗೆ ಗೌರವ ಧನವನ್ನು ಕೊಡುವುದಕ್ಕಾಗಿ ವಿನಿಯೋಗಿಸಲಾಗುತ್ತಿತ್ತು. ದಾನಿಗಳು ದೇವಾಲಯಗಳಿಗೆ ದಾನಗಳನ್ನು ತಮ್ಮ ಲೌಕಿಕ ತತ್ವಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ನೀಡುತ್ತಿದ್ದರು.

ಎರಡನೇ ದೇವರಾಯನ ತಾಯಿಯಾದ ನರಸದೇವಿಯು ವಿಷ್ಣುವಿನ ಭಕ್ತಳಾಗಿದ್ದಳು. ಕ್ರಿ.ಶ 1432, ಅವಳು ತೆಲಂಗುಂಡನಿ ಮತ್ತು ಕೈಗಾಯಿ ಹಳ್ಳಿಗಳನ್ನು ರಾಮಚಂದ್ರ ದೇವಾಲಯಕ್ಕೆ ದೈನಂದಿನ ಪೂಜೆ ಮತ್ತು ಬ್ರಾಹ್ಮಣರ ಸಂತರ್ಪಣೆಗೆ ದಾನ ನೀಡಿದ್ದಳೆಂದು ಶಾಸನ ತಿಳಿಸುತ್ತದೆ [14] ಕೃಷ್ಣದೇವರಾಯನ ಪತ್ನಿಯರಾದ ತಿರುಮಲದೇವಿ ಮತ್ತು ಚಿನ್ನದೇವಿಯರು ತಿರುಮಲ ತಿರುಪತಿ ದೇವಾಲಯಕ್ಕೆ ದಾನಗಳನ್ನು ನೀಡಿದ್ದರು. ಅಚ್ಯುತರಾಯನ ರಾಣಿಯಾದ ವರದಾಜಿದೇವಿಯಮ್ಮಳು ಕ್ರಿ.ಶ. 1534ರಲ್ಲಿ ತಿರುವೆಂಕಟಮುದಿಯಾರ ದೇವಾಲಯಕ್ಕೆ ದಾನ ನೀಡಿದ್ದಳು.[15]

ಸಾಮಾನ್ಯ ಮಹಿಳೆಯರೂ ಕೂಡ ದೇವಾಲಯಗಳಿಗೆ ಕಾಣಿಕೆ ಮತ್ತು ದಾನ ನೀಡುತ್ತಿದ್ದರು. ಉದಾಹರಣೆಗೆ ಕ್ರಿ.ಶ. 1458ರ ಜನವರಿ ತಿಂಗಳ 19ರಂದು ಶೈವರ ಮತಕ್ಕೆ ಸೇರಿದ ಹೊನ್ನಮ್ಮಳು ಒಂದಷ್ಟು ಭೂಮಿಯನ್ನು ಪಡೆದುಕೊಂಡು ಅದನ್ನು ಮಲ್ಲಿಕಾರ್ಜುನ ದೇವಾಲಯದ ದೈನಂದಿನ ಪೂಜೆ ಮತ್ತು ಐದು ಜಂಗಮರ ಸಂತರ್ಪಣೆಯ ನಿರ್ವಹಣೆಗಾಗಿ ದಾನ ನೀಡಿದ್ದಳು.[16]

ಕ್ರಿ.ಶ. 1486ರಲ್ಲಿ ಅನ್ನೈಮೂಡಿ ಎಂಬುವಳ ಮಗಳಾದ ಪಳಾಂದಿ ಎಂಬ ನರ್ತಕಿಯು ಶ್ರೀವೆಂಕಟೇಶ್ವರ ದೇವಾಲಯಕ್ಕೆ ಧನುರ್ಮಾಸದ ಪೂಜೆಗಾಗಿ ವ್ಯಯಿಸಲು ಹಣವನ್ನು ದಾನ ನೀಡಿದ್ದಳೆಂದು ಶಾಸನವು ತಿಳಿಸುತ್ತದೆ.[17]

ಕ್ರಿ ಶ. 1471ರಲ್ಲಿ ತಿಮ್ಮಣ ದಣ್ಣಾಯಕನ ಪತ್ನಿಯಾದ ನಾಚಾರಮ್ಮಳು ಮೇಲುಕೋಟೆ ಕ್ಷೇತ್ರದಲ್ಲಿದ್ದ ಐವತ್ತೆರಡು ಜನ ಶ್ರೀವೈಷ್ಣವರಿಗೆ ದಾನವನ್ನು ನೀಡಿದ್ದಳೆಂದು ಮತ್ತೊಂದು ಶಾಸನ ತಿಳಿಸುತ್ತದೆ.[18]

ಕ್ರಿ.ಶ 1377ರ ಒಂದು ಶಾಸನವು ಬಾರಕೂರು ರಾಜ್ಯವನ್ನು ಆಳುತ್ತಿದ್ದ ಬೊಮ್ಮ ಅಧಿಕಾರಿಯಾದ ಮಹಾಪ್ರಧಾನ ಮುದ್ದೆ—ದಣ್ಣಾಯಕನು ಮೂರು

ತುಂಡು ಭೂಮಿಯ ಆಭರಣಗಳ ಸಹಿತ ಕೋಟೀಶ್ವರ ದೇವಾಲಯಕ್ಕೆ ದಾನ ನೀಡಿದ್ದನೆಂದು, ಈ ದಾನವನ್ನು ದಿನಂಪ್ರತಿ ಹದಿಮೂರು ಜನ ಬ್ರಾಹ್ಮಣರ ಸಂತರ್ಪಣೆಯ ವ್ಯಯಕ್ಕಾಗಿ ಮತ್ತು ಮೂಲವಿಗ್ರಹದ ಮುಂದೆ ಚೌರಿಗಳನ್ನು ಬೀಸುತ್ತಿದ್ದ ಇಬ್ಬರು ಮಹಿಳೆಯರ ವೆಚ್ಚಕ್ಕಾಗಿ ದಾನ ಮಾಡಲಾಯಿತೆಂದು ತಿಳಿಸುತ್ತದೆ.[19]

ಮನೋರಂಜನಾ ಕಾರ್ಯಕ್ರಮಗಳು, ನಾಟಕಗಳು, ಧಾರ್ಮಿಕ ಜೀವನವನ್ನು ಪ್ರತಿಬಿಂಬಿಸುವಂತಹ ಹಾಡುಗಳು, ದೇವಾಲಯದ ಸುತ್ತಮುತ್ತಲಿನ ದೈನಂದಿನ ಚಟುವಟಿಕೆಗಳ ಸಾಂಸ್ಕೃತಿಕ ಜೀವನದ ಅಗರವಾಗಿದ್ದುವು. ದೇವಾಲಯಗಳಲ್ಲಿನ ಈ ಸಾಂಸ್ಕೃತಿಕ ಚಟುವಟಿಕೆ ಶೈಕ್ಷಣಿಕ ಮತ್ತು ಧಾರ್ಮಿಕ ಜೀವನದಷ್ಟೇ ಅಲ್ಲದೆ, ಅವುಗಳು ದೇವಾಲಯಗಳ ಸುತ್ತಲ ಪರಿಸರಗಳ ಜನರ ಮತ್ತು ದೇವಾಲಯಗಳಿಗೆ ದರ್ಶನಾಪೇಕ್ಷಿಯಾಗಿ ಬರುತ್ತಿದ್ದವರು ಮತ್ತು ಅಕ್ಷರಸ್ಥ ಹಾಗೂ ಅನಕ್ಷರಸ್ಥ ಜನಸಮುದಾಯಕ್ಕೆ ಮನೋರಂಜನೆಯನ್ನು ಒದಗಿಸುತ್ತಿದ್ದವು.

ಹೀಗೆ, ಮಹಿಳೆಯರು ದೇವಾಲಯಗಳಲ್ಲಿ ವಿವಿಧ ಉದ್ಯೋಗಗಳಲ್ಲಿರುವುದು, ದೇವಾಲಯಗಳಿಗೆ, ಜಂಗಮರಿಗೆ ದಾನ ನೀಡುವುದು, ಸಾರ್ವಜನಿಕರ ಹಿತಾಸಕ್ತಿಗಳ ಕಾರ್ಯಕ್ಕೆ ಸಹಕರಿಸುವುದು ಮತ್ತು ಬ್ರಾಹ್ಮಣರನ್ನು ಸತ್ಕರಿಸುವುದು ಮುಂತಾದವು ಗಳನ್ನು ನಾವು ನೋಡಬಹುದಾಗಿದೆ. ಈ ಮೇಲಿನ ಉದಾಹರಣೆಗಳ ಮೂಲಕ ಮಹಿಳೆಯರು ತಮ್ಮನ್ನು ವಿವಿಧ ಹಂತಗಳಲ್ಲಿ ತೊಡಗಿಸಿಕೊಳ್ಳುವುದನ್ನು ಕಾಣ ಬಹುದಾಗಿದೆ. ಈ ಕಾಲದಲ್ಲಿ ಮಹಿಳೆಯರು ಮತ್ತು ದೇವಾಲಯಗಳ ನಡುವೆ ಒಂದು ಐತಿಹಾಸಿಕ ಸಂಬಂಧ ಏರ್ಪಟ್ಟಿತ್ತು. ರಾಜವಂಶಕ್ಕೆ ಸೇರಿದ ಮಹಿಳೆಯರು ಸಾಮಾನ್ಯ ಮಹಿಳೆಯರು, ದೇವಾಲಯಗಳ ನರ್ತಕಿಯರು, ಮಹಿಳಾ ಹಾಡುಗಾರರು ಮತ್ತು ಮಹಾಮಂಡಲೇಶ್ವರ ಮಹಿಳೆಯರು ದೇವಾಲಯಗಳಲ್ಲಿ ಉದ್ಯೋಗವನ್ನು ಅರಸುತ್ತಿದ್ದರು. ಮಹಿಳೆಯರು ಈ ಕಾಲದಲ್ಲಿ ಹೆಚ್ಚಿನ ಮಟ್ಟದಲ್ಲಿ ಧಾರ್ಮಿಕತೆಯಿಂದ ಕೂಡಿದ್ದು, ಧರ್ಮ (ಅಥವಾ ದೇವಾಲಯ) ಮಹಿಳೆಯರ ದೈನಂದಿನ ಜೀವನದ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರಿತ್ತು. ದೇವಾಲಯಗಳ ಧರ್ಮದರ್ಶಿಗಳು ಮಹಿಳೆಯರನ್ನು ಅವರ ವಿವಿಧ ಉದ್ಯೋಗಗಳಿಗಾಗಿ ಗೌರವಿಸುತ್ತಿದ್ದರು.

ಆಧಾರಗಳು

1. ಎಸ್.ಐ.ಐ., 4, ನಂ. 702
2. ಎಂ.ಎಸ್.ಎಸ್. ಪುಟಗಳು. 531–540
3. ಟಿ.ಡಿ. ಸಂಪುಟ 2, ನಂ. 135
4. ಟಿ.ಡಿ. ಸಂಪುಟ 4, 137
5. ಟಿ.ಡಿ. ಸಂಪುಟ 4, ನಂ. 137
6. ಎಸ್.ಐ.ಐ., 6, ನಂ. 955
7. ಎಸ್.ಐ.ಐ. 6, ನಂ. 818
8. ಎಸ್.ಐ.ಐ. 6, ನಂ. 1099
9. ಎಸ್.ಐ.ಐ. ಸಂ. 4, ನಂ. 22
10. ಎಸ್.ಐ.ಐ. ಸಂಪುಟ 4, ನಂ. 22
11. ಎಸ್.ಐ.ಐ. ಸಂಪುಟ 259
12. ಎಸ್.ಐ.ಐ. ಸಂಪುಟ 6 ನಂ. 991
13. ರಾವ್ ರಾಮಚಂದ್ರ ಪಿ.ವಿ.—"ಮಧ್ಯಯುಗದ ಆಂಧ್ರದಲ್ಲಿ ಆಡಳಿತ ಮತ್ತು ಸಮಾಜ" (ಕ್ರಿ.ಶ. 1038–1538) ಪುಟ 303
14. ಎಂ.ಎ.ಆರ್. 1933, ನಂ. 27
15. ಆಂಧ್ರಪ್ರದೇಶದ ಶಾಸನಗಳು, ಪುಟ 72
16. ದಕ್ಷಿಣ ಭಾರತದ ಶಾಸನಗಳು, ಸಂಪುಟ 9. ಟಿ 1. ಪುಟ 470
17. ತಿರುಮಲ ದೇವಸ್ಥಾನ ಶಾಸನಗಳು, ಸಂಪುಟ 10. ಪುಟ 27
18. ಎಪಿಗ್ರಾಫಿಯ ಕರ್ಣಾಟಕ, ಸಂಪುಟ 10. ಪುಟ 7
19. ದಕ್ಷಿಣ ಭಾರತ ಶಾಸನಗಳು, ಸಂಪುಟ 10. ಪುಟ 421

ಎಂ. ಎಸ್. ಚಂದ್ರಶೇಖರಪ್ಪ

ಸಾಮೂಹಿಕ ಚೌಕಾಸಿ [Collective Bargaining]

ಯಾವುದೇ ಕೈಗಾರಿಕೆಯನ್ನು ಸ್ಥಾಪಿಸಿ, ನಿರ್ವಿಘ್ನವಾಗಿ ನಡೆಸಿಕೊಂಡು ಹೋಗಬೇಕಾದರೆ ಅದಕ್ಕೆ ಬಂಡವಾಳ, ತಾಂತ್ರಿಕತೆ, ಕಚ್ಚಾ ವಸ್ತುಗಳು, ಇತ್ಯಾದಿ ; ಅತ್ಯಾವಶ್ಯಕ. ಆದರೆ ಇಂತಹ ಅತ್ಯಾವಶ್ಯಕ ವಸ್ತುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಕೈಗಾರಿಕೆಗಳಲ್ಲಿ 'ಸೌಹಾರ್ದ-ವಾತಾವರಣ' ಇರಬೇಕು. ಈ ರೀತಿಯ ವಾತಾವರಣವನ್ನು ಯಾವುದೇ ಕೈಗಾರಿಕೆಯಲ್ಲಿ ನಿರ್ಮಾಣಮಾಡಬೇಕಾದರೆ ಮಾಲೀಕ/ಆಡಳಿತ ವರ್ಗ ಹಾಗೂ ಕಾರ್ಮಿಕರ ನಡುವಿನ ಸಂಬಂಧ ಬಹಳ ಉತ್ತಮ ಮಟ್ಟದ್ದಿರಬೇಕು. ಇಲ್ಲಿ ನಾವು ಒಂದು ಮುಖ್ಯವಾದ ಅಂಶವನ್ನು ಗಣನೆಗೆ ತೆಗೆದು ಕೊಳ್ಳಲೇಬೇಕು. ಅದೇನೆಂದರೆ 'ಕೈಗಾರಿಕಾ ಸಂಬಂಧ' ಮಾಲೀಕ/ಆಡಳಿತ ವರ್ಗ ಮತ್ತು ಕಾರ್ಮಿಕರ ನಡುವೆಯಷ್ಟೇ ಸೀಮಿತ ಎಂದು ಭಾವಿಸಿದರೆ ತಪ್ಪಾಗುವುದು. ಯಾಕೆಂದರೆ ಒಂದು ಕಾರ್ಖಾನೆಯಲ್ಲಿ 'ಕೈಗಾರಿಕಾ-ಸಂಬಂಧ' ಉತ್ತಮ ಮಟ್ಟದ್ದಾಗಿಲ್ಲ ಎಂದು ಕಂಡುಬಂದಲ್ಲಿ ಅದರ ಪರಿಣಾಮ ಮಾಲೀಕ ಮತ್ತು ಕಾರ್ಮಿಕರಿಗಷ್ಟೇ ಅಲ್ಲದೆ, ಅದು ಉತ್ಪಾದಿಸುವ ವಸ್ತುಗಳ ಬಳಕೆದಾರರು, ಸಮುದಾಯ ಹಾಗೂ ದೇಶದ ಆರ್ಥಿಕ ವ್ಯವಸ್ಥೆಯ ಮೇಲೂ ಬೀರಬಲ್ಲದು-ಕುಚ್ಚಾಲರು[1] ಈ ವಿಷಯದ ಬಗ್ಗೆ ವಿಶ್ಲೇಷಿಸುತ್ತಾ ಇಂಥದ್ದೇ ಹೇಳಿಕೆಯನ್ನು ಕೊಟ್ಟಿರುತ್ತಾರೆ.

ಕೈಗಾರಿಕಾ-ಸಂಬಂಧಗಳಿಗೆ ಅನ್ವಯಿಸುವ ಅನೇಕ ವಿಧವಾದ ಸಮಸ್ಯೆಗಳನ್ನು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿಯಷ್ಟೇ ಅಲ್ಲದೆ ಹೆಚ್ಚು ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ನಾವು ಸಾಮಾನ್ಯವಾಗಿ ಕಾಣಬಹುದು. ಆದರೆ, ಅವುಗಳ ಸ್ವರೂಪ, ವಿಧ ಹಾಗೂ ತೀವ್ರತೆಯ ಮಟ್ಟ-ಇವುಗಳಲ್ಲಿ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. ಇಂತಹ ಸಮಸ್ಯೆಗಳನ್ನು ನಾವು ಯಾವಾಗಲೂ ಹೆಚ್ಚು ತೀವ್ರಗತಿಯಲ್ಲಿ ಬೆಳೆಯಲು ಬಿಡಬಾರದು. ಹಾಗೆ ಬಿಟ್ಟದ್ದೇ ಆದಲ್ಲಿ, ಅವುಗಳ ದುಷ್ಪರಿಣಾಮಗಳನ್ನು ಗ್ರಹಿಸಿ, ನಿಗ್ರಹಿಸುವುದು ಕಷ್ಟ-ಸಾಧ್ಯ.

ಈ ದಿಶೆಯಲ್ಲಿ ಇತರ ದೇಶಗಳಲ್ಲಿ ಚಾಲ್ತಿಯಲ್ಲಿರುವಂತೆ ಭಾರತದಲ್ಲೂ ಕೂಡ

'ಕೈಗಾರಿಕಾ ಸಂಬಂಧ'ಗಳ ಸಮಸ್ಯೆಗಳನ್ನು ಇತ್ಯರ್ಥಮಾಡಲು ಅನೇಕ ವಿಧಾನಗಳನ್ನು/ಮಾರ್ಗೋಪಾಯಗಳನ್ನು 'ಕೈಗಾರಿಕಾ ವಿವಾದಗಳ ಕಾಯ್ದೆ'ಯ ಮೂರನೇ ವಿಧಿಯಲ್ಲಿ ಒದಗಿಸಲಾಗಿದೆ. ಅದರ ಪ್ರಕಾರ 'ಸಾಮೂಹಿಕ-ಚೌಕಾಸಿ'ಯೂ ಒಂದು. ಇತರೆ ಮುಖ್ಯ ವಿಧಾನಗಳೆಂದರೆ, ಮಧ್ಯಸ್ಥಿಕೆ (conciliation), ತೀರ್ಪುಗಾರಿಕೆ (Adjudication), ಹಾಗೂ ಸ್ವ-ಪಂಚಾಯಿತಿ ತೀರ್ಮಾನ (Voluntary Arbitration).

ಪರಿಕಲ್ಪನೆ (Concept)

'ಸಾಮೂಹಿಕ ಚೌಕಾಸಿ' (Collective Bargaining) ಎಂಬ ಪದ ಸಮುಚ್ಚಯವು 'Collective' ಮತ್ತು 'Bargaining' ಎಂಬ ಆಂಗ್ಲ ಪದಗಳನ್ನೊಳಗೊಂಡಿದೆ. ಆಂಗ್ಲ ಭಾಷೆಯ 'Collective' ಎಂಬ ಪದದ ಅರ್ಥ 'ಸಾಮೂಹಿಕ' ಎಂದು ಹೇಳುವುದಾದರೆ, 'Bargaining' ಎಂಬುದರ ಅರ್ಥ 'ಚೌಕಾಸಿ' ಎಂಬುದಾಗಿದೆ. ಈ ಪರಿಕಲ್ಪನೆಯನ್ನು 'ಕೈಗಾರಿಕಾ-ಸಂಬಂಧ'ದ ದೃಷ್ಟಿಕೋನವನ್ನಿಟ್ಟುಕೊಂಡು ಬಳಸಿದಾಗ ತನ್ನದೇ ಆದ ವಿಶಿಷ್ಟ ರೀತಿಯ ಅರ್ಥವನ್ನು ಕೊಡುತ್ತದೆ. ಅಂದಹಾಗೆ, 'ಸಾಮೂಹಿಕ ಚೌಕಾಸಿ'ಯು ಆಡಳಿತ ಹಾಗೂ ಕಾರ್ಮಿಕರ ಪ್ರತಿನಿಧಿಗಳ ನಡುವೆ ಇರುವ ಪ್ರಕ್ರಿಯೆ. ಸುಬ್ರಮಣ್ಯಮ್‌ರವರ[2] ಪ್ರಕಾರ, 'ಸಾಮೂಹಿಕ ಚೌಕಾಸಿ'ಯಲ್ಲಿ ಕಾರ್ಮಿಕ ಸಂಘಗಳು ಹಾಗೂ ನಿರ್ವಹಣೆಗಾರರು ಸ್ವ-ಇಚ್ಛೆಯಿಂದ ಜೊತೆಗೂಡಿ, ವಿಷಯಗಳ ಮೇಲೆ ಚರ್ಚಿಸಿ, ವಾದ-ವಿವಾದಗಳನ್ನು ಮಾಡಿ ಕೊನೆಗೆ ಚರ್ಚಿಸಿದ ಎಲ್ಲ ವಿಷಯಗಳ ಅಥವಾ ಹಲವು ವಿಷಯಗಳ ಬಗ್ಗೆ ಒಪ್ಪಂದವನ್ನು ಮಾಡಿಕೊಳ್ಳುವುದೇ ಆಗಿದೆ. ಆದರೆ ಈ ಮೇಲಿನ ಹೇಳಿಕೆಯನ್ನು ನಾವು ಒಪ್ಪಿಕೊಳ್ಳಲಾಗದು. ಕಾರಣ ಅನೇಕ ಸಂದರ್ಭಗಳಲ್ಲಿ ಸಾಮೂಹಿಕ ಚೌಕಾಸಿಯಿಂದ ಯಾವ ರೀತಿಯ ಒಪ್ಪಂದವನ್ನು ಕೂಡ ಮಾಡಿಕೊಳ್ಳಲು ಆಗುವುದಿಲ್ಲ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು[3] ನೀಡಿರುವ ವ್ಯಾಖ್ಯಾನ ಬಹಳ ಸಮಂಜಸವಾದುದೆಂದು ಹೇಳಬಹುದು. ಯಾಕೆಂದರೆ ಇದರಲ್ಲಿ ಸಾಮೂಹಿಕ ಚೌಕಾಸಿಯ ಬಹುತೇಕ ಗುಣ-ಲಕ್ಷಣಗಳನ್ನು ನಾವು ಕಾಣಬಹುದು. ಅದರ ಪ್ರಕಾರ, 'ಸಾಮೂಹಿಕ ಚೌಕಾಸಿ'ಯು ಒಂದು ಪ್ರಕ್ರಿಯೆಯಾಗಿದ್ದು, ಮಾಲೀಕ/ಮಾಲೀಕರು/ ಒಂದು ಅಥವಾ ಹೆಚ್ಚು ಮಾಲೀಕರ ಮಹಾಸಂಘಗಳು (Federations) ಮತ್ತು ಒಂದು ಅಥವಾ ಹೆಚ್ಚು ಕಾರ್ಮಿಕ ಮಹಾಸಂಘಗಳ ಜೊತೆಗೂಡಿ ಕೈಗಾರಿಕೆಗೆ ಸಂಬಂಧಪಟ್ಟಂತೆ ಕೆಲಸದ ಸ್ಥಿತಿ-ಗತಿ ಹಾಗೂ ಉದ್ಯೋಗ ಸೇವಾ ನಿಯಮಗಳ ವಿಷಯ ಕುರಿತಂತೆ ಸಂಧಾನ ನಡಸಿ ಒಪ್ಪಂದಕ್ಕೆ ಬರುವ ಪ್ರಯತ್ನವೇ ಆಗಿದೆ.

'ಸಾಮೂಹಿಕ ಚೌಕಾಸಿ'ಯ ಪ್ರಕ್ರಿಯೆಯು ದ್ವಿಪಕ್ಷೀಯ ಒಪ್ಪಂದವನ್ನು ಉಂಟುಮಾಡುವುದು. ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ

ಮಂತ್ರಾಲಯವು[4] ನಡೆಸಿದ ಅಧ್ಯಯನದ ಪ್ರಕಾರ 'ಸಾಮೂಹಿಕ ಚೌಕಾಸಿ'ಯ ಒಪ್ಪಂದಗಳು ಕೈಗಾರಿಕೆಗಳಲ್ಲಿ ಉತ್ತಮ ಮಟ್ಟದ ವಾತಾವರಣವನ್ನು ಸ್ಥಾಪಿಸಲು ಬಹಳ ಉಪಯುಕ್ತವಾದ ವಿಧಾನ ಎಂದು ಪರಿಗಣಿಸಲಾಗಿದೆ. ಈ ವಿಧಾನವು 'ಪ್ರಜಾಪತ್ತೆ' ತತ್ವಗಳನ್ನು ಪ್ರತಿಬಿಂಬಿಸುವುದು. ಯಾಕೆಂದರೆ, ಈ ಪ್ರಕ್ರಿಯೆಯಲ್ಲಿ ಮಧ್ಯವರ್ತಿಗೆ ಅವಕಾಶವಿರುವುದಿಲ್ಲ. ಕೈಗಾರಿಕಾ ಸಮಸ್ಯೆಗಳಿಗೆ ಪ್ರಾರಂಭದಲ್ಲೇ ಸೂಕ್ತ ಪರಿಹಾರವನ್ನು ಈ ವಿಧಾನದಿಂದ ಕಂಡುಹಿಡಿಯಲು ಸಾಧ್ಯವಿರುವುದರಿಂದ ಆಡಳಿತ ವರ್ಗದವರೂ ಕೂಡ ಇಂದು ಇದಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದಾರೆ.

ಹಂತಗಳು (Steps)

ಈ ವಿಧಾನವು ಪ್ರಮುಖವಾಗಿ ಐದು ಹಂತಗಳನ್ನು ಹೊಂದಿರುವುದು. ಅವು ಯಾವುವೆಂದರೆ: (1) 'ಚೌಕಾಸಿ ಸಂಬಂಧ' (Bargaining Relationship)ವನ್ನು ರೂಪಿಸುವುದು, (2) ಒಪ್ಪಂದ ಮಾಡಿಕೊಳ್ಳುವುದು (Creation of agreement), (3) ಒಪ್ಪಂದವನ್ನು ಜಾರಿಗೆ ತರಲು ಬೇಕಾಗುವ ವಾತಾವರಣವನ್ನು ಸೃಷ್ಟಿಸುವುದು (Preparing a ground for the enforcement of an agreement), (4) ಒಪ್ಪಂದವನ್ನು ಜಾರಿಗೊಳಿಸುವುದು (Enforcement of an agreement), ಹಾಗೂ (5) ಒಪ್ಪಂದದ ಪರಿಣಾಮದ ಬಗ್ಗೆ ಮೌಲ್ಯಮಾಪನ ಮಾಡುವುದು (Evaluation on the effects of an agreement). ಈ ಮೇಲಿನ ಎಲ್ಲ ಹಂತಗಳೂ ಒಂದಕ್ಕೊಂದು 'ಕಾರ್ಯಾತ್ಮಕ-ಸಂಬಂಧ'ವನ್ನು ಹೊಂದಿರುವಂತಹವು. ಮೊದಲನೇ ಹಂತದ ಬಗ್ಗೆ ಹೇಳಬೇಕೆಂದರೆ ಇದು ಬಹಳ ಮುಖ್ಯವಾಗಿದ್ದು, ಉಳಿದ ಹಂತಗಳು ಇದರ ಮೇಲೆ ಅವಲಂಬಿಸಿರುತ್ತದೆ. ಇದಕ್ಕೆ ಸಾಮೂಹಿಕ ಚೌಕಾಸಿಯ ಅಡಿಪಾಯ ಎಂದು ಕರೆಯಬಹುದು. ಈ ಹಂತದಲ್ಲಿ ಕಾರ್ಮಿಕ-ಪ್ರತಿನಿಧಿಗಳು ತಮ್ಮ ಬೇಡಿಕೆ-ಪಟ್ಟಿ (Charter of Demand)ಯನ್ನು ಆಡಳಿತ ವರ್ಗಕ್ಕೆ ಸಲ್ಲಿಸುತ್ತಾರೆ ಹಾಗೂ ಆಡಳಿತ ವರ್ಗಕ್ಕೆ ಈ ಸಂಬಂಧ ಸಾಕಷ್ಟು ಕಾಲಾವಕಾಶವನ್ನು ಕೊಡುವರು. ಆಡಳಿತ ವರ್ಗದವರು ಬೇಡಿಕೆ-ಪಟ್ಟಿಯನ್ನು ಪರಿಶೀಲಿಸಿ ಬೇಡಿಕೆಗಳ ಬಗ್ಗೆ ಕಾರ್ಮಿಕರ ಜೊತೆ ಚರ್ಚಿಸಲು ಅನುವುಮಾಡಿಕೊಡುವರು. ಎರಡೂ ಪಕ್ಷದವರು 'ಸಾಮೂಹಿಕ ಚೌಕಾಸಿ'ಗೆ ಅನುಕೂಲಕರವಾಗುವಂತಹ ವಾತಾವರಣವನ್ನು ಹುಟ್ಟುಹಾಕಿ ಪ್ರಕ್ರಿಯೆಯ ಕೊನೆಯ ಹಂತದವರೆಗೂ ಅದು ಅಳಿದು ಹೋಗದಂತೆ ನೋಡಿಕೊಳ್ಳಬೇಕು.

ಎರಡನೆಯ ಹಂತದಲ್ಲಿ ಸಾಮೂಹಿಕ ಒಪ್ಪಂದವನ್ನು ಮಾಡಿಕೊಳ್ಳುವುದೇ ಆಗಿದೆ. ಈ ಹಂತದಲ್ಲಿಯೇ ಆಡಳಿತ ವರ್ಗ ಮತ್ತು ಕಾರ್ಮಿಕ ಪ್ರತಿನಿಧಿಗಳು ಮುಖಾ-ಮುಖಿ ಭೇಟಿಯಾಗಿ ಯಾವ ಯಾವ ವಿಷಯಗಳ ಬಗ್ಗೆ ಚರ್ಚಿಸಬೇಕೋ ಅವುಗಳ ಸಾಧಕ-ಬಾಧಕಗಳನ್ನು ತುಲನಮಾಡಿ ನಂತರ ಒಪ್ಪಂದಕ್ಕೆ ಬರುತ್ತಾರೆ.

ಆದರೆ ಎರಡೂ ಪಕ್ಷದವರೂ ಕೂಡ 'ಸಾಮೂಹಿಕ ಚೌಕಾಸಿ' ವಿಧಾನದಿಂದ ಅನೇಕ ಕೈಗಾರಿಕಾ ಸಮಸ್ಯೆಗಳನ್ನು ನಿಖರವಾಗಿ ಬಗೆಹರಿಸಬಹುದು ಎಂಬಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು. ಸಾಮೂಹಿಕ ಒಪ್ಪಂದವು ಅನೇಕ ಅಂಶಗಳನ್ನು ಅವಲಂಬಿಸಿದೆ. ಅವುಗಳೆಂದರೆ, ಚೌಕಾಸಿ ಮಾಡುವಲ್ಲಿ ಎರಡೂ ಪಕ್ಷದವರಿಗಿರುವ ಪೂರ್ವಾನುಭವ, ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಗುಣಮಟ್ಟ ಹಾಗೂ ಕೈಗಾರಿಕೆಯ ಸ್ವರೂಪ. ಆಡಳಿತ ವರ್ಗದವರೇ ಆಗಲಿ ಅಥವಾ ಕಾರ್ಮಿಕ ಪ್ರತಿನಿಧಿಗಳೇ ಆಗಲಿ ಪರಸ್ಪರ ಸಹಕಾರವನ್ನು ನೀಡದಿದ್ದಲ್ಲಿ ಸಾಮೂಹಿಕ ಚೌಕಾಸಿಯಿಂದ ಯಾವ ಒಪ್ಪಂದವನ್ನೂ ಮಾಡಿಕೊಳ್ಳಲಾಗುವುದಿಲ್ಲ. ಸಾಮಾನ್ಯವಾಗಿ ಸಂಧಾನವು ಆಡಳಿತ ವರ್ಗದ ಪ್ರತಿನಿಧಿಗಳಿಂದ ಪ್ರಾರಂಭವಾಗುವುದು. ಈ ರೀತಿ ಪ್ರಾರಂಭವಾದ ಸಂಧಾನವು ಒಪ್ಪಂದದಲ್ಲಿ (agreement) ಕೊನೆಗೊಂಡಾಗ ಅದನ್ನು ಬರಹ ರೂಪದಲ್ಲಿ ತಯಾರಿಸಿ ಎರಡೂ ಪಕ್ಷದವರ ಸಹಿಗಳನ್ನು ತೆಗೆದುಕೊಳ್ಳಬೇಕು. ಇಂತಹ ಒಪ್ಪಂದದ ಪ್ರತಿಗಳನ್ನು ಆಡಳಿತ ಹಾಗೂ ಕಾರ್ಮಿಕ ಪ್ರತಿನಿಧಿಗಳು ಇಟ್ಟುಕೊಳ್ಳಬೇಕಾಗುವುದು.

ಮೂರನೇ ಹಂತದಲ್ಲಿ ಒಪ್ಪಂದವನ್ನು ಕಾರ್ಯರೂಪಕ್ಕೆ ತರಬೇಕಾದರೆ ಇರಬೇಕಾದ ವಾತಾವರಣವನ್ನು ನಿರ್ಮಿಸಿ, ಒಪ್ಪಂದದ ಸಾಧಕ-ಬಾಧಕಗಳ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಯಪಡಿಸಬೇಕು. ನಾಲ್ಕನೇ ಹಂತದಲ್ಲಿ ಒಪ್ಪಂದವನ್ನು ಕಾರ್ಯರೂಪಗೊಳಿಸುವುದು. ಇದು ಬಹಳ ಮುಖ್ಯ ಹಾಗೂ ಕಷ್ಟಸಾಧ್ಯದ ಕೆಲಸ. ಯಾಕೆಂದರೆ ಯಾವುದೇ ಒಪ್ಪಂದವನ್ನು ಕಾರ್ಯರೂಪಕ್ಕೆ ತರುವಾಗ ಅನೇಕ ಅಡ-ತಡೆಗಳು ಉದ್ಭವಿಸುವುವು. ಉದಾ : ಆಡಳಿತ ವರ್ಗ ಕೈಗಾರಿಕೆಯು ಒಂದು ಕಾರ್ಮಿಕ ಸಂಘದೊಡನೆ ಯಾವುದಾದರೊಂದು ವಿಷಯದ ಬಗ್ಗೆ ಒಪ್ಪಂದ ಮಾಡಿಕೊಂಡಲ್ಲಿ, ಅದೇ ಕೈಗಾರಿಕೆಯು ಇನ್ನೊಂದು ಕಾರ್ಮಿಕ ಸಂಘ ಅಂಥ ಒಪ್ಪಂದವನ್ನು ಒಪ್ಪಿಕೊಳ್ಳದೇ ಇರಬಹುದು. ಇದೇ ರೀತಿಯ ಅನೇಕ ತೊಂದರೆಗಳು ಆಡಳಿತ ವರ್ಗದವರಿಗೆ ಬರಬಹುದು. ಅದಕೋಸ್ಕರ ಬಹಳ ಜಾಗರೂಕತೆ ವಹಿಸಿ ನಿರ್ವಹಿಸಬೇಕು.

ಯಾವಾಗ ಒಂದು ಒಪ್ಪಂದವನ್ನು ಆಡಳಿತ ವರ್ಗ ಜಾರಿಗೊಳಿಸುವುದೋ, ಅದರ ಸಾಧಕ-ಬಾಧಕಗಳ ಬಗ್ಗೆ ಮೌಲ್ಯಮಾಪನ ಮಾಡುವುದು ಅತ್ಯುತ್ತಮ. ಮೌಲ್ಯಮಾಪನ ಮಾಡುವುದರಿಂದ ಅನೇಕ ಪ್ರಯೋಜನಗಳುಂಟು ಎಂದು ಬೇರೆ ಹೇಳಬೇಕಾಗಿಲ್ಲ. ಲೋಪ-ದೋಷಗಳನ್ನು ಸಹ ಮೌಲ್ಯಮಾಪನದಿಂದ ತಿಳಿದುಕೊಳ್ಳಬಹುದು.

ವ್ಯಾಪ್ತಿ (Scope)

ಸಾಮೂಹಿಕ ಚೌಕಾಸಿಯು ಇಡೀ 'ಕೈಗಾರಿಕಾ-ಸಂಬಂಧ'ಗಳಿಗೆ ಅನ್ವಯಿಸುವುದರಿಂದ ಇದರ ವ್ಯಾಪ್ತಿಯನ್ನು ನಿಖರವಾಗಿ ಹೇಳುವುದು ಕಷ್ಟ-ಸಾಧ್ಯ. ಸಾಮೂಹಿಕ ಚೌಕಾಸಿಯು ಒಂದು ಚಲನಾತ್ಮಕ ಪ್ರಕ್ರಿಯೆ ಎಂದು ಪರಿಗಣಿಸಿರು

ವುದರಿಂದ ಇಂಥಷ್ಟೇ ವಿಷಯಗಳು ಇದರ ಚೌಕಟ್ಟಿನಲ್ಲಿ ಬರುವುವು ಎಂದು ಹೇಳಲಿಕ್ಕಾಗದು. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು[5] ಸಾಮೂಹಿಕ ಚೌಕಾಸಿಯ ವ್ಯಾಪ್ತಿಯಲ್ಲಿ ಬರುವ ಹಲವು ವಿಷಯಗಳನ್ನು ಪಟ್ಟಿಮಾಡಿದೆ. ಅದರಡಿಯಲ್ಲಿ ಬರುವ ವಿಷಯಗಳೆಂದರೆ; ಉಚಿತ ಹಣ (Bonus), ಕೆಲಸದ ವೇಳೆ, ರಜ ಪಡೆಯುವ ಹಕ್ಕು ಹಾಗೂ ನಮೂನೆಗಳು, ಹಿರಿತನ ಸೇವಾಪಟ್ಟಿ, ಶಿಸ್ತಿನ ನಿಯಮಗಳು, ಉತ್ತೇಜಕ ಹಣ, ಅನುಬಂಧ ಲಾಭ (Fringe Benefit), ಉತ್ಪಾದನೆ ಹಾಗೂ ಉತ್ಪಾದಕತೆ, ದೂರುಗಳನ್ನು ಬಗೆಹರಿಸುವುದು, ಲೇ-ಆಫ್, ರಿಟ್ರೆಂಚ್‌ಮೆಂಟ್, ತಾಂತ್ರಿಕತೆ, ವೈಚಾರೀಕರಣ ಹಾಗೂ ಸ್ವತಶ್ಚಲಿ-ಯಾಂತ್ರೀಕರಣವನ್ನು ಕೈಗಾರಿಕೆಗಳಲ್ಲಿ ಅಳವಡಿಸುವುದು, ಮುಷ್ಕರ, ಬೀಗ-ಮುದ್ರೆ (Lock-out), ಸೇವಾ ನಿಯಮಗಳು, ಕೂಲಿ ಮತ್ತು ಸಂಬಳ (Wage and Salary), ತುಟ್ಟಿಭತ್ಯ, ಸಾರಿಗೆ-ಭತ್ಯ ಇತ್ಯಾದಿ ಈ ಮೇಲಿನ ಪಟ್ಟಿಯು ಎಲ್ಲ ವಿಷಯಗಳನ್ನು ಒಳಗೊಂಡಿಲ್ಲ. ಇನ್ನೂ ಅನೇಕ ವಿಷಯಗಳು ಸಾಮೂಹಿಕ ಚೌಕಟ್ಟಿನಲ್ಲಿ ಬರುವವು ಎಂದು ಬೇರೆ ಹೇಳಬೇಕಾಗಿಲ್ಲ.

ಪೂರ್ವಭಾವಿ ಸ್ಥಿತಿಗತಿಗಳು (Conditions for Successful Bargaining)

'ಸಾಮೂಹಿಕ ಚೌಕಾಸಿ'ಯು ಯಶಸ್ಸುಗಳಿಸಬೇಕಾದರೆ ಈ ಕೆಳಕಂಡ ಪೂರ್ವಭಾವಿ ಸ್ಥಿತಿಗತಿಗಳು ಉತ್ತಮ ಮಟ್ಟದ್ದಾಗಿರಬೇಕು. ಮೊದಲನೆಯದಾಗಿ, ರಾಷ್ಟ್ರೀಯ ಹಾಗೂ ರಾಜ್ಯದ ರಾಜಕೀಯ ಪರಿಸ್ಥಿತಿ ಸಾಮೂಹಿಕ ಚೌಕಾಸಿಯ ಬೆಳವಣಿಗೆಗೆ ಉತ್ತೇಜನ ಕೊಡುವಂತಿರಬೇಕು. ಎರಡನೆಯದಾಗಿ, ಕಾರ್ಮಿಕ ಸಂಘಗಳನ್ನು ರಚಿಸಲು ಎಲ್ಲ ರೀತಿಯಲ್ಲೂ ಪ್ರೋತ್ಸಾಹವಿರಬೇಕು. ಯಾವುದೇ ದೇಶದಲ್ಲಿ ಕೈಗಾರಿಕೀಕರಣ ತೀವ್ರಗತಿಯಲ್ಲಿ ಬೆಳೆಯಬೇಕಾದರೆ, ಅಲ್ಲಿಯ ಕಾರ್ಮಿಕ ಸಂಘಗಳು ಬಲಿಷ್ಠವಾಗಿ ಬೆಳೆಯಬೇಕೇ ವಿನಃ ದುರ್ಬಲವಾಗಿ ಅಲ್ಲ. ಸಂಘಗಳು ಬಲಿಷ್ಠವಾಗಿಲ್ಲದಿದ್ದರೆ ಸಾಮೂಹಿಕ ಚೌಕಾಸಿ ಮಂದಗತಿಯಲ್ಲಿ ಬೆಳೆಯುವುದರಲ್ಲಿ ಸಂದೇಹವೇ ಇಲ್ಲ. ಮೂರನೆಯದಾಗಿ, ಸಂಘದ ಪದಾಧಿಕಾರಿಗಳ ಹಾಗೂ ಕಾರ್ಮಿಕರ ವಿದ್ಯಾಭ್ಯಾಸ ಮಟ್ಟ ಉತ್ತಮವಾಗಿರಬೇಕು. ಇವರು ವಿದ್ಯಾವಂತರಾಗಿದ್ದರೆ ಕಾರ್ಮಿಕ ಕಾಯ್ದೆಗಳು, ನೀತಿ-ನಿಯಮಗಳ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆದು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಉತ್ತಮ ಫಲಿತಾಂಶವನ್ನು ಪಡೆಯಬಹುದು. ಐದನೆಯದಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಕೈಗಾರಿಕೆಗಳಿಗೆ ಬೇಕಾದ ಕಾರ್ಮಿಕರು ದೊರಕುತ್ತಿದ್ದರೆ, ಅಂತಹ ಪರಿಸ್ಥಿತಿಯ ಹೆಚ್ಚು ಪ್ರಯೋಜನವನ್ನು ಆಡಳಿತ ವರ್ಗ ಪಡೆಯುವುದರಲ್ಲಿ ಸಂದೇಹವಿಲ್ಲ. ಕೊನೆಯದಾಗಿ, ಎರಡೂ ಪಕ್ಷದವರಲ್ಲಿ ಸಾಮೂಹಿಕ ಚೌಕಾಸಿಯ ಬಗ್ಗೆ ನಂಬುಗೆ ಇರಬೇಕು ಹಾಗೂ ಪರಸ್ಪರ ಪಕ್ಷಪಾತ ಕಾರ್ಯ (Unfair Labour Practices)ಗಳಲ್ಲಿ ತೊಡಗಬಾರದು.

ಇನ್ನೊಂದು ರೀತಿಯಲ್ಲೂ ಪೂರ್ವಭಾವಿ ಸ್ಥಿತಿಗತಿಗಳನ್ನು ವಿಂಗಡಿಸಬಹುದು.

ಅವುಗಳೆಂದರೆ: (1) ಕೈಗಾರಿಕೆಯಲ್ಲಿರುವ ಪರಿಸ್ಥಿತಿ—ಎರಡೂ ಪಕ್ಷದವರ ಪರಸ್ಪರ ನಂಬುಗೆ, ಸಹಕಾರ, ನೀತಿ-ನಿಯಮಗಳು, (2) ಕೈಗಾರಿಕೆಯ ಬಾಹ್ಯ ಪರಿಸ್ಥಿತಿ—ಅನುಕೂಲಕರ ರಾಜಕೀಯ ಸ್ಥಿತಿಗತಿ, ಸಾಮಾಜಿಕ ಪರಿಸ್ಥಿತಿ, ಇತ್ಯಾದಿ.

ಒಂದು ಸಾವಿರದ ಒಂಭೈನೂರ ಐವತ್ತಾರರಲ್ಲಿ ಕೈಗಾರಿಕಾ ವಿವಾದಗಳ ಕಾಯ್ದೆ–1947ಗೆ ತಿದ್ದುಪಡಿಯಾದಾಗ, 18ನೇ ಕಲಮಿನಲ್ಲಿರುವ ಒಪ್ಪಂದ ಎಂಬ ಪದಕ್ಕೆ ಬದಲಾವಣೆಯನ್ನು ತರಲಾಯಿತು. ಇದಕ್ಕಿಂತ ಮೊದಲು ಮೇಲೆ ಕಾಣಿಸಿದ ಕಾಯ್ದೆಯಲ್ಲಿ ಯಾವ ರೀತಿಯಲ್ಲೂ 'ಸಾಮೂಹಿಕ ಚೌಕಾಸಿ'ಗೆ ಕಾನೂನು ರೀತಿಯ ಸ್ಥಾನಮಾನ ಇರಲಿಲ್ಲ. ಅಂದಹಾಗೆ, ಇಂದಿಗೂ ಸಹ ಸಾಮೂಹಿಕ ಚೌಕಾಸಿಯಿಂದಾದ 'ಸಂಧಾನ'ವು, 'ಒಪ್ಪಂದ'ವಾಗಬೇಕಾದರೆ, ಸರ್ಕಾರದಿಂದ ನೇಮಿಸಲ್ಪಟ್ಟ ಮಧ್ಯವರ್ತಿ (Conciliator) ಯಿಂದ ಅಂಥ ಸಂಧಾನಕ್ಕೆ ಸಹಿ ಪಡೆಯಬೇಕು. ಸಹಿ ಪಡೆದ ನಂತರ 'ಸಂಧಾನ'ವು 'ಒಪ್ಪಂದ'ವಾಗಿ ಪರಿವರ್ತನಗೊಂಡಾಗ ಕಾಯ್ದೆಯ 18ನೇ ಕಲಮಿನ ನಿಯಮಾವಳಿಗಳು ಅನ್ವಯಿಸುತ್ತವೆ.

ಭಾರತದಲ್ಲಿ ಒಪ್ಪಂದದ ವಿಧಗಳು (Types of Agreements in India)

ಭಾರತದಲ್ಲಿ ಸಾಮೂಹಿಕ ಚೌಕಾಸಿಯ ವಿಧಾನದಿಂದ ರೂಪುಗೊಂಡ ಒಪ್ಪಂದಗಳನ್ನು[6] ಮೂರು ಪ್ರಮುಖ ಗುಂಪುಗಳನ್ನಾಗಿ ವಿಂಗಡಿಸಬಹುದು. ಅವು ಯಾವುವೆಂದರೆ: (1) ಯಾವ ರೀತಿಯಲ್ಲೂ ಮಧ್ಯವರ್ತಿಯ ಪ್ರವೇಶವಿಲ್ಲದೆ ಎರಡೂ ಪಕ್ಷದವರು ಸೇರಿ ಸಂಧಾನಕ್ಕೆ ಬರುವುದು. ಇಲ್ಲಿ ಮೂರನೇ ವ್ಯಕ್ತಿಯ ಪ್ರವೇಶಕ್ಕೆ ಅವಕಾಶವಿಲ್ಲ. (2) ಹಲವು ಸಂಧಾನಗಳು ಮಧ್ಯವರ್ತಿಯ ಸಹಾಯವಿಲ್ಲದೆ ರೂಪುಗೊಂಡವು. ಆದರೆ ಸಂಧಾನ ಪೂರ್ತಿಗೊಂಡಾಗ ಸರ್ಕಾರದಿಂದ ನೇಮಿಸಲ್ಪಟ್ಟ ಮಧ್ಯವರ್ತಿ (Conciliator)ಯು ಸಹಿಗೊಸ್ಕರ ಅವುಗಳನ್ನು ಮಂಡಿಸುವರು. ಸಹಿ ಪಡೆದ ನಂತರ ಅಂಥ ಸಂಧಾನಗಳು ಕೈಗಾರಿಕಾ ವಿವಾದಗಳ ಕಾಯ್ದೆಯಡಿಯಲ್ಲಿ ಬರುವವು, ಹಾಗೂ (3) ಮೂರನೆ ನಮೂನೆಯ ಒಪ್ಪಂದಗಳನ್ನು 'ಸಮ್ಮತಿಸಿದ–ತೀರ್ಪು'ಗಳೆಂದು ಕರೆಯುವುದುಂಟು. ಯಾಕೆಂದರೆ ಯಾವ ವಿಷಯವೇ ಆಗಲಿ ಇತ್ಯರ್ಥಕೋಸ್ಕರ ತೀರ್ಪುಕೊಡುವ ಅಧಿಕಾರಿ (Adjudicatory Authority)ಯ ಮುಂದೆ ಬಂದಮೇಲೆ, ಎರಡೂ ಪಕ್ಷದವರು ಸೇರಿ ಆ ವಿಷಯಗಳ ಬಗ್ಗೆ ಒಪ್ಪಂದಕ್ಕೆ ಬರುವರು, ಹಾಗೂ ತೀರ್ಪುಕೊಡುವ ಅಧಿಕಾರಿಗೆ ತೀರ್ಪುಗಳನ್ನು ಕೊಡುವಾಗ ಅಂತಹ ಒಪ್ಪಂದವನ್ನು ಗಣನೆಗೆ ತೆಗೆದುಕೊಳ್ಳಲು ಪ್ರಾರ್ಥಿಸುವರು. ಭಾರತೀಯ ಮಾಲೀಕರ ಮಹಾ ಸಂಘವು[7] ನಡೆಸಿದ ಅಧ್ಯಯನದ ಪ್ರಕಾರ ಎರಡನೇ ವಿಧವಲ್ಲಿ ಹೆಚ್ಚು ಒಪ್ಪಂದಗಳು ಕಂಡುಬರುವುವು. ಅಧ್ಯಯನ ಮಾಡಿದ 114 ಒಪ್ಪಂದಗಳಲ್ಲಿ ಶೇಕಡ 39.5ರಷ್ಟು ಮೊದಲನೆ ವಿಧದಲ್ಲೂ, ಶೇಕಡ 57ರಷ್ಟು ಎರಡನೇ ವಿಧದಲ್ಲೂ, ಹಾಗೂ ಶೇಕಡ 3.5ರಷ್ಟು ಮೂರನೇ ವಿಧದ ಒಪ್ಪಂದದಲ್ಲೂ ಕಾಣಬರುವುದು.

ಮೇಲೆ ಕಾಣಿಸಿದ ಕೊನೆಯ ಎರಡು ವಿಧಗಳು 'ಕಾನೂನು ಚೌಕಟ್ಟ'ನಲ್ಲಿ ಬರುವಂತಹವು. ಮೂರನೆಯದು ಮಾತ್ರ ಆಡಳಿತ ವರ್ಗ ಹಾಗೂ ಕಾರ್ಮಿಕ ಪದಾಧಿಕಾರಿಗಳ ನಡುವೆ ಇರುವ ಸಹಕಾರ ಹಾಗೂ ಭರವಸೆ ಮೇಲೆ ನಿಂತಿದೆ

ಸಾಮೂಹಿಕ ಚೌಕಾಸಿಯ ವೇದಿಕೆ ಹಾಗೂ ಕಾಲಾವಧಿ (Forum and Duration)

ಸಾಮೂಹಿಕ ಚೌಕಾಸಿಗಳನ್ನು ಮೂರು-ಸ್ಥರಗಳಾಗಿ ವಿಂಗಡಿಸಬಹುದು. ಹಲವು ಒಪ್ಪಂದಗಳು ರಾಷ್ಟ್ರೀಯ ಮಟ್ಟದಲ್ಲಾದರೆ; ಇನ್ನು ಕೆಲವು ಉದ್ಯಮ-ಮಟ್ಟದಲ್ಲಾಗಿವೆ. ಹಲವಾರು ಘಟಕ-ಮಟ್ಟದಲ್ಲೂ ಒಪ್ಪಂದವಾಗಿವೆ. ಭಾರತೀಯ ಮಾಲೀಕರ ಮಹಾಸಂಘ[8] ನಡೆಸಿದ ಅಧ್ಯಯನವು ಈ ದೃಷ್ಟಿಯಲ್ಲಿ ಬಹಳ ಸಮಂಜಸ. ಅದರ ಪ್ರಕಾರ ಶೇಕಡಾ 85ರಷ್ಟು ಒಪ್ಪಂದಗಳು ಘಟಕ-ಮಟ್ಟದಲ್ಲೂ, ಶೇಕಡಾ 15ರಷ್ಟು ರಾಷ್ಟ್ರೀಯ ಹಾಗೂ ಉದ್ಯಮ ಮಟ್ಟದಲ್ಲಿ ಆಗಿವೆ.

ಒಪ್ಪಂದಗಳ ಕಾಲಾವಧಿಯ ಬಗ್ಗೆ ಹೇಳಬೇಕೆಂದರೆ, ಹೆಚ್ಚಿನ ಒಪ್ಪಂದಗಳು ಮೂರು ವರ್ಷದ ಅವಧಿಯವರೆಗೆ ಆಗಿವೆ. ಭಾರತೀಯ ಮಾಲಿಕರ ಮಹಾಸಂಘ[9] ಅಧ್ಯಯನ ನಡಸಿದ 109 ಒಪ್ಪಂದಗಳ ಪೈಕಿ, ಶೇಕಡ 45ರಷ್ಟು ಮೂರು ವರ್ಷದವರೆವಿಗೂ, ಶೇಕಡ 16.5 ರಷ್ಟು ಐದು ವರ್ಷದವರೆವಿಗೂ, ಹಾಗೂ ಉಳಿದ ಶೇಕಡ 38.5ರಷ್ಟು ಎರಡು ವರ್ಷಕ್ಕಿಂತ ಕಡಮೆ ಅವಧಿಯವರೆಗೆ ಒಪ್ಪಂದವನ್ನು ಆಡಳಿತ ವರ್ಗ ಹಾಗೂ ಕಾರ್ಮಿಕ ಪದಾಧಿಕಾರಿಗಳು ಮಾಡಿಕೊಂಡಿರುವರೆಂದೂ ತಿಳಿದು ಬಂದಿದೆ. ಅಂದರೆ, ನಮ್ಮ ದೇಶದಲ್ಲಿ ಅಲ್ಪ ಕಾಲವಧಿಯ ಒಪ್ಪಂದಗಳನ್ನು ಮಾಡಿಕೊಳ್ಳುವುದರಲ್ಲಿ ಆಸಕ್ತಿ ತೋರಿಸಿದ್ದಾರೆ.

ಸಮಸ್ಯೆಗಳು (Problems)

ಇಂದಿಗೂ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕ ಸಂಘಗಳನ್ನು ಮಾನ್ಯಮಾಡಲು ನಮ್ಮ ದೇಶದಲ್ಲಿ ಯಾವ ರೀತಿಯ ನಿಯಮಾವಳಿಗಳನ್ನೊಳಗೊಂಡ ಕಾಯ್ದೆ ಇರುವುದಿಲ್ಲ. ಒಂದು ಸಾವಿರದ ಒಂಭೈನೂರ ಇಪ್ಪತ್ತಾರರ ಉದ್ದಿಮೆ ಸಂಘಗಳ ಕಾಯ್ದೆಯಲ್ಲಿ ಸಂಘಗಳನ್ನು ನೊಂದಣಿಸಿಕೊಳ್ಳಲಿಕ್ಕನುಕೂಲವಾದ ನಿಯಮಾವಳಿಗಳಿರುವವೇ ವಿನಃ ಮಾನ್ಯಮಾಡಲು ಯಾವುದೇ ನಿಯಮಾವಳಿ ಇರುವುದಿಲ್ಲ. ರಾಷ್ಟ್ರೀಯ ಕಾರ್ಮಿಕ ಆಯೋಗವು[10] (National Commission on Labour) 1969ರಲ್ಲೇ ಇದರ ಬಗ್ಗೆ ಉಲ್ಲೇಖಿಸಿದೆ. ಅದರ ಪ್ರಕಾರ ಸಂಘಗಳ ಮಾನ್ಯತೆ ಸಾಮೂಹಿಕ ಚೌಕಾಸಿಗೆ ಅತ್ಯಾವಶ್ಯಕವೆಂದೂ ಅಂತಹ ಮಾನ್ಯತೆ ಇಂದು ಇಲ್ಲದಿರುವುದರಿಂದ ಸಾಮೂಹಿಕ ಚೌಕಾಸಿಯ ಬಳಕೆ ನಿರೀಕ್ಷಿಸಿದಷ್ಟು ಆಗಿಲ್ಲವೆಂದೂ ಅಭಿಪ್ರಾಯ ವ್ಯಕ್ತಪಡಿಸಿದೆ.

ಎರಡನೆಯ ಸಮಸ್ಯೆಯು ಕೈಗಾರಿಕೆಯಡಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿದ್ದು. ನಮ್ಮ ದೇಶದಲ್ಲಿ ಅನೇಕ ಕಾರ್ಮಿಕ ಕಾನೂನುಗಳುಂಟು. ಅಂತಹ ಕಾನೂನುಗಳು ಹಾಗೂ 'ತ್ರಿ-ಪಕ್ಷೀಯ' ಸಮ್ಮೇಳನ/ಸಮಿತಿಗಳು ಕೈಗಾರಿಕೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಬಗ್ಗೆ ಕೂಲಂಕಶವಾಗಿ ಪರಿಶೀಲಿಸಿ ಮಾರ್ಗೋಪಾಯಗಳನ್ನು ಕಂಡುಹಿಡಿಯಲು ಪ್ರಯತ್ನಿಸುವ ಪದ್ಧತಿಯು ಸಾಮೂಹಿಕ ಚೌಕಾಸಿಯ ಮಂದಗತವಾದ ಬೆಳವಣಿಗೆಗೆ ಕಾರಣವಾದವು ಎನ್ನಬಹುದು. ಇಂಥ ಪರಿಸ್ಥಿತಿಯಲ್ಲಿ ಸಾಮೂಹಿಕ ಚೌಕಾಸಿಗೆ ಹೆಚ್ಚಿನ ವ್ಯಾಪ್ತಿ ಇರುವುದಿಲ್ಲ. ಈ ದಿಶೆಯಲ್ಲಿ ಪಿಲ್ಲೈಯವರೂ[11] ಕೂಡ ಇವುಗಳ ಬಗ್ಗೆ ವಿಶ್ಲೇಷಿಸುತ್ತಾ ಸರಕಾರದ ಅತಿಹೆಚ್ಚು ಹಸ್ತಕ್ಷೇಪ ಸಾಮೂಹಿಕ ಚೌಕಾಸಿಯ ಬೆಳವಣಿಗೆಗೆ ಅನುಕೂಲಕರವಾದುದಲ್ಲ ಎಂದು ಹೇಳಿದ್ದಾರೆ.

ಮೂರನೆಯದಾಗಿ, 'ಕಡ್ಡಾಯ-ತೀರ್ಪುಗಾರಿಕೆ' (Compulsory Adjudication) ಸಾಮೂಹಿಕ ಚೌಕಾಸಿಗೆ ವಿರುದ್ಧವಾದುದ್ದು. ಯಾಕೆಂದರೆ ಸಾಮಾನ್ಯವಾಗಿ ಆಡಳಿತ ವರ್ಗವಾಗಲೀ ಅಥವಾ ಕಾರ್ಮಿಕರಾಗಲೀ 'ಕಡ್ಡಾಯ-ತೀರ್ಪುಗಾರಿಕೆ'ಗೆ ಹೆಚ್ಚು ಮಹತ್ವ ಕೊಡುವುದನ್ನು ನಾವು ಕಾಣಬಹುದು. ಹಿಂದಿನ ರಾಷ್ಟ್ರಪತಿ ಡಾ|| ವಿ. ವಿ. ಗಿರಿಯವರು[12] 'ಕಡ್ಡಾಯ-ತೀರ್ಪುಗಾರಿಕೆ'ಯನ್ನು ಸಾಮೂಹಿಕ ಚೌಕಾಸಿಯ ಬೆಳವಣಿಗೆಗೆ ಅಡ್ಡಿಬರುವ 'ಮೊದಲನೇ ಶತ್ರು' ಎಂದು ಕರೆದಿದ್ದಾರೆ. ಆದರೆ ಒಂದಂಶವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ, 'ಕಡ್ಡಾಯ-ತೀರ್ಪುಗಾರಿಕೆ'ಯನ್ನು ತೆಗೆಯಬೇಕಾದರೆ ಅದಕ್ಕೆ ಪರ್ಯಾಯ ವಿಧಾನವನ್ನು ಕಂಡುಹಿಡಿದುಕೊಳ್ಳಬೇಕಾಗುವುದು. ಈಗಿನ ಪರಿಸ್ಥಿತಿಯಲ್ಲಿ ಅದನ್ನು ತೆಗೆದು ಹಾಕುವುದು ಸೂಕ್ತವಲ್ಲ ಎಂದು ಬೇರೆ ಹೇಳಬೇಕಾಗಿಲ್ಲ.

ನಾಲ್ಕನೆಯ ಸಮಸ್ಯೆ ಎಂದರೆ, ದುರ್ಬಲ ಕಾರ್ಮಿಕ ಸಂಘಗಳು. ದುರ್ಬಲ ಕಾರ್ಮಿಕ ಸಂಘಗಳಿಂದ ಯಾವ ರೀತಿಯಲ್ಲೂ ಸಾಮೂಹಿಕ ಚೌಕಾಸಿಯ ಬೆಳವಣಿಗೆಗೆ ಅನುಕೂಲವಾಗಿರುವುದಿಲ್ಲ. ಯಾಕೆಂದರೆ ಸಾಮೂಹಿಕ ಚೌಕಾಸಿಯು ಸಂಘದ ಬಲದ ಆಧಾರದ ಮೇಲೆ ನಿಂತಿರುವುದು.

ಐದನೆಯದಾಗಿ, ಕಾರ್ಮಿಕ ಸಂಘಗಳಲ್ಲಿ ತಮ್ಮವರೇ ಆದ ಧುರೀಣರ ಕೊರತೆ, ಒಂದಕ್ಕಿಂತ ಹೆಚ್ಚು ಕಾರ್ಮಿಕ ಸಂಘಗಳು ಒಂದೇ ಕೈಗಾರಿಕೆಯಲ್ಲಿ ಇರುವಿಕೆ, ಕಾರ್ಮಿಕ ಸಂಘಗಳ ಆಂತರಿಕ ಹಾಗೂ ಬಾಹ್ಯ ಜಗಳ, ಅವುಗಳ ಪದಾಧಿಕಾರಿಗಳು ಹಾಗೂ ಸದಸ್ಯರ ವಿದ್ಯಾಭ್ಯಾಸ ಮಟ್ಟ ಇವೆಲ್ಲವೂ ಸಹ ಸಾಮೂಹಿಕ ಚೌಕಾಸಿಯ ಮೇಲೆ ಪರಿಣಾಮ ಬೀರುವುವು.

ಕೊನೆಯದಾಗಿ, ಆಡಳಿತ ವರ್ಗದಲ್ಲಿಯೂ ಕೂಡ ತಪ್ಪುಗಳಿರುತ್ತವೆ. ಯಾಕೆಂದರೆ ಸಾಮೂಹಿಕ ಚೌಕಾಸಿಯನ್ನು ಕೆಲವೊಮ್ಮೆ ಒಳ್ಳೆಯ ದೃಷ್ಟಿಕೋನದಿಂದ ನೋಡಿ ಅದರ ಉಪಯುಕ್ತತೆಯನ್ನು ಪಡೆಯಲು ನಿರಾಸಕ್ತರಾಗಿರುತ್ತಾರೆ.

ಉಪಸಂಹಾರ (Conclusion)

ಇತ್ತೀಚಿನ ಬೆಳವಣಿಗೆಯನ್ನು ನಾವು ಗಮನಿಸಿದಾಗ ತಿಳಿದುಬರುವ ಅಂಶವೆಂದರೆ ಸಾಮೂಹಿಕ ಚೌಕಾಸಿಯು ಕೈಗಾರಿಕಾ ವಿವಾದಗಳನ್ನು ಬಗೆಹರಿಸುವ ವಿಧಾನವಾಗಿ ನಿರಂತರವಾಗಿ ಬೆಳೆಯುತ್ತಿದೆ. ಈ ಹೇಳಿಕೆಯನ್ನು ರಾಷ್ಟ್ರೀಯ ಕಾರ್ಮಿಕ ಆಯೋಗ ಸದಸ್ಯರುಗಳು[13], ಪ್ರೊ॥ ಚಂದ್ರ[14] ಅನುಮೋದಿಸಿದ್ದಾರೆ. ಆದರೆ ಈ ಬೆಳವಣಿಗೆಯ ತೀವ್ರತೆಯನ್ನು ಹೆಚ್ಚಿಸಬೇಕಾದರೆ ಮೇಲೆ ಕಾಣಿಸಿದ ಸಮಸ್ಯೆಗಳನ್ನು ಬಗೆಹರಿಸಲು ಕಾರ್ಯಕ್ರಮಗಳನ್ನು ಕೈಕೊಂಡರೆ ಸಾಮೂಹಿಕ ಚೌಕಾಸಿಯನ್ನು ಒಂದು ವಿಧಾನವಾಗಿ ಉಪಯೋಗಿಸಿ ಕೈಗಾರಿಕಾ ವಿವಾದಗಳನ್ನು 'ಕೆಳ–ಸ್ಥರ'ದಲ್ಲೇ ನಿವಾರಿಸಬಹುದಾಗಿದೆ.

ಆಧಾರ ಗ್ರಂಥಗಳು

1. Kuhhal, S.C. '*The Industrial Economy of India*, Allahabad, Chitanya Publishing House, 1961, p–527.

2. Subramanian, K. N. '*Labour Management Relations in India*', Bombay, Asia Publishing House, 1967 P-457.

3. I.L.O., '*Collective Bargaining : A Worker's Educational Mannual*, Geneva, 1960, P-3.

4. Krishna Pillai P. N. '*Problems of Collective Bargaining*' Industrial Relations, Vol. 16, No. 2, Calcutta, 11 PM, 1964, P-80.

5. I.L.O., Op. cit; pp-47–48.

6. The National Commission on Labour, '*Report of the NCL*' Publication Division, Government of India, New Delhi 1969, P-321.

7. Subramanian, Op–cit. P–486.

8. Ibid, P–485.

9. Sahab Dayal : '*Revival of Collective Bargaining in India: Some Recent Evidences*', Indian Journal of Industrial Relations Vol. 17, No. 3, 1982, P-331.

10. The National Commission on Labour, Op cit, P–xxiii.

11. Krishna Pillai, P.N. : Op-cit: P-89.

12. Mary Sur '*Collective Bargaining—A Comparative Study of Development in India and other countries*', Bombay, Asia Publishing House, 1965, P-71.

13. Shenoy, P.D. "*Collective Bargaining and Conciliation*" Indian Journal of Industrial Relations, Vol. 17, No. 2, 1981, pp. 287-288.

14. The National Commission on Labour, Op-cit P-xxiii

ವೈ. ಸಿ. ಭಾನುಮತಿ

ಶಾಸನಗಳಲ್ಲಿ ಟಿ. ನರಸೀಪುರ ತಾಲ್ಲೂಕಿನ ಇತಿಹಾಸ

ಈಚಿನ ವರ್ಷಗಳಲ್ಲಿ ಇತಿಹಾಸ ಅಧ್ಯಯನ ಹಲವು ಮಜಲುಗಳನ್ನು ರೂಪಿಸಿಕೊಂಡಿದೆ. ಒಂದು ದೇಶದ, ಒಂದು ನಾಡಿನ ಚರಿತ್ರೆಯೊಂದಿಗೆ ಊರುಗಳ ಇತಿಹಾಸವನ್ನೂ ಅರಿಯುವ ಅಭ್ಯಾಸ ನಡೆದಿದೆ. ಇತಿಹಾಸಕ್ಕೆ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ, ರಾಜಕೀಯ ಮೊದಲಾದ ಹಲವು ಮುಖಗಳಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ತಿರುಮಕೂಡಲು ನರಸೀಪುರ ತಾಲ್ಲೂಕಿನ ಶಾಸನಾಧಾರಿತ ರಾಜಕೀಯ ಇತಿಹಾಸವನ್ನು ವಿವೇಚಿಸಿದೆ.

ಭೌಗೋಳಿಕವಾಗಿ ಈ ತಾಲ್ಲೂಕಿನ ಪ್ರದೇಶ ಅತ್ಯಂತ ಪ್ರಾಚೀನವಾದುದು. ಇದು ಆದಿಮಾನವನ ನೆಲೆಯಾಗಿತ್ತೆಂದು ಇತ್ತೀಚಿನ ಸಂಶೋಧನೆಗಳು ಧೃಢಪಡಿಸುತ್ತವೆ. ಕ್ರಿ ಪೂ. 2000ಕ್ಕೆ ಪೂರ್ವದಲ್ಲಿಯೆ ಇಲ್ಲಿ ಜನವಸತಿ ಇದ್ದ ಕುರುಹುಗಳಿವೆ. ನೂತನ ಶಿಲಾಯುಗದ ಬಳಿಕ ಇತಿಹಾಸ ಕಾಲದಲ್ಲಿ ಕರ್ನಾಟಕದ ಕೆಲವು ಭಾಗಗಳ ಮೇಲೆ ಮೌರ್ಯರು, ಶಾತವಾಹನರು, ಕದಂಬರು, ಕಲಚೂರ್ಯರು, ಚಾಲುಕ್ಯರು ಅಧಿಪತ್ಯ ಹೊಂದಿದ್ದರೆಂಬುದು ಸ್ಪಷ್ಟ. ಆದರೆ ಟಿ. ನರಸೀಪುರ ತಾಲ್ಲೂಕು ಈ ರಾಜರ ನೇರವಾದ ಆಡಳಿತಕ್ಕೆ ಒಳಪಟ್ಟ ಬಗ್ಗೆ ಯಾವ ಆಧಾರಗಳೂ ಇಲ್ಲ. ಗಂಗರ ಆಗಮನದವರೆಗೆ ಇಲ್ಲಿನ ಇತಿಹಾಸ ಅಸ್ಪಷ್ಟ. ಪ್ರಾಯಃ ಮಾಂಡಲಿಕರು ಅಥವಾ ಸ್ಥಳೀಯ ಪ್ರಭುಗಳು ಇಲ್ಲಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದಿರಬಹುದು.

ಟಿ. ನರಸೀಪುರ ತಾಲ್ಲೂಕಿನ ಇತಿಹಾಸಭಿತ್ತಿಯಲ್ಲಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಇವರೇ ಮೊದಲಾದ ರಾಜವಂಶದವರು ಆಗಿಹೋಗಿದ್ದಾರೆ. ಇವರ ಜೊತೆಗೆ ಸ್ಥಳೀಯ ಪ್ರಭುಗಳೂ ತಮ್ಮ ಸೇವೆ ಸಲ್ಲಿಸಿದ್ದಾರೆ. ಗಂಗರಾಜರಲ್ಲಿ ಪೂರ್ವಗಂಗರು, ಪಶ್ಚಿಮ ಗಂಗರು ಎಂದು ಎರಡು ಶಾಖೆ. ಪಶ್ಚಿಮ ಗಂಗರು ತಲಕಾಡಿನ ಗಂಗರೆನಿಸಿಕೊಂಡಿದ್ದು ಈ ತಾಲ್ಲೂಕಿನ ತಲಕಾಡಿನಿಂದ. ಇವರ ರಾಜ್ಯ ಗಂಗವಾಡಿ ತೊಂಬತ್ತಾರು ಸಾವಿರ. ಗಂಗರ ಮೂಲ ಪುರುಷರು ಮಾಧವ ಮತ್ತು ದಡಿಗ ಎಂಬ ಸೋದರರು. ಇವರು ಸಿಂಹನಂದಿ ಎಂಬ ಜೈನಗುರುವಿನ ಸಹಾಯದಿಂದ ರಾಜ್ಯಕಟ್ಟಿದರೆಂಬ ಕಥೆಯಿದೆ. ಮಾಧವನು

ಕ್ರಿ.ಶ. 250ರಲ್ಲಿ ರಾಜ್ಯವಾಳಿದ. ಈತ ಮೊದಲನೆಯ ಕೊಂಗುಣಿವರ್ಮ ಎಂದು ಪ್ರಸಿದ್ಧ. ಗಂಗರ ಆರಂಭದ ರಾಜಧಾನಿ ಕೋಲಾರ. ಅನಂತರದಲ್ಲಿ ಕೊಂಗುಣಿ ವರ್ಮನ ಮೊಮ್ಮಗ ಹರಿವರ್ಮನ ಕಾಲದಲ್ಲಿ ಇವರ ರಾಜಧಾನಿ ತಲಕಾಡಿಗೆ ವರ್ಗಾಯಿಸಲ್ಪಟ್ಟಿತು. ಮುಂದೆ ಆಡಳಿತ ದೃಷ್ಟಿಯಿಂದ ಗಂಗರು ಅನೇಕ ನೆಲೆವೀಡುಗಳನ್ನು ಮಾಡಿಕೊಂಡರೂ ತಲಕಾಡಿನ ರಾಜಧಾನಿ ವರ್ಚಸ್ಸಿಗೆ ಕುಂದುಂಟಾಗಲಿಲ್ಲ. ಗಂಗರು ಭರತಖಂಡದ ದಕ್ಷಿಣಾಪಥವನ್ನಷ್ಟೆ ಅಲ್ಲದೆ ಉತ್ತರಾಪಥವನ್ನೂ ತಮ್ಮ ತೋಳತೆಕ್ಕೆಗೆ ತೆಗೆದುಕೊಂಡರು.

ಕ್ರಿ.ಶ. 726ರ ಅವಧಿಯ ತಲಕಾಡು 207ನೆಯ ಶಾಸನ ಗಂಗರಿಗೆ ಸೇರಿದ ಇಲ್ಲಿನ ಅತ್ಯಂತ ಪ್ರಾಚೀನ ಶಾಸನವಾಗಿದ್ದು ಇದರಲ್ಲಿ ಶಿವಮಾರನ ಮೊಮ್ಮಗ, ಎರೆಗಂಗನ ಮಗ ಶ್ರೀಪುರುಷನ ಉಲ್ಲೇಖವಿದೆ. ಈತ ಕ್ರಿ.ಶ. 725 ರಿಂದ 788ರ ವರೆಗೆ 63 ವರ್ಷಗಳ ಸುದೀರ್ಘ ರಾಜ್ಯಭಾರಮಾಡಿದ. ಈತನನ್ನು 'ಪೃಥ್ವೀ ಕೊಂಗಣಿ ಮುತ್ತರಸ ಶ್ರೀಪುರುಷ' ಎಂದು ಕರೆದಿರುವುದು ಈ ದೃಷ್ಟಿಯಿಂದ ಸಾರ್ಥಕವಾಗಿದೆ. 'ಪೃಥ್ವೀ ಕೊಂಗಣಿ ವೃದ್ಧರಾಜ', 'ಪೃಥ್ವೀ ಕೊಂಗಣಿ ಮಹಾರಾಜ', 'ಭೀಮ ಕೋಪ', 'ಲೋಕಧೂರ್ತ', 'ರಾಜಕೇಸರಿ' ಇವೇ ಮೊದಲಾದ ಹಲವಾರು ಬಿರುದುಗಳಿಗೆ ಈತ ಪಾತ್ರನಾಗಿದ್ದುದು ವಿವಿಧ ಶಾಸನಗಳಿಂದ ಧೃಢಪಡುತ್ತದೆ. ಈತನ ಕಾಲದಲ್ಲಿ ಗಂಗರಾಜ್ಯ ಉಚ್ಛ್ರಾಯಸ್ಥಿತಿಯಲ್ಲಿತ್ತು. ಇವನು ಪಲ್ಲವರನ್ನು ಪರಾಭವಗೊಳಿಸಿ ಪೆರ್ಮಾನಡಿ ಎಂಬ ಬಿರುದನ್ನು ಅವರಿಂದ ಕಿತ್ತುಕೊಂಡನು. ಶ್ರೀಪುರುಷನ ಅನುಜ್ಞೆಯಿಂದ ಅರಕೇಸಿ ಎಂಬುವನು ಸಿಂದರಸ ಮತ್ತು ಮನಸಿಜ ಎಂಬುವರ ಅರಿಕೆಯ ಮೇರೆಗೆ ತಲಕಾಡಿನ ಇಪ್ಪತ್ತೈದುಮಂದಿಗೆ ತೆರಿಗೆ ರದ್ದುಗೊಳಿಸಿದ್ದನ್ನು 207ನೆಯ ಶಾಸನ ತಿಳಿಸುತ್ತದೆ. ಅರಕೇಸಿಯು ಶ್ರೀಪುರುಷನ ಕಾರ್ಯಕರ್ತನಾಗಿರಬಹುದು. ಆಲ್ಗೋಡು 307ನೆಯ ಶಾಸನ ಕೂಡ ಶ್ರೀಪುರುಷನನ್ನು ಉಲ್ಲೇಖಿಸುತ್ತದೆ. ಈತನ ಬಳಿಕ ಇವನ ಮಗ ಸೈಗೊಟ್ಟ ಶಿವಮಾರ ಪಟ್ಟಕ್ಕೆ ಬಂದ. ಈತ ಪಲ್ಲವ, ಚಾಲುಕ್ಯ, ರಾಷ್ಟ್ರಕೂಟ ಇವರೆಲ್ಲರನ್ನು ಎದುರಿಸಬೇಕಾಯಿತು. ರಾಷ್ಟ್ರಕೂಟರು ಈತನನ್ನು ಸೆರೆಹಿಡಿದರು. ಮುಂದೆ ಇವನ ಮಗ ನೀತಿಮಾರ್ಗ ಕೋಲಾರದ ರಾಜಮುಡು ಸಮೀಪ ರಾಷ್ಟ್ರಕೂಟರನ್ನು ಹಿಮ್ಮೆಟ್ಟಿಸಿ ಮರಳಿ ಗಂಗರಾಜ್ಯದ ಪ್ರತಿಷ್ಠೆಯನ್ನು ಹೆಚ್ಚಿಸಿದನು.

ನೀತಿಮಾರ್ಗ ಪೆರ್ಮಾನಡಿಯು ಕಾಲವಾದ ಸಂದರ್ಭವನ್ನು ಟಿ. ನರಸೀಪುರ ತಾಲ್ಲೂಕಿನ ದೊಡ್ಡಹುಂಡಿ 257ನೆಯ ಶಾಸನ ದಾಖಲಿಸುತ್ತದೆ. ಇದರ ಕಾಲ ಖಚಿತವಿಲ್ಲದಿದ್ದರೂ ವಿವರಗಳು ಸ್ಪಷ್ಟವಾಗಿವೆ "ಸ್ವಸ್ತಿ ನೀತಿಮಾರ್ಗ ಕೊಂಗುಣಿ ವರ್ಮ ಧರ್ಮ ಮಹಾರಾಜಾಧಿರಾಜ ಕೋವಳಾಲಪುರವರೇಶ್ವರ ನನ್ದಗಿರಿನಾಥ ಶ್ರೀಮತ್ ಪೆರ್ಮನಡಿಗಳ್ ಸ್ವರ್ಗಮೇಱಿದಂ ಏಱಿದೊಡೆ ಪೆರ್ಮಾನಡಿಗಳ್ ಮನೆ ಮಗತ್ತಿನ್ ಅಗರಯ್ಯಂ ನೀತಿಮಾರ್ಗ ಪೆರ್ಮನಡಿಗೆ ಕಿಲ್ಗುಣ್ಣೆಯಾದಂ" ಎಂಬ

ಪರಿಯಲ್ಲಿ ಅಗರಯ್ಯ ಆತ್ಮಾರ್ಪಣೆಮಾಡಿದಾಗ ಆತನ ಸ್ಮಾರಕವಾಗಿ ನೀತಿಮಾರ್ಗನ ಪುತ್ರ ಸತ್ಯವಾಕ್ಯ ಪೆರ್ಮಾನಡಿ ಕಲ್ನಾಡನ್ನು ದತ್ತಿನೀಡಿದನು.

ಶ್ರೀಪುರುಷನ ಮೊಮ್ಮಗ, ರಣವಿಕ್ರಮನ ಮಗ ಒಂದನೆಯ ರಾಚಮಲ್ಲ. ಈತನ ಬಿರುದು ‘ ಸತ್ಯವಾಕ್ಯ ಪೆರ್ಮನಡಿ ’ಯ ಉಲ್ಲೇಖ ಆಲ್ಗೋಡು 313 ನೆಯ ಶಾಸನದಲ್ಲಿ ಕಂಡುಬರುತ್ತದೆ. ಈತನನ್ನು ಹೆಸರಿಸುವ 320 ಬಸವನಹಳ್ಳಿ ಶಾಸನದಿಂದ ಎರೆಯಮ್ಮನು 2 ಕಂಡುಗ ಗದ್ದೆ 2 ಕಂಡುಗ ಮಡುವಿನ ಮಣ್ಣನ್ನು ಕೊಂಡು ಎರೆಯಂಗೇಶ್ವರ ದೇವಾಲಯದ ಸ್ಥಾನಿಕ ಶ್ರೀಕಂಠಪಂಡಿತಭಟಾರನಿಗೆ ದಾನವಾಗಿತ್ತ ಸಂಗತಿ ತಿಳಿಯುತ್ತದೆ.

ತಲಕಾಡಿನ 200ನೆಯ ಶಾಸನದಲ್ಲಿ ‘ ನೀತಿಮಾರ್ಗ ಪೆರ್ಮಾನಾಡಿ ’ ಎಂದು ಬಿರುದಾಂಕಿತನಾದ ಮತ್ತೊಬ್ಬ ದೊರೆಯ ಸೂಚನೆಯಿದೆ. ಇದು ಕ್ರಿ.ಶ. 935ರ ಶಾಸನವಾಗಿರುವುದರಿಂದ ಇಲ್ಲಿ ಉಕ್ತನಾದ ದೊರೆ ಮುಮ್ಮಡಿ ರಾಚಮಲ್ಲ ಎಂದು ತಿಳಿಯಲಾಗಿದೆ. ಈತ ತಱಿಕಾಡನ್ನು (=ತಲಕಾಡು) ಮಹಾನಗರ ಎಂಬ ಸಂಘದ ಆಡಳಿತಕ್ಕೆ ಒಳಪಡಿಸಿದ್ದ. ಈ ಸಂಘವು ಕೆರೆದುರಸ್ತಿಗೈದ ಇಪ್ಪತ್ತೈದು ಮಂದಿಗೆ ಹಣನೀಡಿದ ವಿಷಯವನ್ನು ಕುರಿತು ಮೇಲಿನ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ.

ಗಂಗದೊರೆಗಳ ಪತ್ನಿಯರೂ ಕೊಡುಗೈದಾನಿಗಳಾಗಿದ್ದರು. ಹೆಮ್ಮಿಗೆ 253ನೆಯ ಶಾಸನದಲ್ಲಿ ಕೊಂಗುಣಿ ಮಹಾರಾಜ ಪೆರ್ಮಾಡಿಯ ಹೆಂಡತಿ ‘ ಪತೊನ್ದಿತೆರಿಗೆ ’ಯನ್ನು ದತ್ತಿಬಿಟ್ಟ ಸಂಗತಿ ಹೇಳಿದೆ. ಇದು ಸುಮಾರು 8–9ನೆಯ ಶತಮಾನದ ಶಾಸನವೆಂದಮೇಲೆ ಹೆಮ್ಮಿಗೆಯ ಪ್ರಾಚೀನತೆಯನ್ನು ಮನಗಾಣಬಹುದು. ಈ ಶಾಸನದಲ್ಲಿ ‘ ಪೆನೊಗೆ ’ ಎಂದು ಹೆಮ್ಮಿಗೆಯ ಪೂರ್ವದ ಹೆಸರಿನ ರೂಪ ಕಂಡುಬರುತ್ತದೆ.

ಗಂಗಮಾರಸಿಂಹನು ನನ್ನಿನೊಳಂಬನನ್ನು ಧ್ವಂಸಮಾಡಿ ‘ನೊಳಂಬಕುಲಾಂತಕ’ ಎಂಬ ಹೆಸರು ಪಡೆದಿದ್ದನು. ಈತ ಮಹಾ ಪರಾಕ್ರಮಿ. ತನ್ನ ಜೀವಿತದ ಅಂತ್ಯದಲ್ಲಿ ಸಲ್ಲೇಖನ ವ್ರತ ಸ್ವೀಕರಿಸಿ ಬಂಕಾಪುರದಲ್ಲಿ ಸತ್ತನು. ಟಿ. ನರಸೀಪುರದ ಸು 10ನೇ ಶತಮಾನದ ಆಲ್ಗೋಡು 312ನೆಯ ಶಾಸನದಲ್ಲಿ ನೊಳಂಬಕುಲಾಂತಕ ದೇವ ಮಹಾದೇವ ಎಂಬ ಹೆಸರು ಕಂಡುಬರುತ್ತದೆ. ಈತನ ಕಾರ್ಯಕರ್ತರುಗಳಾದ ಮಾಬಳಯ್ಯ ಮತ್ತು ಈಶ್ವರಯ್ಯ ಎಂಬವರ ಶೌರ್ಯವನ್ನು ಕುರಿತು “ ವಿನುತ ಪರಾಕ್ರಮ ಕ್ರಮದಿನೀ ನೆಲನಂ ನೆಱೆಯಾಳ್ದ ಬೀರಕೇತನೆ ಮೊದಲೆನ್ದು ಬಣ್ಣಿಪ ಜಯೋಜಯನಂ ಕಿಱಿಯಲ್ತೆ ಮಾಬಳಯ್ಯನೆ ಬಿಡದೊತ್ತೆ ಚಚ್ಚಂ ಸೆಱೆ ಮಚ್ಚಿದನಪ್ಪುದಱಿನ್ದೆ ಭೂಭುಜಂ ಮನವೊಸೆದಯ್ಯನಯ್ಯನೆನಲಯ್ಯವೆಸರ್ಪಡೆದುದು ಧಾತ್ರಿಯೊಳ್ ” ಎಂದು ಬಣ್ಣಿಸಲಾಗಿದೆ. ಹೀಗೆ ಗಂಗಸಂತತಿಯ ವಿವಿಧ ದೊರೆಗಳು ಟಿ. ನರಸಿಪುರ ತಾಲ್ಲೂಕಿನಲ್ಲಿ ರಾಜ್ಯಭಾರಮಾಡಿದರು. ಒಂದು ಕಾಲದಲ್ಲಿ ಅತ್ಯಂತ ವೈಭವದಿಂದ, ಪರಾಕ್ರಮದಿಂದ ಆಳಿದ ಗಂಗರು ಕ್ರಮೇಣ ದುರ್ಬಲರಾದರು. ರಾಚಮಲ್ಲನ ತಮ್ಮ ರಕ್ಕಸಗಂಗನ ಆಳ್ವಿಕೆಯ ಅವಧಿಯಲ್ಲಿ ಗಂಗರಿಗೂ ಚೋಳರಿಗೂ ಯುದ್ಧಗಳು

ನಡೆದವು. ರಾಜೇಂದ್ರಚೋಳನು ಗಂಗವಾಡಿಯನ್ನು ಪ್ರವೇಶಿಸಿ ಕ್ರಿ.ಶ. ಸು. 1004ರಲ್ಲಿ ಗಂಗರಾಜನನ್ನು ಪರಾಭವಗೊಳಿಸಿದನು. ಅನಂತರ ಉಳಿದುಳಿದ ಗಂಗದೊರೆಗಳು ಚಾಳುಕ್ಯ ಹಾಗೂ ಹೊಯ್ಸಳರ ಆಶ್ರಿತರಾದರು.

ರಾಜರಾಜಚೋಳನ ಕಾಲದಿಂದಲೆ ಕರ್ಣಾಟಕವನ್ನು ಆಕ್ರಮಿಸತೊಡಗಿದ್ದ ಚೋಳರು ಗಂಗರ ಬಳಿಕ ಈ ನಾಡಿನ ಮೇಲೆ ತಮ್ಮ ಆಧಿಪತ್ಯವನ್ನು ಮೆರೆದರು. ಹನ್ನೊಂದು ಹನ್ನೆರಡನೆಯ ಶತಮಾನದ ಹೊತ್ತಿಗಂತು ದಕ್ಷಿಣ ಕರ್ಣಾಟಕದ ಹಲವು ಭಾಗಗಳ ಮೇಲೆ ಹತೋಟಿ ಪಡೆದಿದ್ದರು. ಆಡಳಿತದ ಅನುಕೂಲಕ್ಕಾಗಿ ತಮ್ಮ ರಾಜ್ಯವನ್ನು ವಡಗರೈನಾಡು, ಚೋಳ ವಲ್ನಾಡು, ಮುಡಿಗೊಂಡ ಚೋಳಮಂಡಲ, ಇಡೈನಾಡ್, ಪೆರಿಯನಾಡ್ ಎಂದು ಹಲವು ಭಾಗಗಳನ್ನಾಗಿ ಮಾಡಿದ್ದರು. ಮೈಸೂರು ಮಂಡ್ಯ ಜಿಲ್ಲೆಯ ಚೋಳರ ಶಾಸನಗಳಲ್ಲಿ ರಾಜಾಧಿರಾಜ, ಒಂದನೆಯ ರಾಜೇಂದ್ರ ಮತ್ತು ಕುಲೋತ್ತುಂಗ ಇವರ ಹೆಸರು ಹೆಚ್ಚಾಗಿ ಕಂಡುಬರುತ್ತದೆ. ಇತರ ಚೋಳದೊರೆಗಳು ಇಲ್ಲಿನ ಸಂಪತ್ತನ್ನು ಲೂಟಿಮಾಡಿದ ಬಳಿಕ ಈ ಪ್ರದೇಶದ ಮೇಲೆ ಅಷ್ಟೊಂದು ಗಮನಹರಿಸಿದಂತೆ ತೋರುವುದಿಲ್ಲ.

ಹೊಸದಾಗಿ ಲಭ್ಯವಾದ ಗಂಗವಾಡಿಯನ್ನು 'ರಾಜರಾಜಚೋಳ ಮಂಡಲ' ಎಂದು ಕರೆದವರು ಚೋಳರು. ಇವರು ತಲಕಾಡನ್ನು 'ರಾಯರಾಯಪುರ' ಎಂದು ನಾಮಾಂತರಗೊಳಿಸಿದರು. ಮೈಸೂರುಜಿಲ್ಲೆಯ ಚೋಳರ ಶಾಸನಗಳೆಲ್ಲ ಟಿ. ನರಸೀಪುರ ತಾಲ್ಲೂಕಿನಲ್ಲಿರುವುದೊಂದು ವಿಶೇಷ. ಬನ್ನೂರಿನಲ್ಲಿ ಇವರಿಗೆ ಸಂಬಂಧಿಸಿದ ಪ್ರಾಚೀನ ಶಾಸನವಿವೆ. ಬನ್ನೂರು ಕಾಲಕಾಲಕ್ಕೆ ವಹ್ನಿಪುರ, ಜನನಾಥಚತುರ್ವೇದಿ ಮಂಗಲ, ಶ್ರೀರಾಮಪುರ ಎಂದು ಬೇರೆ ಬೇರೆ ಹೆಸರು ಪಡೆದಿದ್ದುದು ಶಾಸನಗಳಿಂದ ವೇದ್ಯ. ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದ ಬನ್ನೂರು 57ನೆಯ ಶಾಸನವು ಕ್ರಿ.ಶ. 985ರಲ್ಲಿ ಪಟ್ಟಕ್ಕೆಬಂದ ಒಂದನೆಯ ರಾಜರಾಜಚೋಳನನ್ನು ಉಲ್ಲೇಖಿಸಿದೆ. ಪ್ರಸ್ತುತ ಶಾಸನ 'ತಿರುಮಗಳ್‌ಪೋಲ' ಎಂಬ ಈತನ ಪ್ರಶಸ್ತಿಯಿಂದ ಆರಂಭವಾಗುತ್ತದೆ. ದೈವಭಕ್ತನಾದ ಈತ ಇಲ್ಲಿನ ಹನುಮಂತೇಶ್ವರ ದೇವಾಲಯದ ಉಪಗುಡಿಗಳ ಪೂಜೆಗಾಗಿ ಭೂಮಿಯನ್ನು ದತ್ತಿಬಿಟ್ಟದ್ದನ್ನು ಹೇಳಿದೆ. ಅಕ್ಕೂರಿನಲ್ಲಿರುವ ಚೋಳಪಾಂಡೇಶ್ವರ ದೇವಾಲಯ ಮತ್ತು ತಲಕಾಡಿನ ವೈದ್ಯೇಶ್ವರ ದೇವಾಲಯಗಳು ಚೋಳನಿರ್ಮಿತ.

ತಡಿಮಾಲಿಂಗಿಯ ಜನಾರ್ದನ ದೇವಾಲಯದ ತಳಪಾದಿ ಕಲ್ಲಿನ ಮೇಲಿರುವ 230ನೆಯ ಶಾಸನ ಕೂಡ ಒಂದನೆಯ ರಾಜರಾಜಚೋಳನಿಗೆ ಸಂಬಂಧಿಸಿದೆ. ಇದರ ವಿಷಯ ಕ್ರಿ.ಶ. 1013–14ರ ಅವಧಿಯಲ್ಲಿ ನಡೆದ ಭೂವ್ಯವಹಾರವಾಗಿದ್ದು ಕೆಲವು ಗಾಮುಂಡರು ಮಾಯಿಲಂಗೆಯ ಭೂಮಿಯನ್ನು ಅದರ ಅಂದಿನ ಬೆಲೆಯಾದ 100 ಕಳಂಜಿಗೆ ಮಾರಿದುದನ್ನು ಪ್ರಸ್ತಾಪಿಸುತ್ತದೆ.

ಕಲಿಯೂರು ಈ ತಾಲ್ಲೂಕಿನ ಪ್ರಾಚೀನ ಊರುಗಳಲ್ಲಿ ಒಂದು. 16–17ನೆಯ

ಶತಮಾನದಲ್ಲಿ ಇದು ಕೃಷ್ಣದೇವರಾಯಪುರ ಎಂಬ ಪ್ರತಿನಾಮಧೇಯವನ್ನು ಪಡೆದಿತ್ತು. ರಾಜರಾಜಚೋಳನ ಶಾಸನಗಳ ಪೈಕಿ ಕಲಿಯೂರಿನ 219ನೆಯ ಶಾಸನಕ್ಕೆ ಮಹತ್ವವಿದೆ. ಇದು ಕ್ರಿ.ಶ. 1006ರಲ್ಲಿ ನಡೆದ ಯುದ್ಧದ ಸ್ಮರಣಾರ್ಥವಾಗಿ ಅಪ್ರಮೇಯನು ನೆಟ್ಟ ಜಯಸ್ತಂಭ. ಈತ ರಾಜರಾಜಚೋಳನ ಮಂತ್ರಿಯೂ ಕೊಂಗಮಂಡಲಕ್ಕೆ ಅಧಿಪತಿಯೂ ಆಗಿದ್ದ. ಚೋಳರನ್ನು ಎದುರಿಸಲು ಹೊಯ್ಸಳರ ನೇತೃತ್ವದಲ್ಲಿ ಗೋಯಿಗ, ಬೂತುಗ, ಸೇನವಾರ, ನೊಳಂಬರ ಚಂಡಿಗ, ಪೊನ್ನ, ನನ್ನಿಗ, ಬೀರುಗ, ನಾಗವರ್ಮ, ನರಗ, ಸಿಂಗ ಮೊದಲಾದ ಸಾಮಂತರೆಲ್ಲ ಒಂದುಗೂಡಿದ್ದ ಸಂಗತಿ ಶಾಸನದಿಂದ ವೇದ್ಯ. ಇವರನ್ನೆಲ್ಲ ಅಪ್ರಮೇಯನು ಹಿಮ್ಮೆಟ್ಟಿಸಿ ತನ್ನ ಒಡೆಯನ ವಿಜಯಕ್ಕೆ ಕಾರಣನಾದನು.

> ಅಣಮುರದುರ್ಕಿ ಬಂದಣಿಯ ನಾಯಕರಟ್ಟಿ ರಂಜಿಸೆ ನೂಂಕಿನೊ
> ಳ್ಪೆಣಮಯಮಾಯ್ತು ರಕ್ತಮಯಮಾಯ್ತು ಶಿವಾಮಯಮಾಯ್ತು ಡಾ
> ಕಿಣಿಗಣಮಾಯ್ತು ಗೃಧ್ರಮಯಮಾಯ್ತು ಮರುಳ್ಮಯಮಾಯ್ತು ವಾಯಸ
> ಕ್ಷಣಮಯಮಾಯ್ತು ತೊಟ್ಟನೆ ರಣೋನೇಮಿ ನೆಗಳ್ದಪ್ರಮೇಯನಾ

ಎಂದು ಮನದುಂಬಿ ಪ್ರಶಂಸಿಸಲಾಗಿದೆ. ಅಪ್ರಮೇಯನ ಪರಾಕ್ರಮವನ್ನು ವಿವಿಧ ರೀತಿಯಲ್ಲಿ ಬಣ್ಣಿಸುವ ಪ್ರಸ್ತುತ ಶಾಸನ ಆತನ ಶೌರ್ಯಕ್ಕೆ ಸಂದ ಪ್ರಶಸ್ತಿಯಾಗಿದ್ದು ಕಾವ್ಯಮಯವಾಗಿದೆ.

ರಾಜರಾಜಚೋಳನ ಬಳಿಕ ರಾಜೇಂದ್ರಚೋಳನು ಕ್ರಿ.ಶ. 1014ರಲ್ಲಿ ಪಟ್ಟಕ್ಕೆ ಬಂದ. ಮಹತ್ವಾಕಾಂಕ್ಷಿಯೂ ಶೂರನೂ ಆಗಿದ್ದ ಈತ ಸಿಂಹಳ, ಕಳಿಂಗ, ಗಂಗಾನದಿ ಕಣಿವೆ ಮೊದಲಾದ ಕಡೆಗಳಲ್ಲಿ ಆಕ್ರಮಣಮಾಡಿ ಗಂಗೈಕೊಂಡ ಎಂಬ ಬಿರುದು ಗಳಿಸಿದ್ದ. ಟಿ. ನರಸೀಪುರ ತಾಲ್ಲೂಕಿನ ತಡಿಮಾಲಿಂಗಿಯಲ್ಲಿ ಈತನಿಗೆ ಸೇರಿದ ಕೆಲವು ಶಾಸನಗಳಿವೆ. ಈ ಊರಿಗೆ ಮಾಯಿಲಿಂಗೈ ಜನನಾಥಪುರ ಎಂಬ ಪರ್ಯಾಯನಾಮವಿದ್ದುದನ್ನು ಶಾಸನಗಳು ದಾಖಲಿಸುತ್ತವೆ. ಇಲ್ಲಿನ 233ನೆಯ ಶಾಸನದಲ್ಲಿ ಒಂದನೆಯ ರಾಜೇಂದ್ರನನ್ನು ಉಡೈಯಾರ್ ಶ್ರೀಚೋಳ ಎಂದು ಕರೆಯಲಾಗಿದೆ. ಈ ಶಾಸನದ ಕಾಲ ಕ್ರಿ.ಶ. 1015-16. ತಡಿಮಾಲಿಂಗಿಯ ಜನಾರ್ದನ ದೇವಾಲಯದ ನಂದಾದೀಪ ಮತ್ತು ತಿರುವೋಲಕ್ಕು ಉತ್ಸವಗಳನ್ನು ನಡೆಸಲು ಎರಡು ಮಾಡೈಗಳನ್ನು ದಾನ ನೀಡಿದ್ದನೆಂದು ಪ್ರಸ್ತುತ ಶಾಸನ ತಿಳಿಸುತ್ತದೆ.

ಕ್ರಿ.ಶ. 1017-18ರ ಅವಧಿಯ ವಿಜಯಪುರದ 142ನೆಯ ಶಾಸನ ಒಂದನೆಯ ರಾಜೇಂದ್ರನ 'ತಿರಮನ್ನಿವಳರ' ಎಂಬ ಪ್ರಶಸ್ತಿಯನ್ನು ಉಲ್ಲೇಖಿಸುತ್ತದೆ. ಇದರಲ್ಲಿ ಈತನ ದಾನಗುಣವನ್ನು ಎತ್ತಿಹಿಡಿಯಲಾಗಿದೆ. ತಡಿಮಾಲಿಂಗಿಯ ಕ್ರಿ.ಶ. 1021-22ರ 229ನೆಯ ಶಾಸನವೂ ಮೇಲಿನ ಪ್ರಶಸ್ತಿಯನ್ನು ಪ್ರಸ್ತಾಪಿಸುತ್ತದೆ. ಇಲ್ಲಿ ಬರುವ ಜಯಮೂರ್‌ನಾಡಾಳ್ವಾನ್ ಹತ್ತು ಕಳಂಜು ಚಿನ್ನ ಕೊಟ್ಟದ್ದಕ್ಕೆ ಪ್ರತಿಯಾಗಿ ನಗರತ್ತರ್ ಒಂದು ಕುರುಣಿ ಬತ್ತವನ್ನು ಕಳಿಸುತ್ತಿರುತ್ತಾನೆ. ಈತ ಒಂದನೆಯ

ರಾಜೇಂದ್ರನ ಸೇನಾಪತಿಯಾಗಿರಬೇಕು. ಕ್ರಿ. ಶ. 1035–36ರ ತಡಿಮಾಲಿಂಗಿ 232ನೆಯ ಶಾಸನದಲ್ಲಿ ಒಂದನೆಯ ರಾಜೇಂದ್ರನ 'ತಿರುಮಗಳ್ಶೋಲ' 'ಉತ್ತಮ ಶೋಲ' ಎಂಬ ಬಿರುದುಗಳು ದೊರೆಯುತ್ತವೆ. ಈತನ ಆಳ್ವಿಕೆಯಲ್ಲಿ ನಗರತ್ತರ್ ಶುದ್ಧಮಲ್ಲೀಶ್ವರಂ ಎಂಬವನು ಕ್ರಿ.ಶ. 1043–44ರಲ್ಲಿ ಉದಯಮಹಾದೇವ ದೇವರಿಗೆ ದತ್ತಿಬಿಟ್ಟ ಸಂಗತಿ ತಡಿಮಾಲಿಂಗಿ 239ನೆಯ ಶಾಸನದಿಂದ ತಿಳಿದುಬರುತ್ತದೆ.

ರಾಜೇಂದ್ರಚೋಳನ ತರುವಾಯ ಕ್ರಿ.ಶ. 1044ರಲ್ಲಿ ಒಂದನೆಯ ರಾಜಾಧಿರಾಜ ಆಡಳಿತಕ್ಕೆ ಬಂದ. 'ತಿಂಗಳೇರತರು' ಎಂಬ ಈತನ ಪ್ರಶಸ್ತಿಯಿಂದ ತಲಕಾಡು 190 ನೆಯ ಶಾಸನ ಆರಂಭವಾಗುತ್ತದೆ. ಇಲ್ಲಿ ಬರುವ 'ಕಮ್ಪಿಲಿನಗರುಳ್ಚಳುಕ್ಕಿಯವರ್ಮಾಳಿಗೈ' ಎಂಬ ಮಾತಿನಿಂದ ಈತ ಕಾಂಪಿಲ್ಯದ ಚಳುಕ್ಕಿಯರ್ ಅರಮನೆಯನ್ನು ನಾಶಗೊಳಿಸಿದ್ದನೆಂದು ಅರಿಯಬಹುದು. ಈತ ಚಾಳುಕ್ಯರ ವಿರುದ್ಧ ನಿರಂತರವಾಗಿ ಹೋರಾಡಿದ. ಅಂತಿಮವಾಗಿ ಚಾಳುಕ್ಯ ಸೋಮೇಶ್ವರನಿಂದ ಹತನಾದ. ಆನಂತರದಲ್ಲಿ ಬಂದ ಪ್ರಮುಖ ಚೋಳದೊರೆಯೆಂದರೆ ಕುಲೋತ್ತುಂಗ. ಕ್ರಿ.ಶ. 1105–6ರ ಅವಧಿಯ ನಿಲಸೋಗೆಯ 291ನೆಯ ಶಾಸನದಲ್ಲಿ ಈತನ ಬಿರುದುಗಳಾದ ಪುಗಳ್ಮಾದುವಿಳಂಗ, ಜಯಮಾದುವಿರುಂಬ, ನಿಲಮಗಳ್ ನಿಲವ, ಮಲರ್ಮಗಳ್ ಪುಣರ ಮೊದಲಾದವು ಕಂಡುಬರುತ್ತವೆ. ತಲಕಾಡಿನ 173, ದೊಡ್ಡಬಾಗಿಲು 124ನೆಯ ಶಾಸನಗಳಲ್ಲಿಯೂ ಈತನ ಕೆಲವು ಪ್ರಶಸ್ತಿಗಳನ್ನು ನೋಡಬಹುದು. ಈತನ ಕಾಲದಲ್ಲಿ ಟಿ. ನರಸೀಪುರ ತಾಲ್ಲೂಕಿನ ಕೆಲವು ಊರುಗಳು ಗಂಗೈಕೊಂಡ ಚೋಳವಲ್ನಾಡ್ ಮತ್ತು ಮುಡಿಗೊಂಡ ಚೋಳ ಮಂಡಲದ ಭಾಗಗಳಿಗೆ ಸೇರಿದ್ದವೆಂದು ಊಹಿಸಬಹುದು. ಕುಲೋತ್ತುಂಗನು ತಲಕಾಡಿನ ವೈದ್ಯೇಶ್ವರದೇವರ ನಂದಾದೀಪ ಮತ್ತು ಪೂಜಾದಿಗಳಿಗೆಂದು ಕ್ರಿ.ಶ. 1102ರಲ್ಲಿ ದತ್ತಿಬಿಟ್ಟ ಸಂಗತಿ ಇಲ್ಲಿನ 179ನೆಯ ಶಾಸನದಿಂದ ತಿಳಿದುಬರುತ್ತದೆ. ಈತ ರಾಜೇಂದ್ರಚೋಳವಿಣಗರ್ ದೇವತೆಯನ್ನು ತನ್ನ ಹೆಸರಿನಲ್ಲಿ ಪ್ರತಿಷ್ಠಾಪಿಸಿರಬಹುದು. ಈ ದೇವತೆಗೆ ಕಿಳಮೂರಿನ ಭೂಮಿಯನ್ನು ದತ್ತಿಬಿಟ್ಟಿದ್ದನು[1]. ಟಿ. ನರಸೀಪುರ ತಾಲ್ಲೂಕಿನ ಆಲುಗೋಡು ಕುಲೋತ್ತುಂಗ ಚೋಳಪುರ ಎಂಬ ಅಭಿಧಾನ ಪಡೆದಿತ್ತು.

ಕೊಳತೂರು 104 ತಮಿಳುಶಾಸನ ರಾಜೇಂದ್ರಕರಿಕಾಲಚೋಳನ ಅವಧಿಯದು. ಚೋಳರಿಗೆ 'ಕರಿಕಾಲಚೋಳ' ಎಂಬ ಬಿರುದು ಎರಡನೆಯ ರಾಜೇಂದ್ರನ ಕಾಲಕ್ಕಾಗಲೆ ಲಭಿಸಿತ್ತು. ಈ ಶಾಸನವನ್ನು ಮೂರನೆಯ ರಾಜೇಂದ್ರಚೋಳನಿಗೂ ಅನ್ವಯಿಸಿ ಇದರ ಕಾಲ ಕ್ರಿ.ಶ. 1260–61ರ ವರೆಗೂ ಹೋಗಿದೆ. ಮುಂಗವಂಶದ ಶೋಳಾಂಡನ್ ಎಂಬುವನು ಕೆರೆ ಹಾಗೂ ದೇವಾಲಯವನ್ನು ಕಟ್ಟಿಸಿದ್ದನು. ಇಂಥ ಜನೋಪಯೋಗಿ ಕಾರ್ಯಕ್ಕಾಗಿ ಈತನಿಗೆ ಭೂಮಿಯನ್ನಿತ್ತುದನ್ನು ಶಾಸನದಲ್ಲಿ ವಿವರಿಸಿದೆ.

---

1 ತಲಕಾಡು 180ನೆಯ ಶಾಸನ

ಚಾಲುಕ್ಯರಿಗೆ ಸಂಬಂಧಿಸಿದಂತೆ ಟಿ. ನರಸೀಪುರದ ಶಾಸನಗಳಲ್ಲಿ ಗಮನಾರ್ಹ ಅಂಶಗಳೇನೂ ಕಂಡುಬರುವುದಿಲ್ಲ. ಸುಮಾರು 9ನೆಯ ಶತಮಾನಕ್ಕೆ ಸೇರಿದ ಸೋಸಲೆ 120ನೆಯ ಶಾಸನದಲ್ಲಿ ವಡಕರೆನಾಡನ್ನು ವಿಕ್ರಮಾದಿತ್ಯನು ಆಳುತ್ತಿದ್ದ ಸಂಗತಿ ತಿಳಿದುಬರುತ್ತದೆ. ದೊಡ್ಡಬಾಗಿಲು 123ನೆಯ ಶಾಸನೋಕ್ತರಾಗಿರುವ ನೊಳಂಬಾಂತ ಪೆರ್ಮಾಡಿ, ವಿಕ್ರಮಾದಿತ್ಯ ಮತ್ತು ಉದಯಾದಿತ್ಯರಲ್ಲಿ ಕೂಡ ಚಾಲುಕ್ಯದೊರೆಯ ಹೆಸರನ್ನು ಕಾಣಬಹುದು.

ಗಂಗರ ಬಳಿಕ ಟಿ. ನರಸೀಪುರ ತಾಲ್ಲೂಕು ಮತ್ತೊಮ್ಮೆ ನಾಡಿನ ಇತಿಹಾಸದಲ್ಲಿ ಪ್ರಾಶಸ್ತ್ಯಪಡೆದದ್ದು ಹೊಯ್ಸಳರ ಕಾಲದಲ್ಲಿ. ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳರು ಗಂಗವಾಡಿ ಪ್ರದೇಶವನ್ನು ಚೋಳರಿಂದ ಆಕ್ರಮಿಸಿಕೊಳ್ಳುವ ಮೂಲಕ ಸಾಮ್ರಾಜ್ಯಾಧಿಪತಿಗಳೆನಿಸಿಕೊಂಡರು. ಹೊಯ್ಸಳ ಎರೆಯಂಗನ ಮಗ ಬಲ್ಲಾಳನು ಈ ಪ್ರದೇಶದ ಮೇಲೆ ಹತೋಟಿ ಪಡೆದಿದ್ದ. ತಲಕಾಡಿಗೆ ಮುತ್ತಿಗೆ ಹಾಕಿದ್ದ. ಇದರಲ್ಲಿ ಸಂಪೂರ್ಣ ಯಶಸ್ವಿಯಾಗಿ 'ತಲಕಾಡುಗೊಂಡ' ಎಂಬ ಬಿರುದನ್ನು ಹೊಯ್ಸಳರಿಗೆ ತಂದುಕೊಟ್ಟವನು ವಿಷ್ಣುವರ್ಧನ. ಈತ ತಲಕಾಡನ್ನು ನೆಲೆವೀಡಾಗಿ ಮಾಡಿಕೊಂಡಿದ್ದನು. ಈ ಕಾರಣದಿಂದ ಟಿ. ನರಸೀಪುರ ತಾಲ್ಲೂಕಿನ ಇತಿಹಾಸದಲ್ಲಿ ಹೊಯ್ಸಳರ ನೇರವಾದ ಪ್ರಭಾವವನ್ನು ಗುರುತಿಸಬಹುದು.

ಕ್ರಿ.ಶ. 1101ರ ಅವಧಿಯ ತಿರಮಕೂಡಲು ನರಸೀಪುರ 13ರಲ್ಲಿ ವೀರಬಲ್ಲಾಳ ದೇವನ ಉಲ್ಲೇಖವಿದೆ. ಮಾಲಿಗೈಯುಡೈಯಾನ್ ನೇದಿಯಾಟ್ವಾನ್ ಎಂಬುವನು ನೀಡಿದ ದತ್ತಿಗೆ ಶಾಸನ ಸಂಬಂಧಿಸಿದೆ. ಈತ ಮಹಾಸಭೆಯ ಸದಸ್ಯರಾದ ಇಳೈಯಾಳ್ವಾರ್ ಮತ್ತು ವಿಲ್‌ಲಿಯಾಟ್ವಾರ್ ಎಂಬವರಿಂದ ಭೂಮಿಯನ್ನು ಖರೀದಿಸಿ ತಲಕಾಡುಗಂಡ ಅಭಯವಲ್ಲಭದೇವ ವಿಣ್ಣಗರ್ ದೇವಾಲಯದ ಸಪ್ತಮಿ ಮತ್ತು ಅಮಾವಾಸ್ಯೆಯ ಪೂಜೆಗಳಿಗೆಂದು ದಾನ ನೀಡಿದ್ದನು. ಆ ಕಾಲಕ್ಕೆ ತಿರಮಕೂಡಲು ನರಸೀಪುರದ ಆಡಳಿತ ಸೂತ್ರವು ಮಹಾಸಭೆಯ ಕೈಯಲ್ಲಿತ್ತು. ಬನ್ನೂರು 61ನೆಯ ಶಾಸನದಲ್ಲಿ ಹೊಯ್ಸಳರ ಬಿರುದಾವಳಿಗಳೆಲ್ಲ ದಾಖಲಾಗಿವೆ.

ವೀರಬಲ್ಲಾಳನ ಬಳಿಕ ಆತನ ಸಹೋದರ ವಿಷ್ಣುವರ್ಧನ ಕ್ರಿ.ಶ. 1108ರಲ್ಲಿ ಸಿಂಹಾಸನಾರೋಹಣ ಮಾಡಿದನು. ಹೊಯ್ಸಳ ರಾಜರಲ್ಲಿ ಅತ್ಯಂತ ಪ್ರಖ್ಯಾತನಾಗಿದ್ದ ಈತ ಮೂವತ್ತೈದು ವರ್ಷಗಳ ಕಾಲ ಯಶಸ್ವಿಯಾಗಿ ಆಡಳಿತ ನಡೆಸಿದ. ಸಾಮಂತರಾಗಿದ್ದ ಹೊಯ್ಸಳರು ಸ್ವತಂತ್ರರಾಜರಾಗಲು ಕಾರಣನಾದ. ಈತ ಪಟ್ಟಕ್ಕೆ ಬಂದ ಆರುವರ್ಷದ ಬಳಿಕ ಅಂದರೆ ಕ್ರಿ.ಶ. 1114ರಲ್ಲಿ ತಲಕಾಡಿನ ಮೇಲೆ ಆಕ್ರಮಣ ಮಾಡಿದ. ಆ ಹೊತ್ತಿಗೆ ಚೋಳರ ಪ್ರತಿನಿಧಿಯಾದ ಆದಿಯಮನು ತಲಕಾಡಿನ ಆಡಳಿತಸೂತ್ರ ಹಿಡಿದಿದ್ದ. ಈ ಯುದ್ಧದಲ್ಲಿ ಚೋಳರಿಗೆ ಸೋಲುಂಟಾದುದಲ್ಲದೆ ಆದಿಯಮ ಮರಣವನ್ನಪ್ಪಿದ. ಈ ವಿಜಯದ ಕುರುಹಾಗಿ ವಿಷ್ಣುವರ್ಧನನು ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ಕಟ್ಟಿಸಿದ. ಇದರ ಮೇಲೆ

ಬೆಳಕು ಚೆಲ್ಲುವ ಕ್ರಿ.ಶ. 1117ರ ತಲಕಾಡಿನ ಕೀರ್ತಿನಾರಾಯಣ ದೇವಾಲಯದಲ್ಲಿರುವ 151ನೆಯ ಶಾಸನ ವಿಷ್ಣುವರ್ಧನನಿಗೆ ಸಂಬಂಧಿಸಿದ ಶಾಸನಗಳಲ್ಲಿ ಮುಖ್ಯವಾದುದು. ಶಾಸನದ ಆರಂಭದಲ್ಲಿ ವಿನಯಾದಿತ್ಯನಿಂದ ಎರಡನೆಯ ಬಲ್ಲಾಳನವರೆಗೆ ವಂಶಾವಳಿಯನ್ನು ನಿರೂಪಿಸಿ ವಿಷ್ಣುವರ್ಧನನ ಆಳ್ವಿಕೆಯನ್ನು ಸೂಚಿಸುತ್ತದೆ. ಈತನನ್ನು ಮಣ್ಡಲಿಕನಾರಾಯಣ, ಮಣ್ಡಲಿಕ ವೇಟ್ಕೈಕಾಜಿ, ಮಣ್ಡಲಿಕ ಚೂಡಾಮಣಿ ಮುಂತಾಗಿ ಪ್ರಶಂಸಿಸಲಾಗಿದೆ ಈತ ದೇವರ ಅಂಗಭೋಗ ಪೂಜಾದಿಗಳಿಗೆಂದು ಕಕ್ಕೂರು, ಸಿರುವಿಣ್ಣಗರ, ಒಡಪ್ಪಟ್ಟಿ, ವಾಗಿಯೂರು—ಈ ಹಳ್ಳಿಗಳ ಆದಾಯವನ್ನು ಮತ್ತು ಭೂಮಿಯನ್ನು ದತ್ತಿಬಿಟ್ಟ ವಿವರಗಳು ಇದರಲ್ಲಿ ದಾಖಲಾಗಿವೆ.

ಜನನಾಥಚತುರ್ವೇದಿ ಮಂಗಲ ಪ್ರತಿನಾಮಧೇಯವಾದ ಬನ್ನೂರು ಚೋಳವಲ್ನಾಡಿನ ಮುಡಿಗೊಂಡ ಚೋಳಮಂಡಲದ ವಡಗರೆನಾಡಿಗೆ ಸೇರಿತ್ತು. ಇಲ್ಲಿನ 69ನೆಯ ಶಾಸನವಲ್ಲಿ ವಿಷ್ಣುವರ್ಧನನು ರಾಜ್ಯಭಾರಮಾಡುತ್ತಿದ್ದಾಗ ಜಿಳ್ವಲದ ಬಾದಾಮಿಯ ಹುವಿಯುರ ನಾರಸಿಂಹದೇವನು ಕ್ರಿ.ಶ. 1135ರಲ್ಲಿ 12 ಗದ್ಯಾಣವನ್ನು ಬನ್ನೂರಿನ ಜನಾರ್ದನದೇವಾಲಯದ ನಂದಾದೀಪಕ್ಕೆ, ಮಹಾಜನ ಸಂಜಮಟಿಕ ಅಗ್ಗಿಷ್ಟಿಗೆ. ಸೌಪಣ್ಣದ ತಂಬುಲ ಮುಂತಾದುವಕ್ಕೆ ದಾನನೀಡಿದ್ದನು.

ವಿಷ್ಣುವರ್ಧನನ ಬಳಿಕ ಪಟ್ಟಕ್ಕೆಬಂದ ಒಂದನೆಯ ನರಸಿಂಹನು ಕ್ರಿ.ಶ 1143 ರಿಂದ 1172ರ ವರೆಗೆ ರಾಜ್ಯಭಾರಮಾಡಿದ. ಸುಖಲೋಲುಪ್ತನಾಗಿದ್ದ ಈತನ ಶಾಸನಗಳು ಈ ತಾಲ್ಲೂಕಿನಲ್ಲಿ ಅಷ್ಟಾಗಿ ಕಂಡುಬರುತ್ತಿಲ್ಲ. ಕ್ರಿ.ಶ. 1160ರ ತಲಕಾಡು 156ನೆಯ ಶಾಸನದಲ್ಲಿ ಈತನಿಗೆ ಕೆಳಲಾಲಿರಾಯ ಎಂಬ ಪರ್ಯಾಯನಾಮವಿದ್ದಂತೆ ತೋರುತ್ತದೆ. ಆ ಬಳಿಕದಲ್ಲಿ ಸಿಂಹಾಸನಾರೋಹಣ ಮಾಡಿದ ಎರಡನೆಯ ಬಲ್ಲಾಳನು ಪಾಂಡ್ಯರಿಗೆ ಸೇರಿದ ಉಚ್ಚಂಗಿಯನ್ನು ಗೆದ್ದು ಜಯಗಳಿಸಿದ. ಈತ ಸಿಂಹಾಸನಾರೋಹಣಮಾಡಿದಂದು ಪದಿನಾಡಿಗೆ ಸೇರಿದ ಇಳಮುರದೂರ್ (ಇಂದಿನ ಯಳಂದೂರು) ಊರನ್ನು ತಲಕಾಡಿನ ಕೀರ್ತಿನಾರಾಯಣ ದೇವರಿಗೆ ಕ್ರಿ.ಶ. 1173ರಲ್ಲಿ ದತ್ತಿಬಿಟ್ಟ. ಈತನ ಆಳ್ವಿಕೆಯಲ್ಲಿ ಬಾಚಿಯನಾಯಕ, ಹೆಗಡೆಮಾರಯ್ಯ, ರಾಮಯ್ಯ ಮೊದಲಾದವರು ಕ್ರಿ.ಶ. 1179ರಲ್ಲಿ ಅಕ್ಕಿಊರ ಚೋಳಪಾಂಡೇಶ್ವರ ದೇವರಿಗೆ ಗಾಣದ ಸುಂಕವನ್ನು ದಾನವಾಗಿತ್ತ ಸಂಗತಿ ಅಕ್ಕೂರು 136ನೆಯ ಶಾಸನದಿಂದ ವಿದಿತವಾಗುತ್ತದೆ. ಇದೇ ಅವಧಿಯ ಬೆಟ್ಟಹಳ್ಳಿ 84ನೆಯ ಶಾಸನ ಎರಡನೆಯ ಬಲ್ಲಾಳನನ್ನು ಹೆಸರಿಸುತ್ತ ವೈಚಪ್ಪಹೆಗ್ಗಡೆ ಮತ್ತು ರಾಮಯ್ಯ ಎಂಬುವರು ಬೆಟ್ಟಹಳ್ಳಿಯ ಮಲ್ಲಿಕಾರ್ಜುನ ದೇವರಿಗೆ ದತ್ತಿಬಿಟ್ಟದ್ದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಬರುವ ಮಾಸಯ ನಾಯಕ್ಕರ್ ಎಂಬವನು ವೀರಬಲ್ಲಾಳನ ಕೈಕೆಳಗಿನ ಅಧಿಕಾರಿ. ಕ್ರಿ.ಶ. 1180ರ ತುಂಬಲ 40 ಶಾಸನದಲ್ಲಿ ಹೊಯ್ಸಳರ ವಂಶಾವಳಿಯನ್ನು ನಿರೂಪಿಸುವಾಗ ಎರಡನೆಯ ಬಲ್ಲಾಳನನ್ನು "ಪ್ರಖ್ಯಾತನುದಾರಂ ಸಮಸ್ತಲೋಕಾಧಾರಂ ನೀತಿವಿದನೆಂದೊಡುಪಮಾತೀತಂ ಬಲ್ಲಾಳಭೂಪ ಸಮರಾಟೋಪಂ" ಎಂದು

ವರ್ಣಿಸಿದೆ. ದೈವಭಕ್ತನೂ ಧರ್ಮಸಹಿಷ್ಣುವೂ ಆದ ಈತ ಕಿರಮಕೂಡಲ ಅಗಸ್ತ್ಯೇಶ್ವರ ದೇವರಿಗೆ "ದಿಬ್ಯಾಂಗಭೋಗ ನಿವೇದ್ಯಾರ್ಥವಾಗಿ" ಎಡತೊರೆನಾಡಿಗೆ ಸೇರಿದ ತುಂಬಲ ಕಾಲುಹಳ್ಳಿ ಸುಬ್ರಮಾಣಿಯಹಳ್ಳಿ, ಸೆಟ್ಟಿಗೌಡನಹಳ್ಳಿ, ಬಾಚಗೌಡನಹಳ್ಳಿ ಇವುಗಳ ಚತುಸ್ಸೀಮೆಯ ಭೂಮಿಯನ್ನು ದೇವಸ್ಥಾನದ ಸ್ಥಾನಿಕ ಅಘುತ್ರಿಜೀಯನಿಗೆ ಧಾರಾಪೂರ್ವಕವಾಗಿ ನೀಡಿದನು. ತಲಕಾಡಿನ ಕೀರ್ತಿನಾರಾಯಣ ದೇವಾಲಯದ ಮೊದಲ ಪ್ರಸಾದವನ್ನು ಕೊಡುವ ಬಗ್ಗೆ ಇದ್ದ ನಿಯಮವನ್ನು ವೀರಬಲ್ಲಾಳನು ಕ್ರಿ.ಶ. 1180ರಲ್ಲಿ ಪುನರೂಪಿಸಿದನು. ಹಾಗೂ ಅದು ನಾಲ್ವರಿಗೆ ದಕ್ಕುವಂತೆ ಮಾಡಿದನು.* ಈತನ ಕಾಲದಲ್ಲಿ ತಲಕಾಡು ವ್ಯಾಪಾರ ಕೇಂದ್ರವಾಗಿತ್ತು.

ತಡಿಮಾಲಿಂಗಿಯ ಕ್ರಿ.ಶ. 1195ರ 236ನೆಯ ಶಾಸನದ "ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರ ದ್ವಾರಾವತೀಪುರವರಾಧೀಶ್ವರಂ ವಾಸಂತಿಕಾ ದೇವಿಯ ಲಬ್ಧ ವರಪ್ರಸಾದಂ ರಿಪುನೃಪಕಿರೀಟ ತಾಡಿತಪಾದಂ ಸಕಳಕಳಾ ಪಾರಾಯಣಂ ಯಾದವನಾರಾಯಣಂ ಚಾರುಚಾರಿತ್ರಂ ಪರಾಂಗಣಪುತ್ರ ಚೋಳ ಕಟಕ ಸೂಜಿಕಾರಂ ರಿಪುರಾಯ ಬೇಟಿಕಾಜಿಂ ಗಂಡಬೇರುಂಡಂ ಮಳಪರೊಳುಗಂಡಂ ಇತ್ಯಾದಿ ನಾಮಾವಳೀ ವಿರಾಜಿತರಪ್ಪ ಶ್ರೀಮನ್ಮಹಾಮಂಡಳೇಶ್ವರಂ ತಳಕಾಡು ಗಂಗವಾಡಿ ನೊಳಂಬವಾಡಿ ಬನವಾಸಿ ಪಾನುಂಗಲ್ಲು ಹಲಸಿಗೆ ಬೆಳುವಲ....ಬುಜಬಳ ವೀರಗಂಗ ಶನಿವಾರಸಿದ್ಧಿ ಗಿರಿದುರ್ಗಮಲ್ಲ ಚಲದಂಕರಾಮನಸಹಾಯಶೂರ ನಿಶ್ಶಂಕಪ್ರತಾಪ ಹೊಯ್ಸಳ ವೀರಬಲ್ಲಾಳ ದೇವರು ಎರಂಬರಗೆಯ ಕುಪ್ಪದಲು ಸುಕಸಂಕಥಾವಿನೋದದಿಂ ಪೃಥ್ವೀರಾಜ್ಯಂಗೆಯ್ಯುತ್ತಿರಲು" ಎಂಬ ವಿವರಣೆಯಿಂದ ವೀರಬಲ್ಲಾಳದೇವನ ಪ್ರಶಸ್ತಿಗಳು ಹಾಗೂ ಈತ ಎರಂಬರಗೆಯಲ್ಲಿ ಕೆಲವು ಕಾಲ ಬೀಡುಬಿಟ್ಟ ಸಂಗತಿ ವಿಶದವಾಗುತ್ತವೆ. ಆಗ ಈತನ ಮಹಾಪ್ರಧಾನನಾಗಿದ್ದ ಸರ್ವಾಧಿಕಾರಿ ಅಮರ್‌ಟನಲ ದಣ್ಣಾಯಕನು ತಾಜಿನಾಡು, ಹದಿನಾಡು ಮತ್ತು ಕುನಾಡುಗಳನ್ನು ಸಾತನೂರು ಕೇಂದ್ರದಿಂದ ರಾಜ್ಯವಾಳುತ್ತಿದ್ದ. ಈ ದಣ್ಣಾಯಕನ ಸೇವಕ ಕೊಮಣಕೇಶಿಯಣ ಹೆಗ್ಗಡೆಯ ಮಗ ಚಿಬ್ಬಿಲಹೆಗ್ಗಡೆ ಮಾಲಂಗಿಯ ಜನಾರ್ದನದೇವರ ನಂದಾದೀಪಕ್ಕೆಂದು ದಾನ ಮಾಡಿದ್ದನು.

ಎರಡನೆಯ ಬಲ್ಲಾಳನು ಕಡೆಯುಸಿರೆಳೆದದ್ದು ಟಿ. ನರಸೀಪುರ ತಾಲ್ಲೂಕಿನ ಕಲಿಯೂರಿನಲ್ಲಿ. ಇಲ್ಲಿನ ಮಾಲಂಗಿ ಮಾವಿನಹಳ್ಳಿ ಯುದ್ಧದಲ್ಲಿ ಕಾದುತ್ತ ಈತ ಮಡಿದುದರ ಸ್ಮಾರಕವಾಗಿ "ಕೀಲಕ ಸಂವತ್ಸರದ ಅಶ್ವಯಿಜ ಬ ೨ ಸು ಬಲ್ಲಾಳನು ಮಾಲುಂಗಿ ಮಾವಿನಹಳ್ಳಿಯ ಹುಯಲಲಿ ಕಾದಿ ಬಿದ್ದ ದಿನ" ಎಂದು ವೀರಗಲ್ಲನ್ನು ನೆಡಿಸಿದೆ. ಇದರ ಕಾಲ ಕ್ರಿ.ಶ. 1181 ಎಂದಿದೆ. ಆದರೆ ಎರಡನೇ ಬಲ್ಲಾಳನು ಕ್ರಿ.ಶ. 1220ರ ವರೆಗೆ ಅಧಿಕಾರದಲ್ಲಿದ್ದುದು ಸ್ಪಷ್ಟವಿರುವುದರಿಂದ ಮೇಲಿನ ಶಾಸನದ ಕಾಲ ಅನುಮಾನಾಸ್ಪದ.

* ತಲಕಾಡು 164

ಸರಸ್ವತಿ ಕಂಠಾಭರಣ ಎಂದು ಬಿರುದಾಂಕಿತನಾದ ಕವಿಯೊಬ್ಬ ಹೊಯ್ಸಳ ಬಲ್ಲಾಳ ಮತ್ತು ಇಮ್ಮಡಿ ನರಸಿಂಹನನ್ನು ತಲಕಾಡು 162 ಶಾಸನದಲ್ಲಿ ಪ್ರಶಂಸಿಸಿದ್ದಾನೆ. ಇಮ್ಮಡಿ ನರಸಿಂಹನ ಉತ್ತರಾಧಿಕಾರಿಯಾಗಿ ಬಂದವನು ವೀರಸೋಮೇಶ್ವರ. ತಲಕಾಡು 149 ರಲ್ಲಿ ಸೋಮೇಶ್ವರನನ್ನು ಉಲ್ಲೇಖಿಸುತ್ತ ಮಣವಿಲ್ ಗೋವಿಂದ ನಾಯಕನು ಕೀರ್ತಿನಾರಾಯಣದೇವರ ನಂದಾದೀಪಕ್ಕೆಂದು 7 ಗದ್ಯಾಣಗಳನ್ನು ಕ್ರಿ.ಶ. 1239 ರಲ್ಲಿ ದಾನವಾಗಿತ್ತುದನ್ನು ಹೇಳಿದೆ.

ಮೂರನೆಯ ವೀರನರಸಿಂಹದೇವನು ಕ್ರಿ.ಶ. 1256 ರಲ್ಲಿ ಪಟ್ಟಕ್ಕೆ ಬಂದ. ಈತನ ಮಹಾಪ್ರಧಾನಿಗಳಾದ ಸೋಮಯ ದಂಡನಾಯಕ ಮತ್ತು ಪೆರುಮಾಳ ದಂಡನಾಯಕ ಆಡಳಿತದಲ್ಲಿ ದಕ್ಷರು. ಸೋಮಯ ದಂಡನಾಯಕನು ಹೆಮ್ಮೆಯ ದಂಡನಾಯಕ ಮತ್ತು ರೇವಲೆಯ ಪುತ್ರನೆಂಬುದು ಸೋಮನಾಥಪುರ 96ನೆಯ ಶಾಸನದಿಂದ ಸ್ಪಷ್ಟವಾಗುತ್ತದೆ. ಈ ಶಾಸನದಲ್ಲಿ ಈತನನ್ನು "ಗಾಯಿಗೋವಾಳ ಗಣ್ಡಪೆಣ್ಡಾರವ ಮಂಡಳಿಕಜೂಬ ಉದ್ದಣ್ಡಮಂಡಳಿಕರಗಣ್ಡ ದಂಡನಾಥದೇವೇಂದ್ರ ಅಸಿವರ ಸ್ವಯಂಭು ಖಡ್ಗತ್ರಿನೇತ್ರ ಅತಿವಿಷಮಹಯಾರೂಢ ಪ್ರೌಢರೇಖಾರೇವಂತ ಪರಬಳ ಕೃತಾಂತ ಸ್ವೀಕಾರ ಸಾರೋದಯ ಅನ್ನದಾನ ವಿನೋದ ಸುವರ್ಣದಾನಶೂರ" ಎಂದು ಸ್ತುತಿಸಲಾಗಿದೆ.

ಸೋಮಯದಣ್ಣಾಯಕನು ಟಿ. ನರಸೀಪುರ ತಾಲ್ಲೂಕಿಗೆ ನೀಡಿದ ಮಹತ್ವದ ಕೊಡುಗೆಯೆಂದರೆ ತನ್ನ ಹೆಸರಿನಲ್ಲಿ ನಿರ್ಮಿಸಿದ ಅಗ್ರಹಾರ ಸೋಮನಾಥಪುರ. ಇಲ್ಲಿ ಕೇಶವದೇವಾಲಯವನ್ನು ಕಟ್ಟಿಸಿ ಸೋಮನಾಥಪುರವನ್ನು ಒಂದು ಐತಿಹಾಸಿಕ ತಾಣವಾಗಿಸಿದ. ಸೋಮನಾಥಪುರ 88ನೆಯ ಶಾಸನ ಇವರ ನಿರ್ಮಾಣವನ್ನು ಕುರಿತಂತೆ ಅಮೂಲ್ಯ ಮಾಹಿತಿ ಒದಗಿಸುತ್ತದೆ. ಶಾಸನದ ಆರಂಭದಲ್ಲಿ ಹೊಯ್ಸಳ ದೊರೆಗಳ ವಂಶಾವಳಿಯನ್ನು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ದೀರ್ಘವಾಗಿ ಹೇಳಿದೆ. ಅನಂತರ ಕೇಶವದೇವರ ಅಂಗಭೋಗ ರಂಗಭೋಗ ನಿತ್ಯೋತ್ಸವ ನೈಮಿತ್ತಿಕೋತ್ಸವಗಳಿಗೆಂದು ನಾರಸಿಂಹನು 3000 ಗದ್ಯಾಣವನ್ನೂ ಸ್ಥಲವನ್ನೂ ನೀಡಿದುದನ್ನು ಪಡೆದು ಸೋಮಯದಣ್ಣಾಯಕನು ಧಾರಾಪೂರ್ವಕವಾಗಿ ಕೊಟ್ಟ ಸಂಗತಿ ವರ್ಣಿತವಾಗಿದೆ. ಸೋಮಯದಣ್ಣಾಯಕನ ಅಳಿಯಂದಿರಾದ ಮಲ್ಲಿದೇವ ದಣ್ಣಾಯಕ ಮತ್ತು ಚಿಕ್ಕಕೇತಯದಣ್ಣಾಯಕರುಗಳು ಆ ಸ್ಥಲವನ್ನು ವೃತ್ತಿಗಳನ್ನಾಗಿ ವಿಭಾಗಿಸಿದ ವಿವರಗಳು ಇಲ್ಲಿ ದೊರೆಯುತ್ತವೆ.

ವೀರನರಸಿಂಹನ ಆಳ್ವಿಕೆಯಲ್ಲಿ ಈತನ ಮಂತ್ರಿ, ಮೂಗೂರು ಪ್ರಭುಗಳು ಮತ್ತು ಪ್ರಜೆಗಳೆಲ್ಲರು ಸೇರಿ ಮೂಗೂರಿನ ದೇಶನಾಥದೇವರಿಗೆ ಕ್ರಿ.ಶ. 1279 ರಲ್ಲಿ ದತ್ತಿ ಬಿಟ್ಟಿದ್ದರು.[1] ಮೂರನೆಯ ನರಸಿಂಹನು ಆಚಾರ್ಯರು ನಂಬಿಯರು ಹಾಗೂ ವೈಷ್ಣವರಿಗೆ ಕ್ರಿ.ಶ. 1281 ರಲ್ಲಿ ಶಾಸನಪತ್ರವನ್ನು ಬರೆದುಕೊಟ್ಟ ಸಂಗತಿ ಸೋಮ

[1] ಮೂಗೂರು 267

ನಾಥಪುರ 91ನೆಯ ಶಾಸನದಿಂದ ತಿಳಿದುಬರುತ್ತದೆ. ಆ ಪ್ರಕಾರ ಆರು ತತ್ತಿನ ಒಳಗಣ ಬಂಡೂರತತ್ತಿನ 14 ವೃತ್ತಿಹಳ್ಳಿಗಳ ಕೊಡಗಿಯ ತೋಟ, ಹಾದರವಾಗಿಲು ಗ್ರಾಮ ಹೊಳೆತಡಿಯ ಕಾಲುವೆಯಲ್ಲಿ ದೇವರಗದ್ದೆ ಈ ಸ್ಥಳಗಳನ್ನು ಆಚಾರ್ಯರು ವೈಷ್ಣವರು ನಂಬಿಯರುಗಳು ತಾವೇ ಅನುಭವಿಸಿಕೊಂಡು ಸಿದ್ಧಾಯದ ಕಡೆಗೆ 1060 ಗದ್ಯಾಣ ವನ್ನು ನೀಡಿ ದೇವರ ಅಮೃತಪಡಿಗೆ ಬತ್ತವನ್ನು ಕೊಡಬೇಕೆಂದು ತೀರ್ಮಾನವಾಯಿತು.

ವಿಷ್ಣುದೇವ ಮತ್ತು ಮಂಚಾಂಬಿಕೆಯರ ಮಗನಾದ ಪೆರುಮಾಳುದೇವ ದಣ್ಣಾಯಕನು ಈಗಾಗಲೆ ನೋಡಿರುವಂತೆ ಮೂರನೆಯ ನರಸಿಂಹನ ಮಂತ್ರಿ. ಈತ ಆಲುಗೋಡು ಗ್ರಾಮದಲ್ಲಿ ಕೇಶವದೇವಾಲಯದ ರಂಗಮಂಟಪವನ್ನೂ ಸಭಾಮಂಟಪ ವನ್ನೂ ನಿರ್ಮಿಸಿದ ಸಂಗತಿ ಕ್ರಿ.ಶ. 1290 ರ ಟಿ. ನರಸೀಪುರ 7 ನೆಯ ಶಾಸನದಿಂದ ತಿಳಿದು ಬರುತ್ತದೆ. ಆಲುಗೋಡು ಕೇಶವದೇವಾಲಯದ ಕಾರಣದಿಂದ ಆ ಊರಿಗೆ ಸರ್ವಜ್ಞ ಪ್ರಸನ್ನ ಕೇಶವಪುರ ಎಂಬ ಪರ್ಯಾಯನಾಮವಿದ್ದಿತು. ಹೊಯ್ಸಳರ ಬಿರುದುಗಳಾದ ಮಲೆಪರೊಳುಗಂಡ, ಗಂಡಭೇರುಂಡ, ಕದನಪ್ರಚಂಡನಸಹಾಯ ಶೂರನೇಕಾಂಗವೀರ, ಶನಿವಾರಸಿದ್ಧಿ, ಗಿರಿದುರ್ಗಮಲ್ಲ, ಪಾಂಡ್ಯರಾಜಸಮುದ್ಧರಣ ಮೊದಲಾದವು ಪ್ರಸ್ತುತ ಶಾಸನದಲ್ಲಿ ಧಾರಾಳವಾಗಿ ಬಳಕೆಯಾಗಿವೆ.

ಹೊಯ್ಸಳರು ಈ ಪ್ರಾಂತದ ಜನತೆಯ ಶಿಕ್ಷಣಕ್ಕೆ ಆದ್ಯತೆ ನೀಡಿದ್ದರು. ತಡಿಮಾಲಿಂಗಿ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಮಹಾಪ್ರಧಾನಿ ಪೆರುಮಾಳು ದಣ್ಣಾಯಕನು ಮಾಲಿಂಗಿಯಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದ್ದ ವಿವರಗಳು ಕ್ರಿ.ಶ. 1290 ರ ತಡಿಮಾಲಿಂಗಿ 238 ನೆಯ ಶಾಸನದಲ್ಲಿ ಲಭ್ಯವಾಗಿವೆ. ಈತ ಪಾಠಶಾಲೆಗೆಂದು ಸೂಕ್ತ ನಿವೇಶನವನ್ನು ಊರಿನ ಮಹಾಜನತೆ ಹಾಗೂ ದೇವಪ್ಪ ಎಂಬಾತನಿಂದ ಖರೀದಿಸಿದ್ದ. ನಾಗರಿ, ಕನ್ನಡ, ತಮಿಳು, ಆರ್ಯಭಾಷೆಗಳನ್ನು ಕಲಿಸುವ ಉಪಾಧ್ಯಾಯರಿಗೆ ವಾರ್ಷಿಕ 6 ಗದ್ಯಾಣ, ಋಗ್ವೇದವನ್ನು ಓದಿಸುವ ಉಪಾಧ್ಯಾಯರಿಗೆ 6 ಗದ್ಯಾಣ ಮತ್ತು ವಾಸದ ಮನೆಯ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ಈ ಮಾಲಿಂಗಿಯಾದರೊ ಆ ಕಾಲದಲ್ಲಿ ಶ್ರೀರಂಗಪುರ ಅಗ್ರಹಾರ ಎಂದು ಪ್ರಸಿದ್ಧಿಯಾಗಿತ್ತು.

ಮೂರನೆಯ ನರಸಿಂಹನು ಕ್ರಿ.ಶ. 1291 ರ ವರೆಗೆ ರಾಜ್ಯವಾಳಿದ. ಈತನ ಉತ್ತರಾಧಿಕಾರಿಯಾಗಿ ಬಂದ ಮೂರನೆಯ ಬಲ್ಲಾಳನು ಕ್ರಿ.ಶ. 1292–1342ರ ವರೆಗೆ ಅಧಿಕಾರದಲ್ಲಿದ್ದ. ಈತನ ಮಹಾಪ್ರಧಾನ ಲಕುಮಯ್ಯ ಎಂಬುವನು ಸರ್ವಾಧಿಕಾರಿ, ಸೇನಾಧಿಪತಿ ಹೀಗೆ ಹಲವು ಹುದ್ದೆಗಳನ್ನು ಹೊಂದಿದ್ದ. ಕ್ರಿ.ಶ. 1303 ರ ಕುರುಬೂರು 287ನೆಯ ಶಾಸನದಲ್ಲಿ ಲಕುಮಯ್ಯನ ನಿರೂಪದ ಮೇರೆಗೆ ಹೆಗ್ಗಡೆ ತೀಕಯ್ಯ ಕುರುಬೂರ ಹೆಗ್ಗೇಶ್ವರದೇವರ 'ನಂದಾದೀವಿಗೆ ಆಚಂದ್ರಾರ್ಕ ತಾರಂಬರ ನಡವಂತೆ ಗಾಣದ ಸುಂಕವನ್ನು ಧಾರಾಪೂರ್ವಕವಾಗಿ' ಮಾಡಿಕೊಟ್ಟುದನ್ನು ತಿಳಿಸಲಾಗಿದೆ.

ಮುಮ್ಮಡಿ ಬಲ್ಲಾಳನ ಬಳಿಕ ಹೊಯ್ಸಳ ಸಾಮ್ರಾಜ್ಯ ಪತನದ ಹಾದಿ ಹಿಡಿಯಿತು. ಮುಂದೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವವರೆಗೆ ಟಿ. ನರಸೀಪುರ ತಾಲ್ಲೂಕು ಸ್ಥಳೀಯ ಪ್ರಭುಗಳ ಆಡಳಿತಕ್ಕೆ ಕೆಲವು ಕಾಲವಾದರೂ ಒಳಪಟ್ಟಿತ್ತೆಂದು ಊಹಿಸಬಹುದು. ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದಲ್ಲಿ ವಿಜಯನಗರದ ಅರಸರು ಬಂದರು. ಇವರು ದಕ್ಷಿಣದ ಬದಲು ಉತ್ತರ ಭಾರತದ ಕಡೆಗೆ ಆಕ್ರಮಣ ಮಾಡಿದ್ದರೆ ಪ್ರಾಯಃ ಇತಿಹಾಸದ ಗತಿಯೆ ಬದಲಾಗುತ್ತಿತ್ತು.

ವಿಜಯನಗರದ ಅರಸರಿಗೆ ಸಂಬಧಿಸಿದಂತೆ ಈ ತಾಲ್ಲೂಕಿನಲ್ಲಿ ದೊರೆಯುವ ಪ್ರಾಚೀನ ಶಾಸನವೆಂದರೆ ಎರಡನೆಯ ಹರಿಹರರಾಯನದು. ಕ್ರಿ. ಶ. 1392ರ ಬೈರಾಪುರ 30ನೆಯ ಶಾಸನದಲ್ಲಿ "ಶ್ರೀ ವೀರಹರಿಹರರಾಯರ ಧರ್ಮೋದ್ಧಾರಕ ತಿರಮಕೂಡಲನಾಥವೊಡೆಯ" ಎಂದು ವರ್ಣಿಸಿರುವುದರಿಂದ ತಿರಮಕೂಡಲು ನರಸಿಂಹ ಈತನಿಗೆ ಆರಾಧ್ಯದೈವವಾಗಿರಬಹುದು. ಟಿ. ನರಸೀಪುರ 17ನೆಯ ತಾಮ್ರ ಶಾಸನ ಕ್ರಿ. ಶ. 1397ರ ಕಾಲದ್ದಾಗಿದ್ದು ಕೊಳತೂರು ಶಾಸನ ಎಂದೇ ಖ್ಯಾತವಾಗಿದೆ. ವಿಜಯನಗರದಲ್ಲಿ ಎರಡನೆಯ ಹರಿಹರರಾಯನು ಆಳುತ್ತಿದ್ದಾಗ ಆತನ ಸೋದರ ಬುಕ್ಕರಾಜನ ಮೊಮ್ಮಗ ಮಲ್ಲಿನಾಥನ ಮಗ ನಾರಾಯಣ ಒಡೆಯನು ಕೊಳತೂರು ಗ್ರಾಮವನ್ನು ತನ್ನ ರಾಜನ ಹೆಸರಿನಲ್ಲಿ 'ಪ್ರತಾಪ ಹರಿಹರಪುರ' ಎಂದು ಅಗ್ರಹಾರವನ್ನಾಗಿ ಮಾಡಿದನು. "ನಮ್ಮ ತಂದೆ ಪ್ರತಾಪ ಹರಿಹರ ಮಹಾರಾಯರಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯಹತಾಗಿ ಚನ್ನಪಟ್ಟದ ಬಳಿಲಗೊಳಗಣ" ಕೊಳತೂರು ಅಗ್ರಹಾರವನ್ನು 36 ವೃತ್ತಿಗಳನ್ನಾಗಿ ವಿಂಗಡಿಸಿ 39 ಬ್ರಾಹ್ಮಣರಿಗೆ ಕಾವೇರಿ ಕಪಿಲಾ ಸಂಗಮದ ಅಗಸ್ತ್ಯ ಸನ್ನಿಧಿಯಲ್ಲಿ ದಾನವಾಗಿತ್ತನು. ಈ ನಾರಾಯಣ ಒಡೆಯನು ಟಿ. ನರಸೀಪುರ ಭಾಗದಲ್ಲಿ ಸ್ಥಳೀಯ ಪ್ರಭುವಿನ ರೀತಿ ಕಾರ್ಯನಿರ್ವಹಿಸಿರಬಹುದು. ಇದೇ ಹರಿಹರರಾಯನ ಆಳ್ವಿಕೆಯಲ್ಲಿ ಹೆಮ್ಮಿಗೆ ಕೂಡ ಹರಿಹರರಾಜೇಂದ್ರಪುರ ಎಂಬ ಹೆಸರು ತಳೆದಿತ್ತು. ಈತ ಹೆಮ್ಮಿಗೆಯನ್ನು ಹಿರಿಯಮಾಧವಪುರದ ವರದರಾಜಭಟ್ಟನಿಗೆ ಕ್ರಿ. ಶ. 1397ರಲ್ಲಿ ದತ್ತಿಬಿಟ್ಟಿದ್ದನು.[1] ಅಂತೆಯೆ ಟಿ. ನರಸೀಪುರ ತಾಲ್ಲೂಕಿನ ಉತುವೆಹಳ್ಳಿ ಇದೇ ಅವಧಿಯಲ್ಲಿ ಪ್ರತಾಪ ಹರಿಹರಪುರ ಎನಿಸಿದ್ದುದರ ಸೂಚನೆ ಎಡದೊರೆ 35ನೆಯ ಶಾಸನದಲ್ಲಿ ದೊರೆಯುತ್ತದೆ

ವಿಜಯನಗರದ ಅರಸರಲ್ಲಿ ಪ್ರಖ್ಯಾತನಾದ ಕೃಷ್ಣದೇವರಾಯನ (ಕ್ರಿ. ಶ. 1509-1529) ಮಂತ್ರಿ ಸಾಳುವ ಗೋವಿಂದರಾಜನಿಗೆ ಸಂಬಂಧಿಸಿದ ಕೆಲವು ಶಾಸನಗಳು ಟಿ. ನರಸೀಪುರ ತಾಲ್ಲೂಕಿನಲ್ಲಿ ಕಂಡುಬರುತ್ತವೆ. ಈತ ಕೌಂಡಿನ್ಯಗೋತ್ರ, ಆಪಸ್ತಂಭಸೂತ್ರ, ಯಜುಶ್ಶಾಖೆಯ ರಾಚಿರಾಜನ ಪುತ್ರ. ಗುಂಜಾ ನರಸಿಂಹ ದೇವರ ಭಕ್ತ. ಗೋವಿಂದರಾಜ ತನ್ನ ಒಡೆಯನಾದ ಕೃಷ್ಣದೇವರಾಯನಿಗೆ ಭಕ್ತಿ ಭಾವದಿಂದಿದ್ದು ನಿಷ್ಠೆಯನ್ನು ಹೊಂದಿದ್ದನು. ರಾಜನ ಕೃಪೆಯಿಂದ ತನಗೆ ನಾಯಕತನ

1. ಹೆಮ್ಮಿಗೆ 256

ದೊರೆತುದಕ್ಕೆ ಮೂಗೂರು ಸ್ಥಳದ ಹೊಸಪುರವನ್ನು ತಿರಮಕೂಡಲಿನ ಅಗಸ್ತ್ಯೇಶ್ವರ ದೇವರ ಅಮೃತಪಡಿಗೆಂದು ಕ್ರಿ. ಶ. 1519ರಲ್ಲಿ ದತ್ತಿಬಿಟ್ಟನು.[1] ರಾಯನಿಗೆ ಪುಣ್ಯವಾಗಬೇಕೆಂಬ ಆಶಯದಿಂದ ಮರಡೀಪುರವನ್ನು ಅಗ್ರಹಾರವನ್ನಾಗಿ ಮಾಡಿ ಕೃಷ್ಣರಾಯಪುರ ಎಂದು ಕ್ರಿ. ಶ. 1528ರಲ್ಲಿ ನಾಮಾಂತರಗೊಳಿಸಿದ.[2] ಕೃಷ್ಣದೇವರಾಯನ ಆಸ್ಥಾನದ ವರ್ತಕ ಶರಣಪ್ಪಸೆಟ್ಟಿ ತಿರುಮಕೂಡಲಿನ ಅಗಸ್ತ್ಯೇಶ್ವರ ದೇವಾಲಯದ ಆವರಣದಲ್ಲಿ ಪಾರ್ವತಿಗುಡಿಯನ್ನು ನಿರ್ಮಿಸಿದಾಗ ಈತನಿಗೆ ಸಾಳುವ ಗೋವಿಂದ ರಾಜನು ಕೊಳ್ಳೇಗಾಲ ಸೀಮೆಗೆ ಸೇರಿದ ಗದ್ದೆಯನ್ನು ಕೊಡುಗೆಯಾಗಿತ್ತನು.[3] ಉಳಿದಂತೆಯೂ ಗೋವಿಂದರಾಜನು ಗುಂಜಾ ನರಸಿಂಹದೇವರಿಗೆ ಹಲವು ದತ್ತಿಗಳನ್ನು ನೀಡಿದ್ದನು.[4]

ಕೃಷ್ಣರಾಯನ ನಾಮದ ಮುದ್ರೆ ಟಿ. ನರಸೀಪುರ ತಾಲ್ಲೂಕಿನ ಅನೇಕ ಸ್ಥಳನಾಮಗಳಲ್ಲಿ ಕಾಣಬಹುದು. ಕಲಿಯೂರು ಕೆಲವು ಕಾಲ ಕೃಷ್ಣಾಪುರ ಎಂಬ ಹೆಸರು ಪಡೆದಿತ್ತು. ಸಾಳುವ ಗೋವಿಂದರಾಜನು ತನ್ನ ರಾಜನಿಗೆ ಧರ್ಮವಾಗಬೇಕೆಂದು ಕ್ರಿ. ಶ. 1521ರಲ್ಲಿ ಹೊಯ್ಸಳ ದೇಶದ ಕಲಿಯೂರನ್ನು 37 ವೃತ್ತಿಗಳನ್ನಾಗಿ ವಿಂಗಡಿಸಿ ನಾನಾಗೋತ್ರದ ಬ್ರಾಹ್ಮಣರಿಗೆ ಧಾರೆಯೆರೆದನು.[5] ಈ ಬಗ್ಗೆ ಹೊಯ್ಸಳ ಬಲ್ಲಾಳರಾಯನು ಮೊದಲೇ ಮಾಡಿದ ಶಾಸನ ಖಿಲವಾಗಿತ್ತೆಂದು ತಿಳಿದುಬರುತ್ತದೆ. ತಾಯೂರುಸ್ಥಲ ಉಮ್ಮತ್ತೂರು ಚಾವಡಿಗೆ ಸೇರಿದ ಹೆಮ್ಮಿಗೆಯನ್ನು ಕೃಷ್ಣದೇವ ರಾಯನು ಕ್ರಿ. ಶ. 1526ರಲ್ಲಿ ಹಿರಿಯ ಮಾಧವಪುರದ ಲಕ್ಷ್ಮೀನಾಥಭಟ್ಟನಿಗೆ ದತ್ತಿ ನೀಡಿದ್ದನು. ಈತ ಹೆಮ್ಮಿಗೆ 256ರಲ್ಲಿ ಉಕ್ತನಾದ ವರದರಾಜಭಟ್ಟನ ಅನ್ವಯವೆ ಇರಬೇಕು.

ಕೃಷ್ಣದೇವರಾಯನನ್ನು ಆಳಿದುಳಿದ ಹೊಯ್ಸಳ ರಾಜರು ತಮ್ಮ ಚಕ್ರವರ್ತಿಯೆಂದು ಒಪ್ಪಿಕೊಂಡಿದ್ದರು. ವಿಜಯನಗರದ ಅರಸರ ಕಾಲದಲ್ಲಿ ತಲಕಾಡಿನ ಸುತ್ತಮುತ್ತಲ ಪ್ರದೇಶ 'ಹೊಯ್ಸಳ ನಾಡು' ಎಂದು ತನ್ನ ಪೂರ್ವದ ಹೆಸರನ್ನೆ ಉಳಿಸಿಕೊಂಡು ಬಂದಿತ್ತು. ರಾಜಾವಳಿ ಕಥಾಸಾರದಲ್ಲಿ ಬರುವ "ಬಲ್ಲಾಳ ಸಂತತಿಯರಸುಗಳ್ ಕೆಲಂಬರುತ್ತರಕ್ಕೆ ಪೋಗಿ ವಿಜಯನಗರದೊಳಿರ್ದರ್ ಕೆಲರ್ ಕಾರಗಹಳ್ಳಿ ಅರಿಕುಠಾರ ತಳಕಾಡು ಮೂಗೂರು ಮೊದಲಾದ ಗ್ರಾಮಂಗಳೊಳಿರ್ದರ್" ಎಂಬ ಮಾತು ಕೂಡ ಮೇಲಿನ ಹೇಳಿಕೆಗೆ ಆಧಾರ. ಜೊತೆಗೆ ಹೊಯ್ಸಳ ಸಂತತಿಯವರು ಮತ್ತು ಅವರ ದಂಡನಾಯಕರು ಕೆಲವೆಡೆ ಸ್ಥಳೀಯ ಪ್ರಭುಗಳಾಗಿದ್ದರೆಂದು ತೋರುತ್ತದೆ.

ಬೈರಾಪುರ 32 ಮತ್ತು ಬನ್ನೂರಿನ 55ನೆಯ ಶಾಸನಗಳಲ್ಲಿ ವಿಜಯನಗರದ ಅಚ್ಯುತರಾಯನ ಉಲ್ಲೇಖ ದೊರೆಯುತ್ತದೆ. ಈತನ ಆಳ್ವಿಕೆಯ ಅವಧಿಯಲ್ಲಿ ಲಿಂಗಣ್ಣ ಎಂಬ ವೀರನು ಮಡಿದಾಗ ಕ್ರಿ. ಶ. 1534ರಲ್ಲಿ ಬೈರಾಪುರದಲ್ಲಿ ವೀರಗಲ್ಲನ್ನು

1. ಹೊಸಪುರ 289 2. ಮರಡೀಪುರ 132, 133 3. ತಿ. ನರಸೀಪುರ 26
4. ತಿ. ನರಸೀಪುರ 2 5. ಕಲಿಯೂರು 225

ನಡೆಸಲಾಯಿತು.[1] ಅಚ್ಯುತರಾಯನ ಮಂತ್ರಿ ವರದಪ್ಪಣ್ಣನು ಟಿ. ನರಸೀಪುರ ಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈತನ ಕಾರ್ಯಕರ್ತ ಕನ್ನಪ್ಪ ನಾಯಕನು ಬನ್ನೂರಿನ ಮುಖ್ಯನಾಗಿದ್ದನೆಂದು ತೋರುತ್ತದೆ ಕನ್ನಪ್ಪನಾಯಕನ ಮಗ ತಮ್ಮನಾಯಕನು "ವಹ್ನಿಪುರಾಧೀಶ್ವರ ಶ್ರೀ ಹನುಮಂತೇಶ್ವರ ದೇವರಿಗೆ ಹೊಸದಾಗಿ ದಿವ್ಯರಥವನು ಕಟ್ಟಿಸಿ ಉಮಾಸ್ಕಂಧೇಶ್ವರ ವಿಘ್ನೇಶ್ವರ ದೇವರು ಮುಂತಾದ ಸೌಮ್ಯ ವಿಗ್ರಹಗಳನ್ನು ಹೊಸದಾಗಿ ಬಿಜಮಾಡಿಸಿ" ಪ್ರತಿಷ್ಠಾಪಿಸಿದ್ದನು. ಈ ದೇವರ ರಥೋತ್ಸವ ಆಚಂದ್ರಾರ್ಕವಾಗಿ ನಡೆಯುವಂತೆ ಕಾವೇರಿ ಕಾಲುವೆ ಕೆಳಗಿನ ಗದ್ದೆ ತೋಟ ಅಡಿಕೆ ಮರಗಳನ್ನು ಕೊಡುಗೆಯಾಗಿತ್ತನು. ತಮ್ಮನಾಯಕನ 'ಮದವಳಿಗೆ' ಅಂದರೆ ಪತಿ ತಿಪ್ಪಮ್ಮ ಬೈರಾಪುರದ ಹನುಮಂತೇಶ್ವರ ದೇವರಿಗೆ ನಿತ್ಯವೂ ಮೊಸರನ್ನದ ನೈವೇದ್ಯ ನಡೆಯುವಂತೆ 7 ಕಂಡುಗ ಗದ್ದೆ, 900 ಅಡಕೆ ಮರಗಳನ್ನು ಕೊಟ್ಟಿದ್ದಳು.

ಕ್ರಿ. ಶ 1543ರಲ್ಲಿ ವಿಜಯನಗರ ಸಿಂಹಾಸನಕ್ಕೆ ಪದಾರ್ಪಣೆ ಮಾಡಿದ ಸದಾಶಿವರಾಯನು 1597ರ ವರೆಗೆ ರಾಜ್ಯವಾಳಿದ. ಇವನು ಟಿ. ನರಸೀಪುರ ಭಾಗದ ಮೇಲ್ವಿಚಾರಣೆಗೆಂದು ಆರವಟಿಯ ಆಪಸ್ತಂಭಸೂತ್ರದ ಆತ್ರೇಯಗೋತ್ರದ ಬುಕ್ಕ ರಾಜನ ಸಂತತಿ ಅಹೋಬಳರಾಜ ಅರಸನನ್ನು ನಿಯಮಿಸಿದ್ದನು. ಈತ ಸೋಮನಾಥ ಪುರದ "ದೇವರು ಬ್ರಾಹ್ಮರು ಅರಮನೆಗೆ ತೆತ್ತುಬಹ ಸಂಬಳ ಸರತ್ತಿ ಮೂವತ್ತು ವರಹಂನು" ರದ್ದುಗೊಳಿಸಿದ ಪ್ರಸಂಗ ಕ್ರಿ. ಶ. 1550ರ ಸೋಮನಾಥಪುರ 94ನೆಯ ಶಾಸನದಿಂದ ವ್ಯಕ್ತವಾಗುತ್ತದೆ. ಒಟ್ಟಾರೆ ಟಿ. ನರಸೀಪುರ ತಾಲ್ಲೂಕಿನಲ್ಲಿ ವಿಜಯ ನಗರದ ರಾಜರ ಪೈಕಿ ಕೃಷ್ಣದೇವರಾಯನ ಶಾಸನವೆ ಹೆಚ್ಚಾಗಿ ಕಾಣಿಸಿಕೊಂಡಿರುವುದು ಗಮನಾರ್ಹ.

ವಿಜಯನಗರದ ಅಧಿಪತ್ಯವನ್ನು ಒಪ್ಪಿಕೊಂಡಂಥ ಮೈಸೂರು ಅರಸರು ಅವರ ಮಾಂಡಲಿಕರಾಗಿಯೂ ಸ್ವತಂತ್ರರಾಜರ ಸ್ಥಾನಮಾನ ಪಡೆದಿದ್ದರು. ವಿಜಯನಗರದಲ್ಲಿ ವೆಂಕಟಪತಿ ಮಹಾರಾಯನು ಆಳುತ್ತಿದ್ದಾಗ ಮೈಸೂರಿನಲ್ಲಿ ರಾಜಒಡೆಯನು ಸಿಂಹಾಸನವನ್ನಲಂಕರಿಸಿದ್ದನು. ರಾಜಒಡೆಯ 1610ರಲ್ಲಿ ಪಟ್ಟಕ್ಕೆ ಬಂದನು. ಮೂಗೂರು, ಕಳಲೆ ಮೊದಲಾದ ಪಾಳೆಯಗಾರರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದ್ದನು. ವಿಜಯನಗರದ ವೆಂಕಟಪತಿರಾಯನು ಟಿ. ನರಸೀಪುರ ತಾಲ್ಲೂಕಿನ ಬನ್ನೂರು ಸ್ಥಳವನ್ನು ರಾಜಒಡೆಯನಿಗೆ ಉಂಬಳಿಯಾಗಿ ನೀಡಿದ್ದನು. ಆದುದರಿಂದ ಈ ಭಾಗವೆಲ್ಲ ಈತನ ವಶದಲ್ಲಿತ್ತು. ಕ್ರಿ. ಶ. 1615ರಲ್ಲಿ ರಾಜಒಡೆಯನು ಬನ್ನೂರಿನ ರಾಮಚಂದ್ರ ದೇವಾಲಯದ ಅರ್ಚನಾವೃತ್ತಿ ಅಂಗರಂಗಭೋಗ ಪಡಿತರಕ್ಕೆಂದು ಜೀವಿನ ಹಳ್ಳಿಯನ್ನು ದತ್ತಿ ನೀಡಿದ ಸಂಗತಿ ಬನ್ನೂರು 50 ಶಾಸನ ದಿಂದ ತಿಳಿದುಬರುತ್ತದೆ.

1. ಬೈರಾಪುರ 32

ಅರವೀಡು ಕುಟುಂಬದ ರಾಮದೇವ ಮಹಾರಾಯನು ಘನಗಿರಿ ಪೆನುಗೊಂಡೆಯಿಂದ ಆಳುತಿದ್ದಾಗ ರಾಜಒಡೆಯನ ಮೊಮ್ಮಗ ನರಸರಾಜ ಒಡೆಯನ ಮಗ ಚಾಮರಾಜ ಒಡೆಯನು ಮೈಸೂರು ಸಿಂಹಾಸನಾಧೀಶ್ವರನಾಗಿದ್ದನು ಈತನಿಗೆ ಮೂಗೂರು ಸ್ಥಳಕ್ಕೆ ಸೇರಿದ ನವಿಲೂರು ಆಲದೂರು ಮುಂತಾದವುಗಳು ವೆಂಕಟಪತಿ ರಾಯನಿಂದ ಕಾಣಾಂಚಿಯಾಗಿ ಲಭಿಸಿತ್ತು. ಈತ ಕ್ರಿ. ಶ. 1622ರಲ್ಲಿ ಈ ಎರಡು ಗ್ರಾಮಗಳನ್ನು ಒಂದುಗೂಡಿಸಿ ಚಾಮರಾಜ ಸಮುದ್ರ ಎಂಬ ಅಗ್ರಹಾರವನ್ನು ನಿರ್ಮಿಸಿ 41 ವೃತ್ತಿಯಾಗಿ ವಿಂಗಡಿಸಿದನು. ಅವುಗಳಲ್ಲಿ ಒಂದು ವೃತ್ತಿಯನ್ನು ಗುಂಜಾ ನರಸಿಂಹಸ್ವಾಮಿಗೆ ಅರ್ಪಿಸಿ ಉಳಿದ 40 ವೃತ್ತಿಗಳನ್ನು 33 ಬ್ರಾಹ್ಮಣರಿಗೆ ಹಂಚಿದನು.[1] ಈತನ ಕಾರ್ಯಕರ್ತನಾಗಿದ್ದ ಕೆಂಪಒಡೆಯನ ಮಗ ಬಸವಲಿಂಗಣ್ಣನು ತಲಕಾಡಿನ ವೈದ್ಯೇಶ್ವರ ದೇವಾಲಯದ ಪಶ್ಚಿಮಕ್ಕೆ ಪಂಚಲಿಂಗಗಳನ್ನು ಕ್ರಿ. ಶ. 1633ರಲ್ಲಿ ಪ್ರತಿಷ್ಠಾಪಿಸಿ ತಲಕಾಡಿನಲ್ಲಿ 5 ಕಂಡುಗ ಗದ್ದೆ ಪೂರಿಗಾಲಿಯಲ್ಲಿ 10, ವರಹ ಭೂಮಿಯನ್ನು ದತ್ತಿ ನೀಡಿದನು.

ಚಾಮರಾಜ ಒಡೆಯನ ಮೊಮ್ಮಗ, ದೇವರಾಜನ ಮಗ ದೇವರಾಜನು ತಲಕಾಡುಸ್ಥಳಕ್ಕೆ ಸೇರಿದ ಬಿಟ್ಟಹಳ್ಳಿಯನ್ನು ಕ್ರಿ.ಶ. 1673ರಲ್ಲಿ ಗೆದ್ದುಕೊಂಡ. ಹೀಗೆ ವಿಕ್ರಮಾರ್ಜಿತವಾಗಿ ಬಂದ ಈ ಊರನ್ನು ದೇವರಾಜಪುರ ಎಂದು ಪುನರ್ನಾಮಕರಣ ಮಾಡಿದ್ದ ಸಂಗತಿ ಬಿಟ್ಟದಹಳ್ಳಿ 139ನೆಯ ಶಾಸನದಿಂದ ವಿಶದವಾಗುತ್ತದೆ. ದೇವರಾಜನು ಮಲ್ಲಿಕಾರ್ಜುನದೇವರ ಅಮೃತಪಡಿ ದೀಪಾರಾಧನೆ ಸೇವೆಗೆಂದು ಈ ಬಿಟ್ಟಹಳ್ಳಿಯನ್ನು ದತ್ತಿಬಿಟ್ಟಿದ್ದನು.

ಮೈಸೂರು ದೊರೆಗಳಲ್ಲಿ ಪ್ರಸಿದ್ಧನಾದ ಕಂಠೀರವ ನರಸರಾಜ ಒಡೆಯನು ಸೋಮನಾಥಪುರದಲ್ಲಿ ಪಟ್ಟಾಭಿರಾಮದೇವರ ಪ್ರತಿಷ್ಠೆ ನಡೆದಾಗ ಉಕ್ಕಲ್ಗೆರೆ ಗ್ರಾಮವನ್ನು ಕ್ರಿ.ಶ. 1676ರಲ್ಲಿ ದಾನಮಾಡಿದ್ದನು.[3]

ಚಿಕ್ಕದೇವರಾಜನ ಕೈಕೆಳಗಿನ ಕಾರ್ಯಕರ್ತ ಕೊಟ್ಟೂರಯ್ಯ ಎಂಬವನು ತಲಕಾಡಿನಲ್ಲಿ ಮಲ್ಲೇಶ್ವರ ದೇವಾಲಯವನ್ನು ಕ್ರಿ.ಶ. 1679ರಲ್ಲಿ ನಿರ್ಮಿಸಿದನು. ಆ ಕಾಲಕ್ಕೆ ತಲಕಾಡಿಗೆ ಕರಿವನ ಎಂಬ ಪರ್ಯಾಯನಾಮವಿದ್ದುದು ತಲಕಾಡು 199ನೆಯ ಶಾಸನದಲ್ಲಿ ವ್ಯಕ್ತವಾಗಿದೆ.

ಟಿ. ನರಸೀಪುರ 16ನೆಯ ಶಾಸನ ಅತಿದೀರ್ಘವಾಗಿದ್ದು ಹದಿನಾರು ತಾಮ್ರದ ಹಲಗೆಯ ಮೇಲಿದೆ. ಕ್ರಿ ಶ. 1749ರ ಅವಧಿಯ ಈ ತಾಮ್ರಶಾಸನದಲ್ಲಿ ಮೈಸೂರು ಮತ್ತು ಕಳಲೆ ಅರಸರ ವಂಶಾವಳಿಯನ್ನು ದೀರ್ಘವಾಗಿ ನಿರೂಪಿಸಿದೆ. ಕಳಲೆ ವಂಶದವರು ಮೈಸೂರು ಅರಸರೊಡನೆ ವೈವಾಹಿಕ ಸಂಬಂಧ ಬೆಳೆಸಿದ್ದರು. ದಳವಾಯಿಗಳಾಗಿದ್ದಾಗ್ಯೂ ಅತ್ಯಂತ ಪ್ರಬಲರಾಗಿದ್ದರು. ಕೃಷ್ಣರಾಜನು ಮೈಸೂರು ಸಿಂಹಾಸನದಲ್ಲಿದ್ದಾಗ ಅವನ ದಳಪತಿ ಕಳಲೆ ದೇವರಾಜನು ಹದಿನಾಲ್ಕು ಹಳ್ಳಿಗಳನ್ನು ಒಂದು

1. ತಿ. ನರಸೀಪುರ 15 2. ತಲಕಾಡು 187 3. ಉಕ್ಕಲ್ಗೆರೆ 97

ಗೂಡಿಸಿ ರಾಮಚಂದ್ರಪುರ ಎಂಬ ಅಗ್ರಹಾರವನ್ನು ಮಾಡಿ ಅದನ್ನು 120 ವೃತ್ತಿಗಳನ್ನಾಗಿ ವಿಂಗಡಿಸಿ ನಾನಾ ಬ್ರಾಹ್ಮಣರಿಗೆ ದಾನನೀಡಿದ್ದನು. ಜೊತೆಗೆ ಒಂದೊಂದು ಮನೆಯನ್ನು ಕೊಟ್ಟ ವಿವರಗಳು ಶಾಸನದಲ್ಲಿ ದೊರೆಯುತ್ತವೆ. ಕೃಷ್ಣರಾಜನು ಹಲವು ಅಗ್ರಹಾರಗಳನ್ನು ನಿರ್ಮಿಸಿದ್ದ ಸಂಗತಿ ಟಿ. ನರಸೀಪುರ 14ನೆಯ ಶಾಸನದಲ್ಲಿ ಪ್ರಸ್ತಾಪವಾಗಿದೆ. ಅಂತೆಯೆ ಮೈಸೂರು ಅರಸರ ವಂಶಾವಳಿಯನ್ನೂ ಹೇಳಲಾಗಿದೆ.

ಮೈಸೂರು ಅರಸರು ಮೂಗೂರು ತಿಬ್ಬಾದೇವಿಯ ಭಕ್ತರಾಗಿದ್ದರು. ಈ ದೇವತೆಗೆ ನಾನಾ ಬಗೆಯ ದಾನಗಳನ್ನು ಕೊಟ್ಟಿದ್ದರು. ಮೂರನೆಯ ಕೃಷ್ಣರಾಜ ಒಡೆಯರ ಮಗಳು ದೇವಾಜಮ್ಮಣ್ಣಿ ತಿಬ್ಬಾದೇವಿ ದೇವಾಲಯದ ಬಾಗಿಲುವಾಡವನ್ನು ಮಾಡಿಸಿದ್ದಳು.

ಉಮ್ಮತ್ತೂರರಸರು ಕೂಡ ಟಿ. ನರಸೀಪುರ ತಾಲ್ಲೂಕಿನ ಕೆಲವು ಭಾಗಗಳ ಮೇಲೆ ತಮ್ಮ ಅಧಿಕಾರದ ಪ್ರಭಾವವನ್ನು ಬೀರಿದ್ದರೆಂಬುದಕ್ಕೆ ಇಲ್ಲಿನ ಕೆಲವು ಶಾಸನಗಳು ನಿಲ್ಲುತ್ತವೆ. ಮೈಸೂರು ಅರಸರಂತೆ ಇವರೂ ವಿಜಯನಗರದ ಅರಸರ ಆಶ್ರಿತರಾಗಿದ್ದರು. ಕೃಷ್ಣದೇವರಾಯನ ಪ್ರಧಾನಿ ಸಾಳುವ ಗೋವಿಂದರಾಜನು ಉಮ್ಮತ್ತೂರು ಸೀಮೆಯ ಮೂಗೂರು ಸ್ಥಳದ ಮಾದಾಪುರವನ್ನು ಉಮ್ಮತ್ತೂರಿನ ದೇವರಾಯ ಅರಸನ ಮಗ ನಂಜಯ್ಯ ಅರಸನಿಗೆ ಕ್ರಿ.ಶ 1519ರಲ್ಲಿ ಅಗ್ರಹಾರವಾಗಿ ಮಾಡಿಕೊಟ್ಟಿದ್ದನು.[1] ಆ ಕಾಲಕ್ಕೆ ಮೂಗೂರು ಉಮ್ಮತ್ತೂರು ರಾಜ್ಯಕ್ಕೆ ಸೇರಿತ್ತು.

ಉಮ್ಮತ್ತೂರಿನ ರಾಜ ವೀರಶೂರ ನಂಜಪ್ಪೊಡೆಯನ ಆಜ್ಞೆಯ ಮೇರೆಗೆ ನರಸಪ್ಪಯ್ಯನು ವಿಜಯನಗರದ ಕೃಷ್ಣರಾಯರಿಗೆ ಧರ್ಮವಾಗಬೇಕೆಂದು ಹಾಗೂ ಅವರ ತಂದೆ ನರಸಣನಾಯಕರಿಗೆ ಪುಣ್ಯವಾಗಬೇಕೆಂದು ಉಮ್ಮತ್ತೂರಿನ ಹೊನ್ನಕಳಸದ ದೇವರಿಗೆ ತೊಟ್ಟವಾಡಿಗ್ರಾಮವನ್ನು ಕ್ರಿ.ಶ. 1527ರಲ್ಲಿ ದತ್ತಿಬಿಟ್ಟು ತನ್ನ ನಿಷ್ಠೆಯನ್ನು ಪ್ರಕಟಿಸಿದ್ದನು.[2] ಇದೇ ಗ್ರಾಮವನ್ನು ಮುಂದೆ ಕ್ರಿ.ಶ. 1621ರಲ್ಲಿ ಮೈಸೂರು ಅರಸ ಚಾಮರಾಜ ಒಡೆಯನು ವಿರಕ್ತಮಠಕ್ಕೆ ನೀಡಿದುದು ತೊಟ್ಟವಾಡಿ 258ನೆಯ ಶಾಸನದಿಂದ ತಿಳಿಯುತ್ತದೆ.

ಉಮ್ಮತ್ತೂರಿನ ಮತ್ತೊಬ್ಬ ರಾಜ ವೀರದೇವಣ್ಣ ಒಡೆಯನ ಆಶ್ರಯದಲ್ಲಿ ಅಧಿಕಾರಿಯಾಗಿದ್ದ ದೇವರಸನು ಹೆಮ್ಮಿಗೆ ಹೊಸಹಳ್ಳಿಯ ಅಲ್ಲಾಳನಾಥ ದೇವರ ನಂದಾದೀಪಕ್ಕೆಂದು ಕ್ರಿ.ಶ. 1530ರಲ್ಲಿ ಕೆಲವು ಕೊಡುಗೆಯನ್ನಿತ್ತನು.[3]

ಟಿ. ನರಸೀಪುರ ತಾಲ್ಲೂಕಿನ ರಾಜಕೀಯ ಇತಿಹಾಸದಲ್ಲಿ ದೊಡ್ಡದೊಡ್ಡ ರಾಜರ, ಚಕ್ರವರ್ತಿಗಳ ಸಾಧನೆಯ ನಡುವೆ ಸ್ಥಳೀಯ ಪ್ರಭುಗಳ ಪಾತ್ರವಿರುವುದನ್ನು ಮರೆಯುವಂತಿಲ್ಲ. ಇವರೆಲ್ಲ ಪ್ರಖ್ಯಾತ ರಾಜ ಮನೆತನಗಳ ಸಾಮಂತರಾದರೂ ತಮ್ಮ ಅಧಿಕಾರದ ಪ್ರಾಂತಗಳಲ್ಲಿ ಗೌರವಾಧಿಕ್ಯವನ್ನು ಪಡೆದಿದ್ದರು.

ಒಂಬತ್ತನೆಯ ಶತಮಾನದಲ್ಲೆ ಟಿ. ನರಸೀಪುರ ತಾಲ್ಲೂಕಿನಲ್ಲಿ ಸ್ಥಳೀಯ ಪ್ರಭು

---

1. ಮಾದಾಪುರ 128 2. ತೊಟ್ಟವಾಡಿ 258 3. ಹೆಮ್ಮಿಗೆ 249

ಗಳಿದ್ದುದಕ್ಕೆ ಆಧಾರಗಳಿವೆ. ಗಂಗರಾಜ ಶ್ರೀಪುರುಷನ ಮಗ ಶಿವಮಾರನು ಪೃಥ್ವೀ ಪಾಲನೆ ಮಾಡುತ್ತಿದ್ದಾಗ ಮಣಲೆ ಅರಸ ಎಂಬವನು ಕೊಂಬಡಿ ಕಿಟಿಲೆನಾಡನ್ನು ಆಳುತ್ತಿದ್ದ ಉಲ್ಲೇಖ ದೊರೆಯುತ್ತದೆ.[1] ಪ್ರಾಯಃ ಈತ ಗಂಗರ ಆಶ್ರಯದಲ್ಲಿದ್ದ ಒಬ್ಬ ಸ್ಥಳೀಯಪ್ರಭುವಾಗಿರಬಹುದು. ಈ ಕೊಂಬಡಿಕಿಟಿಲೆನಾಡೆಂಬುದು ಟಿ. ನರಸೀಪುರ ತಾಲ್ಲೂಕಿನ ವಿಜಯಪುರ ಭಾಗವಾಗಿರುವ ಸಾಧ್ಯತೆಯಿದೆ. ಎರೆಯಪ್ಪನ ಶಾಸನದಲ್ಲಿಯೂ ಉಕ್ತನಾಗಿರುವುದರಿಂದ ಮಣಲೆ ಅರಸನು ಆತನ ಕಾಲದಲ್ಲಿಯೂ ಇದ್ದನೆಂದು ಊಹಿಸಬಹುದು.[2]

ಹೊಯ್ಸಳ ದೊರೆ ವೀರಬಲ್ಲಾಳನಿಗೆ ಸೇರಿದ ಚಿದರವಳ್ಳಿ 98ನೆಯ ಶಾಸನದಲ್ಲಿ 'ಮಂಡಲಸ್ವಾಮಿ ಮಾದಿಗೌಡ' ಎಂಬ ಉಲ್ಲೇಖ ದೊರೆಯುತ್ತದೆ. ಈತ ಚಿದರವಳ್ಳಿ ಭಾಗದ ಸ್ಥಳೀಯ ಪ್ರಭುವಾಗಿದ್ದನು. ಈತನ ಮಗ ಕೆಲವು ದತ್ತಿಗಳನ್ನು ನೀಡಿದ್ದನು.[3] ಅಮ್ಮಗೌಡ ಎಂಬವನು ಎಬ್ಬಾಗಿಲ ಸ್ಥಾನಿಕನಾಗಿದ್ದುದರ ಸೂಚನೆ ಟಿ. ನರಸೀಪುರ 8ನೆಯ ಶಾಸನದಲ್ಲಿ ಸಿಕ್ಕುತ್ತದೆ. ಈತ ಹೊಯ್ಸಳರ ಆಶ್ರಿತನಾಗಿದ್ದಿರಬಹುದು.

ಹೊಯ್ಸಳ ವೀರನರಸಿಂಹನ ಕೃಪೆಯಲ್ಲಿ ಕ್ರಿ.ಶ. 1277ರ ಅವಧಿಯಲ್ಲಿ ಸಂಕಣ್ಣ ವಿಜಯಣ್ಣ ಎಂಬವರು ಮೂಗೂರು ಭಾಗದ ಸ್ಥಳೀಯ ಪ್ರಭುಗಳಾಗಿದ್ದರೆಂದು ತೋರುತ್ತವೆ. ಮೂಗೂರು 261ನೆಯ ಶಾಸನದಲ್ಲಿ "ಶ್ರೀಮನ್ಮಹಾಪಸಾಯಿತಮುಪ್ಪ ಬಾಚನ್ನ ಮಲ್ಲಣ್ಣನವರೂ ಕೊಟ್ಟ ಶ್ರೀದೇಸಿನಾಥರು ಕುಮಾರನಾಡಾದ ತೊರೆನಾಡ ನಾಳವಲ್ಲಿ ಆ ಹಿರಿಯನಾಡ ಮೋಗೂರ ಸಂಕಣ್ಣ ವಿಜೆಯಣ್ಣನವರ ಅಧಿಕಾರದಲು" ಎಂಬುದರಿಂದ ಮೂಗೂರು ತೊರೆನಾಡಿಗೆ ಸೇರಿತ್ತೆಂಬುದು ಸ್ಪಷ್ಟ. ಅಂತೆಯೆ ದೇಸಿನಾಥ ಎಂಬವನು ಸ್ಥಾನಿಕ ಪ್ರಭುವಾಗಿದ್ದ ಸೂಚನೆಯಿದೆ. ಇಲ್ಲಿನ ಪ್ರಭುಗಳು ಮೂಗೂರನ್ನು ಸಂತೆ ನಡೆಯುವ ಪಟ್ಟಣವಾಗಿ ಪರಿವರ್ತಿತಗೊಳಿಸಿದುದನ್ನು ಪ್ರಸ್ತುತ ಶಾಸನ ದಾಖಲಿಸುತ್ತದೆ. ಆ ಸಂದರ್ಭದಲ್ಲಿ ಕೆಲವೊಂದು ರಿಯಾಯಿತಿಯನ್ನು ತೋರಿಸಲಾಯಿತು. ಹೊಸತಾಗಿ "ಪಟ್ಟಣದಲಿ ಮನೆಯ ಮಾಡುವವರಿಗೆ ಮೊದಲ ಒಂದು ವರ್ಷ ಮಾನ್ಯ ಆ ಪಟ್ಟಣಕೆ ಬಹ ಒಕ್ಕಲಿಗೆ ಎರಡು ವರ್ಷ ಮನೆದೆಱೆ ಮಾನ್ಯ" ಎಂಬ ಉಲ್ಲೇಖಗಳು ಆ ಕಾಲದ ರಾಜಕೀಯ ಆರ್ಥಿಕ ಹಾಗೂ ಆಡಳಿತಾತ್ಮಕ ವಿಷಯಗಳ ಮೇಲೆ ಕ್ಷಕಿರಣ ಬೀರುತ್ತವೆ.

ಹೊಯ್ಸಳ ವೀರನರಸಿಂಹನ ಆಶ್ರಯದಲ್ಲಿ ಕೆಲವು ಸ್ಥಳೀಯ ಪ್ರಭುಗಳು ಕಂಡು ಬರುತ್ತಾರೆ. ಗಂಗಮಂಡಲ ಪಿಳ್ಳೆ ಅಲಿಯಾಸ್ ವೀರನರಸಿಂಹಪಿಳ್ಳೆಡಣ್ಣಾಯಕರ್ ಎಂಬ ಸ್ಥಳೀಯ ಪ್ರಭು ವೀರನರಸಿಂಹನ ಅವಧಿಯಲ್ಲಿ ಅಗಸ್ತ್ಯೇಶ್ವರ ದೇವಾಲಯದ ತಿರುವಗಟ್ಟೀಶ್ವರ ಒಡೆಯರ್ ಗುಡಿಯ ಬಲಿಪೀಠ ಹಾಗೂ ವೃಷಭದೇವ ಮಂಟಪದಲ್ಲಿ ವೃಷಭದೇವನ ಪ್ರತಿಮೆಯನ್ನು ನಿಲ್ಲಿಸಿದ.[4] ಇದೇ ಕಾಲದಲ್ಲಿ ಮೂಗೂರಿನಲ್ಲಿ ಮಾದಣ್ಣ

1. ವಿಜಯಪುರ 145 2. ವಿಜಯಪುರ 146 3. ಚಿದರವಳ್ಳಿ 98
4. ತಿ. ನರಸೀಪುರ 19, 20

ಎಂಬ ಸ್ಥಳೀಯ ಪ್ರಭುವಿದ್ದ ಸಂಗತಿ ತಿಳಿದುಬರುತ್ತದೆ. ಇದೇ ಹೆಸರಿನ ಇವನ ಮಗ ಮಾದಣ್ಣನು ಕಲಿಮಲೆಗೆ ಹೋಗುತ್ತಿದ್ದಾಗ 40 ಜನ ಕಳ್ಳರು ಮುತ್ತಿದರು. ಆಗ ಮಾದಣ್ಣನ ಸೇವಕ ಸಾಹಸವನ್ನು ಮೆರೆದು ಕಳ್ಳರೊಡನೆ ಕಾದುತ್ತ ತನ್ನ ಪ್ರಾಣತೆತ್ತು ಒಡೆಯನ ತಲೆಕಾಯ್ದ. ಈತನ ಸ್ಮಾರಕವಾಗಿ ವೀರಗಲ್ಲನ್ನು ನೆಡಲಾಯಿತು.[1]

ಕ್ರಿ.ಶ. 1246ರಲ್ಲಿ ಹೊಯ್ಸಳ ಸೋಮೇಶ್ವರನ ಆಶ್ರಯದಲ್ಲಿ ವಲ್ಲಾಳಭಟ್ಟರ್ ಎಂಬ ಸ್ಥಾನಿಕ ಪ್ರಭುವಿದ್ದುದಕ್ಕೆ ಬನ್ನೂರಿನ 54ನೆಯ ಶಾಸನದಲ್ಲಿ ಕುರುಹುಗಳು ದೊರೆಯುತ್ತವೆ. ಹೊಯ್ಸಳ ಮೂರನೆಯ ವೀರಬಲ್ಲಾಳನನ್ನು ಉಲ್ಲೇಖಿಸುವ ಕ್ರಿ.ಶ. 1309ರ ಹಿರಿಯೂರು 126ನೆಯ ಶಾಸನದಲ್ಲಿ "ಶ್ರೀಮನುಮಹಾಪಸಾಯಿತರು ಮಪ್ಪ ರಾಯಪ್ಪನವರು ತೊಱೆನಾಡ ಅಧಿಕಾರವಂ ಆಳುತಂಯಿರೆ" ಎಂಬ ಉಲ್ಲೇಖ ಕಾಣಸಿಗುತ್ತದೆ. ಇದರಿಂದ ತೊರೆನಾಡಿನ ಎಲ್ಲೆಕಟ್ಟಿಗೆ ಹಿರಿಯೂರು ಸೇರಿತ್ತೆಂದೂ ರಾಯಪ್ಪ ಇಲ್ಲಿನ ಸ್ಥಳೀಯ ಪ್ರಭುವಾಗಿದ್ದನೆಂದು ಊಹಿಸಬಹುದು.

ವಿಜಯನಗರದ ಬುಕ್ಕಣ್ಣ ಒಡೆಯನ ಮಹಾಪ್ರಧಾನ ಬಸವದಣ್ಣಾಯಕನು ಕ್ರಿ.ಶ. 1367ರಲ್ಲಿ ಮೂಗೂರು ಭಾಗದ ಆಡಳಿತವನ್ನು ನಿರ್ವಹಿಸುತ್ತ ಸ್ಥಳೀಯ ಪ್ರಭುಗಳ ಸ್ಥಾನಮಾನವನ್ನೇ ಹೊಂದಿದ್ದನು.[2] ಎರಡನೆಯ ದೇವರಾಯನ ಆಶ್ರಯದಲ್ಲಿ ಟಿ. ನರಸೀಪುರ ಭಾಗದ ಹೊಯ್ಸಳ ನಾಡಿನಲ್ಲಿ ಪಿರಿಯರಸನೆಂಬ ಸ್ಥಳೀಯ ಪ್ರಭುವಿದ್ದ. ಈತನ ಆಜ್ಞಾಪಾಲಕನಾದ ಸೋವರಸನು ಕ್ರಿ.ಶ. 1426ರಲ್ಲಿ ಕಿರಗನೂರಿನ ಅರ್ಕನಾಥದೇವರ ನಂದಾದೀಪಕ್ಕೆ ಮಗ್ಗದ ಹೊನ್ನನ್ನು ಕೊಟ್ಟ ಸಂಗತಿ ವಿಜಯಪುರ 143ನೆಯ ಶಾಸನದಿಂದ ಸ್ಪಷ್ಟವಾಗುತ್ತದೆ. ವಿರೂಪಾಕ್ಷರಾಯನು ವಿಜಯನಗರದಲ್ಲಿ ಆಳುತ್ತಿದ್ದಾಗ ಆತನ ಕೃಪಾಶ್ರಯದಿಂದ ವೀರಸೋಮಣ್ಣನಾಯಕನೆಂಬವನು ತಲಕಾಡು ಭಾಗದ ಸ್ಥಾನಿಕ ಪ್ರಭುವಾಗಿದ್ದುದಕ್ಕೆ ಆಧಾರಗಳಿವೆ. ಈ ನಾಯಕನ ತಾಯಿ ಸಾಯಮ್ಮ ಈಕೆಯ ವೈಯಕ್ತಿಕ ಖರ್ಚುವೆಚ್ಚಗಳಿಗೆಂದು ತಡಿಮಾಲಿಂಗಿಯನ್ನು ಬಿಟ್ಟಿದ್ದರು. ಇದು "ಶ್ರೀಮನ್ ಮಹಾಮಂಡಳೇಶ್ವರ ಶ್ರೀ ವೀರ ಸೋಮಣ್ಣ ನಾಯಕರು ಆಳುತ್ತಿಹ ಹೊಯಿಸಳ ದೇಶದಲ್ಲೂ ಆ ಸೋಮಣ್ಣ ವೊಡೆಯರ ಅಂಮ್ಮ ಸಾಯಮ್ಮನವರ ವೈಭೋಗಕ್ಕೆ ಕೊಟ್ಟಿಹ ದಕ್ಷಿಣಾ ವಾರಣಾಸಿಯಾದ ಕಾವೇರಿಯ ದಕ್ಷಿಣಭಾಗದ ಹದಿನಾಡ ವೇಂಠೆಯದ ಶ್ರೀರಂಗಪುರವಾದ ಮಾಯಿಲಂಗಿಯು" ಎಂಬ ವಿವರಣೆಯಿಂದ ಸ್ಪಷ್ಟ.[3] ಸಾಯಮ್ಮ ದೈವಭಕ್ತೆಯೂ ಉದಾರಿಯೂ ಆಗಿದ್ದಳು. ರಾಜಭಂಡಾರಕ್ಕೆ ಸಂದಾಯವಾಗಬೇಕಾಗಿದ್ದ 15 ವರಹಗಳನ್ನು ಈಕೆ ಜನಾರ್ದನ ದೇವರ ಅಂಗರಂಗಭೋಗ ಅಮೃತಪಡಿಗೆಂದು ಕ್ರಿ.ಶ. 1482ರಲ್ಲಿ ದತ್ತಿ ಬಿಟ್ಟಿದ್ದಳು.

---

1. ಮೂಗೂರು 286 2. ಮೂಗೂರು 285 3. ತಡಿಮಾಲಿಂಗಿ 237

ಸಾಳ್ವದ ದೊರೆ ಈಶ್ವರನ ಮಗ ನರಸಿಂಹನ ಆಜ್ಞಾನುಸಾರ ನಂಜರಾಜ ಒಡೆಯನು ಕ್ರಿ. ಶ. 1497ರಲ್ಲಿ ಸೋಮನಾಥಪುರ ಅಗ್ರಹಾರದ ಜೀರ್ಣೋದ್ಧಾರ ಕಾರ್ಯ ಕೈಗೊಂಡಿದ್ದನು.[1] ಶಾಸನದಲ್ಲಿ ಈತನನ್ನು 'ಮಹೀಭುಜ' ಎಂದು ವರ್ಣಿಸಿರುವುದರಿಂದ ಈತ ಇಲ್ಲಿನ ಪ್ರಭುವಾಗಿದ್ದನೆಂದು ಊಹಿಸಬಹುದು.

ಕ್ರಿ. ಶ. 1550ರ ಮೂಗೂರು 269ನೆಯ ಶಾಸನೋಕ್ತನಾದ ತಿರುಮಲರಾಜ ನಾಯಕನೆಂಬುವನು ಹೆದೆನಾಡನ್ನು ಆಳುತಿದ್ದನೆಂದು ತಿಳಿದುಬರುತ್ತದೆ. ಈತ ಕೂಡ ಒಬ್ಬ ಸ್ಥಳೀಯ ಪ್ರಭುವಾಗಿದ್ದನೆಂದು ಪರಿಗಣಿಸಬಹುದು.

ಕಪಿನಿ ಎಂಬ ಸ್ಥಳೀಯ ಪ್ರಭುವಿನ ಬಗೆಗೆ ಬನ್ನೂರು 45ನೆಯ ಶಾಸನ ಮಾಹಿತಿ ಒದಗಿಸುತ್ತದೆ. "ಭಾರದ್ವಾಜ ಗೋತ್ರದ ರುಕ್ಕು ಶಾಖಾಧ್ಯಾಯಿಗಳಾದ ಚಿಕ್ಕಲಿಂಗ ರಸ ಮಕ್ಕಳು ಕಪಿನಿಯೂ ತಮ್ಮ ಕುಲಕೋಟಿ ಎಲ್ಲ ಪಾವನವಾಗಿ ಸದ್ಗತಿಯನೆಯ್ದ ಬೇಕೆಂದು" ಗಂಡಸಮುದ್ರದ ಕೆರೆಯನ್ನು ಕೈಲಾಸದೇವರಿಗೆ ಕ್ರಿ. ಶ. 1553ರಲ್ಲಿ ಧಾರೆಯಾಗಿತ್ತನು

ಕೊಮಾರ ಕೊಂಡರಾಜದೇವ ಎಂಬವನ ಉಲ್ಲೇಖ ಟಿ. ನರಸೀಪುರ 22, ತುಂಬಲ 42ನೆಯ ಶಾಸನಗಳಲ್ಲಿ ದೊರೆಯುತ್ತದೆ. 'ಸೋಮವಂಶಾಧೀಶ್ವರ ಮಹಾ ಮಂಡಲೇಶ್ವರ' ಎಂದು ಪ್ರಶಂಸಿಸಲ್ಪಟ್ಟ ಈತ ಸದಾಶಿವರಾಯನ ಆಸರೆಯಲ್ಲಿ ಸ್ಥಳೀಯ ಪ್ರಭುವಾಗಿ ಈ ಭಾಗದ ಆಡಳಿತವನ್ನು ನಡೆಸಿದನು ಈತನ ಕಾರ್ಯಕರ್ತ ರಾಯಸದ ವೆಂಕಟಾದ್ರಿ ಎಂಬಾತ ಕ್ರಿ. ಶ. 1556ರಲ್ಲಿ ತಿರಮಕೂಡಲಿನ ಅಗಸ್ತ್ಯೇಶ್ವರ ಮತ್ತು ಆದಿಗುಂಜ ನರಸಿಂಹದೇವರ ಪೂಜಾದಿಗಳಿಗೆ ದತ್ತಿಬಿಟ್ಟಿದ್ದನು.

ವಿಜಯನಗರದ ವೆಂಕಟಪತಿರಾಯನು ಆಳುತ್ತಿದ್ದಾಗ "ಮಹಾರಾಜಾಧಿರಾಜ ಮಹಾರಾಜರಾಜಶ್ರೀ" ಎಂದು ವರ್ಣಿಸಲ್ಪಟ್ಟ, ಜಗದೇವರಾಯ ಒಡೆಯರ ಪುತ್ರ ದೇವರಾಯ ಒಡೆಯನು ಚಿದರವಳ್ಳಿಯ ಚಿಕ್ಕಗೌಡನ ಮಗ ಶಿವಯೋಗಿ ಒಡೆಯರಿಗೆ ಚಿದರವಳ್ಳಿ ಸ್ಥಳಕ್ಕೆ ಸೇರುವ ಮುಡಕನಪುರವನ್ನು ಪಲ್ಲಕ್ಕಿ ಉಂಬಳಿಯಾಗಿ ಕ್ರಿ. ಶ. 1598ರಲ್ಲಿ ಕೊಟ್ಟ ಸಂಗತಿ ಮುಡಕನಪುರ 103ನೆಯ ಶಾಸನದಿಂದ ತಿಳಿದುಬರುತ್ತದೆ ಚಿಕ್ಕಣ್ಣಗೌಡನ ಮಗನು ಶಿವಯೋಗಿ ಒಡೆಯ ಎಂದಾಗಬೇಕಾದರೆ ಈತನಿಗೆ ಮುಡಕನ ಪುರದ ಒಡೆತನ ಲಭ್ಯವಾಗಿತ್ತೆಂದು ಅಲ್ಲಿಯ ಸ್ಥಳೀಯ ಪ್ರಭುವಾಗಿ ನಿಯಮಿಸಿರ ಬೇಕೆಂದು ಊಹಿಸಬಹುದು.

ಒಂದನೆಯ ಕೃಷ್ಣರಾಜ ಒಡೆಯನು ಮೈಸೂರಿನಿಂದ ಆಳುತಿದ್ದಾಗ ಈತನ ಬೆಂಬಲದಿಂದ ಕೃಷ್ಣೇ ಅರಸು ಎಂಬವನು ಕ್ರಿ. ಶ. 1725ರ ಅವಧಿಯಲ್ಲಿ ಮೂಗೂರಿನ ಸ್ಥಳೀಯ ಪ್ರಭುವಾಗಿದ್ದ ಸಂಗತಿ ಟಿ. ನರಸೀಪುರ 1ನೆಯ ಶಾಸನದಿಂದ ವಿದಿತ. ಈತನ ವಂಶಾವಳಿ ಹೀಗಿದೆ—

1. ಸೋಮನಾಥಪುರ 95

ಸೋಮರಾಜ ಒಡೆಯ
|
ವೀರರಾಜ ಒಡೆಯ
|
ಕೃಷ್ಣೇ ಅರಸ

ಕೃಷ್ಣೇ ಅರಸನ ಹೆಂಡತಿ ಚಾಮಮ್ಮಣ್ಣಿ ತಿರಮಕೂಡಲಿನ ಗುಂಜಾನರಸಿಂಹ ದೇವಾಲಯದ ಮುಂದೆ ಮಂಟಪವನ್ನು ಕಟ್ಟಿಸಿದ್ದಳು. ಅನಂತರ ಕ್ರಿ. ಶ. 1855ರಲ್ಲಿ ಮೈಸೂರು ಅರಸರ 'ಪಾದಸೇವಕ' ಜಗ್ಗುಲಾಲಾ ಎಂಬ ರಾಜಸ್ಥಾನಿ ಇದೇ ದೇವಾಲಯದಲ್ಲಿ ಪ್ರಹ್ಲಾದ ಮಂಟಪವನ್ನು ನಿರ್ಮಿಸಿದ್ದನು.[1]

ಕ್ರಿ. ಶ 1726ರ ಟಿ. ನರಸೀಪುರ 18ನೆಯ ಶಾಸನದಲ್ಲಿ ದೇವರಾಯ ಒಡೆಯ ಮತ್ತು ಆತನ ಕುಮಾರ ಚಂದ್ರಮೌಳಿ ಒಡೆಯ ಎಂಬವರನ್ನು ಹೆಸರಿಸಿದೆ. ಇದರಲ್ಲಿ ಹೆಮ್ಮಿಗೆಗೆ ಸೇರಿದ ಚಂದ್ರಹಳ್ಳಿಯ ಭೂಮಿಯನ್ನು ತಿರಮಕೂಡಲಿನ ಅಗಸ್ತ್ಯನಾಥನಿಗೆ ಹಾಗೂ ಹನುಮಂತ ದೇವರಿಗೆ ದತ್ತಿ ಬಿಟ್ಟಿರುವುದನ್ನು ಗಮನಿಸಿದಾಗ ಇವರುಗಳು ಸ್ಥಾನಿಕ ಪ್ರಭುಗಳಾಗಿರಬೇಕೆಂಬ ಅನುಮಾನ ಹುಟ್ಟುತ್ತದೆ.

ತಲಕಾಡಿನ ಸಮೀಪವಿರುವ ವಿಜಯಪುರದಲ್ಲಿ ವಿಜಯನೆಂಬ ಅರಸು ಬಸದಿಯನ್ನು ನಿರ್ಮಿಸಿ ಪಟ್ಟಣವನ್ನು ಕಟ್ಟಿ ಹೊಯ್ಸಳ ಬಲ್ಲಾಳನಿಗೆ ಸಾಮಂತನಾಗಿದ್ದ ಸಂಗತಿ ರಾಜಾವಳಿ ಕಥಾಸಾರದಿಂದ ತಿಳಿದು ಬರುತ್ತದೆ.[2] ಆದರೆ ವಿಜಯಪುರ ಗಂಗರ ಕಾಲದಲ್ಲಿದ್ದ ಪ್ರಾಚೀನ ಊರೆಂಬುದಕ್ಕೆ ಶಾಸನಾಧಾರವಿರುವುದರಿಂದ ಈತ ಹೇಳುವ ಸಂಗತಿ ಅನುಮಾನಾಸ್ಪದ.

ಮೇಲೆ ತಿಳಿಸಿದ ಸ್ಥಳಗಳಲ್ಲದೆ ವಾಟಾಳು, ಮಾಳಂಗಿ ನಾಡು ಹೊಂಗಲವಾಡಿ ನಾಡು ಮೊದಲಾದ ತಾಣಗಳು ಸ್ಥಳೀಯ ಪ್ರಭುಗಳ ನೆಲೆಗಳಾಗಿದ್ದ ಸಾಧ್ಯತೆಯಿದೆ. ವಿಜಯನಗರದ ಅಂತ್ಯದ ಬಳಿಕ ಮೈಸೂರು ಒಡೆಯರ ಆಳ್ವಿಕೆಗೆ ಒಳಪಡುವ ವರೆಗೆ ಟಿ. ನರಸೀಪುರ ತಾಲ್ಲೂಕಿನ ಬಹುಭಾಗ ಪುಟ್ಟ ಪುಟ್ಟ ಪಾಳೆಯಪಟ್ಟಾಗಿ ಆಡಳಿತ ನಿರ್ವಹಿಸಿದವು.

ಈವರೆಗಿನ ಸಮೀಕ್ಷೆಯಿಂದ ಟಿ. ನರಸೀಪುರ ತಾಲ್ಲೂಕು ರಾಜಕೀಯವಾಗಿ ಅನೇಕ ಏಳುಬೀಳುಗಳನ್ನು ಕಂಡಿರುವುದು ಸ್ಪಷ್ಟವಾಗುತ್ತದೆ. ಗಂಗರ ಮತ್ತು ಹೊಯ್ಸಳರ ಕಾಲದಲ್ಲಿ ಈ ಭಾಗ ವೈಭವದಿಂದ ಮೆರೆಯಿತು. ಆ ದಿನಗಳಲ್ಲಿ ತಲಕಾಡು ಐದು ಮಠ, ವಿಜಯಾಪುರ, ಮುಡುಕುತೊರೆ, ಮಾಲಂಗಿ ಮೊದಲಾದ ಏಳುಊರುಗಳನ್ನು ಒಳಗೊಂಡಿತ್ತು. ಈ ತಾಲ್ಲೂಕಿನಲ್ಲಿ ಹಲವು ದೇವಾಲಯಗಳು ನಿರ್ಮಾಣವಾದವು. ತಲಕಾಡಿನ ಮರುಳೇಶ್ವರ, ಅರ್ಕೇಶ್ವರ, ಪಾತಾಳೇಶ್ವರ ದೇವಾಲಯಗಳು ಗಂಗರ ಕೊಡುಗೆಗಳು. ಹೊಯ್ಸಳ ವಿಷ್ಣುವರ್ಧನನು ಇಲ್ಲಿ ಕೀರ್ತಿನಾರಾಯಣ

---

1. ತಿ. ನರಸೀಪುರ 4 2. ರಾಜಾವಳಿ ಕಥಾಸಾರ ಪು. 209

ದೇವಾಲಯುವನ್ನು ಕಟ್ಟಿಸಿದ್ದನು. ಪ್ರಧಾನಿ ಸೋಮಣ್ಣ ದಂಡನಾಯಕನು ಸೋಮನಾಥಪುರದಲ್ಲಿ ಕೇಶವದೇವಾಲಯುವನ್ನು ನಿರ್ಮಿಸಿದನು. ಗಂಗರ ಸೈಗೊಟ್ಟ ಶಿವಮಾರ, ದುರ್ವಿನೀತ ಮೊದಲಾದವರು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದುದಲ್ಲದೆ ಸ್ವತಃ ಕೃತಿರಚನೆ ಗೈದರು. ದುರ್ವಿನೀತನು ಭಾರವಿಯ ಕಿರಾತಾರ್ಜುನೀಯಕ್ಕೆ ಟೀಕೆ ಯನ್ನು ಹಾಗೂ ವಡ್ಡಕಥೆಯನ್ನು ಬರೆದನು. ಸೈಗೊಟ್ಟ ಶಿವಮಾರ 'ಗಜಾಷ್ಟಕ' ಎಂಬ ಶಾಸ್ತ್ರಗ್ರಂಥಕ್ಕೆ ಕಾರಣನಾದನು. ಇದು "ಓವನಿಗೆಯುಂ ಒನಕೆವಾಡುಂ" ಆಯಿತು. ಈ ಕೃತಿಗಳು ಕನ್ನಡ ಸಾಹಿತ್ಯದ ಆರಂಭಿಕಗ್ರಂಥಗಳಾಗಿ ಐತಿಹಾಸಿಕ ಮಹತ್ವ ಪಡೆದಿವೆ. ಟಿ. ನರಸೀಪುರ ತಾಲ್ಲೂಕಿನ ತಡಿಮಾಲಿಂಗಿ ಉನ್ನತ ವಿದ್ಯಾಭ್ಯಾಸದ ಕೇಂದ್ರವಾಗಿತ್ತು. ಈ ತಾಲ್ಲೂಕಿನ ಇತಿಹಾಸವನ್ನು ಸಂಗೀತ, ಕಲೆ, ಸಾಹಿತ್ಯ, ಸಂಸ್ಕೃತಿ, ವಾಸ್ತು ಹೀಗೆ ನಾನಾ ದೃಷ್ಟಿಗಳಲ್ಲಿ ಅಧ್ಯಯನ ಮಾಡುವ ಅವಕಾಶವಿದೆ. ಇಲ್ಲಿನ ಸಮೀಕ್ಷೆಯಲ್ಲಿ ಶಾಸನಸ್ಥ ರಾಜಕೀಯ ಇತಿಹಾಸಕ್ಕೆ ಒತ್ತುಕೊಟ್ಟಿದೆ.

ಗ್ರಂಥ ಋಣ :

1. ಎಪಿಗ್ರಾಫಿಯ ಕರ್ನಾಟಿಕ: ಸಂಪುಟ ಐದು; ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು 570006, 1976

2. ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ: ಸಂ. ಬಿ. ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–570006, 1988.

ಅಂತರಾತ್ಮವನ್ನು ಅರಿತುಕೊಳ್ಳಲು ಸಹ ಅಭ್ಯಾಸದ ಅಗತ್ಯವಿದೆ.

ತನ್ನಲ್ಲಿದ್ದ ಕೊರತೆಯನ್ನು ತಿಳಿಯಬೇಕಾದಂತೆ ತನ್ನಿಂದಾಗುವ ದೋಷವನ್ನು ತಿಳಿಯಬೇಕಾಗುತ್ತದೆ. ಇದೇ ತನ್ನನ್ನು ತಾನು ಅರಿಯುವುದು.

ಒಳ್ಳೆಯದರಲ್ಲಿ ವಿಶ್ವಾಸವಿರುವ ಆತ್ಮವೇ ಪ್ರಬಲವಾದ ಆತ್ಮ.

ಬಾಳು ಸೇವೆಯೊಂದಕ್ಕೆ ಮುಡಿಪಾಗಬೇಕು. ನಿಷ್ಕಾಮ ಸೇವೆಗಾಗಿ ಮಾಡಿದ ತ್ಯಾಗ ಒಂದು ಅವರ್ಣನೀಯ ಆನಂದ. ಅದನ್ನು ನಮ್ಮಿಂದ ಯಾರೂ ತೆಗೆದುಕೊಳ್ಳಲಾರರು. ಈ ಅಮೃತ ಅಂತರಂಗದಿಂದ ಉಕ್ಕಿ ಬಾಳನ್ನು ಪರಿಪೋಷಿಸುತ್ತದೆ. ಇಂಥ ಆನಂದವಿರದೆ ದೀರ್ಘಾಯುಷ್ಯ ಅಸಾಧ್ಯ.

ಸತ್ಯವು ಅಸತ್ಯವನ್ನು ಅಳಿಸುತ್ತದೆ. ಪ್ರೇಮವು ಕ್ರೋಧವನ್ನು ನಂದಿಸುತ್ತದೆ. ಆತ್ಮಕ್ಲೇಶವು ಹಿಂಸೆಯನ್ನು ಹಿಂಗಿಸುತ್ತದೆ. ಈ ಶಾಶ್ವತ ನಿಯಮವು ಕೇವಲ ಸಾಧುಗಳಿಗೆ ಅಲ್ಲ ಎಲ್ಲರಿಗಾಗಿಯೂ ಇರುತ್ತದೆ.

ದೇವಕಿ ಹೆಚ್. ಪಿ.

ಋಗ್ವೇದದಲ್ಲಿ ವಿಮಾನದ ಕಲ್ಪನೆ(?)

1903 ರಲ್ಲಿ ಅಮೆರಿಕದ ರೈಟ್ ಸೋದರರು (Orville Wright ಮತ್ತು Wilbur Wright) ವಿಮಾನವನ್ನು ಕಂಡು ಹಿಡಿದರು. ಹಕ್ಕಿಯಂತೆ ಮುಗಿಲಿನತ್ತ ಹಾರುವ ಮಾನವನ ಬಯಕೆಗೆ ಒಂದು ನಿಶ್ಚಿತ ಗುರಿ ಲಭಿಸಿತು. ಇದಕ್ಕೂ ಮೊದಲು ಸುಮಾರು 1852ರಲ್ಲಿ ಫ್ರಾನ್ಸಿನ ಹೆನ್ರಿಗಿಫರ್ಡ್ (Henri Giffard) ಎಂಬುವನು ಹಬೆಯಿಂದ ತಿರುಗಬಲ್ಲ ತಿರುಗುಬೀಸಣಿಗೆಯನ್ನು (Propeller) ಜೋಡಿಸಿ ನಿರ್ಮಿಸಿದ್ದ ವಾಯು-ನಾವೆಯಲ್ಲಿ (Air-Ship) ಹಾರಾಟ ಮಾಡಿ ತೋರಿಸಿದ್ದನು. ವಿಮಾನಗಳನ್ನು ಕಂಡು ಹಿಡಿಯುವುದಕ್ಕೂ ಮೊದಲು ದೊಡ್ಡಗಾತ್ರದ ಬೆಲೂನಿನಲ್ಲಿ ಜಲಜನಕವನ್ನು (Hydrogen) ತುಂಬಿಸಿ ಹಾರಿಸುತ್ತಿದ್ದರು. ಇಂತಹ ಪ್ರಯೋಗವೊಂದು 1783 ರಲ್ಲಿ ಮೊಟ್ಟ ಮೊದಲು ನಡೆದಿತ್ತು.

ಅಂದಿನ ದಿನಗಳಲ್ಲಿ ಸಾಮಾನ್ಯವಾಗಿ ಸಿಲ್ಕ್‌ಬಟ್ಟೆಯ ಪಟ್ಟಿಗಳನ್ನು ಹೊಲೆದು ಬೆಲೂನನ್ನು ಸಿದ್ಧಪಡಿಸುತ್ತಿದ್ದರು. ಹೊಲಿಗೆಯಿಂದಾದ ಸೂಕ್ಷ್ಮರಂಧ್ರಗಳನ್ನು ಅಂಟಿಲೇಪನದಿಂದ ಮುಚ್ಚಲಾಗುತ್ತಿತ್ತು. ಬೆಲೂನಿನ ಸುತ್ತಲೂ ಹೊದಿಸಲಾಗುತ್ತಿದ್ದ ಬಲೆಗೆ, ಅದರ ಕೆಳಅಂಚಿಗೆ ಹೊಂದಿಕೊಂಡಂತೆ ಹಗ್ಗಗಳಿಂದ ಅತಿಹಗುರವಾದ ಬೆತ್ತದ ತೊಟ್ಟಿಲನ್ನು ಕಟ್ಟಲಾಗುತ್ತಿತ್ತು. ದೋಣಿಯಾಕಾರದ ಈ ತೊಟ್ಟಿಲಿನಲ್ಲಿ ಹಾರಾಟಗಾರನನ್ನು ನಿಲ್ಲಿಸಿ ವಾಯುಭಾರಮಾಪಕವನ್ನು (Barometer) ಅವನಿಗೆ ಕೊಡಲಾಗುತ್ತಿತ್ತು. ಇದರೊಡನೆ ಮರಳಿನ ಚೀಲಗಳನ್ನು ತೊಟ್ಟಿಲಿನಲ್ಲಿ ಇರಿಸುತ್ತಿದ್ದರು. ಮರಳನ್ನು ಸ್ವಲ್ಪವಾಗಿ ಚೆಲ್ಲುತ್ತಾ ಬಂದಾಗ ಬೆಲೂನ್ ನಿಧಾನವಾಗಿ ಮೇಲೇರುತ್ತಿತ್ತು. ಮೇಲೆ ಮೇಲೆ ಹೋದಂತೆಲ್ಲಾ ವಾಯುವಿನ ಒತ್ತಡ ಕಡಮೆಯಾಗುತ್ತಾ ಬರುವುದಷ್ಟೆ. ಬೆಲೂನನ್ನು ಮತ್ತೂ ಮೇಲೇರದಂತೆ ನಿಯಂತ್ರಿಸಲು, ಅದರ ಬಾಯಿಗೆ ಜೋಡಿಸಿರುತ್ತಿದ್ದ ಕವಾಟದ ಕೀಲಿಗೆ ಹಗ್ಗವನ್ನು ಬಿಗಿಯಲಾಗಿದ್ದು ಹಾರಾಟಗಾರನು ಅದನ್ನು ಜಗ್ಗುತ್ತಾ ಬೆಲೂನಿನ ಗಾಳಿಯನ್ನು ಸ್ವಲ್ಪಸ್ವಲ್ಪವಾಗಿ ಹೊರಹಾಕಿದಾಗ ಬೆಲೂನನ್ನು ನಿಧಾನವಾಗಿ ಕೆಳಗಿಳಿಸಲು ಅನುಕೂಲವಾಗುತ್ತಿತ್ತು. ಗಾಳಿ ರಭಸದಿಂದ ಬೀಸುವದಿಕ್ಕಿಗೆ ಅನುಗುಣವಾಗಿ ಬೆಲೂನು ಚಲಿಸಬಹುದಿತ್ತೇ

ಹೊರತು ಹಾರಾಟಗಾರನ ಇಚ್ಛೆಗನುಗುಣವಾಗಲ್ಲ. ಇದು ಹದಿನೆಂಟನೆಯ ಶತಮಾನದಲ್ಲಿ ಅನ್ವೇಷಣೆ ಮಾಡಿಕೊಂಡಿದ್ದ ಬೆಲೂನ್ ಹಾರಾಟ ವಿಧಾನ.

ಇತಿಹಾಸದ ದೃಷ್ಟಿಗೆ ನಿಲುಕದ ಅತಿಪ್ರಾಚೀನ ಯುಗದಲ್ಲಿ, ಮಾನವನ ವೈಜ್ಞಾನಿಕಪ್ರಜ್ಞೆಗೆ ಸುಪ್ರಭಾತವೋ ಎಂಬಂತೆ ರೂಪುಗೊಂಡ ವೇದಗಳಲ್ಲಿ, ಮೇಲೆ ಹೇಳಿರುವ ಹಬೆಯಿಂದ ಚಲಿಸುವ ವಿಮಾನದ ಅಥವಾ ಬೆಲೂನಿನ ಹಾರಾಟವಿಧಾನದ ಸೂಕ್ಷ್ಮ ಸುಳಿವನ್ನು ಗುರುತಿಸಬಹುದು. ಪುರಾಣ-ರಾಮಾಯಣಾದಿಗಳಲ್ಲಿ ವಿಮಾನಗಳ ಬಗ್ಗೆ ಉಲ್ಲೇಖವಿದೆ. ಸಾವಿರಾರು ಹಂಸಗಳಿಂದ ಹೊರಡಲ್ಪಡುತ್ತಿದ್ದ ವಿಮಾನಗಳ ವರ್ಣನೆಯನ್ನು ಕಥೆ-ಕಾವ್ಯಗಳಲ್ಲಿ ಕಾಣುತ್ತೇವೆ. ಕುದುರೆಗಳನ್ನು ಹೂಡಿದ್ದ ಇಂದ್ರನ ರಥ ಭೂಮಿ-ಆಕಾಶಗಳೆರಡರಲ್ಲೂ ಸಂಚರಿಸುತ್ತಿದ್ದ ವರ್ಣನೆಗಳನ್ನು ಓದಿದಾಗ ಇವೆಲ್ಲಾ ಉತ್ಪ್ರೇಕ್ಷೆಗಳೆನಿಸುತ್ತವೆ. ನೀಲಿಯ ಬಾನಿನಲ್ಲಿ ಹಕ್ಕಿಯಂತೆ ಹಾರುವ ಉತ್ಕಟವಾದ ಅಭಿಲಾಷೆ ಮಾನವನಿಗೆ ಹಿಂದಿನಿಂದಲೂ ಇದ್ದುದಂತೂ ಸತ್ಯ. ಋಗ್ವೇದದ ಒಂದನೆಯ ಮಂಡಲದ ಅರವತ್ತನಾಲ್ಕನೆಯ ಸೂಕ್ತದಲ್ಲಿ ಬರುವ ಒಂದೆರಡು ಮಂತ್ರಗಳು 'ಕೃತಕ ಹಾರಾಟ ಸಾಧನದ' ಬಗ್ಗೆ ಅಸ್ಪಷ್ಟವಾದ ಮಾಹಿತಿಯನ್ನು ಒದಗಿಸುತ್ತವೆ. ಈ ಮಂತ್ರಗಳನ್ನು ಅವಲೋಕಿಸಿದಲ್ಲಿ ಅವುಗಳ ಪ್ರಧಾನ ವಿಚಾರ 'ಮಳೆಯ ಮೋಡಕ್ಕೆ' ಹಾಗೂ 'ಹನ್ನೆರಡು ತಿಂಗಳುಳ್ಳ ಸಂವತ್ಸರಕ್ಕೆ' ಅನ್ವಯಿಸುವಂತಿದ್ದರೂ ಅಲ್ಪವಾಗಿಯಾದರೂ ಹಬೆಯ ವಿಮಾನ ಅಥವಾ ಜಲಜನಕದ ಬೆಲೂನಿನ ಚಲನೆಗೆ ಸಂಬಂಧಿಸಿದ ವಿಚಾರ ಈ ಮಂತ್ರಗಳಲ್ಲಿ ಕಂಡುಬರುತ್ತದೆ.

ಕೃಷ್ಣಂ ನಿಯಾನಂ ಹರಯಃ ಸುಪರ್ಣಾ ಅಪೋ ವಸಾನಾ ದಿವಮುತ್ಪತಂತಿ ।

ತ ಆ ವವೃತ್ರನ್‌ಸದನಾದೃತಸ್ಯಾದಿದ ಘೃತೇನ ಪೃಥಿವೀ ವ್ಯದ್ಯತೇ ॥

—ಋ 1. 164.47

ಈ ಮಂತ್ರದ ಭಾವಾರ್ಥ ಹೀಗಿದೆ—"ಅತಿಶ್ರೇಷ್ಠವೆನಿಸುವ ಸೂರ್ಯರಶ್ಮಿಗಳು ಕಪ್ಪಾದ ಮೇಘಗಳನ್ನು ನೀರಿನಿಂದ ಮುಚ್ಚಿ ಸೂರ್ಯಮಂಡಲದತ್ತ ಮೇಲ್ಮುಖವಾಗಿ ಹರಡುತ್ತವೆ. ಪುನಃ ಮೋಡಗಳು ಭೂಲೋಕದತ್ತ ಹಿಂದಿರುಗುತ್ತವೆ. ಒಡನೆಯೇ ಭೂಮಿಯು ನೀರಿನಿಂದ ತೊಯ್ಯುತ್ತದೆ ಅರ್ಥಾತ್ ಮಳೆ ಸುರಿಯುತ್ತದೆ." ಜಗತ್ತಿನ ಸಮಸ್ತ ವ್ಯಾಪಾರಕ್ಕೆ ಸೂರ್ಯನ ಬಿಸಿಲು ಪ್ರಮುಖ ಕಾರಣವೆಂಬುದು ಅಂದಿನ ವೈದಿಕ ಋಷಿ-ವಿಜ್ಞಾನಿಗೆ ತಿಳಿದಿತ್ತು. ಬಿಸಿಲಿನ ಶಾಖದಿಂದ ಸಾಗರದ ನೀರು ಆವಿಯಾಗಿ, ವಾತಾವರಣದ ತೇವಾಂಶವೆಲ್ಲವೂ ಒಟ್ಟುಗೂಡಿ ಮೋಡಗಳಾಗಿ, ಸೂರ್ಯಮಂಡಲದತ್ತ ಮೇಲೇರಿ ತೇವಾಂಶ ಹೆಚ್ಚಿದಂತೆಲ್ಲಾ ಸಾಂದ್ರತೆಯೂ ಹೆಚ್ಚಾಗಿ ಪುನಃ ಭೂಮಿಯತ್ತ ಬಾಗಿ ಮಳೆಗರೆಯುವ ಪ್ರಕೃತಿಯಾಟವನ್ನು ವೈದಿಕ ಋಷಿ ಮೇಲಿನ

ಮಂತ್ರದಲ್ಲಿ ವರ್ಣಿಸಿರುವನು. ಸಾಯಣಾಚಾರ್ಯ ಮತ್ತು ಮ್ಯಾಕ್ಸ್‌ಮುಲ್ಲರ್‌ರಂತಹ ವಿದ್ವಾಂಸರು ನೀಡಿರುವ ಮೇಲಿನ ಅಭಿಪ್ರಾಯವನ್ನು ಆಧುನಿಕ ವಿದ್ವಾಂಸರೆಲ್ಲಾ ಅಂಗೀಕರಿಸಿರುವರು. ಇಷ್ಟೇ ಅಲ್ಲದೆ ಈ ಮಂತ್ರದಲ್ಲಿ ಹಬೆಯಿಂದ ಮೇಲೇರಬಲ್ಲ ಕೃತಕ ಹಾರಾಟದ ಸಾಧನದ ಬಗ್ಗೆಯೂ ಮಾಹಿತಿಯನ್ನು ಹುಡುಕಲು ಅವರು ಪ್ರಯತ್ನಿಸಿರುವರು. 1883ರ ಜುಲೈ ತಿಂಗಳಿನ 'Regeneration of Aryavarta' ಎಂಬ ನಿಯತಕಾಲಿಕೆಯಲ್ಲಿ, ಮೇಲಿನ ಮಂತ್ರಕ್ಕೆ ವಾಯುನಾವೆಯು (Aerial Ship) ಹಾರಾಟವಿಧಾನಕ್ಕನುಗುಣವಾಗಿ ಅರ್ಥೈಸಲಾಗಿದೆ. ಆದರೆ ಈ ವಾಯು ನಾವೆಯನ್ನು ಮೇಲಕ್ಕೆ ಹೊತ್ತೊಯ್ಯುವ ಬೆಲೂನಿನಂತಹ ಸಾಧನವನ್ನು ಅಂದಿನ ದಿನಗಳಲ್ಲಿ ಹೇಗೆ ನಿರ್ಮಿಸಿಕೊಳ್ಳುತ್ತಿದ್ದರು ? ಅಥವಾ ಇದೇನಾದರೂ ಬೃಹದಾಕಾರದ ಛತ್ರಿಯನ್ನು ಹೋಲುವಂತಹ ಸಾಧನವೇ ? ಮೊದಲಾದ ಸಂಶಯಗಳು ಜಿಜ್ಞಾಸುಗಳ ಮನಸ್ಸಿನಲ್ಲಿ ನುಸುಳಿದಾಗ ಇದು ಕೇವಲ ಕಲ್ಪನೆಮಾತ್ರವಿರಬಹುದೆಂಬುದನ್ನು ಮರೆಯಬಾರದು. ನಿಯತಕಾಲಿಕೆಯಲ್ಲಿ ಶಾಂತಿಪ್ರಿಯ ಎಂಬುವರು ಮೇಲಿನಮಂತ್ರಕ್ಕೆ ನೀಡಿರುವ ಆಂಗ್ಲಾನುವಾದ; "The balloons are supplied with fire and water. The supply of water should be copious on all sides. The water is converted into steam in the machine, the balloon flies in the sky, giving much happiness to the aeronauts." ನೀರನ್ನು ಕುದಿಸಿ ಹಬೆಯನ್ನಾಗಿಸಿ ಹಬೆಯ ಒತ್ತಡದಿಂದ ತಿರುಗುವ ಪ್ರೊಪೆಲ್ಲರನ್ನು ಹೊಂದಿರುವ ಹಬೆಯ ವಾಯುನಾವೆ ಅಥವಾ ವಿಮಾನದ ಕಾರ್ಯವಿಧಾನಕ್ಕೆ ಮೇಲೆ ಹೇಳಿರುವ ವೇದಮಂತ್ರದ ಕೆಲವು ವಿಚಾರಗಳಾದರೂ ಖಂಡಿತ ಹೋಲುತ್ತವೆ. ಮುಂದಿನ ಮಂತ್ರದಲ್ಲಿ ಸಂವತ್ಸರ ಅಥವಾ ಕಾಲಚಕ್ರದ ವಿಚಾರ ಪ್ರಸ್ತಾಪಿತವಾಗಿದೆ. ಇಲ್ಲಿಯೂ ಸಹ ಹಾರುವ ಯಂತ್ರದ ಇತರ ಭಾಗಗಳ ಮಾಹಿತಿಯನ್ನು ಗುರುತಿಸಲು ಆಧುನಿಕ ವಿದ್ವಾಂಸರು ಶ್ರಮಿಸಿದ್ದಾರೆ.

ದ್ವಾದಶ ಪ್ರಧಯಶ್ಚಕ್ರಮೇಕಂ ತ್ರೀಣಿ ನಭ್ಯಾನಿ ಕ ವು ತಚ್ಚಿಕೇತ ।
ತಸ್ಮಿನ್‌ತ್ಸಾಕಂ ತ್ರಿಶತಾ ನಶಂಕವೋರ್ಽರ್ಪಿತಾಃ ಷಷ್ಟಿರ್ನ ಚಲಾಚಲಾಸಃ ॥

—ಮಂ 1. 164.48

"ಸಂವತ್ಸರರೂಪವಾದ ಚಕ್ರಕ್ಕೆ ಪರಿಧಿಗಳು ಹನ್ನೆರಡು, ಮಧ್ಯಭಾಗದ ಅಚ್ಚುಗಳು ಮೂರು. ಈ ಚಕ್ರದಲ್ಲಿ ತಿರುಗಬಲ್ಲ ಮುನ್ನೂರ ಅರವತ್ತು ಶಂಕುಗಳು ಒಟ್ಟಿಗೆ ಅರ್ಪಿತವಾಗಿವೆ. ಈ ರಹಸ್ಯವನ್ನು ತಿಳಿದ ಮಹಾತ್ಮನು ಯಾರಿದ್ದಾನು ?"—ಈ ಮಂತ್ರದಲ್ಲಿ ಚಕ್ರವೆಂದರೆ ಸಂವತ್ಸರವೆಂದೂ, ಹನ್ನೆರಡು ಪರಿಧಿಗಳೆಂದರೆ ದ್ವಾದಶರಾಶಿ

ಗಳೆಂದೂ, ನಾಭಿತ್ರಯ (ಅಚ್ಚು) ವೆಂದರೆ ಭೂತ, ಭವಿಷ್ಯತ್, ವರ್ತಮಾನಗಳೆಂದೂ, ಮುನ್ನೂರ ಅರವತ್ತು ಶಂಕುಗಳೆಂದರೆ ಅಷ್ಟೇ ಸಂಖ್ಯೆಯ ದಿವಸಗಳೆಂದೂ ಕಾಲದ ವಿಭಜನೆಯನ್ನು ಸಾಂಕೇತಿಕವಾಗಿ ಸೂಚಿಸಲಾಗಿದೆ. ಆಧುನಿಕ ವಿದ್ವಾಂಸರು ಕೃತಕ ಹಾರಾಟ ಸಾಧನಕ್ಕೆ ಅನ್ವಯಿಸುವಂತೆಯೇ ಈ ಮಂತ್ರಕ್ಕೆ ಅರ್ಥವನ್ನು ಹುಡುಕಲು ಪ್ರಯತ್ನಿಸಿ 'ಚಕ್ರಮೇಕಂ' ಎಂಬುದಕ್ಕೆ ಹಬೆಯಿಂದ ತಿರುಗಬಲ್ಲ ಚಕ್ರವೆಂದೂ, ಈ ಚಕ್ರಕ್ಕೆ ಹನ್ನೆರಡು ಕವೆಗಳೆಂದೂ, ಮೂರು ಮಧ್ಯಭಾಗದ ಅಚ್ಚುಗಳೆಂದೂ, ಮುನ್ನೂರ ಅರವತ್ತು ಚಲಿಸುವ ಕೀಲಿಗಳಿದ್ದು ಇವೇ ಚಲನೆಗೆ, ನಿಲ್ಲುವಿಕೆಗೆ ಕಾರಣ ವೆಂದೂ, ಒಟ್ಟಿನಲ್ಲಿ ಹಬೆಯ ವಿಮಾನಕ್ಕೆ ಹತ್ತಿರವಾಗುವಂತೆಯೇ ಮಂತ್ರದಲ್ಲಿರುವ ವಿಚಾರವನ್ನು ವರ್ಣಿಸಿರುವರು.

ಕ್ರೀಡಾಸಾಧನಗಳಲ್ಲಿ ಸಾಕಷ್ಟು ವೈವಿಧ್ಯತೆಗಳಿರುವ ಇಂದಿನ ದಿನಗಳಲ್ಲಿ ಬೆಲೂನಿನ ಹಾರಾಟ, ಕೃತಕ ರೆಕ್ಕೆಗಳನ್ನು ಕಟ್ಟಿಕೊಂಡು ಧುಮುಕುವಿಕೆ ಇವೆಲ್ಲವೂ ಸಾಹಸಕ್ರೀಡೆಗಳಾಗಿ ಎಲ್ಲೆಡೆಯಲ್ಲಿಯೂ ಕಾಣಸಿಗುತ್ತವೆ. ಆಧುನಿಕ ಸೌಲಭ್ಯ ಗಳೆಲ್ಲವೂ ಇದ್ದು ಸುವ್ಯವಸ್ಥಿತವಾದ ವಿಮಾನಗಳು ವೈಜ್ಞಾನಿಕವಾಗಿ ಸಾಕಷ್ಟು ಮುಂದಿರುವ ಇಂದಿನ ಜನತೆಗೆ ಸೋಜಿಗವೆನಿಸದಿರಬಹುದು. ಆದರೆ ಇಂತಹ ಆವಿಷ್ಕಾರಗಳ ಹಿನ್ನೆಲೆಯಲ್ಲಿ ಅಡಗಿರುವ ಬೌದ್ಧಿಕಶ್ರಮ, ಅವಿರತ ಸಾಧನೆ ಇವೆಲ್ಲವು ಗಳ ಪರಿಶೀಲನೆ ನಡೆದಲ್ಲಿ, ವಿನೂತನವಾದ ಈ ಆವಿಷ್ಕಾರಗಳೆಲ್ಲವೂ ಧಿಡೀರ್ ಸಾಧನೆ ಗಳೇನಲ್ಲ. ಬೆಂಕಿಯನ್ನು ಪ್ರಥಮವಾಗಿ ಕಂಡು ಹಿಡಿದ ಆದಿಮಾನವನೇ ಜಗತ್ತಿನ ಮೊದಲ ವಿಜ್ಞಾನಿ. ಗ್ರಹ ನಕ್ಷತ್ರಗಳ ಪರಿಶೀಲನೆಯನ್ನು ಅವುಗಳ ವಿಂಗಡಣೆ ಯನ್ನು, ಅಷ್ಟೇಕೆ ಡಾರ್ವಿನ್ನನ ವಿಕಾಸವಾದವನ್ನೇ ಹೋಲುವ ಸೃಷ್ಟಿವಾದವನ್ನು ನಾಸದೀಯ ಸೂಕ್ತದಲ್ಲಿ ಪ್ರತಿಪಾದಿಸಿರುವ ವೈದಿಕ ಋಷಿ ವಿಜ್ಞಾನಿಗೆ ವಿಮಾನ ನಿರ್ಮಾಣದ ಮೂಲತತ್ತ್ವ ಹೊಳೆದಿರಬಾರದೇಕೆ? ಈ ಲೇಖನದಲ್ಲಿ ಉಲ್ಲೇಖಿಸ ಲಾಗಿರುವ ಋಗ್ವೇದದ ಮಂತ್ರಗಳಲ್ಲಿ ದೊರೆಯುವ ಅಲ್ಪ-ಸ್ವಲ್ಪ ಸೂಚನೆಗಳು ಎಷ್ಟರ ಮಟ್ಟಿಗೆ ವಿಜ್ಞಾನಕ್ಕೆ ಹತ್ತಿರವಾದ ವಿಷಯಗಳನ್ನೊಳಗೊಂಡಿವೆ ಎಂಬ ವಿಚಾರ ವಿಮರ್ಶೆ ಸಹೃದಯರಿಗೆ ಬಿಟ್ಟದ್ದು.

ಕೆ.ಸಂ. ೩೧೩೧೨—ಮೈವಿವಿಮು—೪೨೫ ಪ್ರತಿಗಳು—೮-೬-೯೦

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
' ಪ್ರಸಾರಾಂಗ '
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬